ವಿಶ್ವವಾಣಿ
ವಿಶ್ವಾಸವೇ ವಿಶ್ವ

ಅಪ್ಪು 50ನೇ ಹುಟ್ಟುಹಬ್ಬ

- ಕುಟುಂಬ ಸದಸ್ಯರಿಂದ ಸಮಾಧಿಗೆ ಪೂಜೆ
- ಸಮಾಧಿ ಬಳಿ ಹರಿದುಬಂದ ಅಭಿಮಾನಿಗಳ ದಂಡು
- ಪ್ರೀತಿಯ ನಟನಿಗೆ ಶ್ರದ್ಧಾಂಜಲಿ ಅರ್ಪಣೆ

ಸೊಂಪಾದ ಪುಟಗಳು

ಪಕ್ಷಗಳ ಬೇರುಗಳನ್ನು ಗಟ್ಟಿಗೊಳಿಸುವುದು ಯಾವಾಗ?

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ಎಲ್ಲಾ ದಿನವೂ ರಜೆಯಾದರೆ, ಭಾನುವಾರಕ್ಕೆಲ್ಲಿ ಮಜಾ?!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ

ಅಷ್ಟಕ್ಕೂ ನಿಮ್ಮ ಡಿಗ್ರಿ ಒಂದು ಕಾಗದದ ಚೂರು. ನಿಜವಾದ ಶಿಕ್ಷಣ ಅಂದ್ರೆ, ನಮ್ಮ ನಡವಳಿಕೆ ಮತ್ತು ವರ್ತನೆ. ಉನ್ನತ ಡಿಗ್ರಿ ಪಡೆದೂ ನಿಮ್ಮ ವರ್ತನೆ ಸರಿಯಾಗಿಲ್ಲ ದಿದ್ದರೆ, ಅದರಿಂದ ನಿಮಗೂ, ನಿಮ್ಮ ಡಿಗ್ರಿಗೂ ಯಾವ ಕಿಮ್ಮತ್ತೂ ಇಲ್ಲ.

ವಕ್ರತುಂಡೋಕ್ತಿ



ಯಶಸ್ಸಿನ ಏಣಿಯನ್ನು ಯಾರು ಬೇಕಾದರೂ ಏರಬಹುದು. ಆದರೆ ಕೈಗಳನ್ನು ಪ್ಯಾಂಟಿನ ಜೇಬಿನೊಳಗಿಟ್ಟು ಕೊಂಡು ಏರಲು ಸಾಧ್ಯವಿಲ್ಲ.

ಮೈಕ್ರೋ ಫೈನಾನ್ಸ್: ಅರ್ಜಿ ವಜಾ

ಬೆಂಗಳೂರು: ಸಣ್ಣ ಪ್ರಮಾಣದಲ್ಲಿ ಸಾಲ ಪಡೆದವರಿಗೆ ಕಿರುಕುಳ ನೀಡುವು ದನ್ನು ತಪ್ಪಿಸುವುದಕ್ಕಾಗಿ ಸರಕಾರ ಹೊರಡಿ ಸಿದ್ದ ಕರ್ನಾಟಕ ಕಿರು ಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ಪ್ರತಿ ಬಂಧಕ) ಸುಗ್ರೀವಾಜ್ಞೆ-2025 (ಮೈಕ್ರೋ ಫೈನಾನ್ಸ್) ಪ್ರಶ್ನಿಸಿ ಕರ್ನಾಟಕ ಹೈರ್ ಪರ್ಚೇಸ್ ಅಸೋಸಿಯೇಷನ್ ಸಲ್ಲಿಸಿದ್ದ ರಿಟ್ ಅರ್ಜಿ ಯನ್ನು ಹೈಕೋರ್ಟ್ ವಜಾಗೊಳಿಸಿದೆ.

ತೈಲ ಬೆಲೆ: ಖರ್ಗೆ ಕಿಡಿ

ದೆಹಲಿ: ಅಂತಾರಾಷ್ಟ್ರೀಯ ಮಾರುಕಟ್ಟೆ ಯಲ್ಲಿ ಕಚ್ಚಾ ತೈಲ ಬೆಲೆ ಇಳಿಕೆಯಾ ಗಿದ್ದರೂ ಮೋದಿ ಸರಕಾರ ಜನರಿಂದ ಸುಲಿಗೆ ಮಾಡುತ್ತಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೋಮವಾರ ವಾಗ್ದಾಳಿ ನಡೆಸಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -



ಆರು ತಾಸಿಗೂ ಹೆಚ್ಚು ಸುದೀರ್ಘ ಉತ್ತರ ನೀಡಿದ ಸಿಎಂ ಸಿದ್ದರಾಮಯ್ಯ
ಮಾತು ಮಾತಿಗೂ ಬಿಜೆಪಿಯಿಂದ ವಾಗ್ದಾಳಿ, ಎರಡು ಬಾರಿ ಸಭಾತ್ಯಾಗ

ಗ್ಯಾರಂಟಿ VS ಬಿಜೆಪಿ

ವಿಶ್ವವಾಣಿ ಸುದ್ದಿಮನೆ

ವಿಧಾನಸಭೆ: ಕೇಂದ್ರದಿಂದ ನಿರಂತರ ಅನ್ಯಾಯವಾಗುತ್ತಿದ್ದರೂ, ಗ್ಯಾರಂಟಿ ಯೋಜನೆಗಳ ಬಗ್ಗೆ ಬಿಜೆಪಿಗರಿಂದ ಅನುಮಾನ ವ್ಯಕ್ತಪಡಿಸಿದ ಹೊರತಾಗಿಯೂ ಯಶಸ್ವಿಯಾಗಿ ಯೋಜನೆ ಜಾರಿಗೊಳಿಸುವ ಮೂಲಕ ದೇಶಕ್ಕೆ ಮಾದರಿ ಯಾಗಿದ್ದೇವೆ. ನಮ್ಮ ಮಾದರಿಯನ್ನೇ ಬಿಜೆಪಿಗರು ಇತರೆ ರಾಜ್ಯಗಳಲ್ಲಿ 'ನಕಲಿ' ಮಾಡಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ರಾಜ್ಯಪಾಲರ ಮೇಲಿನ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಬೆಳಗ್ಗೆಯಿಂದ ಸಂಜೆಯವರೆಗೆ ಸುದೀರ್ಘ ಉತ್ತರ ನೀಡಿದರು. ಪ್ರತಿಪಕ್ಷಗಳ ಗದ್ದಲ, ವಾಕ್ಸಮರ, ಸಭಾತ್ಯಾಗದ ನಡುವೆಯೇ ರಾಜ್ಯಪಾಲರ ಭಾಷಣ ಹಾಗೂ ಸರಕಾರವನ್ನು ಸಮರ್ಥಿಸಿಕೊಂಡ ಸಿದ್ದರಾಮಯ್ಯ, ಗ್ಯಾರಂಟಿಯ ನಕಲು, ಅಪರಾಧಗಳನ್ನು ಮಾಡುತ್ತಿರುವುದು ಆರ್‌ಎಸ್‌ಎಸ್ ಹಾಗೂ ಅಂಬೇಡ್ಕರ್ ಸೋಲಿಗೆ ಸಾವರ್ಕರ್ ಕಾರಣ ಎಂದು ಕುಟುಕಿದರು. ರಾಜ್ಯಪಾಲರು ರಾಜ್ಯ ಸರಕಾರದ ಅಭಿವೃದ್ಧಿ ಮತ್ತು ಸಾಧನೆಗಳ ಬಗ್ಗೆ ಹೇಳಿರುವುದೆಲ್ಲಾ ಸತ್ಯ ಹಾಗೂ ಇನ್ನೂ ಪೂರ್ತಿ ಹೇಳಿಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ.

ಈ ಹಿಂದಿನ ಬಿಜೆಪಿ ಸರಕಾರದ ಬಳುವಳಿಯಿಂದಾಗಿ 32 ಸಾವಿರ ಕೋಟಿ ಮೊತ್ತದ ಕಾಮಗಾರಿಗಳ ಬಿಲ್ ಬಾಕಿಯಿದೆ. ಬಿಜೆಪಿ ಸರಕಾರದ ಅವಧಿಯಲ್ಲಿ ಹಣವಿಲ್ಲದಿದ್ದರೂ 2,75,686 ಕೋಟಿ ರು. ಕಾಮಗಾರಿಗಳನ್ನು ಮಂಜೂರು ಮಾಡಿದ್ದಾರೆ. ಅಲ್ಲದೇ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ 1,66,426 ಕೋಟಿ ರು. ಅನುಮೋದನೆ ನೀಡಿದ್ದಾರೆ. ಹೀಗಾಗಿ ನೀರಾವರಿ, ಇಂಧನ, ನಗರಾಭಿವೃದ್ಧಿ, ಬೆಂಗಳೂರು ಅಭಿವೃದ್ಧಿ ಸೇರಿದಂತೆ ವಿವಿಧ ಇಲಾಖೆಗಳಲ್ಲಿ 32 ಸಾವಿರ ಕೋಟಿ ಬಿಲ್ ಬಾಕಿಯಿದೆ ಎಂದು ಟೀಕಿಸಿದರು.

ವಿವಾದಕ್ಕೆ ಕಾರಣವಾದ ವಿಡಿಯೊ ಚಿತ್ರೀಕರಣ

ಸಂಘ ಪರಿವಾರದ ವಿರುದ್ಧ ಸಿದ್ದರಾಮಯ್ಯ ನೀಡಿದ ಹೇಳಿಕೆಗೆ ಕೆರಳಿ ಸಭಾತ್ಯಾಗ ಮಾಡಿದ ಬಿಜೆಪಿಗರು, ವಾಪಸು ಬರುವಾಗ ಭಾರತ್ ಮಾತಾಕಿ ಜೈ. ಜೈ ಶ್ರೀರಾಮ್ ಘೋಷಣೆ ಕೂಗಿದರು. ಈ ವೇಳೆ, ರಾಷ್ಟ್ರಧ್ವಜ ಹಿಡಿದು ಕಾಂಗ್ರೆಸ್ ಸದಸ್ಯರು ಕೌಂಟರ್ ನೀಡಿದರು. ಆರ್‌ಎಸ್‌ಎಸ್ ಬಗ್ಗೆ ಸಿಎಂ ಹೇಳಿಕೆ ವಾಪಸ್ ಪಡೆಯಬೇಕೆಂದು ಬಿಜೆಪಿ ಸದಸ್ಯರು ಆಗ್ರಹಿಸಿದರು. ಇಲ್ಲವಾದರೆ ಸದನ ನಡೆಯಲು ಬಿಡುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಕಾಂಗ್ರೆಸ್ ಶಾಸಕ ನರೇಂದ್ರ ಸ್ವಾಮಿ ಅವರು, ಬಿಜೆಪಿ ಸದಸ್ಯರು ಮೊಬೈಲ್ ವಿಡಿಯೊ ಮಾಡುತ್ತಿರುವುದಾಗಿ ಆರೋಪಿಸಿದರು. ಮೊಬೈಲ್ ವಿಡಿಯೊ ಮಾಡಿದ್ದರೆ ಶಿಸ್ತು ಕ್ರಮ ತೆಗೆದುಬೇಕಾಗುತ್ತದೆ. ಮೂರು ಜನ ಮಂತ್ರಿಗಳು ಇದೇ ಸದನದಲ್ಲಿ ಅಮಾನತ್ತಾಗಿದ್ದಾರೆ ಗೊತ್ತಲ್ಲ ಎಂದು ಸ್ಪೀಕರ್ ಪೀಠದಲ್ಲಿ ಕುಳಿತಿದ್ದ ಶಿವಲಿಂಗೇಗೌಡ ಎಚ್ಚರಿಕೆ ನೀಡಿದರು. ಈ ವೇಳೆ, ಮಧ್ಯಪ್ರವೇಶಿಸಿದ ಸಚಿವ ಎಚ್.ಕೆ.ಪಾಟೀಲ್, ಮೊಬೈಲ್ ವಿಡಿಯೊ ಮಾಡಿದ ಸದಸ್ಯರ ಹೆಸರು ಸ್ಪೀಕರ್ ಹೇಳಬೇಕು, ಶಿಸ್ತು ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ಸಿಎಂ ಹೇಳಿದ್ದೇನು?

- ಕಾಂಗ್ರೆಸ್ ಅವಧಿಯಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ತಗ್ಗಿವೆ
- ರಾಜ್ಯಪಾಲರು ಸತ್ಯವನ್ನೇ ಹೇಳಿದ್ದಾರೆ. ನಾವು ಸುಳ್ಳು ಹೇಳಿಸಿಲ್ಲ. ರಾಜ್ಯಪಾಲರು ಬರೆದಿದ್ದನ್ನೆಲ್ಲ ಓದುವುದಿಲ್ಲ
- ಕೇಂದ್ರ ಹಾಗೂ ಬಿಜೆಪಿ ಆಡಳಿತವಿರುವ ರಾಜ್ಯದಲ್ಲಿ ಈಗಲೂ ಎಸ್‌ಸಿಪಿ-ಟಿಎಸ್‌ಪಿ ಕಾಯಿದೆ ಏಕೆ ಜಾರಿಯಾಗಿಲ್ಲ
- ನಿರ್ಮಲಾ ಸೀತಾರಾಮನ್ ಅವರನ್ನು ಮೂರು ಬಾರಿ ಭೇಟಿಯಾಗಿ ಅನುದಾನ ಕೇಳಿದರೂ ನೀಡಿಲ್ಲ
- ಗ್ಯಾರಂಟಿ ಯೋಜನೆಗಳು ರಾಜ್ಯದಲ್ಲಿ 1.26 ಕೋಟಿ ಕುಟುಂಬಗಳಿಗೆ ತಲುಪಿವೆ

ಬಿಜೆಪಿಯು ಆರ್‌ಎಸ್‌ಎಸ್ ಹೇಳಿದಂತೆ ಮಾಡುತ್ತದೆ. ಆರ್‌ಎಸ್‌ಎಸ್‌ನವರಿಗೆ ನಾವು ಹೆದರುವುದಿಲ್ಲ. ಅವರನ್ನು ಎದುರಿಸಲು ನಾವು ಸಿದ್ಧ. ದಲಿತರ, ಹಿಂದುಳಿದವರ ಏಳಿಗೆ ಸಹಿಸದ ಬಿಜೆಪಿಗೆ ದಲಿತರು ದಲಿತರ ಕಾಲೋನಿಯಲ್ಲೇ ಇರಬೇಕು ಎನ್ನುವ ದುರುದ್ದೇಶವಿದೆ. 1942ರಲ್ಲಿ ಬ್ರಿಟಿಷರೊಂದಿಗೆ ಸೇರಿಕೊಂಡಿದ್ದವರು ನೀವು (ಆರ್‌ಎಸ್‌ಎಸ್‌ನವರು) ಬ್ರಿಟಿಷರ ಏಜೆಂಟರು.

- ಸಿದ್ದರಾಮಯ್ಯ, ಮುಖ್ಯಮಂತ್ರಿ

ನಡೆದಿದ್ದೇನು?

- ಆರು ಗಂಟೆಗೂ ಹೆಚ್ಚು ಕಾಲ ಸದನದಲ್ಲಿ ಉತ್ತರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ
- ಕೇಂದ್ರದ ಅನುದಾನಕ್ಕೆ ಸಂಬಂಧಿಸಿದಂತೆ ಬಿಜೆಪಿ-ಕಾಂಗ್ರೆಸ್ ನಡುವೆ ವಾಕ್ಸಮರ
- ಸಂಘ ಪರಿಹಾರದ ವಿರುದ್ಧ ಹೇಳಿಕೆ ನೀಡಿದ್ದಕ್ಕೆ ಬಿಜೆಪಿಯಿಂದ ಧರಣಿ, ಸಭಾತ್ಯಾಗ
- ವಾಪಸ್ ಬರುವಾಗ ಬಿಜೆಪಿಯಿಂದ 'ಭಾರತ್ ಮಾತಾ ಕೀ ಜೈ' ಘೋಷಣೆ; ಕಾಂಗ್ರೆಸ್‌ನಿಂದ ರಾಷ್ಟ್ರಧ್ವಜ ಹಿಡಿದು ಕೌಂಟರ್

ಸಂಘ ಪರಿವಾರದವರನ್ನು ಈ ರೀತಿ ನಿಂದಿಸುತ್ತಾರೆ. ಹಾಗಾದರೆ ನಾವು ಸೋನಿಯಾ, ರಾಹುಲ್‌ರನ್ನು ಚೀನಾ ಚಮಚ, ಪಾಕಿಸ್ತಾನ ಏಜೆಂಟ್ ಎಂದರೆ ಕಾಂಗ್ರೆಸಿಗರು ಸುಮ್ಮನಿರುವರೇ? ಅವರು ಸುಮ್ಮನಿದ್ದರೆ ನಾವು ಸುಮ್ಮನಿರುತ್ತೇವೆ. **- ಸುನೀಲ್‌ಕುಮಾರ್**, ಶಾಸಕ

ರಾಜ್ಯಕ್ಕೆ ಕೇಂದ್ರದಿಂದ ನೆರವಿಲ್ಲ

ರಾಜ್ಯದಿಂದ ಕೇಂದ್ರಕ್ಕೆ ಪ್ರತಿವರ್ಷ 5 ಲಕ್ಷ ಕೋಟಿ ರು.ಗೂ ಹೆಚ್ಚು ತೆರಿಗೆ ನೀಡಿದರೂ ನಮಗೆ 51 ಸಾವಿರ ಕೋಟಿ ರು. ಮಾತ್ರ ವಾಪಸಾಗುತ್ತಿದೆ. ಇದರೊಂದಿಗೆ 15ನೇ ಹಣಕಾಸು ಆಯೋಗ ಶಿಫಾರಸು ಮಾಡಿದ್ದ 11,495 ಕೋಟಿ ಬರಬೇಕಿತ್ತು. ಬಿಜೆಪಿ ಅಧಿಕಾರದಲ್ಲಿದ್ದಾಗ ಕೇಳಲೇ ಇಲ್ಲ. ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಮೂರು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಲಿಲ್ಲ. ಕರ್ನಾಟಕಕ್ಕೆ ಅನ್ಯಾಯ ವಾದಾಗ ರಾಜ್ಯದ ಪರ ಧ್ವನಿಯೆತ್ತಿ ನ್ಯಾಯಯುತವಾಗಿ ಬರಬೇಕಾದ್ದನ್ನು ಕೇಂದ್ರದಿಂದ ಕೇಳಲಿಲ್ಲ. ಏನೂ ಕೇಳದೇ ಅನುದಾನ ಇಲ್ಲ ಎಂದರೆ ಹೇಗೆ? ಎಂದು ಪ್ರಶ್ನಿಸಿದರು.

ಸಂವಿಧಾನ ನಿರ್ಮಾತೃ ಚುನಾವಣೆಯಲ್ಲಿ ಸೋಲಲು ಸಾವರ್ಕರ್ ಕಾರಣ: ಖರ್ಗೆ | ಪ್ರಿಯಾಂಕ್ ಆರೋಪ
ಸಾಬೀತು ಮಾಡಿದರೆ ರಾಜೀನಾಮೆ: ಯತ್ನಾಳ್ ಸವಾಲು

ಸಾವರ್ಕರ್ VS ಅಂಬೇಡ್ಕರ್

ಪ್ರಿಯಾಂಕ್ ಹೇಳಿದ್ದೇನು?

- ಅಂಬೇಡ್ಕರ್ ಬರೆದಿರುವ ಪತ್ರದಲ್ಲಿ ಅವರನ್ನು ಸೋಲಿಸಿದ್ದು ಸಾವರ್ಕರ್ ಎಂದು ಹೇಳಿದ್ದಾರೆ
- ಸಾವರ್ಕರ್ ಸೋಲಿಸಿದ್ದು ಎಂದು ಅಂಬೇಡ್ಕರ್ ಹೇಳಿದ್ದನ್ನು ಸಾಬೀತುಪಡಿಸಿದರೆ ಯಾರು ರಾಜೀನಾಮೆ ನೀಡುವಿರಿ?
- ಚುನಾವಣೆಯ ಸಮಯದಲ್ಲಿ ಆರ್‌ಎಸ್‌ಎಸ್‌ನವರು ಏನು ಮಾಡುತ್ತಿದ್ದರು?
- ನೆಹರು ಸಂಪುಟದಲ್ಲಿ ಅಂಬೇಡ್ಕರ್ ಸಚಿವರಾಗಿದ್ದು ಬಿಜೆಪಿಯವರು ಮರೆತಿದ್ದಾರೆ

ಬಿಜೆಪಿ ಆರೋಪವೇನು?

- ಅಂಬೇಡ್ಕರ್ ಚುನಾವಣೆಗೆ ಸ್ಪರ್ಧಿಸಿದಾಗ ನೆಹರು ಅವರು ಅಂಬೇಡ್ಕರ್ ವಿರುದ್ಧ 2 ಬಾರಿ ಪ್ರಚಾರ ಮಾಡಿದ್ದೇಕೆ?
- ಸಂವಿಧಾನ ಶಿಲ್ಪಿಯ ಅಂತ್ಯಕ್ರಿಯೆಗೆ ಜಾಗ ಕೊಡದೇ ಇದ್ದಿದ್ದು ಕಾಂಗ್ರೆಸ್
- ಪ್ರಿಯಾಂಕ್ ಮಾಡಿರುವ ಆರೋಪ ಸಾಬೀತುಪಡಿಸಲಿ
- ಅಂಬೇಡ್ಕರ್ ಅವರನ್ನು ಮಂತ್ರಿಮಂಡಲದಿಂದ ಹೊರಹಾಕಿದ್ದು ಯಾರು?

ಬೆಂಗಳೂರು: ಎಸ್‌ಸಿಪಿ-ಟಿಎಸ್‌ಪಿ ಅನುದಾನಕ್ಕೆ ಸಂಬಂಧಿಸಿದಂತೆ ಶುರುವಾದ ವಾಕ್ಸಮರ ಅಂಬೇಡ್ಕರ್ ಸೋಲಿನವರೆಗೆ ಹೋಗಿ, ರಾಜೀನಾಮೆಯ ಸವಾಲು-ಪ್ರತಿಸವಾಲಿನವರೆಗೆ ಹೋದ ಘಟನೆಗೆ ವಿಧಾನಸಭೆ ಸಾಕ್ಷಿಯಾಯಿತು.

ರಾಜ್ಯಪಾಲರ ಭಾಷಣದ ಚರ್ಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉತ್ತರ ನೀಡುವಾಗ ಎಸ್‌ಸಿಪಿ-ಟಿಎಸ್‌ಪಿ ಅನುದಾನವನ್ನು ಬೇರೆ ಯೋಜನೆಗಳಿಗೆ ಬಳಸಿಕೊಂಡಿಲ್ಲ ಎಂದು ಸಮರ್ಥಿಸಿಕೊಳ್ಳಲು ಮುಂದಾದರು. ಈ ವೇಳೆ ಬಿಜೆಪಿ ಶಾಸಕರು ಅಂಬೇಡ್ಕರ್ ಅವರನ್ನು ಸೋಲಿಸಿದ್ದು ಕಾಂಗ್ರೆಸ್ ಎಂದು ಟೀಕಿಸಿದರು. ಇದಕ್ಕೆ ಮಧ್ಯಪ್ರವೇಶಿಸಿದ ಸಚಿವ ಪ್ರಿಯಾಂಕ್ ಖರ್ಗೆ, ಅಂಬೇಡ್ಕರ್ ಸೋಲಿಗೆ ಸಾವರ್ಕರ್, ಆರ್‌ಎಸ್‌ಎಸ್ ಕಾರಣ ಎಂದು ವಾಗ್ದಾಳಿ ನಡೆಸಿದರು. ಇದಕ್ಕೂ ಮೊದಲು ಪ್ರತಿಪಕ್ಷ ಉಪನಾಯಕ ಅರವಿಂದ ಬೆಲ್ಲದ ಅವರು, 'ಮಂತ್ರಿ ಮಂಡಲದಿಂದ ಹೊರಹಾಕಿದ್ದು ಯಾರು? ಸೋಲಿಸಿದ್ದು ಯಾರು? ಸಮಾಧಿಗೆ ಜಾಗ ಕೊಡದಿದ್ದು ಯಾರು?' ಎಂದು ಪ್ರಶ್ನಿಸಿದರು.

→ 4

ಶುಕ್ರವಾರ ವೇದಿಕೆ ಸಿದ್ಧ

ಸವಾಲು-ಪ್ರತಿಸವಾಲು ವಿಕೋಪಕ್ಕೆ ತಿರುಗುತ್ತಿದ್ದಂತೆ ವಿಷಯವನ್ನು ತಿಳಿಗೊಳಿಸಲು ಯತ್ನಿಸಿದ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರು, ಎಲ್ಲರೂ ಒಪ್ಪುವುದಾದರೆ, ರಾಜೀನಾಮೆಯ ಸವಾಲು ಸ್ವೀಕರಿಸುವುದಾದರೆ, ಶುಕ್ರವಾರ ಮಧ್ಯಾಹ್ನದ ಬಳಿಕ ವೇದಿಕೆ ಸಿದ್ಧಪಡಿಸುತ್ತೇನೆ. ಆದರೆ ಈಗ ಮಾತು ಕೊಟ್ಟವರೆಲ್ಲ ಅಂದು ಭಾಗವಹಿಸಬೇಕು ಎಂದರು.

ಅಂಬೇಡ್ಕರ್ ಅವರನ್ನು ಸೋಲಿಸಿದ್ದು ಯಾರು ಎನ್ನುವ ವಿಷಯಕ್ಕೆ ಸಂಬಂಧಿಸಿದಂತೆ ಪ್ರಿಯಾಂಕ್ ಖರ್ಗೆ ಅವರ ಸವಾಲನ್ನು ಸ್ವೀಕರಿಸಲು ನಾನು ಸಿದ್ಧ. ಅದರ ಬಗ್ಗೆ ಸಮಗ್ರ ಚರ್ಚೆಯಾಗಲಿ. ಎಲ್ಲ ದಾಖಲೆಗಳು ಹೊರ ಬರಲಿ. ಈ ಬಗ್ಗೆ ಚರ್ಚಿಸಲು ವಿಧಾನ ಸಭೆಯಲ್ಲಿಯೇ ಅವಕಾಶ ನೀಡಬೇಕು.

- ಬಸನಗೌಡ ಪಾಟೀಲ್ ಯತ್ನಾಳ್, ಶಾಸಕ

ಕುಡಿಯುವ ನೀರಿಗಾಗಿ ಮುರಿದು ಬಿದ್ದ ಮದುವೆ

ಚಿತ್ರದುರ್ಗ: ಕುಡಿಯುವ ನೀರಿನ ವಿಚಾರಕ್ಕೆ ಜಗಳ ನಡೆದು, ಮದುವೆ ಮುರಿದು ಬಿದ್ದ ಘಟನೆ ನಗರದ ಹೊರವಲಯದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವ ಬಲಿಜ ಶ್ರೇಯ ಭವನದಲ್ಲಿ ಭಾನುವಾರ ನಡೆದಿದೆ.

ತುಮಕೂರು ಜಿಲ್ಲೆಯ ಶಿರಾ ತಾಲೂಕಿನ ಚಿರತಹಳ್ಳಿ ಗ್ರಾಮದ ಯುವತಿ ಹಾಗೂ ಜಗಳೂರು ಪಟ್ಟಣದ ಯುವ ಕನ ವಿವಾಹ ನಿಶ್ಚಯವಾಗಿತ್ತು. ವಧು- ವರರಿಬ್ಬರೂ ಎಂಜಿನಿಯರಿಂಗ್ ಪದವೀಧರರಾಗಿದ್ದು, ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಶನಿವಾರ ಆರತಕ್ಷತೆ ನಡೆದು, ಭಾನುವಾರ ಬೆಳಗ್ಗೆ 10.30ರಿಂದ 11.30ರ ಸಮಯದಲ್ಲಿ ಮುಹೂರ್ತ ನಡೆಯಬೇಕಿತ್ತು. ಈ ನಡುವೆ ಶನಿವಾರ ಸಂಜೆ ಆರತಕ್ಷತೆ ಮುಗಿಸಿಕೊಂಡು ಊಟಕ್ಕೆ ಹೋದ ವರನ ಕಡೆಯ ಕೆಲವರಿಗೆ ಕುಡಿಯುವ ನೀರು ಸಿಕ್ಕಿಲ್ಲ. ಇದೇ ವಿಚಾರಕ್ಕೆ ವಧು ಹಾಗೂ ವರನ ಕಡೆಯವರ ನಡುವೆ ಜಗಳ ನಡೆದಿದೆ. ನೀರಿನ ಜಗಳ ವಿಕೋಪಕ್ಕೆ ತಿರುಗುತ್ತಿದ್ದಂತೆ ಮದುವೆಯೇ ನಿಲ್ಲುವ ಸೂಚನೆ ಕಂಡು ಬಂದಿದೆ. ಈ ನಿಟ್ಟಿನಲ್ಲಿ ಹಿರಿಯರು ಶನಿವಾರ ರಾತ್ರಿಯಿಂದಲೇ ಸಂಧಾನ ನಡೆಸಿದ್ದರು. ಆದರೆ ಸಫಲವಾಗಿಲ್ಲ. ಕುಡಿಯುವ ನೀರಿನ ಗಲಾಟೆಗೆ ಲಕ್ಷ, ಲಕ್ಷ ಖರ್ಚು ಮಾಡಿ ಮದುವೆ ಮಾಡುತ್ತಿದ್ದ ಪೋಷಕರು ಶಾಕ್ ಆಗಿದ್ದಾರೆ. ರಾತ್ರಿ ನೀರಿನ ಜಗಳ ಮರೆತು ಮದುವೆಗೆ ಒಪ್ಪುವಂತೆ ವರನ ಕಡೆಯವರು ಮನವಿ ಮಾಡಿದ್ದಾರೆ. ಆದರೆ ಈ ವರನ ಜತೆ ನನಗೆ ಮದುವೆ ಬೇಡವೇ ಬೇಡ ಎಂದು ವಧು ನಿರಾಕರಿಸಿದ್ದಾರೆ. ಮದುವೆ ಮುರಿದು ಬೀಳುತ್ತಿದ್ದಂತೆ ಕಲ್ಯಾಣ ಮಂಟಪದಿಂದ ಸಂಬಂಧಿಕರು ಗಂಟು ಮೂಟೆ ಕಟ್ಟಿ ಮನೆಗೆ ತೆರಳಿದ್ದಾರೆ.

- ಹಿರಿಯರು ಸಂಧಾನ ಮಾಡಲೆತ್ನಿಸಿದರೂ ಮದುವೆಗೆ ಒಪ್ಪದ ವಧು
- ಲಕ್ಷಾಂತರ ಖರ್ಚು ಮಾಡಿ ಮದುವೆ ಮಾಡುತ್ತಿದ್ದ ಪೋಷಕರು ಶಾಕ್

ದಕ್ಷಿಣ ಪಿನಾಕಿನಿ ಜಲ ವಿವಾದ: ಇಂದು ಸಭೆ

ದೆಹಲಿ: ಕರ್ನಾಟಕ ಮತ್ತು ತಮಿಳುನಾಡು ನಡುವಿನ ದಕ್ಷಿಣ ಪಿನಾಕಿನಿ (ಪೆನ್ನಾರ್) ನದಿ ನೀರು ಹಂಚಿಕೆ ವಿವಾದ ಬಗೆಹರಿಸಲು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಅವರು ಮಂಗಳವಾರ (ಮಾ.18) ಸಮಾಲೋಚನಾ ಸಮಿತಿ ಸಭೆ ನಡೆಸಲಿದ್ದಾರೆ. ಈ ಸಭೆಯಲ್ಲಿ ಜಲಸಂಪನ್ಮೂಲ ಖಾತೆಯನ್ನೂ ಹೊಂದಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಭಾಗವಹಿಸಲಿದ್ದಾರೆ. ತಮಿಳುನಾಡು, ಪುದುಚೇರಿ ಮತ್ತು ಆಂಧ್ರ ಪ್ರದೇಶದಿಂದಲೂ ಆಯಾ ರಾಜ್ಯಗಳ ಜಲಸಂಪನ್ಮೂಲ ಸಚಿವರು ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಖೋಟಾ ನೋಟು: ಎಎಸ್‌ಐ ಸೇರಿ 4 ಬಂಧನ

ರಾಯಚೂರು: ಖೋಟಾ ನೋಟು ಚಲಾವಣೆ ಮಾಡುತ್ತಿದ್ದ ಆರೋಪದ ಮೇಲೆ ಇಲ್ಲಿನ ಡಿಎಆರ್ ಎಎಸ್‌ಐ ಸೇರಿ ನಾಲ್ವರು ಆರೋಪಿಗಳನ್ನು ಪಶ್ಚಿಮ ಠಾಣೆ ಪೊಲೀಸರು ಸೋಮವಾರ ಬಂಧಿಸಿದ್ದಾರೆ. ಎಎಸ್‌ಐ ಮರಿಲಿಂಗ, ಸದ್ದಾಂ, ಸಿದ್ದಲಿಂಗಪ್ಪ ಹಾಗೂ ರವಿ ಬಂಧಿತರು. ಬಂಧಿತ ಮೂವರಲ್ಲಿ ಲಾರಿ ಮಾಲೀಕ, ಚಾಲಕ, ಕ್ಲೀನರ್ ಇದ್ದಾರೆ. ಇವರು ಆಂಧ್ರಪ್ರದೇಶದಿಂದ ಖೋಟಾ ನೋಟುಗಳನ್ನು ತಂದು ಜಿಲ್ಲೆಯಲ್ಲಿ ಚಲಾವಣೆ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಜಪಾನ್ ಸಹಯೋಗದಲ್ಲಿ 250 ಕಿಲೋ ರೋವರ್ ನೌಕೆ ರವಾನೆಗೆ ಸಜ್ಜು

ಚಂದ್ರಯಾನ-5 ಯೋಜನೆಗೆ ಕೇಂದ್ರ ಅಸ್ತು

ಚೆನ್ನೈ: ಮಹತ್ವಾಕಾಂಕ್ಷೆಯ ಚಂದ್ರಯಾನ-5 ಬಾಹ್ಯಾಕಾಶ ಯೋಜನೆಗೆ ಕೇಂದ್ರ ಸರಕಾರ ಇತ್ತೀಚೆಗೆ ಒಪ್ಪಿಗೆ ನೀಡಿದೆ ಎಂದು ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಹೇಳಿದ್ದಾರೆ.

ಇಸ್ರೊ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಪ್ರಯುಕ್ತ ಇಲ್ಲಿ ತಮಗೆ ನೀಡಿದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಚಂದಿರನ ಅಂಗಳದ ಅಧ್ಯಯನಕ್ಕಾಗಿ, ಚಂದ್ರಯಾನ-3ರ ಗಗನನೌಕೆ 25 ಕೆ.ಜಿ ಭಾರದ ರೋವರ್ (ಪ್ರಗ್ಯಾನ್) ಹೊತ್ತೊಯ್ದಿತ್ತು. ಚಂದ್ರನ ಮೇಲ್ಮೈ ಅಧ್ಯಯನ ಉದ್ದೇಶದ ಚಂದ್ರಯಾನ-5ರ ಗಗನನೌಕೆ 250 ಕೆ.ಜಿ ಭಾರದ ರೋವರ್ ಒಯ್ಯಲಿದೆ ಎಂದು ಹೇಳಿದ್ದಾರೆ. ಚಂದ್ರಯಾನ-2ರ ಗಗನನೌಕೆ ಯಲ್ಲಿ ಅಳವಡಿಸಿದ್ದ ಕ್ಯಾಮೆರಾಗಳು ಈಗಲೂ ಅತ್ಯುತ್ತಮ ಗುಣಮಟ್ಟದ ಚಿತ್ರಗಳನ್ನು ಕಳುಹಿಸುತ್ತಿದೆ ಎಂದರು.

ಚಂದ್ರಯಾನ-4 ಕಾರ್ಯಕ್ರಮದಡಿ 2027ರಲ್ಲಿ ಗಗನನೌಕೆಯನ್ನು ಕಳುಹಿಸಲಾಗುತ್ತಿದ್ದು, ಚಂದ್ರನ ಮೇಲ್ಮೈನಲ್ಲಿರುವ ಮಾದರಿಗಳನ್ನು ಸಂಗ್ರಹಿಸಿ, ಭೂಮಿಗೆ ತರುವ ಉದ್ದೇಶ ಹೊಂದಲಾಗಿದೆ.

ಏನಿದು ಯೋಜನೆ?

ಚಂದ್ರಯಾನ-5 ಲೂಪೆಕ್ಸ್ ಮಿಷನ್ ಹೆಚ್ಚಿನ ಸಾಮರ್ಥ್ಯದ ಲ್ಯಾಂಡರ್ ಅನ್ನು ಪ್ರದರ್ಶಿಸಲು ಯೋಜಿಸಲಾಗುತ್ತಿದೆ, ಇದು ಭವಿಷ್ಯದ ಲ್ಯಾಂಡಿಂಗ್ ಮಿಷನ್‌ಗಳಿಗೆ ನಿರ್ಣಾಯಕ ಅಂಶವಾಗಿದೆ. ಇದರಲ್ಲಿ ಚಂದ್ರನ ಮೇಲ್ಮೈಯಲ್ಲಿ ಮಾನವ ಲ್ಯಾಂಡಿಂಗ್ ಕೂಡ ಸೇರಿದೆ. ಇದರ ಜತೆಗೆ, ಭಾರತವು 2035ರ ವೇಳೆಗೆ ತನ್ನದೇ ಆದ ಬಾಹ್ಯಾಕಾಶ ನಿಲ್ದಾಣವನ್ನು ಹೊಂದಲಿದೆ.

2027ಕ್ಕೆ ಮೊದಲ ಎಸ್‌ಎಸ್‌ಎಲ್‌ವಿ ಉಡ್ಡಯನ: ಆಂಧ್ರಪ್ರದೇಶದ ಹೊರಗೆ ಇಸ್ರೊಗೆ ಎರಡನೇ ಉಡ್ಡಯನ ಸಂಕೀರ್ಣವಾದ ತಮಿಳುನಾಡಿನ ತೂತುಕುಡಿ ಜಿಲ್ಲೆಯ ಕುಲಶೇಖರಪಟ್ಟಣಂ ಬಾಹ್ಯಾಕಾಶ ನಿಲ್ದಾಣವು 24 ತಿಂಗಳಲ್ಲಿ ಸಣ್ಣ ಉಪಗ್ರಹ ಉಡ್ಡಯನ ವಾಹನಕ್ಕೆ (ಎಸ್‌ಎಸ್‌ಎಲ್‌ವಿ) ಸಾಕ್ಷಿಯಾಗಲಿದೆ ಎಂದು ಬಾಹ್ಯಾಕಾಶ ಸಂಸ್ಥೆಯ ಅಧ್ಯಕ್ಷ ವಿ.ನಾರಾಯಣನ್ ತಿಳಿಸಿದ್ದಾರೆ. 24 ತಿಂಗಳಲ್ಲಿ ಉಡ್ಡಯನಕ್ಕೆ ಬೇಕಾದ ಎಲ್ಲ ಸೌಲಭ್ಯಗಳನ್ನು ನಿಯೋಜಿಸಲಾಗುವುದು. ಮೊದಲ ಉಡ್ಡಯನವು ಎರಡು ವರ್ಷಗಳಲ್ಲಿ ನಡೆಯಲಿದೆ. ಇದು ಗಾತ್ರದಲ್ಲಿ ಅಕ್ಷರಶಃ ಚಿಕ್ಕದಾಗಿರುತ್ತದೆ ಎಂದು ಭಾವಿಸಬೇಡಿ. ಇದು 500 ಕೆ.ಜಿ ತೂಕದ ಉಪಗ್ರಹವಾಗಿರುತ್ತದೆ ಎಂದು ತಿಳಿಸಿದ್ದಾರೆ.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಶ್ರೀ ಡಿ.ಕೆ.ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಒಂದು ಬಾರಿ ಪರಿಹಾರ ಯೋಜನೆ
ಸುವರ್ಣ ಒಟಿಎಸ್
ಸರ್ಕಾರಿ ಇಲಾಖೆಗಳಿಗೆ ಹಾಗೂ ಸರ್ಕಾರಿ ಸ್ವಾಮ್ಯದ ಅಂಗ ಸಂಸ್ಥೆಗಳಿಗೆ / ಏಜೆನ್ಸಿಗಳಿಗೆ ಮಾತ್ರ
ಸರ್ಕಾರಿ ಇಲಾಖೆಗಳು ಮತ್ತು ಸರ್ಕಾರಿ ಸ್ವಾಮ್ಯದ ಅಂಗ ಸಂಸ್ಥೆಗಳು
ನಿಮ್ಮ ಆಸ್ತಿ ತೆರಿಗೆ ಬಾಕಿಯನ್ನು
➤ ಸಂಪೂರ್ಣ ಬಡ್ಡಿ ಮನ್ನಾ ಹಾಗೂ
➤ ಸಂಪೂರ್ಣ ದಂಡ ರಹಿತದೊಂದಿಗೆ ಪಾವತಿಸಿ#
#ದಂಡ ಕೇವಲ ರೂ.100/- ಪ್ರತಿ ವರ್ಷಕ್ಕೆ

ಸರ್ಕಾರಿ ಸ್ವತ್ತುಗಳಿಗೆ ಒಟಿಎಸ್ ಕೊನೆಯ ದಿನಾಂಕ
31ನೇ ಮಾರ್ಚ್ 2025

ಆನ್‌ಲೈನ್ ಮೂಲಕ ಇಲ್ಲಿ ಪಾವತಿಸಿ:- https://bbmptax.karnataka.gov.in
ಅಥವಾ ಬಿಬಿಎಂಪಿಗೆ ಚೆಕ್/ಡಿಡಿ/ಆರ್‌ಟಿಜಿಎಸ್ ಮೂಲಕ ಪಾವತಿಸಿ

ಮಾದರಿ ಉದಾಹರಣೆ

ದಿನಾಂಕ 31.03.2025ರೊಳಗೆ ಆಸ್ತಿ ತೆರಿಗೆ ಬಾಕಿ ಪಾವತಿಸಿದರೆ		ದಿನಾಂಕ 31.03.2025ರ ನಂತರ ಆಸ್ತಿ ತೆರಿಗೆ ಬಾಕಿ ಪಾವತಿಸಿದರೆ	
ಆಸ್ತಿ ತೆರಿಗೆ ಬಾಕಿ (2019-20ನೇ ಸಾಲಿನಿಂದ ಬಾಕಿ ಇದ್ದಲ್ಲಿ)	ರೂ. 25,000/-	ಆಸ್ತಿ ತೆರಿಗೆ ಬಾಕಿ (2019-20ನೇ ಸಾಲಿನಿಂದ ಬಾಕಿ ಇದ್ದಲ್ಲಿ)	ರೂ. 25,000/-
ಬಡ್ಡಿ	ಶೂನ್ಯ	ಬಡ್ಡಿ	ರೂ. 15,000/-
ದಂಡ ಶುಲ್ಕ	ಕೇವಲ ರೂ. 100/-	ದಂಡ ಶುಲ್ಕ	ರೂ. 20,161/-
ಒಟ್ಟು ಬಾಕಿ	ರೂ. 25,100/-	ಒಟ್ಟು ಬಾಕಿ	ರೂ. 60,161/-

ತಕ್ಷಣವೇ ಪಾವತಿಸಿ ಮತ್ತು ಸೌಲಭ್ಯ ಸದ್ಬಳಕೆ ಮಾಡಿಕೊಳ್ಳಿ
ಒಂದು ನಗರ - ಒಂದು ಸಂಖ್ಯೆ
ಬೃ.ಬೆಂ.ಮ.ಪಾ ಕುಂದುಕೊರತೆಗಳಿಗೆ ಸಂಪರ್ಕಿಸಿ 1533

ಸೂಚನೆ
ಟಾಟಾ ಎಲೆಕ್ಸಿ ಲಿಮಿಟೆಡ್
ನೋಂದಾಯಿತ ಕಛೇರಿ: ಐಟಿಪಿಬಿ ರಸ್ತೆ, ವೈಟ್‌ಫೀಲ್ಡ್, ಬೆಂಗಳೂರು, ಕರ್ನಾಟಕ–560048

ಈ ಸೂಚನೆಯ ಮೂಲಕ ತಿಳಿಸುವುದೇನೆಂದರೆ, ಈ ಕೆಳಗೆ ಹೆಸರಿಸಿರುವ ಕಂಪನಿಯ ಪ್ರಮಾಣಪತ್ರಗಳು ಕಳೆದು ಹೋಗಿದ್ದು, ಹೊಂದಿದವರು ಹೇಳಲಾದ ಭದ್ರತೆಗಳು / ಅರ್ಜಿದಾರ/ರು ನಕಲಿ ಪ್ರಮಾಣಪತ್ರಗಳಿಗಾಗಿ ಕಂಪನಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.
ಯಾವುದೇ ವ್ಯಕ್ತಿ ಹೇಳಲಾದ ಷೇರುಗಳ ಬಗ್ಗೆ ಕ್ಲೈಮು ಹೊಂದಿದ್ದಲ್ಲಿ ಅಂಥವರು ತಮ್ಮ ದೂರನ್ನು ಕಂಪನಿಯ ನೋಂದಾಯಿತ ಕಛೇರಿಗೆ ಈ ದಿನದಿಂದ 15 ದಿನಗಳ ಒಳಗಾಗಿ ಕ್ಲೈಮನ್ನು ತಿಳಿಸತಕ್ಕದ್ದು, ತಪ್ಪಿದಲ್ಲಿ ಕಂಪನಿಯು ನಕಲಿ ಪ್ರಮಾಣಪತ್ರವನ್ನು ಮುನ್ಸೂಚನೆ ನೀಡದೆಯೇ ವಿತರಣೆ ಮಾಡಲಿದೆ.

ಹೋಲ್ಡರ್ (ಗಳ) [ಮತ್ತು ಜಂಟಿ ಹೋಲ್ಡರ್ (ಗಳು) ಇದ್ದಲ್ಲಿ] ಅವರ ಹೆಸರು	ಭದ್ರತೆಯ ಮಾದರಿ ಮತ್ತು ಮುಖ ಬೆಲೆ	ಸೆಕ್ಯುರಿಟೀಸ್‌ಗಳ ಸಂಖ್ಯೆ	ಡಿಸ್ಟಿಂಕ್ಟಿವ್ ಸಂಖ್ಯೆ
ಶಹೀನ್ ಪರ್ವೀನ್	ಈಕ್ವಿಟಿ ಮತ್ತು ಮುಖಬೆಲೆ ರೂ.10/–	100	23036321-23036420

ದಿನಾಂಕ : 17.03.2025
ಹೋಲ್ಡರ್(ಗಳ)/ಅರ್ಜಿದಾರ(ರ) ಹೆಸರು
ಶಹೀನ್ ಪರ್ವೀನ್

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿ. (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **26.10.2021** ರಂದು ಕರೆದು ಸಾಲಗಾರ **ಬೆರಿಲ್ ಜಾನ್ ಮತ್ತು ಪ್ರಿಯಾಂಕ ವಿ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 48,45,567.20 (ನಲವತ್ತೆಂಟು ಲಕ್ಷ ನಲವತ್ತೈದು ಸಾವಿರದ ಐದುನೂರ ಅರವತ್ತೇಳು ರೂಪಾಯಿಗಳು ಮತ್ತು ಇಪ್ಪತ್ತು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBEC00422274** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **28.09.2021** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **12.03.2025** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಆಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿ.ನ** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ಬಾಕಿ ಇರುವ ಮೊತ್ತ **ರೂ. 48,45,567.20 (ನಲವತ್ತೆಂಟು ಲಕ್ಷ ನಲವತ್ತೈದು ಸಾವಿರದ ಐದುನೂರ ಅರವತ್ತೇಳು ರೂಪಾಯಿಗಳು ಮತ್ತು ಇಪ್ಪತ್ತು ಪೈಸೆ ಮಾತ್ರ) 28.09.2021** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ
ಫ್ಲಾಟ್ ನಂ. ಸ-2, 2ನೇ ಮಹಡಿ, ಸಾಯಿ ಎನ್‌ಕ್ಲವ್-1, ನಂ-18 ಮತ್ತು 19, ಹೊರಮಾವು ಗ್ರಾಮ, ಬೆಂಗಳೂರು, ಕರ್ನಾಟಕ - 560043.

ಅಧಿಕಾರವಿರುವ ಅಧಿಕಾರಿ
ದಿನಾಂಕ : 12.03.2025 **ಸಮ್ಮಾನ್ ಕ್ಯಾಪಿಟಲ್ ಲಿ.**
ಸ್ಥಳ : ಬೆಂಗಳೂರು **(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)**

indegene®
ಇಂಡಿಜೀನ್ ಲಿಮಿಟೆಡ್
CIN: U73100KA1998PLC102040
ನೋಂದಾಯಿತ ಕಚೇರಿ: ಆಸ್ಪೆನ್ ಜಿ4, 3ನೇ ಮಹಡಿ, ಮಾನ್ಯತಾ ಎಂಬಸಿ ಬ್ಯುಸಿನೆಸ್ ಪಾರ್ಕ್, ಔಟರ್ ರಿಂಗ್ ರೋಡ್, ನಾಗವಾರ, ಬೆಂಗಳೂರು – 560045.
ಫೋನ್: +91 80 4674 4567 / +91 80 4644 7777;
ಇಮೇಲ್: compliance.officer@indegene.com, **ವೆಬ್‌ಸೈಟ್:** www.indegene.com

ಅಂಚೆ ಮತಪತ್ರದ ಕುರಿತ ಸೂಚನೆ ಮತ್ತು ಇ–ಮತದಾನದ ಬಗ್ಗೆ ಮಾಹಿತಿ

ಈ ಕೆಳಗಿನ ನಿಲುವಳಿಗಾಗಿ ರಿಮೋಟ್ ಇ–ಮತದಾನದ ಮೂಲಕ ಅಂಚೆ ಪತ್ರದ ವಿಧಾನದಲ್ಲಿ ಕಂಪನಿಯ ಸದಸ್ಯರಿಂದ ಇಂಡಿಜೀನ್ ಲಿಮಿಟೆಡ್ ಅನುಮೋದನೆಯನ್ನು ಆಗ್ರಹಿಸುತ್ತಿರುವ ಕಾರಣಕ್ಕೆ ಈ ನೋಟಿಸ್ ನೀಡಲಾಗಿದೆ:

ಅ. ಸಂ	ನಿಲುವಳಿ	ನಿಲುವಳಿಯ ವಿಧ
1.	ಸ್ವತಂತ್ರ ನಿರ್ದೇಶಕರಾಗಿ ಶ್ರೀ ಜೈರಾಜ್ ಮನೋಹರ ಪುರಂದರೆ (ಡಿಐಎನ್: 00159886) ಅವರನ್ನು ಪುನಃ ನೇಮಿಸುವುದು ಮತ್ತು ಕಮಿಷನ್ ಏರಿಕೆ ಮಾಡುವುದು	ವಿಶೇಷ ನಿಲುವಳಿ
2.	ಸ್ವತಂತ್ರ ನಿರ್ದೇಶಕರಾಗಿ ಡಾ. ಆಶಿಶ್ ಗುಪ್ತಾ (ಡಿಐಎನ್: 00521511) ಅವರನ್ನು ಪುನಃ ನೇಮಿಸುವುದು ಮತ್ತು ಕಮಿಷನ್ ಏರಿಕೆ ಮಾಡುವುದು	ವಿಶೇಷ ನಿಲುವಳಿ
3.	ಸ್ವತಂತ್ರ ನಿರ್ದೇಶಕರಾಗಿ ಶ್ರೀ ಪ್ರವೀಣ್ ಉದ್ಯಾವರ ಭಧ್ಯ ರಾವ್ (ಡಿಐಎನ್: 06782450) ಅವರನ್ನು ಪುನಃ ನೇಮಿಸುವುದು ಮತ್ತು ಕಮಿಷನ್ ಏರಿಕೆ ಮಾಡುವುದು	ವಿಶೇಷ ನಿಲುವಳಿ
4.	ಸ್ವತಂತ್ರ ನಿರ್ದೇಶಕ ಶ್ರೀ ಕೃಷ್ಣಮೂರ್ತಿ ವೇಣುಗೋಪಾಲ ತೆನ್ನೆತಿ (ಡಿಇನ್: 01338477) ಗೆ ಪಾವತಿ ಮಾಡಬೇಕಿರುವ ಕಮಿಷನ್‌ನಲ್ಲಿ ಏರಿಕೆ	ವಿಶೇಷ ನಿಲುವಳಿ

ಕಂಪನಿಗಳ ಕಾಯ್ದೆ 2013 ರ ವಿಭಾಗ 102 ಹಾಗೂ ಕಂಪನಿಯ ವೆಬ್‌ಸೈಟ್ https://www.indegene.com/, ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ವೆಬ್‌ಸೈಟ್ www.evoting.nsdl.com ಹಾಗೂ ಕಂಪನಿಯ ಈಕ್ವಿಟಿ ಷೇರುಗಳನ್ನು ಪಟ್ಟಿ ಮಾಡಿರುವ ಷೇರು ವಿನಿಮಯ ಮಂಡಳಿಗಳ ವೆಬ್‌ಸೈಟ್‌ಗಳಾದ ಬಿಎಸ್‌ಇ ಲಿಮಿಟೆಡ್‌ನ www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್‌ನ www.nseindia.com ನಲ್ಲಿ ಲಭ್ಯವಿರುವ ಇತರ ಅನ್ವಯಿಸುವ ಕಾನೂನುಗಳ (ನೋಟಿಸ್) ಅಡಿಯಲ್ಲಿ ಅಂಚೆ ಮತಪತ್ರ ಸೂಚನೆ ಮತ್ತು ಹೇಳಿಕೆಯು ಇರುತ್ತದೆ.

ಕಂಪನಿಗಳ ಕಾಯ್ದೆ 2013 ರ ಅನುಬಂಧಗಳು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು (ಎಂಸಿಎ ಸುತ್ತೋಲೆಗಳು ಎಂದು ಒಟ್ಟಾರೆಯಾಗಿ ಇದನ್ನು ಕರೆಯಲಾಗುವುದು) ಹೊರಡಿಸಿದ ಸಾಮಾನ್ಯ ಸುತ್ತೋಲೆ ಸಂ. 14/2020 ದಿನಾಂಕ ಏಪ್ರಿಲ್ 8, 2020, 17/2020 ದಿನಾಂಕ ಏಪ್ರಿಲ್ 13, 2020, 22/20202 ದಿನಾಂಕ ಜೂನ್ 15, 2020, 33/2020 ದಿನಾಂಕ [illegible]

[illegible]

ದಿನಾಂಕ: 17 ಮಾರ್ಚ್ 2025
ಸ್ಥಳ: ಬೆಂಗಳೂರು
ಇಂಡಿಜೀನ್ ಲಿಮಿಟೆಡ್ ಪರವಾಗಿ
ಸಹಿ/–
ಸ್ನಿಗ್ಧ ರಮೇಶ್ ಶೌಕ್
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣೆ ಅಧಿಕಾರಿ

ಲೈಟ್ ಕಂಬ ಬಿದ್ದು ಇಬ್ಬರು ಮಹಿಳೆಯರು ಸಾವು

ಬೆಂಗಳೂರು: ವಿದ್ಯುತ್ ಕಂಬ ಬಿದ್ದು ಇಬ್ಬರು ಮಹಿಳೆಯರು ಮೃತಪಟ್ಟಿರುವ ಘಟನೆ ಸೋಮವಾರ ನಡೆದಿದೆ. ಬೈಯ ಪ್ಪನಹಳ್ಳಿ ಬಳಿಯ ಸುದ್ದುಗುಂಟೆಪಾಳ್ಯ ದಲ್ಲಿ ರಸ್ತೆ ಕಾಮಗಾರಿ ನಡೆಯುತ್ತಿದ್ದ ವೇಳೆ ವಿದ್ಯುತ್ ಕಂಬಕ್ಕೆ ಜೆಸಿಬಿ ತಲುಲಿದ್ದು, ಕಂಬದ ಪಕ್ಕದಲ್ಲೇ ನಿಂತಿದ್ದ ಮಹಿಳೆಯರ ಮೇಲೆ ಬಿದ್ದಿದೆ. ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿದ್ದು, ಪರಿಶೀಲನೆ ಕೈಗೊಂಡಿದ್ದಾರೆ.

PUBLIC NOTICE

Public are informed that, my client Smt. Rajeshwari W/o. R. Ravi has lost the Original document of 1). General Power of Attorney executed by Srinivasa Reddy and Thimma Reddy in favour of R. Ravi vide regd. as doc. No. 749/1997-98 dated 27/8/1997.
If any person/s firm company, institution or organization has any claim are holding the afore mentioned document, they may contact the undersigned in writing within 7 days from the date of this notice failing which it will be presumed that there are no claims.

SCHEDULE
All that piece and parcel of the Property bearing Site No. 10, Katha No. 106/3, situated at Hongasandra Village, Begur Hobli, Bangalore South Taluk, Bangalore, measuring East to West 40 feet and North to South 15 feet and bounded on :
EAST : Road,
WEST: A. Gurumurthy's Property ,
NORTH: Narayana Reddy's Property,
SOUTH: Owners Property.

KSR Associates
ADVOCATES & LEGAL CONSULTANTS
OFFICE# 53/1, 1th Floor, Guttahalli Main Road, D.T. Street,8th Cross, Malleshwaram, Bangalore – 560 003
Email: raviksadvocate@gmail.com
Mobile: 99450 00789

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, **ಶ್ರೀಮತಿ. ರೂಪ .ಆರ್**, ಇವರು ಕೆಳಗೆ ಷೆಡ್ಯೂಲ್‌ನಲ್ಲಿ ತಿಳಿಸಿರುವ ಸ್ಥಿರಾಸ್ತಿ ಸ್ವತ್ತಿಗೆ ಮಾಲೀಕರಾಗಿರುತ್ತಾರೆ ಮತ್ತು ಶ್ರೀಮತಿ ಚಿಕ್ಕಮ್ಮ ಇವರನ್ನು ಪ್ರತಿನಿಧಿಸುವವರು ಜಿ.ಪಿ.ಎ. ಹೋಲ್ಡರ್ ಶ್ರೀಮತಿ ಪ್ರಮೀಳಾ ಉಮೇಶ್ ಇವರು ಶ್ರೀ.ಟಿ.ಶ್ರೀನಿವಾಸ ರವರ ಹೆಸರಿಗೆ ಬರೆದುಕೊಟ್ಟಿರುವ ಈ ಸ್ವತ್ತಿನ ಕ್ರಯ ಪತ್ರದ ದಿನಾಂಕ : 21–03–2006, ದಸ್ತಾವೇಜು ನಂ. 30755/ 2005–06, ಸಿ.ಡಿ.ನಂ. 272, ಪುಸ್ತಕ –1, ಬೆಂಗಳೂರು, ಕೆಂಗೇರಿ ಉಪನೋಂದಣಿ ಕಚೇರಿಯಲ್ಲಿ ನೋಂದಣಿಯಾಗಿರುವ ಮೂಲ [illegible]

[illegible]

ಎಸ್ ಜಗದೀಶ್ ಕುಮಾರ್, ವಕೀಲರು
[illegible]

ಆಕ್ಸಿಸ್‌ಕೇಡ್ಸ್ ಟೆಕ್ನಾಲಜೀಸ್ ಲಿಮಿಟೆಡ್
CIN: L72200KA1990PLC084435
[illegible]
Email: investor.relations@axiscades.com
Website: www.axiscades.com Ph. 080-41939000, Fax: 080-41939099
ಪೋಸ್ಟಲ್ ಬ್ಯಾಲೆಟ್ ರವಾನೆಯ ಪ್ರಕಟಣೆ

[illegible]

ಕಂಪನಿಯ ನಿರ್ದೇಶಕರ ಮಂಡಳಿಯು ಶ್ರೀ ಪ್ರಮೋದ್ ಎಸ್ ಎಂ ಅಥವಾ ಸಿ.ಎಸ್. ಬಿಸ್ವಜಿತ್ ಘೋಷ್ ಅವರನ್ನು ನೇಮಿಸಿದ್ದು, ಮೆ॥ **BMP & Co. LLP**, ಕಂಪನಿ ಕಾರ್ಯದರ್ಶಿಗಳು, ಪೋಸ್ಟಲ್ ಬ್ಯಾಲೆಟ್‌ಅನ್ನು ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಯ ಮೂಲಕ ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು ಪರಿವೀಕ್ಷಕ ಆಗಿ ನಿರ್ವಹಿಸಲಿದ್ದಾರೆ.
ಅಂಚೆ ಮತದಾನದ ಫಲಿತಾಂಶಗಳನ್ನು ಶುಕ್ರವಾರ, 18ನೇ ಮಾರ್ಚ್, 2025ರಂದು ಅಥವಾ ಅದಕ್ಕಿಂತ ಮೊದಲು ಪ್ರಕಟಿಸಲಾಗುವುದು.
ಕಂಪನಿ/ ಡೆಪಾಸಿಟರಿಗಳೊಂದಿಗೆ ತಮ್ಮ ಇ-ಮೇಲ್ ವಿಳಾಸವನ್ನು ನೋಂದಾಯಿಸದ ಸದಸ್ಯರುಗಳು, ಅಂಚೆ ಮತಪತ್ರ ಸೂಚನೆಯನ್ನು ಸ್ವೀಕರಿಸಲು ನೋಟೀಸಿನಲ್ಲಿ ನೀಡಿರುವ ಸೂಚನೆಗಳನ್ನು ಅನುಸರಿಸಿ.
ಮತದಾನ ಕುರಿತು ಹೆಚ್ಚಿನ ವಿವರ/ಕುಂದುಕೊರತೆಗಳಿಗೆ ಕೆಫಿನ್‌ರವರ ಟೋಲ್ ಫ್ರೀ ನಂಬರ್ 1800 309 4001ನಲ್ಲಿ ಸಂಪರ್ಕಿಸಬಹುದು.

ಆಕ್ಸಿಸ್‌ಕೇಡ್ಸ್ ಟೆಕ್ನಾಲಜಿಸ್ ಲಿಮಿಟೆಡ್ ಪರವಾಗಿ
ಸಹಿ/– ಸೋನಲ್ ದುದಾನಿ
ಕಂಪನಿ ಕಾರ್ಯದರ್ಶಿ
ದಿನಾಂಕ: 17ನೇ ಮಾರ್ಚ್ 2025

ಫಾರ್ಮ್ (ನಮೂನೆ) A
ಸಾರ್ವಜನಿಕ ಪ್ರಕಟಣೆ
(ನಿಯಂತ್ರಣ 14 ರ ಭಾರತೀಯ ದಿವಾಳಿತನ ಮತ್ತು ಬ್ಯಾಂಕ್‌ರಪ್ಸಿ ನಿಗಮದ [ಸ್ವಯಂ ದಿವಾಳಿತನದ ಪ್ರಕ್ರಿಯೆ] ನಿಯಮಗಳು 2017)
91 ಗೆಮೆಫಿ ಪ್ರೈವೇಟ್ ಲಿಮಿಟೆಡ್ ನ ಪಾಲುದಾರರ ಗಮನಕ್ಕೆ

1.	ಕಾರ್ಪೊರೇಟ್ ವ್ಯಕ್ತಿಯ ಹೆಸರು	91 ಗೆಮೆಫಿ ಪ್ರೈವೇಟ್ ಲಿಮಿಟೆಡ್
2.	ಕಾರ್ಪೊರೇಟ್ ವ್ಯಕ್ತಿಯನ್ನು ಸೇರ್ಪಡಿಸಿರುವ ದಿನಾಂಕ	15-03-2022
3.	ಕಾರ್ಪೊರೇಟ್ ವ್ಯಕ್ತಿಯನ್ನು ಯಾವ ಪ್ರಾಧಿಕಾರದಲ್ಲಿ ಸಂಯೋಜಿಸಲಾಗಿದೆ/ ನೊಂದಾಯಿಸಲಾಗಿದೆ.	ಕಂಪನಿಗಳ ನೋಂದಣಿದಾರರು - ಬೆಂಗಳೂರು
4.	ಕಾರ್ಪೊರೇಟ್ ವ್ಯಕ್ತಿಯ ಕಾರ್ಪೊರೇಟ್ ಗುರುತು ಸಂಖ್ಯೆ/ ಸೀಮಿತ ಬಾಧ್ಯತಾ ಗುರುತು ಸಂಖ್ಯೆ.	U72900KA2022PTC158907
5.	ಕಾರ್ಪೊರೇಟ್ ವ್ಯಕ್ತಿಯ ನೋಂದಾಯಿತ ಆಫೀಸ್ ಮತ್ತು ಪ್ರಧಾನ ಕಛೇರಿಯ (ಯಾವುದಾದರು ಇದ್ದಲ್ಲಿ) ಅದರ ವಿಳಾಸ	ನೋಂದಣೀಕೃತ ವಿಳಾಸ – ನಂ. 57, ಮಲ್ಲೇಶ್ವರ ಸ್ವಾಮಿ ನಿಲಯ, ಶ್ರೀನಿಧಿ ಲೇಔಟ್, ಜಕ್ಕಸಂದ್ರ, ನೆಲಮಂಗಲ, ಬೆಂಗಳೂರು ಗ್ರಾಮೀಣ ನೆಲಮಂಗಲ, ಕರ್ನಾಟಕ, ಭಾರತ 562123.
6.	ಕಾರ್ಪೊರೇಟ್ ವ್ಯಕ್ತಿಯ ದಿವಾಳಿತನದ ಪ್ರಕ್ರಿಯೆಯ ಪ್ರಾರಂಭದ ದಿನಾಂಕ	13 ನೇ ಮಾರ್ಚ್ 2025
7.	ಲಿಕ್ವಿಡೇಟರ್ ನ ಹೆಸರು, ವಿಳಾಸ, ಇ-ಮೇಲ್, ದೂರವಾಣಿ ಸಂಖ್ಯೆ ಮತ್ತು ನೋಂದಣಿ ಸಂಖ್ಯೆ	ಶ್ರೀ. ಸುಜಿತ್ ಬಾಲಕೃಷ್ಣನ್ ಮನಾರ್ಖಿ 1-2, ಐಶ್ವರ್ಯ ಸಂಕುಲ, 17, ಜಿ.ಎ. ಕುಲಕರ್ಣಿ ರಸ್ತೆ, ಜೋಶಿ ರೈಲ್ವೆ ಮ್ಯೂಜಿಯಮ್ ಎದುರು, ಕೋಥರೂಡ್, ಪುಣೆ 411038. ಇ-ಮೇಲ್ ಐಡಿ - rp.sujit@kanjcs.com. ದೂರವಾಣಿ ಸಂಖ್ಯೆ - 020-25466265/ 25461561 ನೋಂದಣಿ ಸಂಖ್ಯೆ IBBI/IPA-002/IP-N00328/2017-2018/10933
8.	ಹಕ್ಕುಗಳನ್ನು ಸಲ್ಲಿಸಲು ಅಂತಿಮ ದಿನಾಂಕ	12 ನೇ ಏಪ್ರಿಲ್ 2025

- **91 ಗೆಮೆಫಿ ಪ್ರೈವೇಟ್ ಲಿಮಿಟೆಡ್, 13ನೇ ಮಾರ್ಚ್ 2025 ರಂದು ಸ್ವಯಂ ದಿವಾಳಿತನದ ಪ್ರಕ್ರಿಯೆಯನ್ನು ಅರಂಭಿಸಿದೆ**, ಎಂಬುದಾಗಿ ಈ ಮೂಲಕ ಸೂಚನೆ ನೀಡಲಾಗಿದೆ.
- **91 ಗೆಮೆಫಿ ಟೆಕ್ನಾಲಾಜೀಸ್ ಪ್ರೈವೇಟ್ ಲಿಮಿಟೆಡ್** ನ ಪಾಲುದಾರರು ತಮ್ಮ ಹಕ್ಕುಗಳನ್ನು ಪುರಾವೆಗಳೊಂದಿಗೆ ಮೇಲಿನ ಕ್ರ. ಸಂ. 7 ರಲ್ಲಿ ತೋರಿಸಿರುವ ಲಿಕ್ವಿಡೇಟರ್ ರ ವಿಳಾಸಕ್ಕೆ **12ನೇ ಏಪ್ರಿಲ್ 2025 ರಂದು ಅಥವಾ ಅದಕ್ಕಿಂತ ಮುಂಚಿತವಾಗಿ** ಸಲ್ಲಿಸಬೇಕೆಂದು ಈ ಕರೆ ನೀಡಲಾಗುತ್ತಿದೆ.
- ಹಣಕಾಸು ಸಾಲಗಾರರು ತಮ್ಮ ಹಕ್ಕುಗಳ ಪುರಾವೆಗಳನ್ನು ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಮಾತ್ರ ಸಲ್ಲಿಸಬೇಕು. ಉಳಿದ ಎಲ್ಲ ಪಾಲುದಾರರು ತಮ್ಮ ಹಕ್ಕುಗಳ ಪುರಾವೆಗಳನ್ನು ವ್ಯಕ್ತಿಶಃ ಅಥವಾ ಅಂಚೆ ಮೂಲಕ ಅಥವಾ ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಸಲ್ಲಿಸಬೇಕು.
- ತಪ್ಪು ಅಥವಾ ದಾರಿ ತಪ್ಪಿಸಬಲ್ಲ ಹಕ್ಕುಗಳ ಪುರಾವೆಗಳು ದಂಡಕ್ಕೆ ಒಳಪಡುತ್ತವೆ.

ದಿನಾಂಕ – 15ನೇ ಮಾರ್ಚ್ 2025
ಸ್ಥಳ – ಪುಣೆ
ಸುಜಿತ್ ಬಾಲಕೃಷ್ಣನ್ ಮನಾರ್ಖಿ
ಲಿಕ್ವಿಡೇಟರ್

ನಟಿ ಜತೆ ಉದ್ಯಮಿ ಪುತ್ರ ತರುಣ್ ವ್ಯವಹಾರದಲ್ಲಿ ಶಾಮೀಲು

ಚಿನ್ನ ಕಳ್ಳಸಾಗಣೆ ಪ್ರಕರಣ: ದುಬೈನಲ್ಲಿ ರನ್ಯಾ ಕಂಪನಿ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಚಿನ್ನ ಕಳ್ಳಸಾಗಣೆಯಲ್ಲಿ ನಟಿ ರನ್ಯಾರಾವ್ ಅವರನ್ನು ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಅಧಿಕಾರಿಗಳು ಬಂಧಿಸಿದ್ದಾರೆ. ಕಳ್ಳಸಾಗಣೆ ಪ್ರಕರಣದಲ್ಲಿ ರನ್ಯಾ ಜತೆ ಉದ್ಯಮಿ ಪುತ್ರ ತರುಣ್ ಹೆಸರೂ ಕೇಳಿಬಂದಿದೆ. ಈ ಹಿನ್ನೆಲೆಯಲ್ಲಿ ಡಿಆರ್‌ಐ ಅಧಿಕಾರಿಗಳು ತರುಣ್ ಅವರನ್ನು ವಿಚಾರಣೆಗೆ ಒಳಪಡಿಸಿದ್ದಾರೆ. ತರುಣ್ ವಿಚಾರಣೆಯಲ್ಲಿ ಮತ್ತಷ್ಟು ಸ್ಫೋಟಕ ಮಾಹಿತಿ ಬಹಿರಂಗಗೊಂಡಿವೆ.

ನಟಿ ರನ್ಯಾ ರಾವ್ ಮತ್ತು ನಾನು (ತರುಣ್) ಕಾಲೇಜು ದಿನಗಳಿಂದಲೇ ಸ್ನೇಹಿತರು.. ಬಳಿಕ ಇಬ್ಬರೂ ಸೇರಿ 2023ರಲ್ಲಿ ದುಬೈನಲ್ಲಿ 50:50 ಪಾಲುದಾರಿಕೆಯಲ್ಲಿ ವೀರಾ ಡೈಮಂಡ್ಸ್ ಟ್ರೇಡಿಂಗ್ ಎಲ್‌ಎಲ್‌ಸಿ ಎಂಬ ಹೆಸರಿನ ಕಂಪನಿ ಪ್ರಾರಂಭಿಸಿದ್ದೆವು. ವ್ಯವಹಾರದ ಉದ್ದೇಶ, ದುಬೈಗೆ ಚಿನ್ನವನ್ನು ಆಮದು ಮಾಡಿಕೊಳ್ಳುವುದು ಮತ್ತು ಚಿನ್ನ ಮಾರಾಟ ಮಾಡುವುದಾಗಿತ್ತು. ದುಬೈ ವ್ಯವಹಾರದಲ್ಲಿ ರನ್ಯಾ ಏಕೈಕ ಹೂಡಿಕೆದಾರರಾಗಿದ್ದರು. ನಾನು ಕಾರ್ಯನಿರತ ಪಾಲುದಾರನಾಗಿದ್ದೆ. ದುಬೈನಲ್ಲಿ ಡೀಲರ್‌ಗಳಿಗೆ ವಿದೇಶಿ ಕರೆನ್ಸಿಯಲ್ಲಿ ಹಣ ಪಾವತಿ ಮಾಡಲಾಗಿತ್ತು.

ಓವರ್ ಡೀಲರ್ ಒಮ್ಮೆ ದುಬೈನಲ್ಲಿ ಚಿನ್ನವನ್ನು ಪೂರೈಸದಿದ್ದರಿಂದ 1.7 ಕೋಟಿ ರು. ಮೋಸ ಹೋಗಿದ್ದೆವು. 1.7 ಕೋಟಿ ಹಣವನ್ನು ರನ್ಯಾರಾವ್ ಭಾರತದಿಂದ ದುಬೈಗೆ ಹವಾಲಾ ಮೂಲಕ ತರಿಸಿದ್ದರು. ರನ್ಯಾ ರಾವ್‌ಗೆ ತನ್ನ ಕುಟುಂಬದ ಸಂಪರ್ಕದ ಮೂಲಕ ಜಿನೀವಾ ಮತ್ತು ಬ್ಯಾಂಕಾಕ್‌ನಲ್ಲಿ ಡೀಲರ್‌ಗಳ ಪರಿಚಯ ಇದೆ. ರನ್ಯಾ ರಾವ್ ಚಿನ್ನವನ್ನು ಖರೀದಿಸುತ್ತಿದ್ದಳು, ಕಸ್ಟಮ್ಸ್ ಅಧಿಕಾರಿಗಳ ಬಳಿ ಜಿನೀವಾಗೆ ತೆಗೆದುಕೊಂಡು ಹೋಗುತ್ತೇನೆ ಅಂತ ನನ್ನ ಹೆಸರಲ್ಲಿ ಡಿಕ್ಲರೇಷನ್ ಕೊಡುತ್ತಿದ್ದಳು. ಏಪ್ರಿಲ್ 2024 ರಿಂದ ಜಿನೀವಾ ಅಥವಾ ಬ್ಯಾಂಕಾಕ್‌ನಿಂದ ಚಿನ್ನವನ್ನು ಖರೀದಿಸಲಾಗಿದೆ. ರನ್ಯಾ ತನ್ನ ಎಚ್‌ಡಿಎಫ್‌ಸಿ ಬ್ಯಾಂಕ್ ಮೂಲಕ ವಿರಾ ಡೈಮೆಂಡ್ಸ್ ಕಂಪನಿ ರಚನೆಗಾಗಿ 8–10 ಲಕ್ಷ ರು. ಹೂಡಿಕೆ ಮಾಡಿದ್ದಾಳೆ ಎಂದು ತರುಣ್ ವಿಚಾರಣೆ ವೇಳೆ ಬಾಯಿಬಿಟ್ಟಿದ್ದಾನೆ.

ರನ್ಯಾಗೆ ಸಿಬಿಐ ಸಂಕಷ್ಟ ಸನ್ನಿಹಿತ

ಚಿನ್ನ ಕಳ್ಳಸಾಗಣೆ ಪ್ರಕರಣದ ತನಿಖೆಯನ್ನು ಸಿಬಿಐ ಅಧಿಕಾರಿಗಳು ಚುರುಕುಗೊಳಿಸಿದ್ದಾರೆ. ನಟಿ ರನ್ಯಾ ರಾವ್ ಅವರನ್ನು ಸಿಬಿಐ ತನ್ನ ಕಸ್ಟಡಿಗೆ ಪಡೆಯುವ ಸಾಧ್ಯತೆ ಇದೆ. ಸಿಬಿಐ ಈಗಾಗಲೇ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಠಾಣೆಯ ಪಿಎಸ್‌ಐ ಹಾಗೂ ಇಬ್ಬರು ಪೇದೆಗಳ ಹೇಳಿಕೆ ಪಡೆದು, ವಿಮಾನ ನಿಲ್ದಾಣದಲ್ಲಿ ಮಹಜರು ನಡೆಸಿದೆ. ಇದರ ಮುಂದಿನ ಭಾಗವಾಗಿ ನಟಿಯನ್ನು ಕಸ್ಟಡಿಗೆ ಪಡೆದು ವಿಚಾರಣೆಗೆ ಒಳಪಡಿಸಲು ಸಿದ್ಧತೆ ನಡೆಸಿದೆ. ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದ ಅನುಮತಿ ಪಡೆದು ಕಸ್ಟಡಿಗೆ ಪಡೆಯುವ ಸಾಧ್ಯತೆ ಇದೆ. ರನ್ಯಾ ರಾವ್ ಸದ್ಯ ಪರಪ್ಪನ ಅಗ್ರಹಾರ ಜೈಲ್ಲಿದ್ದಾರೆ.

ರನ್ಯಾಗೆ ಕಾನೂನು ಕುಣಿಕೆ ಬಿಗಿ: ಪತಿಗೆ ಬಿಗ್ ರಿಲೀಫ್

ಅಕ್ರಮವಾಗಿ ಚಿನ್ನ ಸಾಗಿಸುತ್ತಿದ್ದಾಗ ನಟಿ ರನ್ಯಾರಾವ್ ಬಂಧನ ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ತನಿಖೆ ಚುರುಕುಗೊಳಿಸಿದ್ದಾರೆ. ಚಿನ್ನ ಮಾರಾಟಕ್ಕೆ ದುಬೈನಲ್ಲೇ ರನ್ಯಾ ಮತ್ತು ತರುಣ್ ಕಂಪನಿ ಸ್ಥಾಪಿಸಿದ್ದರು. ಈ ಮಧ್ಯೆ ರನ್ಯಾ ಪತಿ ಜತಿನ್ ಹುಕ್ಕೇರಿ ಅವರು ಬಲವಂತದ ಕ್ರಮ ಕೈಗೊಳ್ಳದಂತೆ ಹೈಕೋರ್ಟ್ ಮೆಟ್ಟಿಲೇರಿದ್ದು, ಬಲವಂತದ ಕ್ರಮ ಕೈಗೊಳ್ಳದಂತೆ ಸೂಚನೆ ನೀಡಿದೆ. ಆರೋಪಿ ರನ್ಯಾರಾವ್ ಪತಿ ಜತಿನ್ ಹುಕ್ಕೇರಿ ಬಲವಂತದ ಕ್ರಮ ಕೈಗೊಳ್ಳದಂತೆ ಕೋರಿ ಅರ್ಜಿ ಸಲ್ಲಿಸಿದ್ದರು. ಇಂದು ನ್ಯಾ.ಹೇಮಂತ್ ಚಂದನಗೌಡರ್ ಪೀಠದಲ್ಲಿ ಅರ್ಜಿ ವಿಚಾರಣೆ ಮಾಡಲಾಗಿದ್ದು, ಜತಿನ್ ಪರವಾಗಿ ಹಿರಿಯ ವಕೀಲ ಪ್ರಭುಲಿಂಗ ನಾವದಗಿ ವಾದ ಮಂಡಿಸಿದರು. ಆರೋಪಿ ರನ್ಯಾ ರಾವ್ ಪತಿ ಜತಿನ್ ಹುಕ್ಕೇರಿ ಬಲವಂತದ ಕ್ರಮ ಕೈಗೊಳ್ಳದಂತೆ ಕೋರಿ ಅರ್ಜಿ ಸಲ್ಲಿಸಿದ್ದರು. ಇಂದು ನ್ಯಾ. ಹೇಮಂತ್ ಚಂದನಗೌಡರ್ ಪೀಠದಲ್ಲಿ ಅರ್ಜಿ ವಿಚಾರಣೆ ಮಾಡಲಾಗಿದ್ದು, ಜತಿನ್ ಪರವಾಗಿ ಹಿರಿಯ ವಕೀಲ ಪ್ರಭುಲಿಂಗ ನಾವದಗಿ ವಾದ ಮಂಡಿಸಿದರು. ಯಾವಾಗ ಆಕ್ಷೇಪಣೆ ಅರ್ಜಿ ಸಲ್ಲಿಕೆ ಮಾಡುತ್ತೀರಿ ಎಂದು ನ್ಯಾಯಮೂರ್ತಿಗಳು ಪ್ರಶ್ನಿಸಿದ್ದು, ಸೋಮವಾರ ಆಕ್ಷೇಪಣೆ ಸಲ್ಲಿಸುವುದಾಗಿ ಡಿಆರ್‌ಐ ಪರ ವಕೀಲರು ಹೇಳಿದ್ದಾರೆ. ಹೀಗಾಗಿ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಮಾರ್ಚ್ 24ಕ್ಕೆ ಮುಂದೂಡಿದ್ದು, ಬಲವಂತದ ಕ್ರಮ ಕೈಗೊಳ್ಳದಂತೆ ಸೂಚನೆ ನೀಡಿದೆ.

ಕೋಲಾರ ಕಾಂಗ್ರೆಸ್ ನಾಯಕನ ಹತ್ಯೆ: ಸಿಬಿಐ ತನಿಖೆ ನಡೆಸಲು ಹೈ ಆದೇಶ

ಬೆಂಗಳೂರು: ಕೋಲಾರದ ಕಾಂಗ್ರೆಸ್ ಮುಖಂಡ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಎಂ.ಶ್ರೀನಿವಾಸ್ ಕೊಲೆ ಪ್ರಕರಣದ ತನಿಖೆಯನ್ನು ಸಿಬಿಐಗೆ ನೀಡಿ ಕರ್ನಾಟಕ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಗೃಹ ಸಚಿವ ಜಿ.ಪರಮೇಶ್ವರ್ ಹಾಗೂ ಮಾಜಿ ಸ್ಪೀಕರ್ ರಮೇಶ್ ಕುಮಾರ್ ಅವರ ಆಪ್ತ ಎಂ.ಶ್ರೀನಿವಾಸ್ ಅವರನ್ನು 2023ರ ಅಕ್ಟೋಬರ್ 23ರಂದು ಶ್ರೀನಿವಾಸಪುರ ಹೊರ ವಲಯದಲ್ಲಿ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಬರ್ಬರವಾಗಿ ಹತ್ಯೆಗೈದಿದ್ದರು. ಈ ಸಂಬಂಧ ಶ್ರೀನಿವಾಸ್ ಪತ್ನಿ ಡಾ.ಎಸ್.ಚಂದ್ರಕಲಾ ಅವರು ಕೊಲೆ ಪ್ರಕರಣದ ತನಿಖೆಯನ್ನು ಸಿಬಿಐಗೆ ನೀಡಬೇಕೆಂದು ಹೈಕೋರ್ಟ್‌ಗೆ ಮನವಿ ಮಾಡಿದ್ದರು. ಚಂದ್ರಕಲಾ ಮನವಿ ಪುರಸ್ಕರಿಸಿದ ನ್ಯಾಯ ಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಹೈಕೋರ್ಟ್ ಪೀಠ ಈ ಪ್ರಕರಣ ಸಿಬಿಐಗೆ ವಹಿಸುವಂತೆ ಆದೇಶಿಸಿದ್ದಾರೆ. ಸ್ಥಳೀಯ ಪೊಲೀಸರು ಹಾಗೂ ಸಿಐಡಿ ಅಧಿಕಾರಿಗಳು ಸಮರ್ಪಕ ತನಿಖೆ ನಡೆಸಿಲ್ಲ. ಸತ್ಯವನ್ನು ಆಳವಾದ ನೀರಿನಲ್ಲಿ ಮುಳುಗಿಸಲಾ ಗಿದೆ. ಹೀಗಾಗಿ ಸಿಬಿಐ ತನಿಖೆ ಅನಿವಾರ್ಯ ವೆಂದು ಹೈಕೋರ್ಟ್ ಅಭಿಪ್ರಾಯಪಟ್ಟಿದ್ದು, ಮೂರು ತಿಂಗಳಿನಲ್ಲಿ ತನಿಖೆ ನಡೆಸಿ ವರದಿ ಸಲ್ಲಿಸಲು ಸಿಬಿಐಗೆ ಸೂಚನೆ ನೀಡಿದೆ. ಸಿಬಿಐ ತನಿಖೆಗೆ ಸಹಕರಿಸುವಂತೆ ಪೊಲೀಸರಿಗೂ ಸಹ ಕೋರ್ಟ್ ಸೂಚಿಸಿದೆ.

ಪ್ರಕರಣದ ಹಿನ್ನೆಲೆ: ಶ್ರೀನಿವಾಸಪುರ ತಾಲೂಕಿನ ಕಾಂಗ್ರೆಸ್ ಮುಖ ಂಡ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾ ಗಿದ್ದ ಶ್ರೀನಿವಾಸ್ ಮೇಲೆ ಹೊಗಳಗೆರೆ ರಸ್ತೆಯಲ್ಲಿ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಮಾರಣಾಂತಿಕ ಹಲ್ಲೆ ಮಾಡಿ ಪರಾರಿಯಾಗಿದ್ದರು. ಶ್ರೀನಿವಾಸ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೇ ಅವರು

ಮೈಕ್ರೋ ಫೈನಾನ್ಸ್ ಸುಗ್ರೀವಾಜ್ಞೆ ಸಿಂಧುತ್ವ ಎತ್ತಿಹಿಡಿದ ಹೈಕೋರ್ಟ್

ಬೆಂಗಳೂರು: ರಾಜ್ಯದಲ್ಲಿ ಸಣ್ಣ ಪ್ರಮಾಣದಲ್ಲಿ ಸಾಲ ಪಡೆದವರಿಗೆ ಕಿರುಕುಳ ನೀಡುವುದನ್ನು ತಪ್ಪಿಸುವುದಕ್ಕಾಗಿ ರಾಜ್ಯ ಸರಕಾರ ಹೊರಡಿಸಿದ್ದ ಕರ್ನಾಟಕ ಕಿರು ಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ಪ್ರತಿಬಂಧಕ) ಸುಗ್ರೀವಾಜ್ಞೆಯ (ಮೈಕ್ರೋಫೈನಾನ್ಸ್) ಸಾಂವಿಧಾನಿಕ ಸಿಂಧುತ್ವವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಸುಗ್ರೀವಾಜ್ಞೆಯ ಸಿಂಧುತ್ವ ಮತ್ತು ಮೋಟಾರು ವಾಹನ/ಆಸ್ತಿ ಹಣಕಾಸು ಉದ್ಯಮವು ಸುಗ್ರೀವಾಜ್ಞೆಯಿಂದ ಹೊರಗಿವೆ ಎಂಬುದನ್ನು ಸರಕಾರ ಸ್ಪಷ್ಟಪಡಿಸಲು ನಿರ್ದೇಶಿಸುವಂತೆ ಕೋರಿ ಬೆಂಗಳೂರಿನ ಕರ್ನಾಟಕ ಹೈರ್ ಪರ್ಚೇಸ್ ಅಸೋಸಿಯೇಶನ್ ಅರ್ಜಿ ಸಲ್ಲಿಸಿತ್ತು. ಅದರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಅರ್ಜಿ ವಜಾಗೊಳಿಸಿ, ಸುಗ್ರೀವಾಜ್ಞೆ ಎತ್ತಿಹಿಡಿದು ಆದೇಶಿಸಿದೆ.

ಸರಕಾರದ ಪರ ವಕೀಲರ ವಾದ: ಅರ್ಜಿಯ ವಿಚಾರಣೆ ವೇಳೆ ರಾಜ್ಯ ಸರಕಾರದ ಪರ ವಾದ ಮಂಡಿಸಿದ್ದ ಅಡ್ವೋಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, ಮೂರು ಲಕ್ಷ ವಾರ್ಷಿಕ ಆದಾಯ ಇರುವ ಕುಟುಂಬಗಳಿಗೆ ಯಾವುದೇ ಭದ್ರತೆ ಇಲ್ಲದ ಸಾಲ ನೀಡುವವರಿಗೆ ಸುಗ್ರೀವಾಜ್ಞೆ ಅನ್ವಯಿಸುತ್ತದೆ. ಹಾಲಿ ಪ್ರಕರಣದಲ್ಲಿ ಸಂತ್ರಸ್ತರು ಯಾರೂ ನ್ಯಾಯಾಲಯದ ಮುಂದೆ ಬಂದಿಲ್ಲ. ಅರ್ಜಿದಾರರು ಕಾಯಿದೆ ತಮಗೆ ಅನ್ವಯಿಸುತ್ತದೆಯೇ, ಇಲ್ಲವೇ ಎಂಬುದರ ಸ್ಪಷ್ಟನೆ ಕೋರಲು ನ್ಯಾಯಾಲಯದ ಮುಂದೆ ಬಂದಿದ್ದಾರೆ ಎಂದಿದ್ದರು.

ಆರ್‌ಬಿಐ ಸುತ್ತೋಲೆ ಏನು ಹೇಳುತ್ತದೆಯೋ ಅದನ್ನು ಮಾಡಲಾಗಿದೆ. ಅರ್ಜಿದಾರರಿಗೂ ಸುಗ್ರೀವಾಜ್ಞೆಗೂ ಯಾವುದೇ ಸಂಬಂಧವಿಲ್ಲ. 17 ಮಂದಿ ಸಾವನ್ನಪ್ಪಿದ್ದಾರೆ. ಆ ಸಂಬಂಧ ಎಫ್‌ಐಆರ್ ದಾಖಲಾಗಿವೆಯಷ್ಟೆ. ಬೇರೆ ಯಾವುದೇ ತೆರನಾದ ಎಫ್‌ಐಆರ್ ದಾಖಲಿಸಲಾಗಿಲ್ಲ. ಎನ್‌ಬಿಎಫ್‌ಸಿ ಮತ್ತು ಆರ್‌ಬಿಐ ಕಾಯಿದೆ ವ್ಯಾಪ್ತಿಯಿಂದ ಹೊರಗಿರುವವರಿಗೆ ಸುಗ್ರೀವಾಜ್ಞೆ ಅನ್ವಯಿಸುತ್ತದೆ ಎಂದು ವಿವರಿಸಿದ್ದರು.

ಮಾನ್ಯ ಗೌರವಾನ್ವಿತ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ
(3ನೇ ಕಿರಿಯ ಶ್ರೇಣಿ ವಿಭಾಗ) ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 195/2025
ಅರ್ಜಿದಾರರು: ಶ್ರೀಮತಿ ಯಶೋಧಮ್ಮ ಕೋಂ ಲೇಟ್ ಶಿವರಾಜು ವಯಸ್ಸು 51 ವರ್ಷ, ವಿಳಾಸ: ಯಲವಳ್ಳಿ ಗ್ರಾಮ, ಅತ್ತಿಹಳ್ಳಿ ಸಾತನೂರು ಹೋಬಳಿ, ಕನಕಪುರ ತಾಲ್ಲೂಕು.
ವಿರುದ್ಧ

[illegible]

ಅರ್ಜಿದಾರರ ಪರ ವಕೀಲರು
ಗಿರೀಶ್ ಕುಮಾರ್.ಎನ್
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 17.03.2025

IN THE COURT OF THE ASSISTANT COMMISSIONER BENGALURU SOUTH SUB-DIVISION, AT BANGALORE
K.SC.ST(South) No. 02/2022
BETWEEN: Sri. Mariyappa And others
......Petitioners
AND : The Thasidhar And others
.....Respondents
NOTICE TO RESPONDENTS BY A WAY OF PAPER PUBLICATION UNDER ORDER V RULE 20 OF CPC
Respondents No.2 to 5 and 8:
2) Smt. Umadevi.N. Swamy
W/o S.M. Narayanaswamy, Aged about 58 years
3) Sri. B.N.Naveen Kumar,
S/o S. M.Narayanaswamy, Aged about 45 years
4) Smt. Chethana N. Swamy Daughter of S.M.Narayanaswamy, Aged about 41 years,
5) Sri.B.N. Udayesh Son of S. M.Narayanaswamy, Aged about 35 years,
Sl. No.2 to 5 are Residing at: Lalbagh Fort Road, Doddmavalli, Bangalore-560004.
8) M/s. S.A. properties, By its partner No.72/A, 1st floor, 16th main, BTM I Stage, Bangalore-29.
WHEREAS, the petitioners above named has filed the above suit for restoration of SC/ST granted land against the respondents. The respondents No.2 to 5 and 8 above named are avoiding service of summons intentionally and deliberately issued by this Hon'ble Court. The respondents No.2 to 5 and 8 above named are hereby directed to appear before this Hon'ble Court either in person or pleader on next hearing date is on or through the **21/03/2025 at 3.00pm** Even now, the respondents are residing in the address as stated in the cause title to the best of my knowledge, failing which the matter will be heard ex-parte.

SCHEDULE PROPERTY
All that piece and parcel of the residential property bearing (1) Old sy No.64, New Sy.No.113, measuring 1 acre 06 guntas and (2) Old Sy. No.55, New Sy.No.116, measuring 0-30 guntas, both situated at Singasandra Village, Begur Hobli, Bangalore South Taluk, and bounded on:
Given under my hand and seal of the Court, this **17th day of March 2025 .**
By order of the Court, Asst. Commissioner Bangalore South, sub -Division, Bangalore
B.R.Prakash, Advocate
No.12, 13th Cross, Cubbonpet,
Opp Kandaya Bhavan, Bangalore -560 002

ಪೇದೆ ಐಡಿ ನಂಬರ್ ಫೋರ್ಜರಿ, ಇನ್‌ಸ್ಪೆಕ್ಟರ್ ಎಂದು ಬಳಕೆ

ಫೋರ್ಜರಿ ಆರೋಪಿ ವಿರುದ್ಧ ಸಿಸಿಬಿ ಪೊಲೀಸರಿಂದ ಪ್ರಕರಣ ದಾಖಲು

ಬೆಂಗಳೂರು: ಪೊಲೀಸ್ ಕಾನ್‌ಸ್ಟೇಬಲ್ ಐಡಿ ಕಾರ್ಡ್ ನಂಬರ್ ಬಳಸಿ ಇನ್‌ಸ್ಪೆಕ್ಟರ್ ಎಂದು ನಕಲು ಮಾಡಿಕೊಂಡು ಓಡಾಡುತ್ತಿದ್ದ ಆರೋಪಿ ವಿರುದ್ಧ ಸಿಸಿಬಿಯ ಸಂಘಟಿತ ಅಪರಾಧ ನಿಯಂತ್ರಣ ದಳದ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಇನ್‌ಸ್ಪೆಕ್ಟರ್ ಎಂದು ನಮೂದಾಗಿರುವ ಹಾಗೂ ಹಿರಿಯ ಅಧಿಕಾರಿಗಳ ಸಹಿ ಇರದ ಐಡಿ ಕಾರ್ಡ್ ಹೊಂದಿದ್ದ ಆನಂದ್ ಎಂಬಾತನ ವಿರುದ್ಧ ಪ್ರಕರಣ ದಾಖಲಾಗಿದೆ. ಆರೋಪಿ ನಕಲಿ ಐಡಿ ಕಾರ್ಡ್ ಬಳಸುತ್ತಿದ್ದ ಕುರಿತು ಮಾಹಿತಿ ಬಂದ ಹಿನ್ನೆಲೆಯಲ್ಲಿ ಸಿಸಿಬಿ ಪೊಲೀಸರು ಪರಿಶೀಲನೆ ನಡೆಸಿದ್ದರು. ಆಗ ನಕಲಿ ಐಡಿ ಕಾರ್ಡ್ ಎಂಬುದು ಗೊತ್ತಾಗಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ನಕಲಿ ಐಡಿ ಕಾರ್ಡ್ ಬಳಸುತ್ತಿದ್ದುದರ ಕುರಿತು ಮಾಹಿತಿ ಬಂದ ಹಿನ್ನೆಲೆಯಲ್ಲಿ, ಐಡಿ ಕಾರ್ಡ್ ನೀಡಲಾಗುವ ವಿವಿಐಪಿ ಭದ್ರತಾ ವಿಭಾಗದಿಂದ ಮಾಹಿತಿ ಪಡೆದಾಗ ಅದರಲ್ಲಿರುವ ನಂಬರ್ ಎಸ್.ಆರ್.ನಗರ ಠಾಣೆಯ ಕಾನ್‌ಸ್ಟೇಬಲ್ ದೊಡ್ಡಬಸಪ್ಪ ಕೆ. ಎಂಬುವರದ್ದು ಎಂದು ತಿಳಿದು ಬಂದಿದೆ. ಕಾನ್‌ಸ್ಟೇಬಲ್ ಐಡಿ ನಂಬರ್ ಬಳಸಿ, ತನ್ನ ಫೋಟೋ ಹಾಕಿ ಇನ್‌ಸ್ಪೆಕ್ಟರ್ ಎಂದು ತಿದ್ದುಪಡಿ ಮಾಡಿ ಆರೋಪಿ ಬಳಸುತ್ತಿದ್ದ ಎಂಬುದು ಖಚಿತವಾಗಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಆರೋಪಿಗಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಟೈರ್ ಬಿಚ್ಚಿ ಕದ್ದೊಯ್ದ ಖದೀಮರು

ಬೆಂಗಳೂರು: ಹೋಟೆಲ್ ಮುಂದೆ ನಿಲ್ಲಿಸಲಾಗಿದ್ದ ಕಾರಿನ ನಾಲ್ಕೂ ಟೈರ್‌ಗಳನ್ನು ಕಳ್ಳತನ ಮಾಡಿರುವ ಘಟನೆ ಗಾಂಧಿನಗರದ ಹೋಟೆಲ್ ಬಳಿ ನಡೆದಿದೆ. ಕಳ್ಳರ ಕರಾಮತ್ತು ದೃಶ್ಯದಲ್ಲಿ ಸೆರೆಯಾಗಿದ್ದು, ಮೂವರು ಖದೀಮರು ಕಾರಿಗೆ ಜಾಕ್ ಹಾಕಿ ನಾಲ್ಕು ಚಕ್ರಗಳನ್ನು ಬಿಚ್ಚಿಕೊಂಡು ಪರಾರಿಯಾಗಿದ್ದಾರೆ. ಇನ್ನೋವಾ ಕಾರಿನಲ್ಲಿ ಬಂದು ಈ ಕೃತ್ಯ ಎಸಗಿದ್ದಾರೆ. ಹುಬ್ಬಳ್ಳಿ ಮೂಲದ ಗೋವಿಂದಗೌಡ ಎಂಬುವರು ವೈಯಕ್ತಿಕ ಕೆಲಸ ನಿಮಿತ್ತ ಶನಿವಾರ ಬೆಂಗಳೂರಿಗೆ ಬಂದಿದ್ದು, ಗಾಂಧಿನಗರದ ಹೋಟೆಲ್ ಮುಂದೆ ಕಾರು ನಿಲ್ಲಿಸಿದ್ದಾರೆ. ಆದರೆ, ಕಳ್ಳರು ಕಾರಿನ ಗಾಲಿಗಳನ್ನು ಬಿಚ್ಚಿಕೊಂಡು ಪರಾರಿಯಾಗಿದ್ದಾರೆ. ಇದರಿಂದ ಕಂಗಾಲಾದ ಗೋವಿಂದಗೌಡ, ಉಪ್ಪಾರಪೇಟೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಕಡಿಮೆ ಮೊತ್ತಕ್ಕೆ ಚಿನ್ನ ನೀಡುವ ಆಮಿಷವೊಡ್ಡಿ ಗೃಹಣಿಗೆ ವಂಚನೆ

ಬೆಂಗಳೂರು: ಮನೆಗೆ ಶಾಂತಿಪೂಜೆಗೆ ಬಂದ ವ್ಯಕ್ತಿಯೊಬ್ಬ ತಾನು ಚಿನ್ನದ ವ್ಯವಹಾರ ಮಾಡುವುದಾಗಿ ನಂಬಿಸಿ ಮನೆಯ ಯಜಮಾನಿಯಿಂದ 1 ಕೋಟಿ ರು. ಪಡೆದು ವಂಚಿಸಿರುವ ಘಟನೆ ಬೆಳಕಿಗೆ ಬಂದಿದೆ. ಅಮರಾವತಿ ಎಂಬ ಗೃಹಿಣಿಗೆ ಚಿನ್ನದ ಬಿಸ್ಕೆಟ್‌ಗಳನ್ನು ತೋರಿಸಿ ವಂಚಿಸಿದ ಆರೋಪದಡಿ ಗೋಪಾಲಕೃಷ್ಣ, ರಾಕೇಶ್ ರೆಡ್ಡಿ, ರೂಪಾ ಹಾಗೂ ಯಶವಂತಕುಮಾರ್ ಎಂಬವರ ವಿರುದ್ಧ ಸಿಸಿಬಿಯಲ್ಲಿ ಎಫ್‌ಐಆರ್ ದಾಖಲಾಗಿದೆ. ಕೆ.ಆರ್.ಪುರದ ಕಿತ್ತಗನೂರು ಮುಖ್ಯರಸ್ತೆಯ ಸಾಯಿ ಲೇಔಟ್‌ನ ಅಮರಾವತಿ ಹಣ ಕಳೆದುಕೊಂಡವರು.

ವಂಚನೆ ಹೇಗೆ?: ಕಳೆದ ವರ್ಷ ಅಮರಾವತಿ ತಮ್ಮ ಮನೆಯಲ್ಲಿ ಶಾಂತಿಪೂಜೆಗಾಗಿ ಗೋಪಾಲಕೃಷ್ಣನನ್ನು ಕರೆಸಿದ್ದರು. ಪೂಜೆ ಮುಗಿದ ಎರಡು ದಿನಗಳ ಬಳಿಕ ರಾಕೇಶ್ ರೆಡ್ಡಿಯೊಂದಿಗೆ ಅಮರಾವತಿಯವರ ಮನೆಗೆ ಬಂದಿದ್ದ ಗೋಪಾಲಕೃಷ್ಣ,' ನಮ್ಮ ಬಳಿ 300 ಕೋಟಿ ಅಮೆರಿಕನ್ ಡಾಲರ್ ಇದೆ. ಅದರಿಂದ ನಮಗೆ ಕೆ.ಜಿ ತೂಕದಲ್ಲಿ ಚಿನ್ನ ದೊರೆಯುತ್ತದೆ. ಪ್ರತಿ ಗ್ರಾಂ ಚಿನ್ನವನ್ನು 4 ಸಾವಿರ ರೂಪಾಯಿಗೆ ಮಾರಾಟ ಮಾಡುತ್ತೇವೆ 'ಎಂದು ನಂಬಿಸಿದ್ದರು.

ಅಮರಾವತಿ ಮತ್ತವರ ಮಗನ ಸಮ್ಮುಖದಲ್ಲಿಯೇ ಗೋಲ್ಡ್ ಬಿಸ್ಕೆಟ್ ಅನ್ನು ಜ್ಯುವೆಲರಿ ಅಂಗಡಿಗೆ ಮಾರಾಟ ಮಾಡಿ ಹಣ ಪಡೆಯುವ ಮೂಲಕ ನಂಬಿಕೆ ಗಳಿಸಿದ್ದರು. ಬಳಿಕ ಚಿನ್ನ ನೀಡುವುದಾಗಿ ಅಮರಾವತಿ ಮತ್ತು ಅವರ ಪರಿಚಿತರ ಕಡೆಯಿಂದ 1 ಕೋಟಿ ರುಪಾಯಿಗೂ ಅಧಿಕ ಹಣ ಪಡೆದುಕೊಂಡಿದ್ದರು. ಹಣ ಪಡೆದ ಬಳಿಕ ಚಿನ್ನ ನೀಡದಿದ್ದಾಗ ಪ್ರಶ್ನಿಸಿದಾಗ,' ನಮ್ಮ ಚಿನ್ನ ಕಸ್ಟಮ್ಸ್ ಅಧಿಕಾರಿಗಳ ಬಳಿ ಸಿಲುಕಿ ಹಾಕಿಕೊಂಡಿದೆ 'ಎಂದು ಸಬೂಬು ಹೇಳಿದ್ದರು. ಸಾಕಷ್ಟು ದಿನ ಕಳೆದರೂ ಚಿನ್ನವನ್ನೂ ನೀಡದೆ, ಹಣವನ್ನೂ ಕೊಡದೆ ವಂಚಿಸಿರುವ ಆರೋಪಿಗಳ ವಿರುದ್ಧ ಸಿಸಿಬಿ ಪೊಲೀಸರಿಗೆ ಅಮರಾವತಿ ದೂರು ನೀಡಿದ್ದಾರೆ. ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಮಾ.23ರಿಂದ ಬ್ಯಾಂಕ್ ನೌಕರರ ಮುಷ್ಕರ

ಬೆಂಗಳೂರು: ಬೇಡಿಕೆಗಳ ಈಡೇರಿಕೆ ಒತ್ತಾಯಿಸಿ ಮಾ. 23 ರಿಂದ 25ರ ಬ್ಯಾಂಕ್ ಮುಷ್ಕರ ನಡೆಸಲಾಗುತ್ತದೆ ಎಂದು ಬ್ಯಾಂಕ್ ಒಕ್ಕೂಟಗಳ ಸಂಯುಕ್ತ ವೇದಿಕೆ ಹೇಳಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆಯ ಸಂಚಾಲಕ ಗಿರಿರಾಜ್ ಕೆ.ಎನ್, ನೇಮಕಾತಿ ಹಾಗೂ ತಾತ್ಕಾಲಿಕ ಕೆಲಸಗಾರರನ್ನು ಖಾಯಂಗೊಳಿಸುವುದು, ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಖಾಲಿ ಇರುವ ನೌಕರ/ ಅಧಿಕಾರಿ ನಿರ್ದೇಶಕರ ಹುದ್ದೆ ಭರ್ತಿ ಮಾಡುವುದು ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಎರಡು ದಿನಗಳ ಮುಷ್ಕರ ನಡೆಸಲಾಗುವುದು ಎಂದರು.

ಸಿಇಟಿ ಕನ್ನಡ ಭಾಷೆ ಪರೀಕ್ಷೆ ಏ.15ಕ್ಕೆ ನಿಗದಿ

ಬೆಂಗಳೂರು: ಹೊರನಾಡು ಮತ್ತು ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ ಈ ಮೊದಲು ನಿಗದಿಗೊಳಿಸಿದ್ದ ಸಿಇಟಿ ಕನ್ನಡ ಪರೀಕ್ಷೆಯನ್ನು ಏ.18ಕ್ಕೆ ಬದಲಾಗಿ ಏ.15ರಂದೇ (ಮಂಗಳವಾರ) ನಡೆಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಪ್ರಕಟಿಸಿದೆ. ಏಪ್ರಿಲ್ 18ರಂದು ಗುಡ್ ಫ್ರೈಡೇ ಇರುವುದರಿಂದ ಈ ಪರೀಕ್ಷೆಯ ದಿನಾಂಕವನ್ನು ಬದಲಾಯಿಸಬೇಕೆಂದು ಕೋರಿಕೆಗಳು ಬಂದಿದ್ದವು. ಆ ಹಿನ್ನೆಲೆಯಲ್ಲಿ, ಸರಕಾರದ ನಿರ್ದೇಶನದಂತೆ ಈ ಬದಲಾವಣೆ ಮಾಡಲಾಗಿದೆ. ಬೆಂಗಳೂರು, ಮಂಗಳೂರು, ವಿಜಯಪುರ, ಬೆಳಗಾವಿ ಕೇಂದ್ರಗಳಲ್ಲಿ ಮಾತ್ರ ಕನ್ನಡ ಭಾಷಾ ಪರೀಕ್ಷೆ ನಡೆಯಲಿದೆ. ಅಂದು ಬೆಳಗ್ಗೆ 10.30ರಿಂದ 11.30ರವರೆಗೆ ನಡೆಯಲಿದೆ ಎಂದು ಹೇಳಿದೆ. ಸಿಇಟಿ-25 ರ ಉಳಿದ ಪರೀಕ್ಷೆಗಳು ನಿಗದಿಯಂತೆ ಏ.16 ಮತ್ತು 17ರಂದು ನಡೆಯಲಿವೆ. ಸದ್ಯದಲ್ಲೇ ಪ್ರವೇಶ ಪತ್ರ ಡೌನ್ಲೋಡ್‌ಗೂ ಅವಕಾಶ ನೀಡಲಾಗುವುದು. ವೇಳಾಪಟ್ಟಿಗಾಗಿ ಪ್ರಾಧಿಕಾರದ ವೆಬ್ ಸೈಟ್ ನೋಡುವಂತೆ ಸೂಚಿಸಿದೆ.

ಮಾ.20ಕ್ಕೆ ಇಳಾಭಾರತಂ ಕಾವ್ಯಾವಲೋಕನ

ಬೆಂಗಳೂರು: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ತಿಂಗಳ ಪುಸ್ತಕ ಯೋಜನೆಯಡಿ ಡಾ.ಧರಣಿದೇವಿ ಮಾಲಗತ್ತಿ ಅವರ ಇಳಾಭಾರತಂ ಕಾವ್ಯಾವಲೋಕನ ಕಾರ್ಯಕ್ರಮ ಗುರುವಾರ ಕನ್ನಡ ಪುಸ್ತಕ ಪ್ರಾಧಿಕಾರ ಅಂಗಳದಲ್ಲಿ ನಡೆಯಲಿದೆ. ಮಹಾರಾಣಿ ವಿಜ್ಞಾನ ಕಾಲೇಜಿನ ಸಮ್ಮೇಳನ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಡಾ. ವಿನಯಾ ಒಕ್ಕುಂದ, ಮಹಾರಾಣಿ ಕ್ಲಸ್ಟರ್ ವಿವಿ ಕುಲಪತಿ ಪ್ರೊ.ಉಷಾದೇವಿ.ಸಿ., ಲೇಖಕಿ ಡಾ.ಧರಣಿದೇವಿ.ಕೆ.ಮಾಲಗತ್ತಿ, ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷೆ ಡಾ.ಮಾನಸಾ, ಭಾಷಾ ನಿಕಾಯದ ನಿರ್ದೇಶಕ ಪ್ರೊ.ಕೆ.ವೈ.ನಾರಾಯಣಸ್ವಾಮಿ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥೆ ಡಾ.ಎಸ್.ಶಾಂಭವಿ ಭಾಗವಹಿಸಲಿದ್ದಾರೆ.

ಮಾ.20 ರಂದು ಯಕ್ಷಗಾನ ಪ್ರಯೋಗ

ಬೆಂಗಳೂರು: ಯಕ್ಷಕಲಾ ಅಕಾಡೆಮಿ ಮಾ.20 ರಂದು ಸಂಜೆ 6 ಗಂಟೆಗೆ ಪಾರ್ತಿಸುಬ್ಬ ರಚಿತ ಪಟ್ಟಾಭಿಷೇಕ ಯಕ್ಷಗಾನ ಪ್ರಯೋಗ ಬೆಂಗಳೂರಿನ

ನಯನ ಸಭಾಂಗಣದಲ್ಲಿ ನಡೆಯಲಿದೆ. ಕಾರ್ಯಕ್ರಮದಲ್ಲಿ ಕಲಾವಿದರಾಗಿ ಚಿತ್ಕಲ ತುಂಗ, ಸಂಪತ್ ಆಚಾರ್ಯ, ಪನ್ನಗ ಮಯ್ಯ, ರವಿ ಮಡೋಡಿ, ಕೃಷ್ಣ ಶಾಸ್ತ್ರಿ, ಮನೋಜ್ ಭಟ್, ವಿನಯ್ ಹೊಸ್ತೋಟ, ರಾಘವೇಂದ್ರ ಐತಾಳ್, ವಿಜೇತ್ ಭಟ್, ಸದಾಶಿವ ತುಂಗ, ಕವಿತಾ ಭಾಗವಹಿಸ ಲಿದ್ದಾರೆ. ಆಸಕ್ತ ರಂಗ ಪ್ರೇಮಿಗಳು ಕಾರ್ಯಕ್ರ ಮದಲ್ಲಿ ಭಾಗವಹಿಸಬಹುದು ಎಂದು ಪ್ರಕಟಣೆ ಯಲ್ಲಿ ತಿಳಿಸಿದೆ. ಹೆಚ್ಚಿನ ಮಾಹಿತಿ ಸಂಪರ್ಕಿಸಿ -9986384205.

ಮಾದಿಗ ಸಮುದಾಯ ಸಮಾವೇಶ 19ಕ್ಕೆ

ಬೆಂಗಳೂರು: ಮೀಸಲಾತಿಗೆ ಆಗ್ರಹಿಸಿ ಮಾ.19 ರಂದು ಫ್ರೀಡಂಪಾರ್ಕ್‌ನಲ್ಲಿ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಮಾದಿಗ ಹೋರಾಟ ಜನಜಾಗೃತಿ ಸಮಿತಿ ಹೇಳಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ರಾಜ್ಯಾಧ್ಯಕ್ಷ ಎಂ.ಸಿ.ಶ್ರೀನಿವಾಸ್, ಪರಿಶಿಷ್ಟ ಜಾತಿಯ 101 ಉಪ ಜಾತಿಗಳಿಗೆ ಆಯಾ ಜಾತಿ ಜನಸಂಖ್ಯಾವಾರು ಮೀಸಲಾತಿ ನಿಗದಿಗಾಗಿ 30 ವರ್ಷದಿಂದ ಹೋರಾಟ ನಡೆಯುತ್ತಿದೆ. ಆಳುವ ಪಕ್ಷಗಳ ಮತ ಬ್ಯಾಂಕ್ ರಾಜಕಾರಣದಿಂದ ನಿರ್ಲಕ್ಷಿತ ಹಾಗೂ ಶೋಷಿತ ಸಮುದಾಯ ಸಾಮಾಜಿಕ ನ್ಯಾಯದಿಂದ ವಂಚಿತವಾಗುತ್ತಿವೆ. ನಮ್ಮ ಸಮುದಾಯಕ್ಕೆ ಅಳಿವು ಉಳಿವಿನ ಪ್ರಶ್ನೆ ಎದುರಾಗಿದ್ದು ಮೀಸಲಾತಿಗಾಗಿ ಆಗ್ರಹಿಸಿ ಫ್ರೀಡಂಪಾರ್ಕ್‌ನಲ್ಲಿ ಸಮಾವೇಶ ಆಯೋಜಿಸಲಾಗಿದೆ ಎಂದರು.

ವಿಶ್ವವಾಣಿ ಕ್ಲಬ್ ಹೌಸ್
18.03.2025
ಸಂಜೆ: 06.55 ರಿಂದ 08.05 ರವರಿಗೆ

ಮಂಗಳವಾರದ ಅತಿಥಿ
ಎನ್ ಎಸ್ ಶ್ರೀಧರಮೂರ್ತಿ
ವಿಷಯ
ಭಾರತೀಯ ಪಂಚಾಂಗ ಗಣಿತ
vishwavani.news

ಕೇಂದ್ರದ ತೆರಿಗೆ ಹಂಚಿಕೆ ಬಗ್ಗೆ ಬಿಜೆಪಿ-ಕಾಂಗ್ರೆಸ್ ನಡುವೆ ವಾಕ್ಸಮರ । ಬೆಂಗಳೂರಿನ ಕ್ಷೇತ್ರಗಳಿಗೆ ಅನುದಾನ ಏಕೆ ನೀಡುತ್ತಿಲ್ಲ : ಬಿಜೆಪಿ

ಭಾರತದಲ್ಲಿ ಕರ್ನಾಟಕ; ಕರ್ನಾಟಕದಲ್ಲಿ ಬೆಂಗಳೂರು

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಭಾರತದಲ್ಲಿ ಕರ್ನಾಟಕವಿದೆ ಎನ್ನುವ ಕಾರಣಕ್ಕೆ ತೆರಿಗೆ ಹಂಚಿಕೆ ಮಾತಾಡುವುದಾದರೆ, ಕರ್ನಾಟಕದಲ್ಲಿ ಬೆಂಗಳೂರಿದೆ ಎನ್ನುವ ಕಾರಣಕ್ಕೆ ಬೆಂಗಳೂರಿನ ಕ್ಷೇತ್ರಗಳಿಗೆ ಅನುದಾನ ನೀಡಿ ಎಂದು ಕಾಂಗ್ರೆಸಿಗೆ ಬಿಜೆಪಿಗರು ಸವಾಲು ಹಾಕಿದ ಘಟನೆ ನಡೆಯಿತು.

ಸೋಮವಾರ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಕೇಂದ್ರಕ್ಕೆ ಐದು ಲಕ್ಷ ಕೋಟಿ ರು. ತೆರಿಗೆ ಹಣವನ್ನು ನೀಡಿದರೂ ಕೇಂದ್ರದಿಂದ ರಾಜ್ಯಕ್ಕೆ 51 ಸಾವಿರ ಕೋಟಿ ರು. ಬರುತ್ತದೆ. ಇದು ರಾಜ್ಯಕ್ಕೆ ಮಾಡುತ್ತಿರುವ ಅಪಮಾನ ಎಂದು ಸಿದ್ದರಾಮಯ್ಯ ಟೀಕಿಸಿದರು. ಇದಕ್ಕೆ ಮಧ್ಯಪ್ರವೇಶಿಸಿದ ಶಾಸಕ ಅಶ್ವತ್ಥನಾರಾಯಣ, ಕರ್ನಾಟಕದ ತೆರಿಗೆ ಸಂಗ್ರಹದಲ್ಲಿ ಶೇ.65ರಷ್ಟು ಬೆಂಗಳೂರಿನಿಂದಲೇ ಆಗುತ್ತದೆ. ಆದರೂ ಅನುದಾನ ನೀಡುತ್ತಿಲ್ಲವಲ್ಲ ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯ ಅವರು, ಬೆಂಗಳೂರು ಕರ್ನಾಟಕದಲ್ಲಿದೆ ಎಂದು ಸಮರ್ಥಿಸಿಕೊಂಡರು. ಇದಕ್ಕೆ ಪ್ರತಿಯಾಗಿ ಕರ್ನಾಟಕ ಭಾರತದಲ್ಲಿದೆ ಎಂದು ಅಶ್ವತ್ಥನಾರಾಯಣ ಟಾಂಗ್ ಕೊಟ್ಟರು. ಇದು ಆಡಳಿತ -ಪ್ರತಿಪಕ್ಷದ ನಡುವಿನ ವಾಕ್ಸಮರಕ್ಕೆ ಕಾರಣವಾಯಿತು. ಈ ವೇಳೆ ಬೈರತಿ ಸುರೇಶ್ ಅವರು, ಬೆಂಗಳೂರಿನ ಶಾಸಕರಿಗೆ ಅನುದಾನ ನೀಡಲಾಗಿದೆ ಎಂದು ಹೇಳಿ, ಬೈರತಿ ಬಸವರಾಜು, ಮುನಿರಾಜು ಸೇರಿದಂತೆ ಕೆಲ ಶಾಸಕರ ಹೆಸರನ್ನು ಪ್ರಸ್ತಾಪಿಸಿದರು. ಇದಕ್ಕೆ ಪ್ರತಿಯಾಗಿ ಬೈರತಿ ಬಸವರಾಜು ಅವರು, ನಾವು ಕೆಲಸ ಮಾಡಿಸುತ್ತಿರುವುದು ಈ ಹಿಂದಿನ ಬಿಜೆಪಿ ಸರಕಾರದ ಅವಧಿಯಲ್ಲಿ ಬಸವರಾಜ ಬೊಮ್ಮಾಯಿ ಅವರು ನೀಡಿದ ಅನುದಾನದಲ್ಲಿ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಯಾವುದೇ ಅನುದಾನ ನೀಡಿಲ್ಲ ಎಂದು ಟೀಕಿಸಿದರು.

> ಕಾಂಗ್ರೆಸ್‌ನವರದ್ದು ಸ್ವಜನಪಕ್ಷಪಾತ, ಭ್ರಷ್ಟಾಚಾರ, ಕುಟುಂಬ ರಾಜಕಾರಣವೇ ತತ್ವ ಸಿದ್ಧಾಂತ
> - ಆರಗ ಜ್ಞಾನೇಂದ್ರ

> ಕಾಂಗ್ರೆಸ್ ತನ್ನ ಸಿದ್ಧಾಂತದಲ್ಲಿಯೇ ಕಾರ್ಯನಿರ್ವಹಿಸಲಿದೆ. ಬಡವರಿಗೆ ಅವಕಾಶ ನೀಡಿದರೆ ಬಿಜೆಪಿಗೆ ಹೊಟ್ಟೆ ಉರಿ
> - ಎಚ್.ಕೆ. ಪಾಟೀಲ್

> ಮುನಿರಾಜು, ಬೈರತಿ ಬಸವರಾಜು ಸೇರಿ ಹಲವರು ಗಡಾರಿ ಹಿಡಿದು ಭೂಮಿ ಪೂಜೆ ಮಾಡಿಸುತ್ತಿರುವುದು ಸಿದ್ದರಾಮಯ್ಯ ಅವರು ನೀಡಿರುವ ಅನುದಾನದಲ್ಲಿ
> - ಬೈರತಿ ಸುರೇಶ್

> ಬಸವರಾಜ ಬೊಮ್ಮಾಯಿ ಹಣ ಇಲ್ಲದಿದ್ದರೂ 1.66 ಲಕ್ಷ ಕೋಟಿ ರು. ಅನುದಾನ ಹಂಚಿ ಹೋದರು. ಹಣ ಇಲ್ಲದಿದ್ದರೂ ಕಾಮಗಾರಿಗಳಿಗೆ ಮಂಜೂರಾತಿ ನೀಡಿ ಹೋದರೆ? ಬಿಲ್ ಪಾವತಿಗೆ ಹಣ ಬೇಡವೇ? ದುಡ್ಡು ಇಲ್ಲದೆ ಕೆಲಸಗಳನ್ನು ಮಂಜೂರು ಮಾಡಲು ಆಗುತ್ತದೆಯೇ?
> - ಸಿದ್ದರಾಮಯ್ಯ, ಮುಖ್ಯಮಂತ್ರಿ

> ನಾವು ಮಾಡಿಸುತ್ತಿರುವ ಯೋಜನೆಗಳೆಲ್ಲ ಬಸವರಾಜ ಬೊಮ್ಮಾಯಿ ಅವರ ಸಮಯದಲ್ಲಿ ನೀಡಿದ್ದ ಅನುದಾನದಲ್ಲಿ.
> - ಬೈರತಿ ಬಸವರಾಜು

ಬಾಗಿಲು ಒದ್ದ ಘಟನೆ ಸ್ಮರಿಸಿದ ಸಿಎಂ

ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ವಿಶ್ವಾಸಮತ ಯಾಚನೆ ಸಂದರ್ಭದಲ್ಲಿ ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬೆಂಗಳೂರು ನಗರ ಪೊಲೀಸ್ ಆಯುಕ್ತ ಶಂಕರ್ ಬಿದರಿ ಅವರನ್ನು ತಳ್ಳಿದ, ಸದನದೊಳಗೆ ಪ್ರವೇಶಿಸಲು ಬಾಗಿಲನ್ನು ಒದ್ದ ಕುರಿತು ಸ್ವಾರಸ್ಯಕರ ಚರ್ಚೆ ನಡೆಯಿತು. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಉತ್ತರ ನೀಡುತ್ತಿರುವ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರು, ನನಗೆ ಈಗ ಬಿಜೆಪಿ ಶಾಸಕ ಡಾ. ಅಶ್ವತ್ಥನಾರಾಯಣ ಅವರ ರೀತಿ ಜೋಶ್‌ನಿಂದ ಈಗ ಮಾತನಾಡುವುದಕ್ಕೆ ಆಗುವುದಿಲ್ಲ ಎಂದರು. ಇದಕ್ಕೆ ಡಾ.ಅಶ್ವತ್ಥನಾರಾಯಣ, ಹಿಂದೆಲ್ಲ ತೊಡೆ ತಟ್ಟುತ್ತಿದ್ದರಲ್ಲ ಸಾರ್ ಎಂದರು. ಆಗ ಸಿದ್ದರಾಮಯ್ಯ, ತೊಡೆ ತಟ್ಟಲಿಲ್ಲಪ್ಪ, ನಿಮ್ಮ ವಿರುದ್ಧ (ಬಿಜೆಪಿ) ಸದನದಲ್ಲಿ ತೋಳು ತಟ್ಟಿದ್ದೆ ಅಷ್ಟೇ ಎಂದು ಹೇಳಿದರು. ಈ ವೇಳೆ ಬಿಜೆಪಿ ಶಾಸಕ ಸಿ.ಸಿ.ಪಾಟೀಲ್, ಶಂಕರ ಬಿದರಿ ಅವರನ್ನೇ ತಳ್ಳಿದ್ದರಲ್ಲಾ ಸಾರ್ ನೀವು. ಹಾಗೇ ಸದನದೊಳಗೆ ಪ್ರವೇಶಿಸುವ ಬಾಗಿಲನ್ನೇ ಒದ್ದು ಒಳಗೆ ಬಂದಿದ್ದರಿಲ್ಲಾ ಎಂದು ಸ್ಮರಿಸಿದರು. ಅದಕ್ಕೆ ಸಿದ್ದರಾಮಯ್ಯ, ಪೊಲೀಸ್ ಸಮವಸ್ತ್ರದಲ್ಲಿ ಯಾರೂ ಸದನದೊಳಗೆ ಬರಬಾರದು. ಆದರೆ, ಶಂಕರ ಬಿದರಿ ಸದನ ಪ್ರವೇಶಿಸುವ ದ್ವಾರದಲ್ಲಿ ಸಮವಸ್ತ್ರ ಧರಿಸಿ ನಮ್ಮನ್ನು ಒಳಗೆ ಬಿಡದೆ ಅಡ್ಡ ನಿಂತಿದ್ದರು. ನೀವೇನು ಮಾರ್ಷಲ್ ಅಲ್ಲ, ಇಲ್ಲಿಗೆ ಸಮವಸ್ತ್ರದಲ್ಲಿ ಏಕೆ ಬಂದಿದ್ದೀರಿ ಎಂದು ಪ್ರಶ್ನಿಸಿ ಅವರನ್ನು ತಳ್ಳಿದೆ. ಹಾಗೆಯೇ, ನಮ್ಮನ್ನು ಒಳಗೆ ಬಿಡದೇ ಬಾಗಿ ಮುಚ್ಚಿದ್ದರಿಂದಾಗಿ ಬಾಗಿಲಿಗೆ ಒದ್ದೆ ಎಂದು ಹಳೆಯ ಘಟನೆಗೆ ಸ್ಪಷ್ಟನೆ ನೀಡಿದರು. ಹಾಗೆಯೇ, ಸಾಮಾನ್ಯವಾಗಿ ನಾನು ತಾಳ್ಮೆ ಕಳೆದುಕೊಳ್ಳುವುದಿಲ್ಲ. ಆ ಸನ್ನಿವೇಶ ಹಾಗಿತ್ತು, ಹಾಗಾಗಿ ಹಾಗೆ ಮಾಡಿದೆನಷ್ಟೇ ! ಎಂದರು.

ಸಿದ್ದರಾಮಯ್ಯ	ಅಶ್ವತ್ಥನಾರಾಯಣ
• ಐದು ಲಕ್ಷ ಕೋಟಿ ತೆರಿಗೆ ಸಂಗ್ರಹವಾದರೂ ನಮಗೆ 51 ಸಾವಿರ ಕೋಟಿ ರು. ಕೊಡುತ್ತಾರೆ	• ಕರ್ನಾಟಕದಲ್ಲಿಯೇ ಬೆಂಗಳೂರು ಇದೆ.
• ಹೆಚ್ಚು ತೆರಿಗೆ ನೀಡುವ ರಾಜ್ಯಗಳಿಗೆ ಅನುದಾನ ನೀಡಬೇಕು	• ರಾಜ್ಯದ ಶೇ.65ರಷ್ಟು ತೆರಿಗೆ ಸಂಗ್ರಹ ಬೆಂಗಳೂರಿನಿಂದಲೇ ಆಗುವುದು.
• ಕೇಂದ್ರದಿಂದ ರಾಜ್ಯಕ್ಕೆ ದ್ರೋಹವಾಗುತ್ತಿದೆ	• ಆದರೂ ಬೆಂಗಳೂರಿನ ಅಭಿವೃದ್ಧಿಗೆ ಏಕೆ ಅನುದಾನ ನೀಡುತ್ತಿಲ್ಲ.
• ಕರ್ನಾಟಕದಲ್ಲಿ ಬೆಂಗಳೂರು ಇರುವುದು	• ಭಾರತದಲ್ಲಿಯೇ ಕರ್ನಾಟಕ ಇರುವುದು.

ಏಕವಚನದಲ್ಲಿ ಬೈದಾಟ

ರಾಜ್ಯಪಾಲರ ಭಾಷಣದ ಮೇಲೆ ಸಿಎಂ ಸಿದ್ದರಾಮಯ್ಯ ಅವರು ಉತ್ತರ ನೀಡುವ ವೇಳೆ ಬಿಜೆಪಿ-ಕಾಂಗ್ರೆಸ್ ಸದಸ್ಯರ ನಡುವೆ ಗದ್ದಲ ನಡೆಯುತ್ತಿ ರುವಾಗಲೇ ಕಾಂಗ್ರೆಸ್‌ನ ನರೇಂದ್ರಸ್ವಾಮಿ ಮತ್ತು ಬಿಜೆಪಿಯ ಬೈರತಿ ಬಸವರಾಜು ಏಕವಚನದಲ್ಲೇ ಬೈಯ್ದಾಡಿಕೊಂಡರು. ಸಿಎಂ ಅವರು ಭಾಷಣ ಮಾಡುವಾಗ ಬಿಜೆಪಿ ಶಾಸಕ ಭರತ್ ಶೆಟ್ಟಿ ತಡೆಯೊಡ್ಡಿ ಏನನ್ನೋ ಹೇಳಲು ಮುಂದಾದರು. ಅದಕ್ಕೆ ಆಕ್ರೋಶ ವ್ಯಕ್ತಪಡಿಸಿದ ನರೇಂದ್ರಸ್ವಾಮಿ, 'ರೀ ಪ್ರತಿಪಕ್ಷದ ನಾಯಕರೇ. ನಿಮ್ಮ ಶಾಸಕರಿಗೆ ಸಂಸದೀಯವಾಗಿ ನಡೆದುಕೊಳ್ಳಲು ಹೇಳಿ' ಎಂದು ಏರುಧ್ವನಿಯಲ್ಲಿ ಮಾತನಾಡಿದರು. ಇದಕ್ಕೆ ಬೈರತಿ ಬಸವ ರಾಜು, ನರೇಂದ್ರಸ್ವಾಮಿ ವಿರುದ್ಧ ಹರಿಹಾಯ್ದರು. ಅದಕ್ಕೆ ನರೇಂದ್ರಸ್ವಾಮಿ, 'ಏನ್ ಗೂಂಡಾಗಿರಿ ಮಾಡ್ತೀರಾ? ನನಗೂ ಇದೆ ತಾಕತ್ತು. ನಿಮಗೆ ಸಂವಿಧಾನದ ಬಗ್ಗೆ ಎಬಿಸಿಡಿಯೂ ತಿಳಿದಿಲ್ಲ. ಸಿಎಂ ಮಾತನಾಡುವಾಗ ನೀನೇನು ಮಾತಾ ಡೋದು. ಸಿಎಂ ಅವರಿಗೇ ಅವಾಜ್ ಹಾಕ್ತೀಯ' ಎಂದು ಆಕ್ರೋಶ ವ್ಯಕ್ತಪಡಿಸಿದರು. ಮತ್ತಷ್ಟು ಸಿಟ್ಟಾದ ಬೈರತಿ ಬಸವ ರಾಜು, 'ನೀನೇನು ದೊಡ್ಡವನಾ? ನೀನ್ಯಾಕೆ ನಮಗೆ ಹೇಳ್ತೀಯಾ? ಬಾ ಹೊರಗೆ (ಸದನ ದಿಂದ ಹೊರಗೆ) ನೋಡೋಣ' ಎಂದು ಪಂಥಾಹ್ವಾನ ನೀಡಿದರು.

ರಾಷ್ಟ್ರಧ್ವಜಕ್ಕೆ ಅವಮಾನದ ವಿಚಾರ: ಸದನದಲ್ಲಿ ಗದ್ದಲ

ಕಲಾಪ ನಡೆಯುವಾಗ ಕಾಂಗ್ರೆಸ್ ಶಾಸಕರು ರಾಷ್ಟ್ರಧ್ವಜ ಪ್ರದರ್ಶಿಸಿದ್ದನ್ನು ಬಿಜೆಪಿ ಶಾಸಕ ಧೀರಜ್ ಮುನಿರಾಜು ತಮ್ಮ ಮೊಬೈಲ್‌ನಲ್ಲಿ ಚಿತ್ರೀಕರಣ ಮಾಡಲು ಮುಂದಾಗಿದ್ದು ಆಡಳಿತ-ವಿರೋಧ ಪಕ್ಷದ ಶಾಸಕರ ನಡುವೆ ಗದ್ದಲಕ್ಕೆ ಕಾರಣವಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆರ್‌ಎಸ್‌ಎಸ್ ವಿರುದ್ಧದ ಹೇಳಿಕೆ ವಿರೋಧಿಸಿ ಬಿಜೆಪಿ ಶಾಸಕರು ಸದನದೊಳಗೆ ಪ್ರತಿಭಟನೆ ನಡೆಸುತ್ತಿರುವಾಗ, ಕಾಂಗ್ರೆಸ್ ಶಾಸಕರಾದ ರವಿ ಗಣಿಗ, ಭರತ್ ರೆಡ್ಡಿ, ಕಂಪ್ಲಿ ಗಣೇಶ್ ಅವರು ರಾಷ್ಟ್ರಧ್ವಜ ಪ್ರದರ್ಶಿಸಿದರು.

ಅದಕ್ಕೆ ಬಿಜೆಪಿ ಶಾಸಕರು, ಸದನದೊಳಗೆ ರಾಷ್ಟ್ರಧ್ವಜ ತರುವ ಮೂಲಕ ರಾಷ್ಟ್ರಧ್ವಜಕ್ಕೆ ಅವಮಾನ ಮಾಡಲಾಗುತ್ತಿದೆ. ರಾಷ್ಟ್ರಧ್ವಜವನ್ನು ಬೇಕಾಬಿಟ್ಟಿಯಾಗಿ ಮಡಚಲಾಗುತ್ತಿದೆ. ಕಾಂಗ್ರೆಸ್ ಶಾಸಕರ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಸಭಾಧ್ಯಕ್ಷರ ಸ್ಥಾನದಲ್ಲಿದ್ದ ಶಿವಲಿಂಗೇಗೌಡ ಅವರನ್ನು ಆಗ್ರಹಿಸಿದರು. ಇದೇ ವೇಳೆ ಬಿಜೆಪಿ ಶಾಸಕ ಧೀರಜ್ ಮುನಿರಾಜು, ತಮ್ಮ ಮೊಬೈಲ್ ತೆಗೆದು, ಕಾಂಗ್ರೆಸ್ ಶಾಸಕರು ಧ್ವಜ ಹಿಡಿದಿರುವುದು ಮತ್ತು ಅದನ್ನು ಮಡಚುತ್ತಿದ್ದ ದೃಶ್ಯ ಸೆರೆ ಹಿಡಿಯಲು ಮುಂದಾದರು.

ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್ ಶಾಸಕರಾದ ನರೇಂದ್ರಸ್ವಾಮಿ, ವಿಜಯಾನಂದ ಕಾಶಪ್ಪನವರ್, ಜಿ.ಟಿ.ಪಾಟೀಲ್, ಬಿಜೆಪಿ ಶಾಸಕರು ಸದನದೊಳಗೆ ಮೊಬೈಲ್‌ನಲ್ಲಿ ಚಿತ್ರೀಕರಣ ಮಾಡುತ್ತಿದ್ದಾರೆ. ಅವರ ಮೊಬೈಲ್ ಜಪ್ತಿ ಮಾಡಿ, ಶಾಸಕರ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಆಗ್ರಹಿಸಿದರು. ಇದರಿಂದ ಎರಡೂ ಪಕ್ಷದ ಶಾಸಕರ ನಡುವೆ ಗದ್ದಲ ಉಂಟಾಯಿತು. ಆಗ ಮಧ್ಯಪ್ರವೇಶಿಸಿದ ಸಚಿವ ಎಚ್.ಕೆ. ಪಾಟೀಲ್, ಸದನದೊಳಗೆ ಮೊಬೈಲ್ ಬಳಸುವುದು ನಿಷೇಧವಿದೆ. ಹೀಗಾಗಿ ಮೊಬೈಲ್ ಮೂಲಕ ಚಿತ್ರೀಕರಣ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಮತ್ತು ಅವರ ಹೆಸರನ್ನು ಸದನಕ್ಕೆ ತಿಳಿಸಬೇಕು ಎಂದು ಒತ್ತಾಯಿಸಿದರು. ಅದಕ್ಕೆ ಸ್ಪೀಕರ್ ಪೀಠದಲ್ಲಿದ್ದ ಶಿವಲಿಂಗೇಗೌಡ, ರಾಷ್ಟ್ರಧ್ವಜಕ್ಕೆ ಅವಮಾನ ಮಾಡಲಾಗಿದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಿ ನಂತರ ಕ್ರಮ ಕೈಗೊಳ್ಳುವ ಕುರಿತು ತೀರ್ಮಾನ ಮಾಡಲಾಗುವುದು ಎಂದು ತಿಳಿಸಿದರು.

ಬಹರೈನ್ ದ್ವೀಪರಾಷ್ಟ್ರದಲ್ಲಿ ಇತ್ತೀಚೆಗೆ ಅಸ್ತಿತ್ವಕ್ಕೆ ಬಂದ ಬಂಟ್ಸ್ ಬಹರೈನ್ ನೂತನ ಆಡಳಿತ ಮಂಡಳಿ ವತಿಯಿಂದ ಆಶಾ ಪ್ರಕಾಶ್ ಶೆಟ್ಟಿ ಸಭಾಂಗಣದಲ್ಲಿ ಶ್ರೀ ಸತ್ಯನಾರಾಯಣ ಪೂಜೆ ನಡೆಯಿತು. ಅನಿಲ್ ಆಚಾರ್ಯ, ಅಧ್ಯಕ್ಷ ಡಾ.ಮಿಥುನ್ ಭಂಡಾರಿ ಸೇರಿದಂತೆ ಭಕ್ತರು, ಸಮಾಜದ ಗಣ್ಯರು ಪೂಜೆಯಲ್ಲಿ ಭಾಗವಹಿಸಿದ್ದರು.

ಇಂದು ವಿದ್ಯುತ್ ಗುತ್ತಿಗೆದಾರರ ಪ್ರತಿಭಟನೆ

ಬೆಂಗಳೂರು: ರೈತರಿಗೆ ಆಗುತ್ತಿರುವ ಅನ್ಯಾಯ ಸರಿಪಡಿಸಲು ಮಂಗಳವಾರ ನಗರದ ಫ್ರೀಡಂ ಪಾರ್ಕ್ ನಲ್ಲಿ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಪ್ರತಿಭಟನೆ ಹಮ್ಮಿಕೊಂಡಿದೆ.ಮೀಟರ್ ದರ ಹೆಚ್ಚಳ, ರೈತರಿಗೆ ವಿತರಿಸುವ ಟಿಸಿಗಳ ದರ ಹೆಚ್ಚಳ, ಗುತ್ತಿಗೆಯಲ್ಲಿ ತಾರತಮ್ಯ, ಸೇವಾಶುಲ್ಕ ಹೆಚ್ಚಳ ಹೀಗೆ ಹಲವು ಹಂತಗಳಲ್ಲಿ ದರ ಏರಿಕೆ ಮಾಡಿ ಸಾರ್ವಜನಿಕರಿಗೆ, ರೈತರಿಗೆ ಹೊರೆಯಾಗಿ ಗುತ್ತಿಗೆದಾರರು ಕೆಲಸ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಈ ಕುರಿತು ಸರಕಾರ ಕೂಡಲೇ ಗಮನ ಹರಿಸಿ ಪರಿಹರಿಸಬೇಕೆಂದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಕಸ ವಿಲೇವಾರಿಗೆ ಕಣ್ಣೂರು ಗ್ರಾಮಸ್ಥರ ವಿರೋಧ: ಸಂಧಾನ ಯಶಸ್ವಿ

ಬಿಬಿಎಂಪಿ ವ್ಯಾಪ್ತಿಯಲ್ಲಿ ಕಸದ ಸಮಸ್ಯೆ ನಿವಾರಣೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಉಲ್ಬಣವಾಗಿದ್ದ ಕಸದ ಸಮಸ್ಯೆಯನ್ನು ನಿವಾರಣೆ ಮಾಡಲಾಗಿದೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ವಿಷಯಗಳ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಗರದಲ್ಲಿ ಮಿಟ್ಟಗಾನಹಳ್ಳಿ ಹಾಗೂ ಕಣ್ಣೂರು ಭೂಭರ್ತಿ ಪ್ರದೇಶದದಲ್ಲಿ ಕಸ ವಿಲೇವಾರಿ ಮಾಡುವ ವಿಚಾರವಾಗಿ ಸ್ಥಳೀಯರಿಂದ ಆಗಿದ್ದ ಸಮಸ್ಯೆಯನ್ನು ಬಹುತೇಕ ಬಗೆಹರಿಸಲಾಗಿದ್ದು, ಎಂದಿನಂತೆ ತ್ಯಾಜ್ಯ ವಿಲೇವಾರಿ ಕಾರ್ಯವನ್ನು ನಡೆಸಲಾಗುತ್ತಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ತ್ಯಾಜ್ಯಕ್ಕೆ ಸಂಬಂಧಿಸಿದಂತೆ ಮಿಶ್ರ ತ್ಯಾಜ್ಯವನ್ನು ಭೂಭರ್ತಿ ಘಟಕ, ಹಸಿ ತ್ಯಾಜ್ಯವನ್ನು ಸಂಸ್ಕರಣಾ ಘಟಕಗಳು ಹಾಗೂ ಒಣ ತ್ಯಾಜ್ಯವನ್ನು ಒಣ ತ್ಯಾಜ್ಯ ಸಂಗ್ರಹಣಾ ಘಟಕಗಳಿಗೆ ಕಳುಹಿಸಲಾಗುತ್ತಿದೆ ಎಂದು ತಿಳಿಸಿದರು.

ಘನತ್ಯಾಜ್ಯಕ್ಕಾಗಿ ಹೊಸ ಯೋಜನೆಯಂತೆ ಟೆಂಡರ್ ಕರೆಯಲಾಗಿದ್ದು, ಭಾಗವಹಿಸುವಿಕೆ ಸಂಖ್ಯೆ ಕಡಿಮೆಯಿದ್ದ ಪರಿಣಾಮ, ಟೆಂಡರ್ ನಲ್ಲಿ ಭಾಗವಹಿಸದಿರಲು ಕಾರಣಗಳೇನು ಎಂಬುದನ್ನು ಗುರುತಿಸಲಾಗಿದೆ. ಇದೀಗ ಎಲ್ಲಾ ಅಂಶಗಳನ್ನು ಸೇರ್ಪಡೆ ಮಾಡಿ ಪುನಃ ಟೆಂಡರ್ ಕರೆಯಲಾಗುತ್ತಿದೆ. ಅಲ್ಲದೆ ಘನತ್ಯಾಜ್ಯ ಸಮಗ್ರ ವಿಲೇವಾರಿಗಾಗಿ ಹೊಸದಾಗಿ ಜಾಗಗಳನ್ನು ಕೂಡಾ ಗುರುತಿಸಲಾಗಿದೆ ಎಂದರು. ಮಿಟ್ಟಗಾನಹಳ್ಳಿ, ಕಣ್ಣೂರಿನ ಬಳಿ ಸ್ಥಳೀಯರು ಹಾಗೂ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆದಾರರ ನಡುವೆ ಕೆಲ ಭಿನ್ನಾಭಿಪ್ರಾಯಗಳಿಂದ ಕಸದ ಸಮಸ್ಯೆ ಉಂಟಾಗಿದ್ದು, ಬಹುತೇಕ ಸಮಸ್ಯೆಯನ್ನು ಬಗೆಹರಿಸಲಾಗಿದೆ. 500 ಕೋಟಿ ರು. ವೆಚ್ಚದಲ್ಲಿ ಗ್ರಾಮೀಣಾಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಅಭಿವೃದ್ಧಿಗಾಗಿ ವ್ಯಯಿಸಬೇಕಿರುವ ಹಣದ ವಿಚಾರವಾಗಿ ಟೆಂಡರ್ ಮಾಡಿ ಕಾರ್ಯಾದೇಶ ನೀಡಿ ಶೀಘ್ರ ಕೆಲಸ ಪ್ರಾರಂಭಿಸಲಾಗುವುದು ಎಂದು ಹೇಳಿದರು.

> 2019-20ನೇ ಸಾಲಿನಿಂದ ಬಾಕಿ ಇದ್ದಲ್ಲಿ ಶೂನ್ಯ ಬಡ್ಡಿ ಹಾಗೂ 100 ರು. ದಂಡ ಶುಲ್ಕ ಪಾವತಿಸುವುದರೊಂದಿಗೆ ಒಟಿಎಸ್ ಸೌಲಭ್ಯವನ್ನು ಪಡೆದುಕೊಳ್ಳಬಹುದಾಗಿದೆ. ಎಲ್ಲಾ ಸರಕಾರಿ ಕಟ್ಟಡಗಳು ಹಾಗೂ ಸರಕಾರಿ ಅಂಗ ಸಂಸ್ಥೆಗಳು ಇದರ ಸದುಪಯೋಗವನ್ನು ಪಡೆದುಕೊಂಡು ಮಾ.31ರೊಳಗಾಗಿ ಬಾಕಿ ಆಸ್ತಿ ತೆರಿಗೆಯನ್ನು ಪಾವತಿಸಲು ಕೋರಿದೆ. ಒಟಿಎಸ್ ಸೌಲಭ್ಯ ಪಡೆಯದವರು ಏಪ್ರಿಲ್ 2025 ರಿಂದ ಆಸ್ತಿ ತೆರಿಗೆಯು ದುಪ್ಪಟು ಪಾವತಿಸಬೇಕಾಗಿರುತ್ತದೆ.
> - ತುಷಾರ್ ಗಿರಿನಾಥ್, ಬಿಬಿಎಂಪಿ ಆಯುಕ್ತ

ಲಿಚೆಟ್ ಸಂಸ್ಕರಣೆಗೆ ಕ್ರಮ: ಮಿಟ್ಟಗಾನಹಳ್ಳಿ ಭೂಭರ್ತಿ ಘಟಕದಲ್ಲಿ 275 ಕೋಟಿ ಲೀಟರ್ ಲಿಚೆಟ್ ಸಂಗ್ರಹವಾಗಿದ್ದು, ಅದನ್ನು ಸಂಸ್ಕರಿಸಲು ಟೆಂಡರ್ ಕರೆದು 3 ರಿಂದ 4 ವರ್ಷಗಳಲ್ಲಿ ಸಮಸ್ಯೆ ಬಗೆಹರಿಸಲು ಕ್ರಮ ವಹಿಸಲಾಗುತ್ತಿದೆ. ಸದ್ಯ 100 ಕೆ.ಎಲ್.ಡಿ ಹಾಗೂ 25 ಕೆ.ಎಲ್.ಡಿ ಸಂಸ್ಕರಣ ಘಟಕಗಳಿದ್ದು, ಹೊಸದಾಗಿ 2000 ಕೆ.ಎಲ್.ಡಿ ಘಟಕವನ್ನು ಸ್ಥಾಪಿಸಲಾಗುವುದು. ಅದರ ಮೂಲಕ ಲಿಚೆಟ್‌ನ್ನು ಸಂಸ್ಕರಿಸಲಾಗುವುದು. ಲಿಚೆಟ್ ಸಂಸ್ಕರಣೆಗಾಗಿ ಸರಾಸರಿ 474 ಕೋಟಿ ರು. ವ್ಯಯಿಸಲಾಗುತ್ತಿದೆ ಎಂದು ತಿಳಿಸಿದರು.

ಮುಸ್ಲಿಮರಿಗೆ ಕಾಮಗಾರಿಯಲ್ಲಿ ಮೀಸಲು ವಿರುದ್ಧ ಹೋರಾಟ

ಬೆಂಗಳೂರು: ರಾಜ್ಯದ ಕಾಂಗ್ರೆಸ್ ಸರಕಾರದ ಮುಸ್ಲಿಂ ತುಷ್ಟೀಕರಣ ನೀತಿ ಖಂಡಿಸಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಈ ರೀತಿ ಸರಕಾರಿ ಕಾಮಗಾರಿಗಳಲ್ಲಿ ಶೇ.4 ಮೀಸಲಾತಿ ಕೊಡುವುದಾದರೆ ಹಿಂದೂಗಳೇನು ಅಪರಾಧ ಮಾಡಿದ್ದಾರೆ. ಹಿಂದೂಗಳಲ್ಲಿ ಹಾಗಿದ್ದರೆ ಬಡವರಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಬಿಜೆಪಿಯ ನಿಲುವು ಸ್ಪಷ್ಟವಾಗಿದೆ. ಶೇ.4 ಮೀಸಲಾತಿ ಕುರಿತ ಮಸೂದೆ ಸದನದಲ್ಲಿ ತಂದಾಗ ಸದನದ ಒಳಗೆ ಮತ್ತು ಹೊರಗಡೆ ಬಿಜೆಪಿ ಹೋರಾಟ ಮಾಡಲಿದೆ. ಪ್ರತಿಭಟನೆ ಮಾಡುತ್ತೇವೆ. ಇದನ್ನು ಅನುಷ್ಠಾನಗೊಳಿಸಲು ಅವಕಾಶ ಕೊಡುವುದಿಲ್ಲ ಎಂದು ಎಚ್ಚರಿಸಿದರು. ಡಿ.ಕೆ. ಶಿವಕುಮಾರ್ ಹಿರಿಯರಿದ್ದಾರೆ. ಕುವೆಂಪು ಅವರ ನಾಡಗೀತೆ ನೆನಪಿಸಿಕೊಂಡಿದ್ದಾರೆ. ಸರ್ವ ಜನಾಂಗದ ಶಾಂತಿಯ ತೋಟದ ನೆನಪನ್ನು ಅವರು ಮಾಡಿಕೊಟ್ಟಿದ್ದಾರೆ. ಕಾಂಗ್ರೆಸ್ ಸರಕಾರ ರಾಜ್ಯದಲ್ಲಿ ಸರ್ವ ಜನಾಂಗದ ಶಾಂತಿಯ ತೋಟಕ್ಕೆ ವಿಷಬೀಜ ಬಿತ್ತುವ ಕೆಲಸ ಮಾಡುತ್ತಿದೆ. ವಿಷಬೀಜ ಬಿತ್ತುವ ಕೆಲಸವನ್ನು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರು ಮಾಡಲು ಹೊರಟಿದ್ದು, ಇದನ್ನು ಬಿಜೆಪಿ ಪ್ರತಿಭಟಿಸುತ್ತದೆ.ಇದಕ್ಕೆ ಅವಕಾಶ ನೀಡುವುದಿಲ್ಲ ಎಂದು ಎಚ್ಚರಿಕೆ ನೀಡಿದರು. ಪ್ರವರ್ಗ 2 ಬಿ ಅಡಿಯಲ್ಲಿ ಜೈನರು ಬರುತ್ತಾರಾ? ಮುಸಲ್ಮಾನರು ಬಿಟ್ಟರೆ ಯಾರು ಬರುತ್ತಾರೆ ಎಂದು ಪ್ರಶ್ನಿಸಿದರು.

ಬಿಜೆಪಿ ಮುಸಲ್ಮಾನರ ವಿರೋಧಿಗಳಲ್ಲ

ಬಿಜೆಪಿ ಮುಸಲ್ಮಾನರ ವಿರೋಧಿಗಳಲ್ಲ. ಆದರೆ, ಅಲ್ಪಸಂಖ್ಯಾತರ ಅಥವಾ ಮುಸಲ್ಮಾನರ ತುಷ್ಟೀಕರಣದ ರಾಜಕೀಯ ನೀತಿಯನ್ನು ಕಾಂಗ್ರೆಸ್ ಸರಕಾರ ಅನುಸರಿಸುತ್ತಿದ್ದು, ಇದನ್ನು ನಾವು ಗಟ್ಟಿಯಾಗಿ ವಿರೋಧಿಸುತ್ತೇವೆ. ಮುಸಲ್ಮಾನರಿಗೆ ಎಂಎಲ್‌ಸಿ ಮಾಡಿ, ರಾಜ್ಯಸಭಾ ಸದಸ್ಯತ್ವ ಕೊಡಿ ಎಂದು ಡಿ.ಕೆ.ಶಿವಕುಮಾರ್ ಅವರು ಸವಾಲು ಹಾಕಿದ್ದಾರೆ. ಬಿಜೆಪಿ ಸರಕಾರ ಇದ್ದಾಗ ಡಾ.ಅಬ್ದುಲ್ ಕಲಾಂರನ್ನು ರಾಷ್ಟ್ರಪತಿಗಳನ್ನಾಗಿ ಮಾಡಿದ್ದೆವು. ಕಾಂಗ್ರೆಸಿನವರು ಮಾಡಿದ್ದಲ್ಲ. ಮೋದಿ ಅವರ ಸರಕಾರ ಬಂದ ಬಳಿಕ ನಜ್ಮಾ ಹೆಪ್ತುಲ್ಲಾರನ್ನು ರಾಜ್ಯಪಾಲರನ್ನಾಗಿ ಮಾಡಿದ್ದೆವು. ನ್ಯಾ.ಅಬ್ದುಲ್ ನಜೀರ್ ಅವರಂಥ ಮಹಾನ್ ವ್ಯಕ್ತಿಗಳನ್ನು ರಾಜ್ಯಪಾಲ ರನ್ನಾಗಿ ಆಯ್ಕೆ ಮಾಡಿದ್ದೇವೆ. ಮಹಮ್ಮದ್ ಆರಿಫ್ ಖಾನ್ ಅವರನ್ನು ರಾಜ್ಯಪಾಲರನ್ನಾಗಿ ಆಯ್ಕೆ ಮಾಡಿದ್ದರು. ಉಸ್ತಾದ್ ಬಿಸ್ಮಿಲ್ಲಾ ಖಾನ್‌ಗೆ ಭಾರತರತ್ನ ಕೊಟ್ಟದ್ದು, ಕಾಂಗ್ರೆಸ್ಸಿನವರಲ್ಲ. ಮೋದಿ ಸರಕಾರ ಕೊಟ್ಟದ್ದು ಎಂದು ಡಿ.ಕೆ.ಶಿವಕುಮಾರ್‌ಗೆ ತಿಳಿಸುವೆ ಎಂದು ವಿಜಯೇಂದ್ರ ಹೇಳಿದರು.

ಕಳೆದ 25 ದಿನಗಳಲ್ಲಿ 10 ಸಾವಿರ ಪ್ರಕರಣ । ರಾಜ್ಯದಲ್ಲಿ ಬಿಸಿಲಾಘಾತ ಹೆಚ್ಚಳ

ಬಿಸಿಲ ಬೇಗೆಗೆ ತತ್ತರ; ಹಲವು ಕಾಯಿಲೆಗಳಿಗೆ ಆಹ್ವಾನ

ಬೆಂಗಳೂರು: ರಾಜ್ಯದಲ್ಲಿ ಬೇಸಿಗೆಗೂ ಮೊದಲೇ ಬಿಸಿಲಾಘಾತ ಹೆಚ್ಚಾಗಿದೆ. ಅತಿಸಾರ, ಡೆಂಘೀ ಸೇರಿದಂತೆ ನಾನಾ ಕಾಯಿಲೆಗಳು ಜನರನ್ನು ಕಾಡುತ್ತಿವೆ.

ರಾಜ್ಯದಲ್ಲಿ ವಾಡಿಕೆ ಪ್ರಕಾರ ಫೆಬ್ರವರಿ ತಿಂಗಳಲ್ಲಿ ಗರಿಷ್ಠ ತಾಪಮಾನ 33 ರಿಂದ 34 ಡಿ.ಸೆ ದಾಖಲಾಗುತ್ತಿತ್ತು. ಈ ವರ್ಷ ಈಗಾಗಲೇ ಕೆಲವೆಡೆ ಗರಿಷ್ಠ ತಾಪಮಾನ 35 ಡಿಗ್ರಿ ಸೆ. ದಾಟಿದೆ. ಉತ್ತರ ಕರ್ನಾಟಕ, ಕರಾವಳಿ ಭಾಗದಲ್ಲಿ ವಾಡಿಕೆಗಿಂತ ಅಧಿಕ ಬಿಸಿಲು ಕಾಣಿಸಿಕೊಳ್ಳುತ್ತಿದೆ. ಬಿಸಿಲು ಹೆಚ್ಚಳದಿಂದ ರಾಜ್ಯದಲ್ಲಿ ಅತಿಸಾರ ಪ್ರಕರಣಗಳು ಅಧಿಕವಾಗಿವೆ.

ರಾಜ್ಯ ಆರೋಗ್ಯ ಇಲಾಖೆ ಮಾಹಿತಿ ಪ್ರಕಾರ, ಕಳೆದ 25 ದಿನಗಳಲ್ಲಿ 10 ಸಾವಿರ ಪ್ರಕರಣಗಳು ವರದಿಯಾಗಿವೆ. ಪ್ರತಿವಾರ ಸರಾಸರಿ ಮೂರು ಸಾವಿರ ಜನರು ಅತಿಸಾರ ಸೋಂಕಿಗೆ ಒಳಗಾಗುತ್ತಿದ್ದಾರೆ. ಇದೇ ವೇಳೆ 250 ಡೆಂಘೀ ಪ್ರಕರಣಗಳೂ ವರದಿಯಾಗಿವೆ. ಇದಲ್ಲದೆ ಗ್ಯಾಸ್ಟ್ರೋಎಂಟರೈಟಿಸ್, ಶೀತ, ತಲೆನೋವು ಮತ್ತು ಒಣ ಕೆಮ್ಮು ಸೇರಿದಂತೆ ಅನೇಕ ರೀತಿಯ ಆರೋಗ್ಯ ಸಮಸ್ಯೆಗಳು ಕೂಡ ಕಂಡು ಬರುತ್ತವೆ. ತಾಪಮಾನ ಹೆಚ್ಚಳದಿಂದ ಕೆಲವರಲ್ಲಿ ಮೂಗು ಮತ್ತು ಮೂತ್ರದಲ್ಲಿ ರಕ್ತ ಕಾಣಿಸಿಕೊಳ್ಳುತ್ತಿದೆ. ಜತೆಗೆ ಬಿಸಿಲಿನ ತಾಪಕ್ಕೆ ಚರ್ಮ ರೋಗ ಸೇರಿದಂತೆ ಸಾಂಕ್ರಾಮಿಕ ರೋಗಗಳ ಭೀತಿ ಜನರಲ್ಲಿ ಎದುರಾಗಿದೆ. ಸ್ನಾಯು ಸೆಳೆತ, ಸನ್ ಸ್ಟ್ರೋಕ್, ದೇಹದಲ್ಲಿ ನೀರಿನ ಅಂಶ ಕಡಿಮೆಯಾಗುವುದರಿಂದ ಮೂತ್ರಪಿಂಡ, ಹೃದಯ ಸಂಬಂಧಿ ಕಾಯಿಲೆ ಕಾಡುತ್ತಿದೆ. ಬಿಸಿಲ ಬೇಗೆಗೆ ನೀರಿನ ಕೊರತೆಯಿಂದ ಗ್ರಾಮೀಣ ಭಾಗಗಳಲ್ಲಿ ವಾಂತಿ-ಭೇದಿಯಂತಹ ರೋಗಗಳು ಕಾಣಿಸಿಕೊಳ್ಳುತ್ತಿವೆ. ಅಶುದ್ಧ ನೀರಿನ ಸೇವನೆಯಿಂದ ಕಾಲರಾದಂಥ ರೋಗಗಳು ಹರಡುವ ಭೀತಿ ಎದುರಾಗಿದೆ.

ಬಿಸಿಗಾಳಿ, ತಾಪಮಾನದಲ್ಲಿ ಮತ್ತಷ್ಟು ಹೆಚ್ಚಳ ಸಾಧ್ಯತೆ

ಬೇಸಿಗೆ ಆರಂಭದ ಬೆನ್ನಲ್ಲೇ ನಗರದಲ್ಲಿ ಬಿಸಿಲ ಧಗೆ ಹೆಚ್ಚಾಗಿದ್ದು, ಮುಂದಿನ ದಿನಗಳಲ್ಲಿ ನಗರದಲ್ಲಿ ತಾಪಮಾನ ಹೆಚ್ಚಳ ಹಾಗೂ ಬಿಸಿಗಾಳಿ ಹೆಚ್ಚಲಿದೆ ಎಂದು ಹವಾಮಾನ



ಇಲಾಖೆ ಮುನ್ಸೂಚನೆ ನೀಡಿದೆ. ನಗರದಲ್ಲಿ ಮುಂದಿನ ವಾರದಿಂದ ತಾಪಮಾನದಲ್ಲಿ ಏರಿಕೆಯಾಗಲಿದ್ದು, ಸಹಜ ತಾಪಮಾನಕ್ಕಿಂತ 6 -8 ಡಿಗ್ರಿ ಸೆಲ್ಸಿಯಸ್ ಹೆಚ್ಚು ತಾಪಮಾನ ದಾಖಲಾಗುವ ಸಾಧ್ಯತೆಯಿದೆ. ಈಗಾಗಲೇ ಬೆಂಗಳೂರಿನ ಬಿಸಿಲಿಗೆ ಜನರು ತತ್ತರಿಸಿದ್ದು, ಮನೆ , ಕಚೇರಿಯಲ್ಲಿ ಏರ್ ಕೂಲರ್‌ಗಳನ್ನು ಬಳಕೆ ಮಾಡುವ ಸ್ಥಿತಿ ನಿರ್ಮಾಣವಾಗಿದೆ. ನಗರದಲ್ಲಿ ಈಗಾಗಲೇ 32 ರಿಂದ 34 ಡಿಗ್ರಿ ತಾಪಮಾನ ದಾಖಲಾಗುತ್ತಿದೆ. ಮುಂದಿನ ಎರಡೂ ದಿನಗಳಲ್ಲಿ 36-38 ಡಿಗ್ರಿ ತಾಪಮಾನಕ್ಕೆ ಏರಿಕೆಯಾಗಲಿದೆ. ಈ ತಿಂಗಳ ಅಂತ್ಯಕ್ಕೆ 39 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗುವ ಸಾಧ್ಯತೆ ಇದೆ. ಹವಮಾನ ಇಲಾಖೆ ಗರಿಷ್ಠ ತಾಪಮಾನದ ಅಲರ್ಟ್ ನೀಡಿದ್ದು, ಕಳೆದ ವರ್ಷವೂ ನಗರದಲ್ಲಿ 39 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು. ಈ ವರ್ಷವೂ 39 ರಿಂದ 40 ಡಿಗ್ರಿಯಷ್ಟು ತಾಪಮಾನದ ಎಚ್ಚರಿಕೆಯನ್ನ ಹವಮಾನ ಇಲಾಖೆ ನೀಡಿದೆ. ಜನರು ಹೆಚ್ಚು ಬಿಸಿಲಿನಲ್ಲಿ ಓಡಾಡದಂತೆ ಹವಾಮಾನ ಇಲಾಖೆ ಸಲಹೆ ನೀಡಿದ್ದು ಬಿಸಿಗಾಳಿ ಬಗ್ಗೆಯೂ ಎಚ್ಚರಿಕೆ ನೀಡಿದೆ.

ತಂಪು ಪಾನೀಯಗೆ ಡಿಮ್ಯಾಂಡ್

ಸೂರ್ಯ ಕಿರಣ ಹೊರ ಬೀಳುತ್ತಿದ್ದಂತೆ ಆರಂಭವಾಗುವ ಬಿಸಿಲಿನ ಧಗೆ ತಾಳಲಾರದೆ ಜನರು ದೇಹ ತಂಪಾಗಿಸಿಕೊಂಡು ದಾಹ ತಣಿಸಿಕೊಳ್ಳಲು ಕಲ್ಲಂಗಡಿ ಹಣ್ಣು, ಎಳನೀರು, ಮಜ್ಜಿಗೆ, ತಂಪು ಪಾನಿಯ, ಜ್ಯೂಸ್ ಮೊರೆ ಹೋಗುತ್ತಿದ್ದಾರೆ. ಬಿಸಿಲು ಉಂಟು ಮಾಡುವ ದಾಹ, ಬಾಯಾರಿಕೆ ನೀಗಿಸಿಕೊಳ್ಳಲು ಸಾರ್ವಜನಿಕರು ಕಲ್ಲಂಗಡಿ ಹಣ್ಣು ತಿನ್ನಲು ಮುಗಿಬೀಳುತ್ತಿದ್ದು, ಜ್ಯೂಸ್, ಐಸ್ ಕ್ರೀಂಗೆ ಫುಲ್ ಡಿಮ್ಯಾಂಡ್ ಬಂದಿದೆ. ಜನದಟ್ಟಣೆ ಇರುವ ಪ್ರದೇಶ, ಬಸ್ ನಿಲ್ದಾಣ, ರಸ್ತೆಬದಿ, ಕಚೇರಿ, ಬಡಾವಣೆ ಹೀಗೆ ನಗರದ ಅಲ್ಲಲ್ಲಿ ಕಲ್ಲಂಗಡಿ ಹಣ್ಣು ಮಾರುವ ಗಾಡಿಗಳು, ರಾಶಿ, ರಾಶಿ ಕಲ್ಲಂಗಡಿ ಹಣ್ಣುಗಳು ಜನಸಾಮಾನ್ಯರ ಬಾಯಾರಿಕೆ ನೀಗಿಸುತ್ತಿವೆ.

ಬಾಯಾರಿಕೆ ತಣಿಸಿ

ಕೆರೆಕಟ್ಟೆಗಳ ಒಡಲು ಬರಿದಾಗಿದ್ದು, ಪ್ರಾಣಿ-ಪಕ್ಷಿಗಳಿಗೆ ತಿನ್ನಲು ಆಹಾರ, ಕುಡಿಯಲು ನೀರು ಸಿಗದಂತಾಗಿದೆ. ಪ್ರಾಣಿ-ಪಕ್ಷಿಗಳ ಬಾಯಾರಿಕೆ ನೀಗಿಸಲು ಜನಸಾಮಾನ್ಯರು ತಮ್ಮ ಮನೆಯ ಮಹಡಿ ಮೇಲೆ ಪಕ್ಷಿಗಳಿಗೆ ಕುಡಿಯಲು ನೀರಿಟ್ಟು, ಆಹಾರ ದಾನ್ಯಗಳನ್ನು ನೀಡುವ ಮೂಲಕ ಜೀವಸಂಕುಗಳ ಉಳಿವಿಗೆ ಶ್ರಮಿಸಬೇಕಿರುವುದು ಮನುಷ್ಯರಾದ ತಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಪಕ್ಷಿ ಪ್ರೇಮಿಗಳು ಮನವಿ ಮಾಡಿದ್ದಾರೆ.

ಸೂಲಿಬೆಲೆ ವಿರುದ್ಧ ಎಫ್‌ಐಆರ್ ದಾಖಲು

ಮಂಗಳೂರು: ಚಿಂತಕ ಚಕ್ರವರ್ತಿ ಸೂಲಿಬೆಲೆ ವಿರುದ್ಧ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಎಫ್ ಐಆರ್ ದಾಖಲಾಗಿದೆ.

ಮಾ. 9ರಂದು ಕುತ್ತಾರು ಕೊರಗಜ್ಜ ಕ್ಷೇತ್ರದಲ್ಲಿ ಪಾದಯಾತ್ರೆಯ ಸಮಾರೋಪ ಭಾಷಣದಲ್ಲಿ ಸೂಲಿಬೆಲೆ ಅವರು ಅನ್ಯ ಸಮಾಜದವರನ್ನು ಪ್ರೀತಿಸಿ ಮದುವೆಯಾಗಿ ಎಂದು ಹಿಂದೂ ಯುವಕರಿಗೆ ಸಲಹೆ ಮಾಡಿದ್ದರು.

ಪ್ರಚೋದನಕಾರಿ ಭಾಷಣ ಮಾಡಿ, ಕೋಮುದ್ವೇಷಕ್ಕೆ ಕಾರಣರಾಗಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಮುಖಂಡ ರಶೀದ್ ಉಳ್ಳಾಲ ನೀಡಿದ್ದ ದೂರಿನ ಹಿನ್ನೆಲೆ ಉಳ್ಳಾಲ ಠಾಣೆಯಲ್ಲಿ ಎಫ್‌ಐಆರ್‌ದಾಖಲಾಗಿದೆ.

ಸೂಲಿಬೆಲೆ ಹೇಳಿದ್ದು ಏನು?

ಮತಾಂತರ ಎಂದು ಬಡಿದಾಡಿದ್ದು ಸಾಕು. ಈಗ ಹಿಂದೂ ಧರ್ಮಕ್ಕೆ ಘರ್ ವಾಪ್ಸಿ ಮಾಡೋ ಬಗ್ಗೆ ಮಾತಾಡಿ. ಎಲ್ಲಿವರೆಗೆ ಲವ್ ಜಿಹಾದ್, ಮತಾಂತರ ಬಗ್ಗೆ ಮಾತನಾಡೋದು? ಎಷ್ಟು ದಿನ ನಮ್ಮ ಹುಡುಗಿಯರನ್ನೇ ನೋಡ್ತಿಯಪ್ಪ ಅಂತ ನಮ್ಮ ಗಂಡು ಮಕ್ಕಳಿಗೆ ಕೇಳೋಣ. ಬೇರೆ ಧರ್ಮದ ಹುಡುಗಿಯರನ್ನೂ ನೋಡು ಅಂತ ಹೇಳಬೇಕು. ಅನ್ಯಧರ್ಮದ ಯುವತಿಯರನ್ನು ಪ್ರೀತಿಸಿ ಮದುವೆಯಾಗಿ ಎಂದು ಹಿಂದೂ ಯುವಕರಿಗೆ ಕರೆ ನೀಡಿದ್ದರು.

ವೈಯಕ್ತಿಕ ಭಿನ್ನಾಭಿಪ್ರಾಯ ಬದಿಗಿಟ್ಟು ಪಕ್ಷದ ಸಿದ್ಧಾಂತಕ್ಕೆ ಬದ್ಧವಾಗಿರಿ | ಮಂಜುನಾಥ್ ಗೌಡ ಪದಗ್ರಹಣ ಕಾರ್ಯಕ್ರಮದಲ್ಲಿ ಡಿಕೆ ಮಾತು

ಬೂತ್ ಮಟ್ಟದಿಂದ ಬಿಜೆಪಿ ವಿರುದ್ಧ ಹೋರಾಡಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿಜೆಪಿ ಥವಿರುದ್ಧ ಬೂತ್ ಮಟ್ಟದಿಂದ ಹೋರಾಡ ಬೇಕಿದೆ. ಈ ನಿಟ್ಟಿನಲ್ಲಿ ಎಲ್ಲರೂ ತಮ್ಮ ವೈಯಕ್ತಿಕ ಪ್ರತಿಷ್ಠೆ ಬದಿಗಿಟ್ಟು ಒಂದಾಗಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ. ಕೆ.ಶಿವಕುಮಾರ್ ಸೂಚನೆ ನೀಡಿದರು.

ಅರಮನೆ ಮೈದಾನದಲ್ಲಿ ಸೋಮವಾರ ನಡೆದ ಯುವ ಸಂಕಲ್ಪ ಪದಗ್ರಹಣ ಕಾರ್ಯಕ್ರಮದಲ್ಲಿ ಯುವ ಕಾಂಗ್ರೆಸ್ ಚುನಾವಣೆ ಮೂಲಕ ಆಯ್ಕೆ ಯಾದ ನೂತನ ಪದಾಧಿಕಾರಿಗಳಿಗೆ ಕೆಪಿಸಿಸಿ ಅಧ್ಯ ಕ್ಷರೂ ಆದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಪ್ರತಿಜ್ಞಾ ವಿಧಿ ಬೋಧಿಸಿದರು. ಈ ಮೂಲಕ ತಮ್ಮ ಆಪ್ತನ ಪದಗ್ರಹಣ ಕಾರ್ಯಕ್ರಮದ ಮೂಲಕ ಶಕ್ತಿ ಪ್ರದರ್ಶನವನ್ನು ಡಿ. ಕೆ.ಶಿವಕುಮಾರ್ ಮಾಡಿದರು.

ಬಳಿಕ ಮಾತನಾಡಿದ ಅವರು, ರಾಜ್ಯದಲ್ಲಿ 25 ಲಕ್ಷ ಯುವ ಕಾಂಗ್ರೆಸ್ ಸದಸ್ಯತ್ವ ಮಾಡಲಾಗಿದೆ ಎಂಬ ವರದಿ ಬಂದಿದೆ. ಇಲ್ಲಿ 15–20 ಸಾವಿರ ಸದಸ್ಯರು ಬಂದಿದ್ದೀರಿ. ಉಳಿದ ಸದಸ್ಯರು ಎಲ್ಲಿ ಹೋದರು? 25 ಲಕ್ಷ ಸದಸ್ಯತ್ವ ದೊಡ್ಡ ಮಟ್ಟದಲ್ಲಿ ತಾಲೂಕು ಮಟ್ಟದ ಅಧ್ಯಕ್ಷರು ತಮ್ಮ ವಿಧಾನಸಭಾ ಕ್ಷೇತ್ರದಲ್ಲಿ ಇಂತಹ ಪದಗ್ರಹಣ ಕಾರ್ಯಕ್ರಮ ಮಾಡಬೇಕು. ಆ ಕಾರ್ಯ ಕ್ರಮಕ್ಕೆ ಆ ತಾಲೂಕಿನ ಯುವ ಕಾಂಗ್ರೆಸ್ ಸದಸ್ಯರನ್ನು ಆಹ್ವಾನಿಸಬೇಕು ಎಂದರು. ಶಿಸ್ತು ಇಲ್ಲದಿದ್ದರೆ ಯಾರೂ ನಾಯಕ ರಾಗುವು ದಿಲ್ಲ. ಶಿಸ್ತೇ ನಿಮ್ಮ ಯಶಸ್ಸಿನ ಮೂಲಮಂತ್ರ. ಪೋಸ್ಟರ್ ಬ್ಯಾನರ್ ಹಾಕಿದಾಕ್ಷಣ ನೀವು ನಾಯಕ ರಾಗುವುದಿಲ್ಲ. ನಿಮ್ಮ ಸಮರ ಸಿದ್ಧಾಂತದ ಮೇಲೆ ಇರಬೇಕು. ಬೂತ್ ಮಟ್ಟದಲ್ಲಿ ಬಿಜೆಪಿ ಹಾಗೂ ಜನತಾ ದಳದವರ ವಿರುದ್ಧ ಇರಬೇಕೇ ಹೊರತು ಪೋಸ್ಟರ್ ಹಾಕಿ ಕೊಂಡು ಮಾಡು ವುದಲ್ಲ. ನಿಮ್ಮ ಪೋಸ್ಟರ್ ನಿಮ್ಮ ಬೂತ್ ಮಟ್ಟದಲ್ಲಿ ಇರಬೇಕು. ಪೋಸ್ಟರ್ ಹಾಕುವಾಗ ಶಿಷ್ಟಾಚಾರ ಪಾಲನೆ ಮಾಡ ಬೇಕು ಎಂದು ಸಲಹೆ ನೀಡಿದರು.

ಬೂತ್ ಮಟ್ಟದಲ್ಲಿ ಸಂಘಟನೆ ಮಾಡುವವನು ನಿಜ ವಾದ ನಾಯಕ: ಬಿಜೆಪಿಯವರು ಭಾವನೆ ಮೇಲೆ ರಾಜಕೀಯ ಮಾಡಿದರೆ, ಕಾಂಗ್ರೆಸ್ ಬದುಕಿನ ಮೇಲೆ ರಾಜಕೀಯ ಮಾಡುತ್ತಿದೆ. ಪ್ರತಿ ಬೂತ್ ಮಟ್ಟದಲ್ಲಿ ಡಿಜಿಟಲ್ ಯೂಥ್ ಇರಬೇಕು ಎಂದು ಹೇಳುತ್ತಲೇ ಇದ್ದೇನೆ. ನೂತನ ಅಧ್ಯಕ್ಷರಾದ ಮಂಜುನಾಥ್ ಗೌಡ ಅವರಿಗೂ ನಾನು ಇದನ್ನು ಹೇಳಬಯಸುತ್ತೇನೆ. ಇದರಲ್ಲಿ ಯಾವುದೇ ರಾಜಿಯಿಲ್ಲ. ಪ್ರತಿ ಬೂತ್ ನಲ್ಲಿ 25 ಕಾರ್ಯಕರ್ತರ ಪಡೆ ರಚಿಸಬೇಕು. ಆ ಬೂತ್ ಜವಾಬ್ದಾರಿಯನ್ನು ಅವರಿಗೆ ನೀಡಬೇಕು. ಯಾರು ಬೂತ್ ಮಟ್ಟದಲ್ಲಿ ಹೆಚ್ಚಿನ ಮತ ಕೊಡಿಸುತ್ತಾರೋ ಅವರೇ ನಿಜವಾದ ನಾಯಕರು. ಇದನ್ನು ಬಿಟ್ಟು, ನನ್ನ ಹಾಗೂ ಸಿದ್ದರಾಮಯ್ಯ ಅವರ ಸುತ್ತ ಗಿರಕಿ ಹೊಡೆದರೆ ನಾಯಕರಾಗುವುದಿಲ್ಲ ಎಂದರು.

ಕಾರ್ಯಕ್ರಮದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ವಿನಯ್ ಕುಲಕರ್ಣಿ, ಪ್ರಚಾರ ಸಮಿತಿ ಅಧ್ಯಕ್ಷ ವಿನಯ್ ಕುಮಾರ್ ಸೊರಕೆ, ಸಚಿರಾದ ಕೃಷ್ಣ ಭೈರೇಗೌಡ, ದಿನೇಶ್ ಗುಂಡೂರಾವ್, ಲಕ್ಷ್ಮೀ ಹೆಬ್ಬಾಳ್ಕರ್, ಸಂತೋ ಷ್ ಲಾಡ್, ಭಾರತ ರಾಷ್ಟ್ರೀಯ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಬಿ.ವಿ ಶ್ರೀನಿವಾಸ, ಎಐಸಿಸಿ ಕಾರ್ಯ ದರ್ಶಿ ಸೂರಜ್ ಹೆಗ್ಡೆ, ಬಿಎಂ ಸಂದೀಪ್, ಅಭಿಷೇಕ್ ದತ್, ಮಯೂರು ಜೈಕುಮಾರ್, ಮನ್ಸೂರ್ ಆಲಿ ಖಾನ್, ಯು.ಬಿ. ವೆಂಕಟೇಶ್ ಸೇರಿ ಅನೇಕರಿದ್ದರು.

ಅರಮನೆ ಮೈದಾನದಲ್ಲಿ ಸೋಮವಾರ ನಡೆದ ಯುವ ಸಂಕಲ್ಪ ಪದಗ್ರಹಣ ಕಾರ್ಯಕ್ರಮದಲ್ಲಿ ಯುವ ಕಾಂಗ್ರೆಸ್ ನೂತನ ಪದಾಧಿಕಾರಿಗಳಿಗೆ ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಪಕ್ಷದ ಧ್ವಜ ನೀಡಿ ಶುಭ ಹಾರೈಸಿದರು.

ಯುವಕರ ಪರ ಧ್ವನಿಯಾಗುವೆ : ಯುವ ಘಟಕದ ರಾಜ್ಯಾಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮಾತನಾಡಿದ ಮಂಜುನಾಥ್ ಗೌಡ, ರಾಜ್ಯದಲ್ಲಿ ಕೋಮುವಾದ ತಾಂಡವವಾಡುತ್ತಿದೆ. ನಿರುದ್ಯೋಗ ಮಿತಿ ಮೀರುತ್ತಿದೆ. ಕೈಯಲ್ಲಿ ಕೆಲಸ ಇಲ್ಲದ ಯುವಕರು ಹಾದಿ ತಪ್ಪಿದ್ದಾರೆ. ಡ್ರಗ್ಸ್ ಮಾಫಿಯಾದಿಂದ ಯುವಕರು ದಿಕ್ಕುತಪ್ಪಿ ನಡೆಯುತ್ತಿದ್ದಾರೆ. ಆಳುವ ವರ್ಗ ಇದನ್ನು ಲೆಕ್ಕಿಸದೆ ನಡೆಯುತ್ತಿದೆ. ಕೆಲವೇ ಕೆಲವು ಶ್ರೀಮಂತರನ್ನು ಬೆಳೆಸುವ ಕೆಲಸ ಈ ದೇಶದಲ್ಲಿ ನಡೆಯುತ್ತಿದೆ. ಇದನ್ನು ಸರಿ ಮಾಡದ ಹೊರತು ಯುವ ಜನರಿಗೆ ಉತ್ತಮ ಭವಿಷ್ಯ ಮರೀಚಿಕೆ. ಈ ನಿಟ್ಟಿನಲ್ಲಿ ಹೋರಾಡಬೇಕಿದೆ ಎಂದರು. ದೇಶ ಕಟ್ಟುವ ಮನಸ್ಥಿತಿ ಇಲ್ಲದ ಚಾಯ್ ವಾಲಾಗಳು ದೇಶದ ಚುಕ್ಕಾಣಿ ಹಿಡಿದ ಪರಿಣಾಮ ದೇಶ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿದೆ. ದೇಶದಲ್ಲಿ ಹೊಸ ಭರವಸೆ, ಹೊಸ ಆಲೋಚನೆ, ತಂತ್ರಜ್ಞಾನ ಯಾವುದೂ ಹುಟ್ಟುತ್ತಿಲ್ಲ. ಉದ್ಯೋಗ ಕೇಳಿದರೆ ಪಕೋಡ ಮಾರಿ ಎನ್ನುತ್ತಾರೆ. ಕೋಮುಪ್ರಚೋದನೆ ಯನ್ನು ಮಾಡಲಾಗು ತ್ತಿದೆ. ಸರ್ವಜನಾಂಗದ ಶಾಂತಿಯ ತೋಟಕ್ಕೆ ಕೋಮುವಾದದ ಗೂಳಿ ನುಗ್ಗಿಸಲಾಗಿದೆ. ರಾಜಕೀಯ ಹುನ್ನಾರಕ್ಕೆ ಯುವ ಜನಾಂಗವನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ವಾಗ್ದಾಳಿ ನಡೆಸಿದರು.

2028ರಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸಿ

ಯುವಕರ ನಡೆ ಹಳ್ಳಿ, ಬೂತ್ ಕಡೆ, ನಿಮ್ಮ ನಡೆ ಗ್ಯಾರಂಟಿ ಕಡೆ ಇರಬೇಕು. ಆ ಮೂಲಕ 2028ರಲ್ಲಿ ಮತ್ತೆ ಪಕ್ಷವನ್ನು ಅಧಿಕಾರಕ್ಕೆ ತರುವತ್ತ ಗಮನ ಇರಬೇಕು. ನಿಮ್ಮ ಪದಾಧಿಕಾರಿಗಳ ಸಭೆಗೆ ಬಂದು ಮತ್ತಷ್ಟು ಸಲಹೆ ನೀಡುತ್ತೇನೆ. ಯಾರು ವಿದ್ಯಾರ್ಥಿ ಹಾಗೂ ಯುವ ಕಾಂಗ್ರೆಸ್ ಸದಸ್ಯರಾಗುತ್ತಾರೋ ಅವರಲ್ಲಿ ಶೇ.90 ಜನ ಕಾಂಗ್ರೆಸ್ ಪಕ್ಷದಲ್ಲೇ ಉಳಿದುಕೊಳ್ಳುತ್ತಾರೆ. ಮುಂದಿನ ಚುನಾವಣೆಯಲ್ಲಿ 224 ಕ್ಷೇತ್ರಗಳ ಪೈಕಿ 74 ಕ್ಷೇತ್ರಗಳಿಗೆ ಮಹಿಳಾ ಅಭ್ಯರ್ಥಿಗಳನ್ನು ಕಣಕ್ಕಿಳಿಸಬೇಕು. ಹಾಗೆಂದು ನನ್ನ ಮಕ್ಕಳು, ಪತ್ನಿಯನ್ನು ಕಣಕ್ಕಿಳಿಸುವುದು ನನ್ನ ಗುರಿ ಯಲ್ಲ. ನೀವು ಕಾರ್ಯಕರ್ತರು ಟಿಕೆಟ್ ಪಡೆಯಲು ಶಕ್ತಿಶಾಲಿಗಳಾಗಬೇಕು ಎಂದು ತಿಳಿಸಿದರು. ಪಕ್ಷ ಇದ್ದರೆ, ಸರಕಾರ, ನೀವುಗಳಿದ್ದರೆ ನಾವು. ಪಕ್ಷವೇ ಮೊದಲು ಎಂಬ ಕಾರಣಕ್ಕೆ ನಾನು ಈ ಕಾರ್ಯಕ್ರಮಕ್ಕೆ ಬಂದಿದ್ದೇನೆ. ನನಗೆ ವಿಶ್ವಾಸವಿದೆ 2028ರಲ್ಲಿ ರಾಜ್ಯದಲ್ಲಿ ಹಾಗೂ 2029ರಲ್ಲಿ ರಾಷ್ಟ್ರದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬರಲಿದೆ. ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರ ನಾಯಕತ್ವ ದಲ್ಲಿ ದೇಶದಲ್ಲಿ ಕಾಂಗ್ರೆಸ್ ಬಾವುಟ ಹಾರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ದೇಶದಲ್ಲಿ ಅತಿಹೆಚ್ಚು ಯುವ ಕಾಂಗ್ರೆಸ್ ಸದಸ್ಯತ್ವವನ್ನು ಕರ್ನಾಟಕದಲ್ಲಿ ಮಾಡಲಾಗಿದೆ. ಮಂಜುನಾಥ್ ಅವರು ಉತ್ತಮ ನಾಯಕತ್ವದಲ್ಲಿ ಸದಸ್ಯತ್ವದ ಕೆಲಸ ನಡೆದಿದೆ. ಬೂತ್ ಮಟ್ಟಕ್ಕೆ ಹೋಗಿ ಯುವ ಕಾಂಗ್ರೆಸ್ ನಾಯಕರು ಕೆಲಸ ಮಾಡಬೇಕು. ಅವರ ಸಮಸ್ಯೆಗಳನ್ನು ಆಲಿಸ ಬೇಕು. ಮೋದಿಯವರು ದೇಶದ ಸ್ವಾಭಿಮಾನವನ್ನು ಅಮೆರಿಕದ ಮುಂದೆ ಅಡವಿಟ್ಟಿದ್ದಾರೆ. ಇದರ ಬಗ್ಗೆ ದೇಶದ ಜನರು ದನಿ ಎತ್ತುತ್ತಾ ಇಲ್ಲ. ಆದರೆ ಯುವ ಕಾಂಗ್ರೆಸ್ ಇದರ ಬಗ್ಗೆ ದನಿ ಎತ್ತಿದೆ.

– **ಉದಯ್ ಬಾನು ಚಿಬ್,** ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ

ಪಕ್ಷದ ಯುವ ನಾಯಕರು ಸಿಗುವ ಅವಕಾಶಗಳನ್ನು ಬಳಸಿಕೊಂಡು ಮುಂದಕ್ಕೆ ಬರಬೇಕು. ಸೈದ್ಧಾಂತಿಕವಾಗಿ ನೀವು ಗಟ್ಟಿಯಾಗಬೇಕು. ಕಾಂಗ್ರೆಸ್ ಪಕ್ಷದಲ್ಲಿ ನಾವು ಇರಬೇಕು ಎನ್ನುವ ನಿಲುವನ್ನು ಮೊದಲು ಸ್ಪಷ್ಟಪಡಿಸಿಕೊಳ್ಳಬೇಕು. ಆಗ ಮಾತ್ರ ನೀವು ಸಮಾಜಕ್ಕೆ, ಪಕ್ಷಕ್ಕೆ ಕೊಡುಗೆ ನೀಡಲು ಸಾಧ್ಯ. ಬಿಜೆಪಿ ಹಿಂದುತ್ವ ಮೇಲೆ ಮತ ಕೇಳುತ್ತದೆ. ನಾನೂ ಹಿಂದು ಎಂದು ಹೆಮ್ಮೆಯಿಂದ ಹೇಳುತ್ತೇನೆ. ಆದರೆ ಇದನ್ನು ಮತರಾಜಕಾರಣಕ್ಕೆ ಬಳಸಿಕೊಳ್ಳಬಾರದು.

–**ಸಂತೋಷ್ ಲಾಡ್,** ಸಚಿವ

ಉಪನಿರ್ದೇಶಕರು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಚೇರಿ ಸಮಗ್ರ ಶಿಕ್ಷಣ ಕರ್ನಾಟಕ, ಬಾಗಲಕೋಟೆ.

ಕ್ರ.ಸಂ/ಸ.ಶಿ.ಕ/ಎ.ಆರ್.ಪಿ.ಸಿ./ಹೊಗುನೇ/2024–25 ದಿನಾಂಕ:13.03.2025

ಇ_ಪ್ರೋಕ್ಯೂರಮೆಂಟ್ ಮರು ಟೆಂಡರ್ ಪ್ರಕಟಣೆ

ಮೇಲ್ಕಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಜಿಲ್ಲೆಯ 14 ಸರ್ಕಾರಿ ಪ್ರೌಢ ಶಾಲೆಗಳಿಗೆ ಐ.ಸಿ.ಟಿ.ಚಟುವಟಿಕೆಯಡಿ ALL-IN-ONE COMPUTERS AND 1 KV UPS WITH BATTERIES ಗಳನ್ನು ಸರಬರಾಜು ಮಾಡಲು ಅರ್ಹ ಮತ್ತು ಆಸಕ್ತ ಏಜನ್ಸಿಗಳನ್ನು ಆಯ್ಕೆ ಮಾಡಲು ಇ–ಪ್ರೋಕ್ಯೂರಮೆಂಟ್ ಮೂಲಕ ದ್ವಿ ಲಕೋಟೆಯಲ್ಲಿ ಟೆಂಡರ್ ಕರೆಯಲಾಗಿದ್ದು, ವಿವರ ಈ ಕೆಳಗಿನಂತಿದೆ. ಆಸಕ್ತ ಟೆಂಡರದಾರರು kppp.karnataka.gov.in ಗಮನಿಸುವುದು.

ಕ್ರ.ಸಂ	ವೇಳಾ ಪಟ್ಟಿ	ದಿನಾಂಕ	ಸಮಯ
1	ಟೆಂಡರ್ ಪ್ರಕಟಣೆ ದಿನಾಂಕ	14–03–2025	–
2	ದ್ವಿಲಕೋಟೆಯಲ್ಲಿ ಸಲ್ಲಿಸುವ ಕೊನೆಯ ದಿನಾಂಕ	25–03–2025	5 – 00 ಸಾಯಂಕಾಲ
3	ತಾಂತ್ರಿಕ ಬಿಡ್ಡ್ ತೆರೆಯುವ ದಿನಾಂಕ	26–03–2025	5 –10 ಬೆಳಿಗ್ಗೆ
4	ಆರ್ಥಿಕ ಬಿಡ್ಡ್ ತೆರೆಯುವ ದಿನಾಂಕ	ತಾಂತ್ರಿಕ ಬಿಡ್ ಪರಿಶೀಲನೆ ನಂತರ	

ಸಹಿ/–(ಎಂ ವಿವೇಕಾನಂದ)
ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಎಸ್.ಎಸ್.ಕೆ. ಬಾಗಲಕೋಟ.
DIPR/BGK/RO-NO-567/KSMCA/2024-25

ಸಾರ್ವಜನಿಕ ಗ್ರಂಥಾಲಯ ಇಲಾಖೆ
ಉಪನಿರ್ದೇಶಕರ ಕಛೇರಿ, ನಗರ ಕೇಂದ್ರ ಗ್ರಂಥಾಲಯ, ದಕ್ಷಿಣ ವಲಯ, 7ನೇ ಮುಖ್ಯ ರಸ್ತೆ, ಬಿ.ಟಿ.ಎಂ. 2ನೇ ಹಂತ, ಬೆಂಗಳೂರು–560 076.
email id: cclsouthzone@gmail.com. Tel: 26548829
ಸಂ: :ನಕೇಗ್ರಂ/ದವ/ಎ2/ಎಂ.ಟಿ–17/ಅ.ಪ/ಸ.ವಿ/2245/2024–25 ದಿನಾಂಕ: 15–03–2025

ದರಪಟ್ಟಿ ಪ್ರಕಟಣೆ

2024–25ನೇ ಸಾಲಿಗೆ ನಗರ ಕೇಂದ್ರ ಗ್ರಂಥಾಲಯ ದಕ್ಷಿಣ ವಲಯ ಬೆಂಗಳೂರು ಈ ಕಛೇರಿ ವ್ಯಾಪ್ತಿಯಲ್ಲಿ ಬರುವ ಬಿ.ಟಿ.ಎಂ. ಶಾಖಾ ಗ್ರಂಥಾಲಯದ ಮುಂಭಾಗದಲ್ಲಿ ಬಿಳಿ ಮಾರ್ಬಲ್ ಕಲ್ಲಿನ ಸರಸ್ವತಿ ವಿಗ್ರಹ ಸ್ಥಾಪಿಸಲು ಈ ಕೆಲಸದಲ್ಲಿ ಅನುಭವ ಹೊಂದಿರುವ ನೊಂದಾಯಿತ ಸಂಸ್ಥೆಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅನುಭವ ಇರುವ ನೊಂದಾಯಿತ ಸಂಸ್ಥೆಯವರು ದರಪಟ್ಟಿಗಳನ್ನು ಸಲ್ಲಿಸಬಹುದು.

ದರಪಟ್ಟಿ ಸಂಖ್ಯೆ: (1) ಸಂಖ್ಯೆ:ನಕೇಗ್ರಂ/ದವ/ಎ2/ಎಂ.ಟಿ–17/ಅ.ಪ/ಸ.ವಿ/ /2024–25, ದಿನಾಂಕ: 15–03–2025. (2) **ದರಪಟ್ಟಿ ಫಾರಂಗಾಗಿ ಬೇಡಿಕೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ ಹಾಗೂ ಸಮಯ:** 20–03–2025 ರಂದು ಮಧ್ಯಾಹ್ನ 1.30 ಗಂಟೆಯೊಳಗೆ ದರಪಟ್ಟಿ ಫಾರಂ ಶುಲ್ಕ ರೂ. 1000 ಯೊಂದಿಗೆ ಅರ್ಜಿ ಸಲ್ಲಿಸಬೇಕು. (3) **ಖಾಲಿ ದರಪಟ್ಟಿ ಫಾರಂ ವಿತರಿಸಲು ಕೊನೆಯ ದಿನಾಂಕ ಹಾಗೂ ಸಮಯ** : 20–03–2025 ರಂದು ಸಂಜೆ 4.00 ಗಂಟೆಯೊಳಗೆ ಮೇಲಿನಂತೆ ಅರ್ಜಿದಾರರಿಗೆ ಮಾತ್ರ ದರಪಟ್ಟಿ ಫಾರಂ ವಿತರಿಸಲಾಗುವುದು. (4) **ಅಂದಾಜು ಮೊತ್ತ :** ರೂ. 5 ಲಕ್ಷ (ಐದು ಲಕ್ಷ ರೂಪಾಯಿಗಳು ಮಾತ್ರ). (5) **ಇ.ಎಂ.ಡಿ. ಮೊತ್ತ :** ರೂ. 10,000/– (ರೂಪಾಯಿ ಹತ್ತು ಸಾವಿರ ಮಾತ್ರ) ಗಳನ್ನು ದಿನಾಂಕ: 21–03–2025 ಸಂಜೆ 4.00 ಗಂಟೆಯೊಳಗೆ ಈ ಕಛೇರಿಯಲ್ಲಿ ಪಾವತಿ ಮಾಡಿ ರಶೀದಿ ಪಡೆದು ರಶೀದಿಯನ್ನು ದರಪಟ್ಟಿಗೆ ಫಾರಂನೊಂದಿಗೆ ಲಗತ್ತಿಸತಕ್ಕದ್ದು. (6) **ಭರ್ತಿ ಮಾಡಿದದರಪಟ್ಟಿ ಫಾರಂ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸಮಯ :** ದಿನಾಂಕ: 24–03–2025ರಂದು ಮಧ್ಯಾಹ್ನ 1.00 ಗಂಟೆಯೊಳಗೆ ಹಾಗೂ ಅದೇ ದಿನ ಸಂಜೆ 2.30 ಗಂಟೆಗೆ ಹಾಜರಿದ್ದ ದರಪಟ್ಟಿದಾರರ ಸಮಕ್ಷಮದಲ್ಲಿ ತೆರೆಯಲಾಗುವುದು. (7) **ದರಪಟ್ಟಿ ಸ್ವೀಕರಿಸುವ ಅಧಿಕಾರಿ :** ಉಪ ನಿರ್ದೇಶಕರು, ನಗರ ಕೇಂದ್ರ ಗ್ರಂಥಾಲಯ, ದಕ್ಷಿಣ ವಲಯ, ಬಿ.ಟಿ.ಎಂ. 2ನೇ ಹಂತ, ಬೆಂಗಳೂರು–560 076.

ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– (ಸರಸ್ವತಿ ಎನ್.)
ಉಪನಿರ್ದೇಶಕರು
ನಗರ ಕೇಂದ್ರ ಗ್ರಂಥಾಲಯ, ದಕ್ಷಿಣ ವಲಯ, ಬೆಂಗಳೂರು.
DIPR/CP/RO5743/AAPL/2024-25

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧಿಕ್ಷಕ ಅಭಿಯಂತರರು(ವಿ), ಟೆಂಡರಿಂಗ್ & ಪ್ರೊಕ್ಯುರ್‌ಮೆಂಟ್, ನವನಗರ ಪಿ.ಬಿ.ರಸ್ತೆ, ಹುಬ್ಬಳ್ಳಿ–25
ಇ–ಮೇಲ್: seetp.hescom@gmail.com / seetp@hescom.co.in
ದೂ: 0836–2224792 ಫ್ಯಾಕ್ಸ್: 0836–2324307
Corporate Identity Number CIN: U31401KA2002SGC030437
ಸಂಖ್ಯೆ: ಹುವಿಸಕಂನಿ/ಅಇಂ(ಟಿ&ಪಿ)/ಇ–7/ಎಇಇ–1/2024–25/CYS-9636
ದಿನಾಂಕ: 17.03.2025

ಟೆಂಡರ್ ಆಹ್ವಾನಿಸುವ ಅಧಿಸೂಚನೆ

ಅಧೀಕ್ಷಕ ಅಭಿಯಂತರರು (ವಿ), (ಟೆಂಡರಿಂಗ್ & ಪ್ರೊಕ್ಯೂರಮೆಂಟ್), ಹುವಿಸಕಂನಿ, ಹುಬ್ಬಳ್ಳಿ, ಇವರು ಇ. ಪ್ರೊಕ್ಯೂರಮೆಂಟ್ ಕಟ್ಟೆಯಡಿ, ದ್ವಿ–ಪದ್ಧತಿಯಲ್ಲಿ ಈ ಕೆಳಗಿನಂತೆ ಟೆಂಡರ್ ಆಹ್ವಾನಿಸಿರುತ್ತಾರೆ

1	ಉಪಕರಣದ ವಿವರ	ಎರಡು ಜೊತೆ ಸಾಕ್ಸದೊಂದಿಗೆ ಸುರಕ್ಷತಾ ಶೂಗಳು
2	ಇಎಮ್‌ಡಿ ಮೊತ್ತ	ರೂ 1,77,000/–
3	ವಿಚಾರಣೆ ಸಂಖ್ಯೆ	HESCOM/2024-25/ IND0073/CALL-3
4	ವಿಚಾರಣೆ ಪ್ರಕಟಿಸಲಾಗುವ ದಿನಾಂಕ	15.03.2025
5	ತಾಂತ್ರಿಕ ಬಿಡ್‌ನ್ನು ಸಲ್ಲಿಸಲು ಕೊನೆಯ ದಿನಾಂಕ	02.04.2025 4.30 PM
6	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ	03.04.2025 5.00 PM

ಹೆಚ್ಚಿನ ಮಾಹಿತಿಗಾಗಿ kppp.karnataka.gov.in ವೆಬ್‌ಸೈಟನ್ನು ದಿ–15.03.2025 ಅಥವಾ ನಂತರದಲ್ಲಿ ಸಂಪರ್ಕಿಸಬಹುದು.

ಸಹಿ/–
ಅಧೀಕ್ಷಕ ಅಭಿಯಂತರರು (ವಿ), ಟೆಂಡರ್ & ಪ್ರೊಕ್ಯೂರಮೆಂಟ್, ಹುವಿಸಕಂನಿ, ನವನಗರ ಹುಬ್ಬಳ್ಳಿ.
ವಾ.ಸಾ.ಇ./ಧಾರವಾಡ/1099/ಮಣಿಪಾಲ್/2024–25

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ, ಉತ್ತರ ಕನ್ನಡ
ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣ ಅಧಿಕಾರಿಗಳು
ಉತ್ತರ ಕನ್ನಡ – ಕಾರವಾರ.
E-mail: dhoukannada@gmail.com Phone: 08382-226339
ಕ್ರ.ಸಂ:ಅಭಿವೃದ್ಧಿ(1)/15/2024–25 ದಿನಾಂಕ: 13–03–2025

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

2025–26ನೇ ನೇ ಸಾಲಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಉ.ಕ., ಕಾರವಾರ ಅಧೀನದಲ್ಲಿ ಒಳಪಡುವ ಅರೋಗ್ಯ ಸಂಸ್ಥೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಬಾಹ್ಯ ಸಂಪನ್ಮೂಲ ಸಂಸ್ಥೆಯ ಮೂಲಕ ಸಿಬ್ಬಂದಿಗಳನ್ನು ಪೂರೈಸುವ ಕುರಿತು ಇ–ಟೆಂಡರ್ ಆಹ್ವಾನ ಕೆಳಕಾಣಿಸಿದಂತೆ ಅರ್ಹ ಸಂಸ್ಥೆ/ಏಜೆನ್ಸಿಗಳಿಂದ ಈ ಪ್ರೊಕ್ಯೂರಮೆಂಟ್ ಮೂಲಕ ವಾಹನ ಚಾಲಕರು, ಫಾರ್ಮಾಸಿಸ್ಟ್, ಲ್ಯಾಬ್ ಟೆಕ್ನಿಷಿಯನ್, ಡಾಟಾ ಎಂಟ್ರಿ ಆಪರೇಟರ್, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಚೇರಿಗೆ ಲೆಕ್ಕ ಸಹಾಯಕರು, ಆಡಳಿತ ಸಹಾಯಕರು ಮತ್ತು ಆರೋಗ್ಯ ವಿಸ್ತರಣಾ ಕೇಂದ್ರಗಳಿಗೆ ಶುಶ್ರೂಷಕರು ಮತ್ತು ಗ್ರೂಪ್ ಡಿ ಸಿಬ್ಬಂದಿಗಳನ್ನು ಪೂರೈಸಲು ಟೆಂಡರ್ ಆಹ್ವಾನಿಸಲಾಗಿದೆ ಟೆಂಡರ್ ನಮೂನೆಗಳಿಗಾಗಿ ಇ.ಎಂ.ಡಿ ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ www.kppp.karnataka.gov.inನಲ್ಲಿ ನೋಡಬಹುದಾಗಿದೆ.

ಇ– ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ವಿವರಗಳು: (1) ಇ.ಎಂ.ಡಿ ಮೊತ್ತ 2%: ರೂ: 4,78,227/–(2) ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರ್ ಫಾರಂ ಡೌನಲೋಡ್ ಆರಂಭ ದಿನಾಂಕ ದಿನಾಂಕ: 14–03–2025 ಪೂರ್ವಾಹ್ನ 11.00 (3)ಟೆಂಡರ್‌ನಲ್ಲಿ ಅಕ್ಷೇಪಣೆಗಳಿದ್ದಲ್ಲಿ ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ ದಿನಾಂಕ: 02–04–2025 (4) ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ ದಿನಾಂಕ: 14–04–2025 ಸಾಯಂಕಾಲ 5:30 (5)ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ ದಿನಾಂಕ: 16–04–2025 ಸಾಯಂಕಾಲ 5:30 (6) ಟೆಂಡರ್ ಅಂದಾಜು ಮೊತ್ತ : ರೂ. 2,39,00,000/–

ಮೇಲಿನ ದಿನಾಂಕಗಳಂದು ಸಾರ್ವಜನಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಲಾಗುವುದು.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿ
ಉತ್ತರ ಕನ್ನಡ, ಕಾರವಾರ.
DIPR/ADK/KSMCA/997/24-25 dt. 17.03.2025

ಸಾವರ್ಕರ್ VS ಅಂಬೇಡ್ಕರ್

← ಮೊದಲಪುಟದಿಂದ

ಇದಕ್ಕೆ ಆಕ್ಷೇಪವ್ಯಕ್ತಪಡಿಸಿ ಏರು ದನಿಯಲ್ಲಿ ಮಾತನಾಡಿದ ಪ್ರಿಯಾಂಕ್ ಖರ್ಗೆ ಅವರು, '1952ರಲ್ಲಿ ಅಂಬೇಡ್ಕರ್ ಬರೆದ ಪತ್ರದಲ್ಲಿ ನನ್ನನ್ನು ಚುನಾವಣೆಯಲ್ಲಿ ಸೋಲಿಸಿದ್ದು ಸಾವರ್ಕರ್ ಎಂದು ಬರೆದಿದ್ದಾರೆ ಎಂದರು. ಅಲ್ಲದೆ 'ಪತ್ರ ಪ್ರದರ್ಶನ ಮಾಡಿದರೆ ರಾಜೀನಾಮೆ ಕೊಡುತ್ತೀರಾ?' ಎಂದು ಸವಾಲು ಹಾಕಿದರು. ಈ ಸವಾಲು ಸ್ವೀಕಾರ ಮಾಡಿ ಎಂದು ಪ್ರಿಯಾಂಕ್ ಖರ್ಗೆ ಏರು ಧ್ವನಿಯಲ್ಲಿ ಪ್ರಶ್ನಿಸಿದರು. ಪತ್ರದಲ್ಲಿ ಅಂಬೇಡ್ಕರ್ ಕಾಂಗ್ರೆಸ್ ಹೆಸರು ಉಲ್ಲೇಖ ಮಾಡಿಲ್ಲ, ಬದಲಾಗಿ ಸಾವರ್ಕರ್ ಹೆಸರು ಬರೆದಿದ್ದಾರೆ. ಇದನ್ನು ಸಾಬೀತು ಮಾಡುತ್ತೇವೆ ಎಂದರು. ಇದರಿಂದಾಗಿ ಸದನದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ನಡುವೆ ತೀವ್ರ ಮಾತಿನ ಜಟಾಪಟಿಗೆ ಕಾರಣವಾಯಿತು. ಬಿಜೆಪಿ ಸದಸ್ಯರಾದ ಅಶ್ವತ್ಥ ನಾರಾಯಣ, ಅರವಿಂದ ಬೆಲ್ಲದ, ಯತ್ನಾಳ್ ಏರು ಧ್ವನಿಯಲ್ಲಿ ಕಾಂಗ್ರೆಸ್ ಸದಸ್ಯರ ವಿರುದ್ಧ ಟೀಕಾ ಪ್ರಹಾರ ನಡೆಸಿದರು. ಆಡಳಿತ ಪಕ್ಷದಿಂದ ಪ್ರಿಯಾಂಕ್ ಖರ್ಗೆ, ನರೇಂದ್ರ ಸ್ವಾಮಿ ಬಿಜೆಪಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಸವಾಲು, ಆರೋಪ, ಪ್ರತ್ಯಾರೋಪ ಹಾಗೂ ಏರು ಧ್ವನಿಯ ಮಾತಿನ ನಡುವೆ ಕಾಂಗ್ರೆಸ್ ಬಿಜೆಪಿ ಸದಸ್ಯರು ಪರಸ್ಪರ ಘೋಷಣೆ ಕೂಗಿದರು. ಇದಕ್ಕೆ ಸಚಿವರಾದ ಕೆ.ಜೆ.ಜಾರ್ಜ್, ಎಂ.ಬಿ. ಪಾಟೀಲ್, ಎಚ್.ಕೆ.ಪಾಟೀಲ್ ದನಿಗೂಡಿಸಿ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರೇ ಅಂಬೇಡ್ಕರ್ ಅವರನ್ನು ಹಲವು ಸಮಿತಿಗಳಿಗೆ ಅಧ್ಯಕ್ಷರನ್ನಾಗಿ ಮಾಡಿದರು. ಸಚಿವರು ಆದರು. ಆದರೆ, ಅಪಪ್ರಚಾರ ಮಾಡಲಾಗುತ್ತಿದೆ ಎಂದು ತಿರುಗೇಟು ನೀಡಿದರು. ಆಗ ಯತ್ನಾಳ್, ಅಂಬೇಡ್ಕರ್ ಅವರಿಗೆ ಅನ್ಯಾಯ ಮಾಡಲಾಗಿದೆ. ಜವಾಹರಲಾಲ್ ನೆಹರು ಅವರಿಂದಲೇ ಅನ್ಯಾಯವಾಗಿದೆ ಎಂದರು. ಈ ಹಂತದಲ್ಲಿ ಆಡಳಿತಾರೂಢ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ಭಾರೀ ಗದ್ದಲ, ವಾಕ್ಸಮರವೇ ನಡೆಯಿತು.

ರಾಜ್ಯದಲ್ಲಿ ಪ್ರತ್ಯೇಕ ದುರಂತ: ಆರು ಜನರ ದುರ್ಮರಣ

ವಿಜಯಪುರ/ ದಾವಣಗೆರೆ : ರಾಜ್ಯದಲ್ಲಿ ಸೋಮವಾರ ನಡೆದ ಪ್ರತ್ಯೇಕ ದುರಂತದಲ್ಲಿ ಆರು ಜನರು ಸಾವನ್ನಪ್ಪಿದ್ದಾರೆ. ವಿಜಯಪುರ ದಲ್ಲಿ ಭೀಕರ ರಸ್ತೆ ಅಪಘಾತದಲ್ಲಿ ಮೂವರು ಮೃತಪಟ್ಟರೆ, ದಾವಣಗೆರೆ ಜಿಲ್ಲೆಯಲ್ಲಿ ಬಟ್ಟೆ ತೊಳೆಯಲು ಹೋದ ಮೂವರು ಯುವತಿಯರು ನೀರುಪಾಲಾಗಿದ್ದಾರೆ.

ವಿಜಯಪುರ ಬಳಿಯ ಹೆಗ್ಗಡಿಹಾಳ ಕ್ರಾಸ್ ಬಳಿ ಸೋಮವಾರ ವೇಗದಿಂದ ಚಲಿಸಿದ ಕಾರು ಚಾಲಕನ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಮೂವರು ದುರ್ಮರಣಕ್ಕೀಡಾಗಿ, ಒಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಘಟನೆಯಲ್ಲಿ ಉತ್ನಾಳ ಗ್ರಾಮದ ಬೀರಪ್ಪ ಗೋಡೆಕರ್(30), ಹನುಮಂತ ಕಡ್ಲಿಮಟ್ಟಿ (25) ಹಾಗೂ ಜುಮನಾಳ ಗ್ರಾಮದ ಯಮನಪ್ಪ ನಾಟಿಕಾರ (28) ಮೃತಪಟ್ಟಿದ್ದಾರೆ. . ಜುಮನಾಳದ ಉಮೇಶ ಭಜಂತ್ರಿ ಗಂಭೀರ ಗಾಯ ಗೊಂಡಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಗ್ರಾಮೀಣ ಪೊಲೀಸ್ ಠಾಣೆ ಮೂಲಗಳು ಮಾಹಿತಿ ನೀಡಿವೆ.

ಚನ್ನಗಿರಿ: ಮೂವರು ಕೆರೆ ಪಾಲು

ಬಟ್ಟೆ ತೊಳೆಯಲು ಹೋಗಿದ್ದ ಅಕ್ಕ–ತಂಗಿ ಸೇರಿ ಮೂವರು ಮಹಿಳೆಯರು ಕೆರೆಯಲ್ಲಿ ಮುಳುಗಿ ಸಾವನ್ನಪ್ಪಿದ ದಾರುಣ ಘಟನೆ ಸೋಮವಾರ ದಾವಣಗೆರೆ ಜಿಲ್ಲೆ ಚನ್ನಗಿರಿ ಬಳಿ ಸಂಭವಿಸಿದೆ. ಚನ್ನಗಿರಿಗೆ ಹೊಂದಿಕೊಂಡಿರುವ ಲಕ್ಷ್ಮೀಸಾಗರ–ದಿಗ್ಗೇನಹಳ್ಳಿ ಗ್ರಾಮಗಳ ಮಧ್ಯೆ ಇರುವ ಹೊಸಕೆರೆಯಲ್ಲಿ ಬಟ್ಟೆ ತೊಳೆಯಲು ಹೋಗಿದ್ದ ದೀಪಾರಾಣಿ(27), ದಿವ್ಯಾ(24) ಮತ್ತು ಚಂದನಾ(18) ಮೃತಪಟ್ಟಿದ್ದಾರೆ. ಮೃತಪಟ್ಟಿರುವ ದಿವ್ಯಾ ಮತ್ತು ಚಂದನಾ ಸಹೋದರಿಯರು. ದೀಪಾರಾಣಿ ನೆರೆಹೊರೆಯಲ್ಲಿದ್ದವರು. ಮಧ್ಯಾಹ್ನದ ವೇಳೆಯಲ್ಲಿ ದೀಪಾರಾಣಿ, ದಿವ್ಯಾ ಮತ್ತು ಚಂದನಾ ಬಟ್ಟೆ ತೊಳೆಯುವಾಗ ಚಂದನಾ ಈಜಲು ಕೆರೆಗೆ ಇಳಿದಿದ್ದಾಳೆ. ಆದರೆ ಕೆಸರಿನಲ್ಲಿ ಸಿಲುಕಿದ ಚಂದನಾಳನ್ನು ಕಾಪಾಡಲು ನೀರಿಗೆ ಇಳಿದ ಅಕ್ಕ ದಿವ್ಯಾ ಕೆಸರಿನಲ್ಲಿ ಸಿಲುಕಿ ಮುಳುಗಿದರು. ಈ ಇಬ್ಬರನ್ನು ರಕ್ಷಿಸಲು ಮುಂದಾದ ದೀಪಾರಾಣಿ ಸಹ ಮುಳುಗಿ ಮೃತಪಟ್ಟಿದ್ದಾಳೆ ಚನ್ನಗಿರಿ ಅಗ್ನಿಶಾಮಕ ದಳದ ಕುಮಾರ್ ಮತ್ತು ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಮೂವರ ಶವಗಳನ್ನು ಮೇಲೆಕ್ಕೆ ಎತ್ತಿದ್ದಾರೆ.

ಮಂಗನ ಕಾಯಿಲೆ: ಮಹಿಳೆ ಬಲಿ

ಚಿಕ್ಕಮಗಳೂರು: ಮಂಗನ ಕಾಯಿಲೆಯಿಂದಾಗಿ ಚಿಕ್ಕಮಗಳೂರಿನಲ್ಲಿ 65 ವರ್ಷದ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ. ಎನ್.ಆರ್.ಪುರ ತಾಲೂಕಿನ ಕಟ್ಟಿನಮನೆಯ ಕಮಲಾ ಮೃತ ದುರ್ದೈವಿ. ಮೇಲ್ಪಾಲ್ ಗ್ರಾಮದ ಕಾಫಿತೋಟ ದಲ್ಲಿ ಕೆಲಸ ಮಾಡುತ್ತಿದ್ದ ಕಮಲಾ, ಮಂಗನ ಕಾಯಿಲೆಯಿಂದ ಬಳಲಿ ಕೊಪ್ಪ ಸರಕಾರಿ ಆಸ್ಪತ್ರೆಗೆ ದಾಖಲಾಗಿದ್ದರು.

ವಿಷ ಆಹಾರ ಪ್ರಕರಣ: ಆರು ಮಂದಿ ವಿರುದ್ಧ ಎಫ್‌ಐಆರ್

ಮಂಡ್ಯ: ಮಳವಳ್ಳಿ ಖಾಸಗಿ ಶಾಲೆಯಲ್ಲಿ ವಿಷಾಹಾರ ಪ್ರಕರಣ ಸಂಬಂಧ ಹೋಳಿಹಬ್ಬದ ಆಯೋಜಕರು, ಆಹಾರ ತಯಾರಕರು ಹಾಗೂ ಶಾಲೆಯ ಮುಖ್ಯಸ್ಥರು ಸೇರಿದಂತೆ 6 ಮಂದಿಯ ವಿರುದ್ಧ ಪೊಲೀಸರು ಎಫ್ ಐಆರ್ ದಾಖಲಿಸಿದ್ದಾರೆ.

ಮಳವಳ್ಳಿಯ ಮದನ್‌ಲಾಲ್ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ಪುಷ್ಪೇಂದ್ರ, ಕುಮಾರ್ ಏರ್ಪಡಿಸಿದ್ದ ಹೋಳಿಹಬ್ಬ ಆಚರಣೆ ವೇಳೆ, ಸಿದ್ದರಾಜು ಎಂಬವರ ಹೋಟೆಲ್‌ನಿಂದ ವೆಜಿಟಬಲ್ ಪಲಾವ್ ಮಾಡಿಸಲಾಗಿತ್ತು. ಎಲ್ಲರ ಭೋಜನ ಮುಗಿದ ನಂತರ ಉಳಿದ ಆಹಾರವನ್ನು ಕಾಗೇಪುರದ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಿಗೆ ನೀಡಲಾಗಿತ್ತು. ಆದರೆ ಪಲಾವ್ ತಿಂದ 29 ವಿದ್ಯಾರ್ಥಿಗಳು ಅಸ್ವಸ್ಥ ಗೊಂಡಿದ್ದು, ಒಬ್ಬ ಸಾವನ್ನಪ್ಪಿದ್ದಾನೆ.

ಅಲ್ಲದೆ, ಹೋಳಿಯಲ್ಲಿ ಭಾಗಿಯಾದ 30ಕ್ಕೂ ಹೆಚ್ಚು ಜನರು ಅಸ್ವಸ್ಥಗೊಂಡಿದ್ದರು. ಈ ಪ್ರಕರಣ ಸಂಬಂಧ ಹೋಳಿ ಆಯೋಜಕ ಪುಷ್ಪೇಂದ್ರ, ಹೋಟೆಲ್ ಮಾಲೀಕ ಸಿದ್ದರಾಜು, ಕಲ್ಯಾಣ ಮಂಟಪ ಸಿಬ್ಬಂದಿ ಕೃಷ್ಣ, ಗೋಕುಲ ವಿದ್ಯಾ ಸಂಸ್ಥೆ ಮುಖ್ಯಸ್ಥ ಲಂಕೇಶ್, ಕಾರ್ಯದರ್ಶಿ ಜಗದೀಶ್, ಕೆಲಸಗಾರ ಅಭಿಷೇಕ್ ಮೇಲೆ ಬಿಇಓ ಉಮಾ ದೂರಿನ ಮೇರೆಗೆ ಎಫ್‌ಐಆರ್ ಹಾಕಲಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020
ಬೆಂಅಪ್ರಾ/ನಯೋಸ/CLU–343/3361/2024–25 ದಿನಾಂಕ: 17.03.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ** ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರು ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಪರಿಷ್ಕೃತ ಮಹಾಯೋಜನೆ–2015 ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ. ನರಸಮ್ಮ ಶ್ರೀ. ಸಂಪಂಗಿ ರಾಮರೆಡ್ಡಿ ಮತ್ತು ಶ್ರೀ. ನಾಗರಾಜ ವಿ ಬಿನ್ ವೆಂಕಟಪ್ಪ ರೆಡ್ಡಿ	ಅನೇಕಲ್	ಜಿಗಣಿ	ಹುಲ್ಲಹಳ್ಳಿ	43/2 43/3 45	1–10 1–25 3–33	ವ್ಯವಸಾಯ ವಲಯ	ವಸತಿ
					ಒಟ್ಟು	6–28		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾವನಗಳು, ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಜಮೀನುಗಳನ್ನು **'ವ್ಯವಸಾಯ ವಲಯ' ದಿಂದ 'ವಸತಿ ವಲಯ'** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
#55, ರಿಸಲ್ದಾರ್ ಸ್ಟ್ರೀಟ್, ಶೇಷಾದ್ರಿಪುರಂ, ಬೆಂಗಳೂರು–560020.
ಫೋ: 080–23460085, 23468949, 23462436, 23563506 ಫ್ಯಾಕ್ಸ್: 23567060
E-mali: ksdb.ho@gmail.com, kscb_blr@rediffmail.com, Web:http://karnataka.gov.in/ksdb
KSDB/EE/No.1.div/S.T/PB/IFT-11/2024–25/1094 ದಿನಾಂಕ:13.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ)

ಕಾರ್ಯಪಾಲಕ ಅಭಿಯಂತರರು, ನಂ. 1ನೇ ವಿಭಾಗ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು ರವರ ಕಚೇರಿಯಿಂದ "Supplying and fixing of Energy Meter To Houses, Submersible Pumps and Street lights for JNNURM-BSUP 1441 Housing project in Ragigudda Slum, Jayanagara Constituency, Bangalore". ಸದರಿ ಕಾಮಗಾರಿಗೆ KW-4 ನಂತೆ ಕಾಮಗಾರಿಯ ಅಂದಾಜು **ಮೊತ್ತ ರೂ. 199.50/– ಲಕ್ಷಗಳು. ಟೆಂಡರ್‌ಗಿಟ್ಟ ಮೊತ್ತ ರೂ. 109.11 ಲಕ್ಷಗಳು (ಜಿಎಸ್‌ಟಿ ಹೊರತುಪಡಿಸಿ). ಇಎಂಡಿ ಮೊತ್ತ 1,63,700.00/– ರೂಗಳು** ಮತ್ತು "Supplying and fixing of Energy Meter To Houses, Submersible Pumps and Street lights for JNNURM-BSUP 432 Housing project in Rajeshwarinagara slum, Jayanagara Constituency Bangalore" ಸದರಿ ಕಾಮಗಾರಿಗೆ KW-2 ನಂತೆ ಕಾಮಗಾರಿಯ ಅಂದಾಜು **ಮೊತ್ತ ರೂ. 57.03 ಲಕ್ಷಗಳು. ಟೆಂಡರ್‌ಗಿಟ್ಟ ಮೊತ್ತ ರೂ. 31.21 ಲಕ್ಷಗಳು (ಜಿಎಸ್‌ಟಿ ಹೊರತುಪಡಿಸಿ) ಇಎಂಡಿ ಮೊತ್ತ ರೂ. 62,450.00/– ರೂಗಳು.** ಸದರಿ ಕಾಮಗಾರಿಗಳಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಕೆ.ಪಿ.ಪಿ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದ್ದು, ಕಾಮಗಾರಿಗೆ ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ: 21.03.2025 ಸಂಜೆ 4.00 ಗಂಟೆಗಳು,** ಪ್ರಿ–ಬಿಡ್ ಮೀಟಿಂಗ್ **ದಿನಾಂಕ: 18.03.2025** ಆಸಕ್ತಿಯುಳ್ಳ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಟೆಂಡರ್ ವ್ಯತ್ಯಾಸದ ಮೊತ್ತ (ಡಿಡಿ) ಸಲ್ಲಿಸಲು ಕೊನೆಯ **ದಿನಾಂಕ: 24.03.2025 ಸಂಜೆ 4.00 ಗಂಟೆಗಳು** ಹಾಗೂ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 25.03.2025 ಬೆಳಗ್ಗೆ 11.00 ಗಂಟೆಗಳು** ಹಾಗೂ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 26.03.2025 ಸಂಜೆ 4.00 ಗಂಟೆಯೊಳಗೆ https://www.kppp.karnataka.gov.in** ರಲ್ಲಿ ವೀಕ್ಷಿಬಹುದಾಗಿರುತ್ತದೆ. ಹಾಗೂ ಕಚೇರಿ ಸಮಯದಲ್ಲಿ ನಂ.1ನೇ ವಿಭಾಗ, ಕಕೊಅಮ, ಬೆಂಗಳೂರು ಕಚೇರಿಗೆ ಭೇಟಿ ನೀಡಿ ಹೆಚ್ಚಿನ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು, ನಂ.1ನೇ ವಿಭಾಗ, ಕ.ಕೊ.ಅ.ಮ, ಬೆಂಗಳೂರು.
ವಾಸಸಂಇ/ಸಿಪಿ/ಎಎಪಿ/5735/2024–25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ
ಟೆಂಡರ್ ಪ್ರಕಟಣೆ ಸಂಖ್ಯೆ : 44/2024–25/3891–95 ದಿನಾಂಕ: 15–03–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4ರನ್ವಯ ದ್ವಿಲಕೋಟೆ ಪದ್ಧತಿಯಲ್ಲಿ ಲೋಕೋಪಯೋಗಿ ಇಲಾಖೆಯ ಕೊಡಗು ವಿಭಾಗದ ವ್ಯಾಪ್ತಿಯಲ್ಲಿನ ಕಾಮಗಾರಿಗಳನ್ನು ಲೆಕ್ಕಶೀರ್ಷಿಕೆ: 5054–ರಾಜ್ಯ ಹೆದ್ದಾರಿ ಸೇತುವೆಗಳ–ಸುಧಾರಣೆಯಡಿಯ 1 ಕಾಮಗಾರಿಗೆ (ಇಂಡೆಂಟ್ ಸಂಖ್ಯೆ: 20287) ಇ–ಸಂಗ್ರಹಣಾ ವೇದಿಕೆ ಮೂಲಕ 1ನೇ ಕರೆ ಟೆಂಡರ್ ಆಹ್ವಾನಿಸಲಾಗಿದ್ದು, ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ ರೂ. 274.85 ಲಕ್ಷಗಳಾಗಿರುತ್ತದೆ. ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ರಾಜ್ಯ ಸರ್ಕಾರದ ಇ–ಸಂಗ್ರಹಣಾ ವೇದಿಕೆ ಮುಖಾಂತರ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 01–04–2025 ಸಂಜೆ 5.00 ಗಂಟೆಯಾಗಿರುತ್ತದೆ. ಟೆಂಡರ್ ಸಂಪೂರ್ಣ ವಿವರಗಳನ್ನು ಇ–ಸಂಗ್ರಹಣಾ ವೇದಿಕೆ https://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಇ–ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/–
ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಕೊಡಗು ವಿಭಾಗ, ಮಡಿಕೇರಿ.

ಬಾಲಕಿ ಆತ್ಮಹತ್ಯೆ

ಬೆಳಗಾವಿ: ಅಪ್ರಾಪ್ತ ವಯಸ್ಸಿನ ಬಾಲಕಿಗೆ ಯುವಕನೊಬ್ಬ ಪ್ರೀತಿಸುವಂತೆ ಕಿರುಕುಳ ನೀಡಿದ್ದಕ್ಕೆ ಬಾಲಕಿ ಮನನೊಂದು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ಗೋಕಾಕ್ ತಾಲೂಕಿನ ಘಟಪ್ರಭಾ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಕಳೆದ ಕೆಲ ದಿನಗಳಿಂದ ಆರೋಪಿ ಸಿದ್ದಲಿಂಗ ಪೂಜೇರಿ ಎಂಬಾತ ಬಾಲಕಿಯ ಹಿಂದೆ ಬಿದ್ದು ಪ್ರೀತಿ ಮಾಡುವಂತೆ ಪೀಡಿಸುತ್ತಿದ್ದ ಎನ್ನಲಾಗಿದೆ. ಆತನ ಕಾಟ ತಾಳಲಾರದೆ ಬಾಲಕಿ ಮನೆಯಲ್ಲಿ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾಳೆ. ಬಾಲಕಿಯನ್ನು ಬೆಳಗಾವಿಯ ಬಿಮ್ಸ್ ಆಸ್ಪತ್ರೆಗೆ ದಾಖಲಿಸಲಾಯಿತು. ಬಾಲಕಿ ಚಿಕಿತ್ಸೆ ಫಲಕಾರಿಯಾಗದೆ ಸೋಮವಾರ ಬೆಳಗಿನ ಜಾವ ಮೃತಪಟ್ಟಿದ್ದಾಳೆ.

‘ಎಸ್‌ಸಿಪಿ-ಟಿಎಸ್‌ಪಿ ಕಾಯಿದೆ ತಂದಿದ್ದು ನೀವೇ ಅದರ ಶ್ರೇಯ ನಿಮಗೆ (ಸಿದ್ದರಾಮಯ್ಯ) ಸಲ್ಲಬೇಕು. ಆದರೆ, ಪರಿಷತ್‌ನಲ್ಲಿ ನಿಮ್ಮದೇ ಸಚಿವರು ಉತ್ತರಿಸುವಾಗ ಕಾಯಿದೆಯ ಹಣ ಶಕ್ತಿ ಯೋಜನೆ ಹಾಗೂ ಗೃಹಜ್ಯೋತಿ ಯೋಜನೆಗೆ ಬಳಕೆ ಮಾಡಿರುವುದಾಗಿ ಹೇಳಿದ್ದೀರಿ. 7-ಸಿ ಅಡಿ ನಾಲ್ಕು ಇಲಾಖೆಗಳ ಫಲಾನುಭವಿಗಳಿಗೆ ವಿನಿಯೋಗಿಸಲು ಮಾತ್ರ ಅವಕಾಶವಿದೆ.

– ಸುನೀಲ್‌ಕುಮಾರ್, ಶಾಸಕ

‘ಒಟ್ಟು ಜನಸಂಖ್ಯೆಯಲ್ಲಿನ ಎಸ್‌ಸಿ-ಎಸ್‌ಟಿ ಪ್ರಮಾಣದ ಮೇರೆಗೆ ಹಣ ವಿನಿಯೋಗ ಆಗಿರುತ್ತದೆ. ಇದರಲ್ಲಿ ವಿನಾಕಾರಣ ಗೊಂದಲ ಸೃಷ್ಟಿಸುವ ಅಗತ್ಯವಿಲ್ಲ. ನಾವು ಈ ಹಣ ದಲಿತರಿಗೆ ಹೊರತಾಗಿ ಬೇರೆ ಯಾವ ಉದ್ದೇಶಕ್ಕೂ ಬಳಸಿಲ್ಲ. ಯೋಜನೆಗೆ ಈ ಹಣ ನೀಡಲು ಅವಕಾಶ ಇದೆ ಎಂದು ಸಮರ್ಥಿಸಿದರು. ಇದಕ್ಕೆ ಬಿಜೆಪಿ ಸದಸ್ಯರು, ಹಾಗಾದರೆ ಹಣ ವರ್ಗಾವಣೆ ಮಾಡಿರುವುದು ಒಪ್ಪಿದಂತಾಯಿತಲ್ಲ?

– ಎಚ್.ಸಿ. ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ

ಸಮಾಚಾರ ಸಣ್ಣದಲ್ಲ

ವಿವಾದ ಎಬ್ಬಿಸಿದ ಸ್ಪೀಕರ್ ಹೇಳಿಕೆ

ವಿಧಾನಸಭೆ: ವಿಧಾನಸಭೆಯಲ್ಲಿ ಪರಿಶಿಷ್ಟ ಜಾತಿ-ಪಂಗಡದ ಮೀಸಲು ಅನುದಾನಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ ನೀಡುವಾಗ ಗಲಾಟೆ ಶುರುವಾಯಿತು. ಈ ವೇಳೆ ಬಿಜೆಪಿ ಸದಸ್ಯರನ್ನು ಕೂರಿಸಲು ‘ಸುಮ್ಮನೆ ಕೂರದಿದ್ದರೆ ಎತ್ತಿ ಬಿಸಾಕುತ್ತೇನೆ’ ಎಂದು ಗರಂ ಆದರು. ಆದರೆ ಖಾದರ್ ಅವರ ಈ ಹೇಳಿಕೆಯನ್ನು ಖಂಡಿಸಿ ಬಿಜೆಪಿ ಶಾಸಕರು ವಾಗ್ವಾಳಿ ನಡೆಸಿದ್ದು ಮಾತ್ರವಲ್ಲದೇ, ಕ್ಷಮೆ ಕೇಳಬೇಕೆಂದು ಆಗ್ರಹಿಸಿದರು.ಈ ವೇಳೆ ಮಾತನಾಡಿದ ಹರೀಶ್ ಪೂಂಜಾ, ಅಂಬೇಡ್ಕರ್ ಬಗ್ಗೆ ಮಾತನಾಡಿದ್ದಕ್ಕೆ ಹೊರಹಾಕುತ್ತೇನೆ ಎಂದು ಸ್ಪೀಕರ್ ಹೇಳಿದ್ದಾರೆ. ಅಂಬೇಡ್ಕರ್ ಬಗ್ಗೆ ಮಾತನಾಡುವುದು ತಪ್ಪೇ? ನಾವೇನು ಇಲ್ಲಿ ಬಿಟ್ಟಿ ಬಂದಿದ್ದೇವಾ? ಎಂದು ಪ್ರಶ್ನಿಸಿದರು. ಈ ವೇಳೆ ಪೂಂಜಾ ಸಹಾಯಕ್ಕೆ ಬಿಜೆಪಿಯ ಹಲವು ಶಾಸಕರು ಬಂದರು. ಈ ವೇಳೆ ಪ್ರತಿಪಕ್ಷ ನಾಯಕ ಅಶೋಕ್ ಎದ್ದುನಿಂತು, ಖಾದರ್ ಅವರು ಹೇಳಿರುವ ಮಾತನ್ನು ಕಡತದಿಂದ ತೆಗೆಯಬೇಕು ಎಂದು ಮನವಿ ಮಾಡಿದರು. ಅದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಖಾದರ್, ಪರಿಶೀಲಿಸಿ ತೆಗೆಸುತ್ತೇನೆ. ಈ ಬಗ್ಗೆ ಗೊಂದಲ ಬೇಡ ಎಂದು ಪರಿಸ್ಥಿತಿಯನ್ನು ತಿಳಿಗೊಳಿಸಿದರು.

7 ಗಂಟೆ ರೈತರಿಗೆ ವಿದ್ಯುತ್ ಪೂರೈಕೆ

ವಿಧಾನ ಪರಿಷತ್: ರಾಜ್ಯದಲ್ಲಿ ವಿದ್ಯುತ್ ಕೊರತೆ ಇದ್ದರೂ 7 ಗಂಟೆ ರೈತರಿಗೆ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು. ಕಾಂಗ್ರೆಸ್ ಸದಸ್ಯ ಬಸನಗೌಡ ಬಾದರ್ಲಿ ಪರವಾಗಿ ಡಿ.ಟಿ.ಶ್ರೀನಿವಾಸ್ ಕೇಳಿದ ಪ್ರಶ್ನೆಗೆ ಅವರು ಉತ್ತರಿಸಿದರು. ಕರ್ನಾಟಕದಲ್ಲಿ ವಿದ್ಯುತ್ ಕೊರತೆ ಇದೆ. ಸದ್ಯ ಕರ್ನಾಟಕದಲ್ಲಿ 19 ಸಾವಿರ ಮೆಗಾವ್ಯಾಟ್ ವಿದ್ಯುತ್ ಬೇಡಿಕೆ ಇದೆ. ಬೇಡಿಕೆಗೆ ತಕ್ಕಂತೆ ಪೂರೈಕೆಯಾಗುತ್ತಿದೆ. 7 ಗಂಟೆ ವಿದ್ಯುತ್ ನಿರಂತರವಾಗಿ ಕೊಡಲು ಆಗದಿದ್ದರೂ ಒಮ್ಮೆ 4 ಗಂಟೆ, ಮತ್ತೊಮ್ಮೆ 3 ಗಂಟೆ ವಿದ್ಯುತ್ ಕೊಡುತ್ತಿದ್ದೇವೆ. ಬೇಡಿಕೆ ಹಿನ್ನೆಲೆಯಲ್ಲಿ ಈ ಬಾರಿ 56 ಉಪಕೇಂದ್ರಗಳನ್ನು ಪ್ರಾರಂಭಿಸಿದ್ದೇವೆ. ಮುಂದಿನ ವರ್ಷ 100 ಸಬ್‌ಸ್ಟೇಷನ್ ಪ್ರಾರಂಭಕ್ಕೆ ನಿರ್ಧರಿಸಲಾಗಿದೆ. ರಾಯಚೂರು, ಕಲಬುರಗಿ ಭಾಗದಲ್ಲಿ ಬೆಳಗ್ಗೆ ಹೊತ್ತು ವಿದ್ಯುತ್ ಕೊಡಲು ನಮಗೆ ಸಮಸ್ಯೆ ಇಲ್ಲ. ಬೆಳಗ್ಗೆ ಮತ್ತು ಸಂಜೆ ನಮಗೆ ಸಮಸ್ಯೆ ಇದೆ. ಇದಕ್ಕಾಗಿ ಕರೆಂಟ್ ಪಂಪ್ ಸ್ಟೋರೇಜ್ ಮಾಡುವ ವ್ಯವಸ್ಥೆ ಮಾಡುತ್ತಿದ್ದೇವೆ. ಬ್ಯಾಟರಿ ಸ್ಟೋರೇಜ್ ವ್ಯವಸ್ಥೆ ಕೂಡಾ ಮಾಡುತ್ತಿದ್ದೇವೆ ಎಂದು ಹೇಳಿದರು.

ಕನ್ನಡ ಉಳಿಸುವ ಶಾಲೆಗಳಿಗೆ ಅನುದಾನ

ವಿಧಾನ ಪರಿಷತ್: ಕನ್ನಡ ಉಳಿಸಲು ಕನ್ನಡ ಮಾಧ್ಯಮ ನಡೆಸುತ್ತಿರುವ ಖಾಸಗಿ ಶಾಲೆಗಳಿಗೆ ಸರಕಾರ ಅನುದಾನ ನೀಡಬೇಕು ಎಂದು ಕಾಂಗ್ರೆಸ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಸರಕಾರಕ್ಕೆ ಒತ್ತಾಯಿಸಿದ್ದಾರೆ. ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಅವರು, ಇಂದು ಕನ್ನಡ ಶಾಲೆಗಳನ್ನು ನಡೆಸುವುದು ಬಹಳ ಕಷ್ಟ. ಅನೇಕ ಖಾಸಗಿ ಕನ್ನಡ ಮಾಧ್ಯಮ ಶಾಲೆಗಳು ಕಷ್ಟದಲ್ಲಿವೆ. ಸರಕಾರ ಕನ್ನಡ ಶಾಲೆಗಳನ್ನು ಉಳಿಸಬೇಕು. ಕನ್ನಡ ಉಳಿವಿಗಾಗಿ ಕನ್ನಡ ಶಾಲೆ ನಡೆಸುತ್ತಿರೋ ಎಲ್ಲಾ ಖಾಸಗಿ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಬೇಕು. ಕನ್ನಡ ಮಾಧ್ಯಮ ಶಾಲೆಗಳಿಗೆ ಅನುದಾನ ಕೊಡಬೇಕು ಎಂದು ಮನವಿ ಮಾಡಿದ್ದಾರೆ. ಇದಕ್ಕೆ ಸಚಿವ ಮಧು ಬಂಗಾರಪ್ಪ ಉತ್ತರಿಸಿ, ಸರಕಾರದಿಂದ ಕನ್ನಡ ಮಾಧ್ಯಮ ಶಾಲೆಗಳಿಗೆ ಹೆಚ್ಚು ಸಹಕಾರ ಕೊಡುತ್ತಿದ್ದೇವೆ. 1994-95 ಪೂರ್ವದ ಅವಧಿಯಲ್ಲಿ ಶಾಲೆಗಳಿಗೆ ಅನುದಾನ ನೀಡುವ ಕೆಲಸ ಸರಕಾರ ಮಾಡುತ್ತಿದೆ. ಕನ್ನಡ ಕಲಿಸುವ ಕನ್ನಡ ಮಾಧ್ಯಮ ಶಾಲೆಗಳಿಗೆ ಅನುದಾನ ಕೊಡುವ ಬಗ್ಗೆ ಸಿಎಂ ಸಲಹೆ ಪಡೆದು ಮುಂದಿನ ತೀರ್ಮಾನ ಮಾಡುತ್ತೇವೆ ಎಂದರು.

ಆಹಾರ ಸುರಕ್ಷತಾ ಪ್ರಾಧಿಕಾರ ಹುದ್ದೆ ಭರ್ತಿ

ವಿಧಾನ ಪರಿಷತ್: ನೇರ ನೇಮಕಾತಿ ಮೂಲಕ ಆಹಾರ ಸುರಕ್ಷತಾ ಪ್ರಾಧಿಕಾರಕ್ಕೆ 170 ಹುದ್ದೆಗಳಿಗೆ ಮಂಜೂರಾತಿ ಕೋರಿ ಹಣಕಾಸು ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಮೇಲ್ಮನೆ ಪ್ರಶ್ನೋತ್ತರ ಕಲಾಪದ ವೇಳೆ ಜೆಡಿಎಸ್‌ನ ಟಿ.ಎ.ಶರವಣ ಅವರಿಗೆ ಉತ್ತರಿಸಿದ ಸಚಿವರು, ಆಹಾರ ಸುರಕ್ಷತಾ ಪ್ರಾಧಿಕಾರದಲ್ಲಿ 2017ರಲ್ಲಿ 382 ಹುದ್ದೆ ಸೃಷ್ಟಿಸಲಾಗಿದೆ. ಹಾಲಿ ಆರೋಗ್ಯ ಇಲಾಖೆಯಿಂದ 130 ಅಧಿಕಾರಿಗಳು ಎರವಲು ಮೇರೆಗೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಎರವಲು ಮಾಡಿದ್ದ 27 ತಜ್ಞ ವೈದ್ಯರ ಪೈಕಿ 18 ಮಂದಿ ಎರವಲು ಸೇವೆ ರದ್ದುಗೊಳಿಸಿ ಆದೇಶಿಸಲಾಗಿದೆ ಎಂದರು. ಇದನ್ನು ಕೆಲವರು ಪ್ರಶ್ನಿಸಿ ಕೆಎಟಿಯಿಂದ ತಡೆಯಾಜ್ಞೆ ತಂದಿದ್ದಾರೆ. ಈ ಬಗ್ಗೆ ಸರಕಾರ ಕಾರ್ಯಪ್ರವೃತ್ತರಾಗಿದ್ದು,ತಡೆಯಾಜ್ಞೆ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಆಹಾರ ಸುರಕ್ಷತಾ ಪ್ರಾಧಿಕಾರಕ್ಕೆ ನೇರ ನೇಮಕಾತಿ ಮೂಲಕ 170 ಹುದ್ದೆಗಳ ನೇಮಕಾತಿ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ಅನುದಾನವಿಲ್ಲದಿದ್ದರೂ ಮಂಜೂರು ಮಾಡಿದ್ದು ಏಕೆ | ಸಿಎಂ ಕೋಟಾದಲ್ಲಿ 1.10 ಲಕ್ಷ ಕೋಟಿ ಯೋಜನೆ ಮಂಜೂರು

ರಾಜ್ಯದ ಇಂದಿನ ಸಮಸ್ಯೆಗೆ ಬಿಜೆಪಿ ಕಾರಣ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಕರ್ನಾಟಕದ ಇಂದಿನ ಸಮಸ್ಯೆಗೆ ಈ ಹಿಂದಿನ ಬಿಜೆಪಿ ಸರಕಾರವೇ ಕಾರಣ. ಅನುದಾನದ ಲಭ್ಯತೆ ಇಲ್ಲದಿದ್ದರೂ ಕಾಮಗಾರಿಗಳನ್ನು ಮಂಜೂರು ಮಾಡಿರುವುದೇ ಇಂದಿನ ಸಮಸ್ಯೆಗೆ ಕಾರಣವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ರಾಜ್ಯಪಾಲರ ಮೇಲಿನ ಚರ್ಚೆಗೆ ವಿಧಾನಸಭೆಯಲ್ಲಿ ಸೋಮವಾರ ಸುದೀರ್ಘ ಉತ್ತರ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸರಕಾರ ಅಭಿವೃದ್ಧಿ ಪರವಾಗಿದೆ. ಕೇಂದ್ರದಲ್ಲಿರುವ ಬಿಜೆಪಿ ಸರಕಾರದ ಅಸಹಕಾರದ ನಡುವೆಯೂ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸದೇ, ಅಭಿವೃದ್ಧಿ ಪರ ಆಡಳಿತವನ್ನು ನೀಡುತ್ತಿದೆ ಎಂದು ಸಮರ್ಥಿಸಿಕೊಂಡರು. ಈ ವೇಳೆ ಬಿಜೆಪಿ-ಕಾಂಗ್ರೆಸ್ ಶಾಸಕರ ನಡುವೆ ವಾಕ್ಸಮರ, ಗದ್ದಲ ಗಲಾಟೆ, ಸಭಾತ್ಯಾಗದ ನಡುವೆಯೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸುದೀರ್ಘ ಉತ್ತರವನ್ನು ಮಂಡಿಸಿದರು.

ಈ ಹಿಂದಿನ ಬಿಜೆಪಿ ಸರಕಾರದ ಅವಧಿಯಲ್ಲಿ ಅನುದಾನದ ಲಭ್ಯತೆ ಇಲ್ಲದಿದ್ದರೂ ಕೋಟ್ಯಂತರ ರುಪಾಯಿ ಮೊತ್ತದ ಕಾಮಗಾರಿಗಳಿಗೆ ಮಂಜೂರಾತಿ ನೀಡಿತ್ತು. ಐದು ವರ್ಷದ ಅವಧಿಯಲ್ಲಿ 2.76 ಲಕ್ಷ ಕೋಟಿ ರು. ಯೋಜನೆಗಳಿಗೆ ಅನುದಾನವಿಲ್ಲದಿದ್ದರೂ ಒಪ್ಪಿಗೆ ನೀಡಿದೆ. ಇದೇ ರೀತಿ ಮುಖ್ಯಮಂತ್ರಿಗಳ ವಿಶೇಷ ಅನುದಾನದ ನೆಪದಲ್ಲಿ 1.66 ಲಕ್ಷ ಕೋಟಿ ರು. ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಈ ರೀತಿ ಮಾಡಿರುವುದರಿಂದಲೇ ಇಂದು ರಾಜ್ಯ ಸಾಲದ ಸುಳಿಗೆ ಸಿಲುಕಿದೆ ಎಂದು ಟೀಕಿಸಿದರು.

ಲೋಕಸಭಾ ಚುನಾವಣೆ ನಂತರದಲ್ಲಿ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಲಾಗುವುದು ಎಂದು ಸುಳ್ಳು ಆರೋಪ, ಅಪಪ್ರಚಾರವನ್ನು ಬಿಜೆಪಿ ಗರು ಮಾಡಿದ್ದರು. ಆದರೆ ಜನರಿಗೆ ಈ ಕಾರ್ಯಕ್ರಮಗಳ ಸತ್ಯಾಸತ್ಯತೆ ಗೊತ್ತಿದೆ. ನೀವು ಎಷ್ಟೇ ಸುಳ್ಳು ಹೇಳಿದರೂ ಉಪಚುನಾವಣೆಯಲ್ಲಿ ಮೂರು ಸ್ಥಾನಗಳನ್ನು ಸೋತಿದ್ದೀರಿ. ನಿಮ್ಮ ಟೀಕೆ, ಆಪಾದನೆಗಳು ಮಾಡಿದ ನಂತರ ಉಪಚುನಾವಣೆಗಳು ನಡೆದಿವೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮೈತ್ರಿಕೂಟ ಗೆದ್ದಿದ್ದ ಚನ್ನಪಟ್ಟಣ ಕ್ಷೇತ್ರದಲ್ಲಿ 25 ಸಾವಿರಕ್ಕೂ ಹೆಚ್ಚು ಅಂತರದಿಂದ ಗೆದ್ದಿದ್ದೇವೆ. ಶಿಗ್ಗಾಂವಿ ಕ್ಷೇತ್ರದಲ್ಲಿ 13 ಸಾವಿರ ಅಂತರದಿಂದ ಹಾಗೂ ಸಂಡೂರು ಕ್ಷೇತ್ರದಲ್ಲಿ 9 ಸಾವಿರ ಅಂತರದಲ್ಲಿ ಗೆದ್ದಿದ್ದೇವೆ. ಮೂರೂ ಕಡೆ ಮಕಾಡೆ ಮಲಗಿದ್ದೀರಿ ನೀವು. ಜನರನ್ನು ಮೂರ್ಖರನ್ನಾಗಿಸಲು ಪ್ರಯತ್ನಿಸಿದರೆ ಸಾಧ್ಯವಿಲ್ಲ ಎಂದು ಕುಟುಕಿದರು.

ಬಡವರ ಬದುಕಿಗೆ ಭರವಸೆ ನೀಡಿವೆ: ಬಸವರಾಜ ಬೊಮ್ಮಾಯಿ ಅವರ ಮಗನ ವಿರುದ್ಧ ಗೆಲ್ಲಬೇಕಾದರೆ ಎಲ್ಲಾ ಜಾತಿ ಜನರು ಮತ ನೀಡಿದ್ದರಿಂದ ನಾವು ಗೆದ್ದಿದ್ದೇವೆ. ನಾವು ಆಪರೇಷನ್ ಕಾಂಗ್ರೆಸ್ ಮಾಡಿಲ್ಲ. ನಾವು ಗ್ಯಾರಂಟಿ ಕೊಡದೇ ಹೋಗಿದ್ದರೆ ಬಡವರು ಮತ ಹಾಕುತ್ತಿರಲಿಲ್ಲ. ಮಧ್ಯವರ್ತಿಗಳಿಲ್ಲದೇ ನೇರವಾಗಿ ಫಲಾನುಭವಿಗಳ ಖಾತೆಗೆ ತಲುಪುವ ಈ ಯೋಜನೆಗಳು ಬಡವರ ಬದುಕಿಗೆ ಭರವಸೆ ನೀಡಿವೆ. ನಾವು ಬಿಜೆಪಿಯವರಂತೆ ಕೇವಲ ಶೇ.10 ಜನರ ಕೈಹಿಡಿದು ಶೇ 90 ರಷ್ಟು ಜನರನ್ನು ಕೈ ಬಿಟ್ಟಿಲ್ಲ: ಬಿಜೆಪಿ ಮತ್ತು ಕಾಂಗ್ರೆಸ್‌ನ ಆರ್ಥಿಕ ನೀತಿ, ನಿಲುವುಗಳು ಯಾರ ಪರವಾಗಿವೆ ಎನ್ನುವ ವ್ಯತ್ಯಾಸವನ್ನು ಸದನದಲ್ಲಿ ಸಿಎಂ ವಿವರಿಸಿದರು. 2024-25ಕ್ಕೆ 52,000 ಕೋಟಿ ಇಟ್ಟು, 41,509 ಕೋಟಿ ರು. ವೆಚ್ಚ ಮಾಡಿದ್ದೇವೆ. ಖಜಾನೆ ಖಾಲಿಯಾಗಿದೆ ಎಂಬ ಮಾತು ಸತ್ಯಕ್ಕೆ ದೂರ ತಾನೇ ಎಂದು ಅಂಕಿ - ಅಂಶಗಳನ್ನು ಮುಂದಿಟ್ಟು ಸಿಎಂ ಪ್ರಶ್ನಿಸಿದರು.

ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ 10 ವರ್ಷದಲ್ಲಿ ಕರ್ನಾಟಕಕ್ಕೆ ಏನೇನು ಕೊಟ್ಟಿದ್ದಾರೆ?, ನರೇಂದ್ರ ಮೋದಿಯವರು ಪ್ರಧಾನಿಯಾಗಿ 11 ವರ್ಷದಲ್ಲಿ ಏನೇನು ಕೊಟ್ಟಿದ್ದಾರೆ ಅಂಕಿ ಅಂಶ ನೀಡಿ. ರಾಜ್ಯದಲ್ಲಿ 47 ರೈಲ್ವೆ ನಿಲ್ದಾಣಗಳನ್ನು ನಿರ್ಮಾಣ ಮಾಡಿದ್ದಾರೆ. ಕಾಂಗ್ರೆಸ್ ಅವಧಿಯಲ್ಲಿ ಒಂದೂ ನಿರ್ಮಾಣವಾಗಿರಲಿಲ್ಲ.

– ಆರ್. ಅಶೋಕ್ ಪ್ರತಿಪಕ್ಷ ನಾಯಕ

ಅಂತ್ಯೋದಯಕ್ಕೆ ಬಿಜೆಪಿ ಮೊದಲಿನಿಂದಲೂ ವಿರೋಧಿಗಳು. ಅವರು ಸಿದ್ಧಾಂತ ಯಾವಾಗಲೂ ಸಿರಿವಂತರ ಪರವಾಗಿರುತ್ತದೆ. ಬಡವರ ಕಷ್ಟಗಳ ಬಗ್ಗೆ ಬಿಜೆಪಿಯವರಿಗೆ ಕಿಂಚಿತ್ತೂ ಕಾಳಜಿ ಇಲ್ಲ. ಅನುದಾನ ಇಲ್ಲದಿದ್ದರೂ ಬಿಜೆಪಿ ಸರಕಾರದಲ್ಲಿ ಕೋಟ್ಯಂತರ ರು.ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿತ್ತು.

– ಸಿದ್ದರಾಮಯ್ಯ ಮುಖ್ಯಮಂತ್ರಿ

ಕೇಂದ್ರದ ವಿರುದ್ಧ ವಾಗ್ದಾಳಿ

ನರೇಂದ್ರ ಮೋದಿ ಅಧಿಕಾರಕ್ಕೆ ಬಂದು 11 ವರ್ಷಗಳಾದರೂ ಕೇಂದ್ರ ಸರಕಾರ ವಿಧವಾ ವೇತನ, ಅಂತ್ಯೋದಯ ಯೋಜನೆ, ವೃದ್ಧಾಪ್ಯ ವೇತನವನ್ನು ಒಂದು ರುಪಾಯಿ ಹೆಚ್ಚಿಸಿಲ್ಲ. ವಸತಿ ಯೋಜನೆಗಳಿಗೆ ಹೆಚ್ಚಳ ಮಾಡಿಲ್ಲ. ಇದು ಬಿಜೆಪಿಗೆ ಇರುವ ಬಡವರ ಪರ ಮನಸ್ಥಿತಿಯೇ ಎಂದು ಟಾಂಗ್ ನೀಡಿದರು. ಕೇಂದ್ರ ಸರಕಾರ 72 ಸಾವಿರ ಕೊಟ್ಟರೆ ರಾಜ್ಯ ಸರಕಾರ 42 ಸಾವಿರ ಕೊಡುತ್ತದೆ. ಕರ್ನಾಟಕ 2025 - 26ನೇ ಸಾಲಿಗೆ 5 ಲಕ್ಷ ಕೋಟಿ ರೂಪಾಯಿ ತೆರಿಗೆ ಕೊಡುತ್ತಿದ್ದೇವೆ. ನಮಗೆ ಅಂದಾಜು 51 ಸಾವಿರ ಕೋಟಿ ವಾಪಸ್ ಬರಬೇಕಾಗುತ್ತದೆ. ಹಾಗೆಂದು ಕೇಳಿದರೆ ಕೇಂದ್ರ ಸರಕಾರದ್ದು ಮಾತನಾಡಬಾರದೆಂದು ಅಶೋಕ್ ಪ್ರಶ್ನಿಸುತ್ತಾರೆ. ಗ್ರಾಮೀಣ ಮತ್ತು ಪಟ್ಟಣ ಪ್ರದೇಶದ ಬಡವರಿಗೆ ಕೊಡುವ ಈ ಯೋಜನೆಗಳಿಗೆ ಒಂದು ರೂಪಾಯಿ ಹೆಚ್ಚಳವಾಗಿಲ್ಲ. ರಾಜ್ಯಕ್ಕೆ 15ನೇ ಹಣಕಾಸು ಯೋಜನೆಯಡಿ ಅನುದಾನದಲ್ಲಿ ಆಗಿರುವ ಅನ್ಯಾಯವನ್ನು ನಾವು ಪ್ರಶ್ನಿಸಬಾರದಂತೆ. ಅನ್ಯಾಯ ಸರಿ ಮಾಡಿ ಎಂದು ಕೇಳಬಾರದಾ? ಎಂದು ಪ್ರಶ್ನಿಸಿದರು. ಈ ವೇಳೆ ಮಧ್ಯಪ್ರವೇಶಿಸಿದ ಬಿಜೆಪಿ ಶಾಸಕರಾದ ಸಿ.ಸಿ. ಪಾಟೀಲ್ ಹಾಗೂ ಅರವಿಂದ ಬೆಲ್ಲದ್ ಅವರು, ಕೇಂದ್ರದಿಂದ ರಾಜ್ಯದ ರಾಷ್ಟ್ರೀಯ ಹೆದ್ದಾರಿ, ವಿಮಾನ ನಿಲ್ದಾಣ, ರೈಲು ನಿಲ್ದಾಣ ಸೇರಿದಂತೆ ವಿವಿಧ ಯೋಜನೆಗಳಿಗೆ ಬರುವ ಅನುದಾನದ ಬಗ್ಗೆಯೂ ಮಾಹಿತಿ ನೀಡಿ ಎಂದು ಆಗ್ರಹಿಸಿದರು. ಆರಗ ಜ್ಞಾನೇಂದ್ರ ಅವರು, ರೈತರಿಗೆ ನೀಡುವ ಯೂರಿಯಾ ಗೊಬ್ಬರ ಮೇಲಿನ ಸಬ್ಸಿಡಿಯನ್ನು ಕೇಂದ್ರ ನೀಡುತ್ತಿದೆ. ಅದರ ಬಗ್ಗೆ ಏಕೆ ಮಾತನಾಡುವುದಿಲ್ಲ? ಅದು ರಾಜ್ಯದ ರೈತರಿಗೆ ಆಗುವ ಲಾಭವಲ್ಲವೇ ಎಂದು ಪ್ರಶ್ನಿಸಿದರು.

ರಾಜಕೀಯ ದುರುದ್ದೇಶ ಬಿಡಿ

ದೇಶದ 100 ಕೋಟಿ ಜನರಿಗೆ ಕೊಳ್ಳುವ ಆಯ್ಕೆಗಳೇ ಇಲ್ಲ ಎಂದು ವರದಿ ಬಂದಿತ್ತು. 20.5 ಕೋಟಿ ಕುಟುಂಬಗಳು ಅಂದರೆ ನೂರು ಕೋಟಿ ಜನರ ವಾರ್ಷಿಕ ಆದಾಯ 87,000 ರುಪಾಯಿಗಿಂತ ಕಡಿಮೆ ಇದೆ ಎನ್ನುವ ವರದಿ ಬಂದಿದೆ. ಅಸಮಾನತೆ ಅಷ್ಟರ ಮಟ್ಟಿಗೆ ಇದೆ. ದೇಶ ದಲ್ಲಿ ಆರ್ಥಿಕ, ಸಾಮಾಜಿಕ ಅಸಮಾನತೆ ಇರುವವರೆಗೆ ದೇಶಕ್ಕೆ ನಿಜವಾದ ಸ್ವಾತಂತ್ರ್ಯ ಸಿಗುವುದಿಲ್ಲ. ಕೊಳ್ಳುವ ಶಕ್ತಿ ಹೆಚ್ಚು ಮಾಡುವ ಸಾರ್ವತ್ರಿಕ ಮೂಲ ಆದಾಯ ತತ್ವ ಅಗತ್ಯ. ಆರ್ಥಿಕ, ಸಾಮಾಜಿಕ ಶಕ್ತಿಯನ್ನು ಜನರಲ್ಲಿ ತುಂಬಿದರೆ ಜನರ ಹಾಗೂ ರಾಜ್ಯದ ಅಭಿವೃದ್ಧಿ ಸಾಧ್ಯ. ನಾವು ಸಮಾಜದ ಶೇ 90ರಷ್ಟು ಜನರಿಗೆ ಆರ್ಥಿಕ, ಸಾಮಾಜಿಕ ಶಕ್ತಿ ತುಂಬಿದ್ದೇವೆ. ನೀವು ಸಮಾಜದ ಶೇ.10ರಷ್ಟು ಜನರಿಗೆ ಶಕ್ತಿ ತುಂಬುತ್ತಿದ್ದೀರಿ. 94ರಲ್ಲಿ ಶೇ.34ರಷ್ಟಿದ್ದ ಶ್ರೀಮಂತರ ಸಂಖ್ಯೆ ಈಗ ಶೇ.57ಕ್ಕೆ ಹೆಚ್ಚಾಗಿದೆ. ಶೇ.50 ಜನರಿಗೆ ಇರುವ ಆರ್ಥಿಕ ಶಕ್ತಿ ಶೇ.15ಕ್ಕೆ ಕುಸಿದಿದೆ. ಇದು ಆತಂಕಕಾರಿ ಸಂಗತಿ ಅಲ್ಲವೇ? ಶ್ರೀಮಂತರು ಶ್ರೀಮಂತರಾದರೆ, ಬಡವರು ಬಡವರಾಗುತ್ತಿದ್ದಾರೆ. ಈ ಅಸಮಾನತೆಯನ್ನು ತೊಡೆದು ಹಾಕಲು ನಾವು ಪ್ರಯತ್ನ ಮಾಡುತ್ತಿದ್ದೇವೆ ಎಂದು ಸಿದ್ದರಾಮಯ್ಯ ಹೇಳಿದರು.

ಆರ್‌ಎಸ್‌ಎಸ್ ಬ್ರಿಟಿಷರ ಏಜೆಂಟ್

ಭೋಜನ ವಿರಾಮದ ಬಳಿಕ ಮಾತು ಮುಂದುವರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ರಾಜ್ಯಪಾಲರ ಭಾಷಣದ ಮೇಲಿನ ವಿವಿಧ ವಿಷಯಗಳನ್ನು ಸಮರ್ಥಿಸಿಕೊಂಡರು. ಬಳಿಕ, ಬಿಜೆಪಿ ಆರ್‌ಎಸ್.ಎಸ್ ಹೇಳಿದಂತೆ ಮಾಡುತ್ತೆ. ಆರ್‌ಎಸ್‌ಎಸ್ ನವರಿಗೆ ನಾವು ಹೆದರುವುದಿಲ್ಲ. ಅವರನ್ನು ಎದುರಿಸಲು ನಾವು ಸಿದ್ಧ. ದಲಿತರ, ಹಿಂದುಳಿದವರ ಏಳಿಗೆ ಸಹಿಸದ ಬಿಜೆಪಿಗೆ ದಲಿತರು ದಲಿತರ ಕಾಲೋನಿಯಲ್ಲೇ ಇರಬೇಕು ಎನ್ನುವ ದುರುದ್ದೇಶವಿದೆ. 1942ರಲ್ಲಿ ಬ್ರಿಟಿಷರೊಂದಿಗೆ ಸೇರಿಕೊಂಡಿದ್ದವರು ನೀವು (ಆರ್‌ಎಸ್‌ಎಸ್) ಬ್ರಿಟಿಷರ ಏಜೆಂಟರು ಎಂದು ಟೀಕಿಸಿದರು. ಇದಕ್ಕೆ ಆಕ್ಷೇಪವ್ಯಕ್ತಪಡಿಸಿದ ಬಿಜೆಪಿ ನಾಯಕರು, ಸಿದ್ದರಾಮಯ್ಯ ಅವರು ಹೇಳಿಕೆ ಹಿಂಪಡೆಯಬೇಕು ಎಂದು ಆಗ್ರಹಿಸಿದರು. ಆದರೆ ಹೇಳಿಕೆ ಹಿಂಪಡೆಯುವುದಿಲ್ಲ ಎಂದು ಸಿದ್ದರಾಮಯ್ಯ ಪಟ್ಟು ಹಿಡಿದರು. ಈ ವೇಳೆ ಸಿದ್ದು ಬೆಂಬಲಕ್ಕೆ ಕಾಂಗ್ರೆಸ್ ಶಾಸಕರು ನಿಂತರು. ಈ ವೇಳೆ ಮಾತನಾಡಿದ ಬಿಜೆಪಿಯ ಸುನೀಲ್‌ಕುಮಾರ್, ಸಿದ್ದರಾಮಯ್ಯ ಅವರು ಹೇಳಿರುವ ಹೇಳಿಕೆ ಹಿಂಪಡೆಯಬೇಕು. ಇಲ್ಲವಾದರೆ ನಾವು ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರು ಚೀನಾ ಚಮಚಗಳು, ಪಾಕಿಸ್ತಾನದ ಏಜೆಂಟರು ಎನ್ನುತ್ತೇವೆ. ಅದನ್ನು ಒಪ್ಪುವುದಾದರೆ, ಸಿದ್ದರಾಮ್ಯಯ ಹೇಳಿಕೆಯನ್ನು ನಾವು ಒಪ್ಪುತ್ತೇನೆ ಎಂದು ಸವಾಲು ಹಾಕಿದರು. ಈ ವೇಳೆ ಕಾಂಗ್ರೆಸ್ ಶಾಸಕರು ಬಿಜೆಪಿ ಹಾಗೂ ಆರ್‌ಎಸ್‌ಎಸ್ ವಿರುದ್ಧ ವಾಗ್ದಾಳಿ ನಡೆಸಿದರು. ಪರಿಸ್ಥಿತಿಯನ್ನು ತಿಳಿಗೊಳಿಸಲು ಸಭಾಧ್ಯಕ್ಷ ಸ್ಥಾನದಲ್ಲಿದ್ದ ಶಿವಲಿಂಗೇಗೌಡರು ಎದ್ದು ನಿಂತರು.

ಎಸ್‌ಸಿಪಿ-ಟಿಎಸ್‌ಪಿ ಗೊಂದಲ

ಎಸ್‌ಸಿಪಿ-ಟಿಎಸ್‌ಪಿ ಅನುದಾನವನ್ನು ಬೇರೆ ಯೋಜನೆಗಳಿಗೆ ವರ್ಗಾಯಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಅವರು, ಯಾವುದೇ ಅನುದಾನ ಡೈವರ್ಟ್ ಆಗಿಲ್ಲವೆಂದು ಸಮರ್ಥಿಸಿಕೊಳ್ಳುತ್ತಿದ್ದರು. ಈ ವೇಳೆ ಅಂಬೇಡ್ಕರ್ ಸೋಲಿಸಿದ್ಯಾರು ಎನ್ನುವ ಗೊಂದಲದ ಬಳಿಕ ಏಕಾಏಕಿ ಎದ್ದುನಿಂತ ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ, ಎಸ್‌ಸಿಪಿ-ಟಿಎಸ್‌ಪಿ ಕಾಯಿದೆಯ 7(ಸಿ)ಯಲ್ಲಿ ಬಳಕೆಗೆ ಅವಕಾಶವಿದೆ ಎಂದರು. ಈ ವೇಳೆ ಮಧ್ಯಪ್ರವೇಶಿಸಿದ ಬಿಜೆಪಿ ಗರು, ಸಿದ್ದರಾಮಯ್ಯ ಅವರು ಅನುದಾನ ವರ್ಗಾಯಿಸಿಲ್ಲ ಎನ್ನುತ್ತಿದ್ದಾರೆ. ಆದರೆ ಸಚಿವರು ಕಾನೂನಿನಲ್ಲಿರುವ ಅವಕಾಶ ಬಳಸಿಕೊಳ್ಳಲಾಗಿದೆ ಎನ್ನುತ್ತಿದ್ದಾರೆ. ಇದರಲ್ಲಿ ಯಾವುದು ಸತ್ಯ ಎಂದು ಪ್ರಶ್ನಿಸಿದರು.

75 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿ ಮಾಡಿದ್ದ ಮಂಗಳೂರು ಪೊಲೀಸರು

ಡ್ರಗ್ಸ್ ಕಾರ್ಯಾಚರಣೆ: ಸದನ ಅಭಿನಂದನೆ

ವಿಧಾನಸಭೆ: ಮಂಗಳೂರು ಪೊಲೀಸರು ಸತತ ಕಾರ್ಯಾಚರಣೆ ನಡೆಸಿ 75 ಕೋಟಿ ರುಪಾಯಿ ಮೌಲ್ಯದ ಮಾದಕ ವಸ್ತುಗಳನ್ನು ಜಪ್ತಿ ಮಾಡಿರುವುದನ್ನು ವಿಧಾನಸಭೆಯಲ್ಲಿ ಪಕ್ಷ ಬೇಧ ಮರೆತು ಅಭಿನಂದನೆ ಸಲ್ಲಿಸಲಾಯಿತು.

ವಿಧಾನಸಭೆಯ ಕಲಾಪ ಆರಂಭವಾಗುತ್ತಿದ್ದಂತೆ ಸಭಾಧ್ಯಕ್ಷ ಯು.ಟಿ.ಖಾದರ್, ವಿಧಾನಸಭೆಯ ಉಪಾಧ್ಯಕ್ಷ ರುದ್ರಪ್ಪ ಲಮಾಣಿ ಅಧಿವೇಶನದ ಕಲಾಪ ಮುಗಿಸಿ ತಮ ಊರಿಗೆ ಪ್ರಯಾಣಿಸುವಾಗ ಹಿರಿಯೂರು ಬಳಿ ಅಪಘಾತವಾಗಿ ತಲೆ ಮತ್ತು ಬೆನ್ನು ಮೂಳೆಗೆ ಪೆಟ್ಟಾಗಿದೆ. ಅವರಿಗೆ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಪ್ರಕಟಿಸಿದರು. ಸಂಪೂರ್ಣ ವಿಶ್ರಾಂತಿಯ ಅಗತ್ಯ ಎಂದು ವೈದ್ಯರು ಸಲಹೆ ನೀಡಿದ್ದಾರೆ. ಅವರು ಬೇಗ ಗುಣಮುಖರಾಗಲಿ ಎಂದು ಹಾರೈಸಿದರು. ಇದಕ್ಕೆ ಧ್ವನಿಗೂಡಿಸಿದ ಗೃಹ ಸಚಿವ ಡಾ.ಜಿ.ಪರಮೇಶ್ವರ, ಉಪಾಧ್ಯಕ್ಷರು ಶೀಘ್ರ ಗುಣಮುಖರಾಗಲಿ ಎಂದು ಹಾರೈಸುವುದಾಗಿ ಹೇಳಿದರು.

ಇದೇ ವೇಳೆ ಮಾತನಾಡಿದ ಸಚಿವರು, ಮಂಗಳೂರು ಪೊಲೀಸರು ನಿರಂತರ ಕಾರ್ಯಾಚರಣೆ ನಡೆಸಿ 75 ಕೋಟಿ ರು. ಮೌಲ್ಯದ ಎಂಡಿಎಂಎ ಮಾದಕ ವಸ್ತುವನ್ನು ವಶ ಮಾಡಿಕೊಂಡಿದ್ದಾರೆ. ಇದು ಅಭಿನಂದನಾರ್ಹ ಕಾರ್ಯಾಚರಣೆ ಎಂದು ಹೇಳಿದರು. ಇದಕ್ಕೆ ಬೆಳ್ತಂಗಡಿ ಕ್ಷೇತ್ರದ ಬಿಜೆಪಿ ಶಾಸಕ ಹರೀಶ್ ಪೂಂಜಾ, ಮಂಗಳೂರು ಪೊಲೀಸರು ದೆಹಲಿಯಿಂದಲೂ ಹಿಂಬಾಲಿಸಿ ಬೆಂಗಳೂರಿಗೆ ಬಂದು ಕಾರ್ಯಾಚರಣೆ ನಡೆಸುವ ಮೂಲಕ ಬೃಹತ್ ಪ್ರಮಾಣದ ಮಾದಕ ವಸ್ತುವನ್ನು ಜಪ್ತಿ ಮಾಡಿದ್ದಾರೆ. ಇದು ಸುತ್ಯಾರ್ಹ ಕಾರ್ಯಾಚರಣೆ. ಪೊಲೀಸರು ಅಭಿನಂದನಾರ್ಹರು, ಗೃಹ ಸಚಿವರು ಪೊಲೀಸರಿಗೆ ಮತ್ತಷ್ಟು ಬೆಂಬಲ ನೀಡಿ, ಮಾದಕ ವಸ್ತುಗಳ ವಿರುದ್ಧದ ಕಾರ್ಯಾಚರಣೆಯನ್ನು ವ್ಯಾಪಕಗೊಳಿಸಲಿ ಎಂದು ಸಲಹೆ ನೀಡಿದರು.

ಮಾದಕ ವಸ್ತುಗಳ ವಿರುದ್ಧ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು ಅಭಿನಂದನಾರ್ಹರು. ಡ್ರಗ್ಸ್ ಜಾಲ ತಾಲೂಕು ಮಟ್ಟಕ್ಕೆ ಹಬ್ಬಿದೆ. ಜಪ್ತಿ ಮಾಡಲಾದ ಡ್ರಗ್ಸ್ ಪೊಲೀಸರ ಮೂಲಕವೇ ಮಾರಾಟವಾಗುತ್ತಿದೆ ಎಂಬ ಆರೋಪ ಗಳಿವೆ. ವಶಪಡಿಸಿಕೊಳ್ಳಲಾದ ಮಾದಕ ವಸ್ತು ಯಾವ ರೀತಿ ವಿಲೇವಾರಿಯಾಗುತ್ತಿದೆ ಎಂಬುದನ್ನು ಸಚಿವರು ಗಮನಿಸಬೇಕು.

– ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

ಮಂಗಳೂರು ಪೊಲೀಸರು ತಳಮಟ್ಟದಿಂದ ಶುರು ಮಾಡಿ 15 ಗ್ರಾಂನಿಂದ ಆರಂಭವಾಗಿ 6.5 ಕೆಜಿವರೆಗೂ ವಶ ಪಡಿಸಿಕೊಂಡಿದ್ದಾರೆ. ಈ ಕಳ್ಳಸಾಗಾಣಿಕೆ ವಿಮಾನ ನಿಲ್ದಾಣದಲ್ಲಿ ಒಳ ಸಂಚು ನಡೆಯುತ್ತಿರುವ ಅನುಮಾನಗಳಿವೆ. ಪೆಡ್ಲರ್‌ಗಳನ್ನು ಒಳಗೊಂಡು, ಮೂಲದಿಂದ ಉನ್ನತ ಮಟ್ಟದವರೆಗೂ ಎಲ್ಲವನ್ನೂ ಪತ್ತೆ ಮಾಡಬೇಕು. ಮಾದಕ ವಸ್ತುಗಳ ಜಾಲ ದಲ್ಲಿ ಇರುವವರಿಗೆ ಭಯ ಹುಟ್ಟುವಂತೆ ಕೆಲಸ ಮಾಡಬೇಕು.

– ಯು.ಟಿ.ಖಾದರ್ ವಿಧಾನಸಭಾಧ್ಯಕ್ಷ

ಗುತ್ತಿಗೆ ಮೀಸಲಿಗೆ ವಿರೋಧ | ದಳ, ಕಾಂಗ್ರೆಸ್ ನಾಯಕರ ಜಂಗೀಕುಸ್ತಿ

ಅಲ್ಪಸಂಖ್ಯಾತರಿಗೆ ಮೀಸಲು: ಜಟಾಪಟಿ

ವಿಧಾನ ಪರಿಷತ್: ಅಲ್ಪಸಂಖ್ಯಾತರಿಗೆ ಗುತ್ತಿಗೆಯಲ್ಲಿ ಮೀಸಲು ಕೊಡುವುದಕ್ಕೆ ಬಿಜೆಪಿ ಪ್ರಬಲವಾಗಿ ವಿರೋಧಿಸಿದೆ. ವಿಧಾನ ಪರಿಷತ್ ಕಲಾಪ ಪ್ರಾರಂಭವಾಗುತ್ತಲೇ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅಲ್ಪಸಂಖ್ಯಾತರಿಗೆ ಮೀಸಲು ಕೊಟ್ಟ ಬಗ್ಗೆ ಪ್ರಸ್ತಾಪ ಮಾಡಿದರು. ಸಂವಿಧಾನದಲ್ಲಿ ಧರ್ಮ ಆಧಾರಿತ ಗುತ್ತಿಗೆಗೆ ಅವಕಾಶ ಇಲ್ಲ. ಸರಕಾರ ಗುತ್ತಿಗೆಯಲ್ಲಿ ಮೀಸಲು ಕೊಡಲು ಮುಂದಾಗಿದೆ. ಇದಕ್ಕೆ ನಮ್ಮ ವಿರೋಧ ಇದೆ. ಗುತ್ತಿಗೆ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಛಲವಾದಿ ನಾರಾಯಣಸ್ವಾಮಿ ಮಾತಿಗೆ ಕಾಂಗ್ರೆಸ್ ಸದಸ್ಯ ಹರಿಪ್ರಸಾದ್, ಪಾಯಿಂಟ್ ಆರ್ಡರ್ ಎತ್ತಿ ವಿರೋಧ ವ್ಯಕ್ತಪಡಿಸಿದರು. ಸಂವಿಧಾನದಲ್ಲಿ ಅಲ್ಪಸಂಖ್ಯಾತರಿಗೆ ಮೀಸಲಿನ ಹಕ್ಕು ಇದೆ. ಅಲ್ಪಸಂಖ್ಯಾತರಿಗೆ ಹಕ್ಕು ಇದೆ. ಪೂರ್ವಾಗ್ರಹ ಪೀಡತವಾಗಿ ಕೆಲವರನ್ನು ದೂರ ಇಡೋದು ಸರಿಯಲ್ಲ. ಜನರು ತೆರಿಗೆ ಕಟ್ಟುವ ಹಣಕ್ಕೆ ದೇಶದ 140 ಕೋಟಿ ಜನರ ಪ್ರತಿಯೊಬ್ಬರಿಗೂ ಹಕ್ಕು ಇದೆ. ಯಾರ ಮೇಲೂ ದ್ವೇಷದ ಭಾವನೆಯಲ್ಲಿ ಮಾತಾನಾಡುವುದು ಸರಿಯಲ್ಲ. ಛಲವಾದಿ ನಾರಾಯಣಸ್ವಾಮಿ ಹೇಳಿದ ಮಾತು ಕಡತದಿಂದ ತೆಗೆಯಬೇಕು ಎಂದು ಆಗ್ರಹಿಸಿದರು.

ಇದಕ್ಕೆ ಛಲವಾದಿ ನಾರಾಯಣಸ್ವಾಮಿ ವಿರೋಧ ವ್ಯಕ್ತಪಡಿಸಿದರು. ಅಲ್ಪಸಂಖ್ಯಾತರರಿಗೆ ಸೌಲಭ್ಯ ಕೊಡುವುದರಲ್ಲಿ ನಮ್ಮ ವಿರೋಧ ಇಲ್ಲ. ಧರ್ಮದ ಆಧಾರದಲ್ಲಿ ಮೀಸಲಾತಿ ಕೊಡುವುದು ಸರಿಯಲ್ಲ. ಇದಕ್ಕೆ ನಮ್ಮ ವಿರೋಧ ಇದೆ. ಧರ್ಮದ ಆಧಾರದಲ್ಲಿ ಮೀಸಲಾತಿಗೆ ನಮ್ಮ ವಿರೋಧ ಇದೆ ಎಂದರು.

ಹರಿಪ್ರಸಾದ್‌ಗೆ ತಿರುಗೇಟು

ಸಿಟಿ ರವಿ ಮಾತನಾಡಿ, ಕೆ.ಎಂ.ಮುನ್ಷಿ ಹೇಳಿಕೆ ಪ್ರಸ್ತಾಪ ಮಾಡಿದರು. ಧರ್ಮ ಆಧಾರಿತ ಮೀಸಲಾತಿಗೆ ಅವಕಾಶ ಇಲ್ಲ ಎಂದು ಹೇಳಿದರು. ಧರ್ಮದ ಆಧಾರದಲ್ಲಿ ಮೀಸಲಾತಿ ಕೊಡಬಾರದು ಅಂತ ಕಾನ್ಸಿಟ್ಯೂಷನ್ ಅಸೆಂಬ್ಲಿಯಲ್ಲಿ ಮುನ್ಷಿ ಹೇಳಿದರು. ಸುಪ್ರೀಂ ಕೋರ್ಟ್ ಕೂಡಾ ಧರ್ಮದ ಆಧಾರದಲ್ಲಿ ಮೀಸಲು ಕೊಡಬಾರದು ಅಂತ ಕೇಳಿತ್ತು ಎಂದು ಹರಿಪ್ರಸಾದ್‌ಗೆ ತಿರುಗೇಟುಕೊಟ್ಟರು. ಈ ವೇಳೆ ಬಿಜೆಪಿ-ಕಾಂಗ್ರೆಸ್ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು. ಆಡಳಿತ- ವಿಪಕ್ಷಗಳ ನಡುವೆ ಗಲಾಟೆ ಶುರುವಾಯಿತು. ಬಳಿಕ ಚರ್ಚೆಗೆ ನೋಟಿಸ್ ಕೊಡಿ, ಅವಕಾಶ ಕೊಡುವುದಾಗಿ ಗಲಾಟೆಗೆ ಉಪ ಸಭಾಪತಿಗಳು ತೆರೆ ಎಳೆದರು.

ಅನರ್ಹ ಪಡಿತರ ಚೀಟಿಗಳು ರದ್ದು

ವಿಧಾನ ಪರಿಷತ್: ವಿಧಾನ ಮಂಡಲ ಅಧಿವೇಶನ ಮುಗಿದ ಬಳಿಕ ಬಿಪಿಎಲ್ ಪಡಿತರ ಚೀಟಿ ಪರಿಷ್ಕರಣೆಗೆ ಚಾಲನೆ ನೀಡಲಿದ್ದು, ಅನರ್ಹರನ್ನು ಪಟ್ಟಿಯಿಂದ ತೆಗೆದುಹಾಕಿ ನಿಜವಾದ ಫಲಾನುಭವಿಗಳಿಗೆ ಸವಲತ್ತು ನೀಡಲು ಸರಕಾರ ಬದ್ಧವಿದೆ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್ ಮುನಿಯಪ್ಪ ತಿಳಿಸಿದ್ದಾರೆ. ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಎಂಟಿಬಿ ನಾಗರಾಜ್ ಅವರಿಗೆ ಉತ್ತರಿಸಿದ ಸಚಿವರು ಅಧಿವೇಶನ ಮುಗಿದ ಬಳಿಕ ಅನರ್ಹರನ್ನು ಪಟ್ಟಿಯಿಂದ ತೆಗೆದುಹಾಕುವ ಸಂಬಂಧ ರಾಜ್ಯಾದ್ಯಂತ ಪರಿಷ್ಕರಣೆ ಕಾರ್ಯವನ್ನು ಪ್ರಾರಂಭ ಮಾಡಲಾಗುವುದು. ಅನರ್ಹರನ್ನು ಪಟ್ಟಿಯಿಂದ ಮುಲಾಜಿಲ್ಲದೆ ತೆಗೆದುಹಾಕಲಾಗುವುದು. ನಿಜವಾದ ಫಲಾನುಭವಿಗಳು ಅನಗತ್ಯ ವದಂತಿಗಳಿಗೆ ಕಿವಿಗೊಡಬಾರದು ಎಂದು ಮನವಿ ಮಾಡಿದರು. ದಕ್ಷಿಣ ಭಾರತದಲ್ಲಿಯೇ ಅತಿಹೆಚ್ಚು ಬಿಪಿಎಲ್ ಪಡಿತರ ಚೀಟಿಗಳನ್ನು ಹೊಂದಿರುವ ರಾಜ್ಯಗಳ ಪೈಕಿ ಕರ್ನಾಟಕದ ಮೊದಲ ಸ್ಥಾನದಲ್ಲಿ ಇದೆ. ಕೆಲವು ಅನರ್ಹರು ಪಟ್ಟಿಗೆ ಸೇರ್ಪಡೆಯಾಗಿ ದ್ದರಿಂದಲೇ ಇದರ ಸಂಖ್ಯೆ ಹೆಚ್ಚಳವಾಗಿದೆ. ಇದರ ಪರಿಣಾಮ ನಿಜವಾದ ಫಲಾನುಭವಿಗಳಿಗೆ ಸವಲತ್ತು ಸಿಗುತ್ತಿಲ್ಲ. ಇದಕ್ಕೆ ಶೀಘ್ರದಲ್ಲೇ ಕಡಿವಾಣ ಹಾಕಲಾಗುವುದು ಎಂದರು.

ಸದನ ಸ್ವಾರಸ್ಯ

ನಯನಾ ಮಾತಿನ ಮೋಡಿಗೆ ಉಘೇ ಎಂದ ಬಿಜೆಪಿ



ವಿಧಾನಸಭೆಯಲ್ಲಿ ಸೋಮವಾರ ತುಸು ವಾಕ್ಸಮರ ಹೆಚ್ಚಿತ್ತು. ಅದರಲ್ಲಿಯೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರತಿಮಾತಿಗೂ ಸವಾಲು ಹಾಕುತ್ತಿದ್ದರು. ಮಾತಿಗೆ ಬಾವಿಗಿಳಿದು ಪ್ರತಿಭಟನೆ ನಡೆಸದಿದ್ದರೂ, ಬಿಜೆಪಿ-ಜೆಡಿಎಸ್ ಶಾಸಕರು ತಮ್ಮ ಸ್ಥಾನ ಬಳಿ ನಿಂತುಕೊಂಡೇ ಮಾತಾಡುತ್ತಿದ್ದರು. ಈ ವೇಳೆ ಅಶ್ವತ್ಥನಾರಾಯಣ, ಅರವಿಂದ ಬೆಲ್ಲದ ಅವರಿಗೆ ಕುಳಿತುಕೊಳ್ಳುವಂತೆ ಸ್ಪೀಕರ್ ಸೂಚನೆ ನೀಡುತ್ತಿದ್ದ ಸಮಯದಲ್ಲಿಯೇ, ಆಡಳಿತ ಪಕ್ಷದ ಕೊನೆಯ ಸಾಲಿನಿಂದ ‘ಸಭಾಧ್ಯಕ್ಷರೇ’ ಎನ್ನುವ ಧ್ವನಿಯೊಂದು ಕೇಳಿಬಂತು. ಆ ಧ್ವನಿ ಯಾವುದೆಂದರೆ ನಯನಾ ಮೋಟಮ್ಮ ಅವರದ್ದು. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತಾಡುವಾಗ ಅವರಿಗೆ ಪಾಠವನ್ನು ಅಶ್ವತ್ಥನಾರಾಯಣ ಮಾಡಿದ್ದರು. ಆದರೆ ಸೋಮವಾರ ಅಶ್ವತ್ಥನಾರಾಯಣ ಎದ್ದು ನಿಂತಿದ್ದಕ್ಕೆ ಆಕ್ಷೇಪವ್ಯಕ್ತಪಡಿಸಿದ ಅವರು, ‘ಸೀನಿಯರ್ ಆಗಿ ಈ ರೀತಿ ಮಾಡುವುದು ಸರಿಯೇ’ ಎಂದು ಪ್ರಶ್ನಿಸಿದರು. ನಯನಾ ಮೋಟಮ್ಮ ಮಾತಿಗೆ ಬಿಜೆಪಿಯ ಹಲವು ಶಾಸಕರು ‘ವಾವ್...ವಾವ್’ ಎಂದರೆ ಇನ್ನು ಕೆಲವರು ‘ಉಘೇ..ಉಘೇ’ ಎಂದು ಕಾಲೆಳೆದರು.

ಸತ್ಯವನ್ನೇ ಹೇಳುತ್ತೇನೆ : ಸಿಎಂ

ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಸೋಮವಾರ ಉತ್ತರ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾತಿಗೆ ಪದೇಪದೆ ಬಿಜೆಪಿಗರು ಅಡ್ಡಿಪಡಿಸುತ್ತಿದ್ದರು. ಕೇಂದ್ರದಿಂದ ಬರುವ ಅನುದಾನಕ್ಕೆ ಸಂಬಂಧಿಸಿದಂತೆ ಮಾತನಾಡುವ ವಿಷಯದಲ್ಲಿ ಸುಳ್ಳು ಹೇಳುತ್ತಿದ್ದೀರಾ ಎಂದು ಆರೋಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ ಅವರು, ‘ನಾನು ಸತ್ಯವನ್ನೇ ಹೇಳುತ್ತೇನೆ. ಸತ್ಯವನ್ನು ಅಲ್ಲದೇ ಬೇರೇನು ಹೇಳುವುದಿಲ್ಲ.. ನಾನು ಹೇಳುವುದೆಲ್ಲ ಸತ್ಯ’ ಎಂದು ಸಿಎಂ ನ್ಯಾಯಲಯದಲ್ಲಿ ಹೇಳುವಂತೆ ಹೇಳಿದರು.

ಸಿಎಂ ಆದಾಗ ಮಾತಾಡೋಕೆ ಟೈಂ ಕೊಡ್ತೀನಿ

ಬೆಳಗ್ಗೆಯಿಂದ ಮುಖ್ಯಮಂತ್ರಿಗಳು ಉತ್ತರ ನೀಡುತ್ತಿದ್ದರಿಂದ ಮಧ್ಯಪ್ರವೇಶಿಸಿದ ಸಿ.ಸಿ ಪಾಟೀಲರು, ನಾವು ಮಾತಾಡುವಾಗಾದರೆ ಸಭಾಧ್ಯಕ್ಷರು, ‘ಒಕೆ.. ಮುಂದೆ..ಆಯ್ತು’ ಎನ್ನುತ್ತೀರಾ. ಆದರೆ ಸಿದ್ದರಾಮಯ್ಯ ಅವರು ಮಾತಾಡುವಾಗ ಏಕೆ ಮೌನವಾಗಿರುತ್ತೀರಾ ಎಂದು ಪ್ರಶ್ನಿಸಿದರು. ಅದಕ್ಕೆ ಸ್ಪೀಕರ್, ನೀವು ಮುಖ್ಯಮಂತ್ರಿಯಾಗಿ ಅಲ್ಲಿ ನಿಂತುಕೊಂಡಾಗ ನಾನು ಅವಕಾಶ ಕೊಡುತ್ತೇನೆ ಎಂದು ಕಾಲೆಳೆದರು. ಅದಕ್ಕೆ ಬಿಜೆಪಿಗರು, ‘ಪಾಟೀಲರು ಮುಖ್ಯಮಂತ್ರಿಯಾದಾಗಲೂ ನೀವೇ ಸ್ಪೀಕರ್ ಆಗಿರುವಿರಾ?’ ಎಂದು ಪ್ರಶ್ನಿಸಿದ್ದಕ್ಕೆ ಮೌನವೇ ಖಾದರ್ ಉತ್ತರವಾಗಿತ್ತು.

ವಿಶ್ವವಾಣಿ

ಸಂಪಾದಕೀಯ

ಇಸ್ರೊ ಸಾಧನೆ ಮುಂದುವರಿಯಲಿ

ಬಾಹ್ಯಾಕಾಶ ಅಧ್ಯಯನದಲ್ಲಿ ಜಗತ್ತನ್ನೇ ನಿಬ್ಬೆರಗಾಗಿಸಿದ ಇಸ್ರೊ ಇದೀಗ ಮತ್ತೊಂದು ಸಾಹಸಕ್ಕೆ ಇಳಿದಿದೆ. 250 ಕೆಜಿ ತೂಕದ ರೋವರ್ ಅನ್ನು ಚಂದ್ರನ ಮೇಲೆ ಇಳಿಸಿ ಅಧ್ಯಯನ ನಡೆಸಲು ಇಸ್ರೋ ಮುಂದಾಗಿದೆ. ಈ ಕುರಿತ ಚಂದ್ರಯಾನ-5 ಮಿಷನ್‌ಗೆ ಇದೀಗ ಕೇಂದ್ರ ಸರಕಾರ ಅನುಮೋದನೆ ನೀಡಿದೆ. ಚಂದ್ರನ ಮೇಲೆ ಯಶಸ್ವಿಯಾಗಿ ಇಳಿದು ಅಧ್ಯಯನ ನಡೆಸಿದ ಪ್ರಗ್ಯಾನ್ ರೋವರ್ ತೂಕ 25 ಕೆಜಿ ಮಾತ್ರ ಇತ್ತು. ಆದರೆ ಚಂದ್ರಯಾನ-5 ಮಿಷನ್ ತೂಕ ಬರೋಬ್ಬರಿ 250 ಕೆಜಿಯಾಗಿದೆ. ಹೀಗಾಗಿ ಈ ಬಾರಿ ಇಸ್ರೋ ಮತ್ತಷ್ಟು ತಯಾರಿಯೊಂದಿಗೆ ಚಂದ್ರನ ಕುತೂಹಲ ಅಧ್ಯಯನಕ್ಕೆ ಮುಂದಾಗಿದೆ. 2008ರಲ್ಲಿ ಯಶಸ್ವಿಯಾಗಿ ಕೈಗೊಳ್ಳಲಾಗಿದ್ದ ಚಂದ್ರಯಾನ-1 ಯೋಜನೆಯ ಸಂದರ್ಭದಲ್ಲಿ ಚಂದ್ರನಲ್ಲಿರುವ ರಾಸಾಯನಿಕ, ಖನಿಜಶಾಸ್ತ್ರೀಯ ಹಾಗೂ ಭೌಗೋಳಿಕ ಛಾಯಾ ನಕ್ಷೆಗಳನ್ನು ಭೂಮಿಗೆ ಹೊತ್ತು ತರಲಾಗಿತ್ತು. 2019ರಲ್ಲಿ ನಡೆದಿದ್ದ ಚಂದ್ರಯಾನ-2 ಯೋಜನೆಯು ಶೇ.98ರಷ್ಟು ಯಶಸ್ವಿಯಾದರೂ, ಅಂತಿಮ ಘಟ್ಟದಲ್ಲಿ ಶೇ.2ರಷ್ಟು ವಿಫಲಗೊಂಡಿತ್ತು. ಚಂದ್ರಯಾನ-3 ಮಿಷನ್ ಚಂದ್ರಯಾನ-2 ರ ನಂತರದ ಕಾರ್ಯಾಚರಣೆಯಾಗಿದ್ದು, ಚಂದ್ರನ ಮೇಲ್ಮೈಯಲ್ಲಿ ಸುರಕ್ಷಿತ ಇಳಿಯುವಿಕೆ ಮತ್ತು ಸಂಚಾರದಲ್ಲಿ ಸಂಪೂರ್ಣ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ಇನ್ನು, ಚಂದ್ರಯಾನ-4 ಮಿಷನ್‌ಗೂ ಸರಕಾರ ಕಳೆದ ವರ್ಷವೇ ಅನುಮೋದನೆ ನೀಡಿದೆ. ಇದು ಚಂದ್ರನ ಮೇಲೆ ಇಳಿಯುವ ಮತ್ತು ಭೂಮಿಗೆ ಸುರಕ್ಷಿತವಾಗಿ ಮರಳುವ ಸಾಮರ್ಥ್ಯವನ್ನು ಹೊಂದಿದೆ. ಚಂದ್ರಯಾನ 4 ಮಿಷನ್‌ನಲ್ಲಿ ಚಂದ್ರನ ಮೇಲಿಂದ ಮಾದರಿಗಳನ್ನು ಸಂಗ್ರಹಿಸಿ ಭೂಮಿಗೆ ಮರಳಲಿದೆ. ಇದೀಗ ಚಂದ್ರಯಾನ-5ಕ್ಕೆ ಕೇಂದ್ರ ಸರಕಾರ ಅನುಮೋದನೆ ನೀಡಿದ್ದು, ಇದರಲ್ಲಿ ಹಲವು ಹೊಸತನಗಳಿವೆ. ಕಾರಣ ಇದು ಜಪಾನ್ ಜತೆ ಜಂಟಿಯಾಗಿ ಕೈಗೊಂಡಿರುವ ಚಂದ್ರನ ಅಧ್ಯಯನವಾಗಿದ್ದು, ಅನೇಕ ಯೋಜನೆಗಳಿವೆ. ಚಂದ್ರಯಾನ-5 ಲೂಪೆಕ್ಸ್ ಮಿಷನ್ ಹೆಚ್ಚಿನ ಸಾಮರ್ಥ್ಯದ ಲ್ಯಾಂಡರ್ ಅನ್ನು ಪ್ರದರ್ಶಿಸಲು ಯೋಜಿಸಲಾಗುತ್ತಿದೆ, ಇದು ಭವಿಷ್ಯದ ಲ್ಯಾಂಡಿಂಗ್ ಮಿಷನ್‌ಗಳಿಗೆ ನಿರ್ಣಾಯಕ ಅಂಶವಾಗಿದೆ. ಇದರಲ್ಲಿ ಚಂದ್ರನ ಮೇಲ್ಮೈಯಲ್ಲಿ ಮಾನವ ಲ್ಯಾಂಡಿಂಗ್ ಕೂಡ ಸೇರಿದೆ. ಇದರ ಜತೆಗೆ ಪ್ರಮುಖವಾಗಿ ಭಾರತವು 2035ರ ವೇಳೆಗೆ ತನ್ನದೇ ಆದ ಬಾಹ್ಯಾಕಾಶ ನಿಲ್ದಾಣವನ್ನು ಹೊಂದುವ ಉದ್ದೇಶ ಹೊಂದಿದೆ. ಇಸ್ರೊ ಸಂಸ್ಥೆಯ ಈ ಕಾರ್ಯಾಚರಣೆಯೂ ಯಶಸ್ವಿಯಾಗಲಿ. ಆ ಮೂಲಕ ಬಾಹ್ಯಾಕಾಶ ಸಂಶೋಧನೆಯಲ್ಲಿ ಮತ್ತಷ್ಟು ಮಹತ್ವದ ಸಾಧನೆಗಳನ್ನು ಮಾಡಲಿ.

ಸೊಂಪಾದಕೀಯ

ಜಗದಗಲ ಜಲಜಗಳ

ನೀರಿನ ಸಮಸ್ಯೆ ಅನ್ನೋದು ಪ್ರಪಂಚದ ಬಹುತೇಕ ಎಲ್ಲ ಕಡೆ ಕಾಡುವ ವಿಷಯ. ಸದ್ಯಕ್ಕೆ ರಾಜ್ಯ ಸರಕಾರ ನೀರಿನ ಬೆಲೆ ಏರಿಸುವ ನಿರ್ಧಾರ ಕೈಗೊಂಡಿದೆ. ಪ್ರತಿ ಲೀಟರ್‌ಗೆ ಒಂದು ಪೈಸೆಯಷ್ಟು ದರ ಹೆಚ್ಚಿಸುವ ತೀರ್ಮಾನ ಮಾಡಲಾಗಿದೆ. ಕಳೆದ 11 ವರ್ಷಗಳಿಂದ ನೀರಿನ ದರ ಪರಿಷ್ಕರಣೆ ಆಗಿಲ್ಲ ಅನ್ನೋ ಸಬೂಬು ಕೊಟ್ಟು ಜನರಿಗೆ ದರ ಏರಿಕೆಯ ಬರೆ ಹಾಕಲಾಗಿದೆ. ಆದರೆ ಇದರ ಮಧ್ಯದಲ್ಲಿ ನೀರಿಗಾಗಿ ಜಗಳ ನಡೆದು ಮದುವೆಯೊಂದು ನಿಂತು ಹೋದ ಘಟನೆಯೊಂದು ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ ನಡೆದಿದೆ. ಚಿತ್ರದುರ್ಗ, ಹಿರಿಯೂರು ಅಂದ್ರೆ ಹೇಳಿ ಕೇಳಿ ಬಯಲುಸೀಮೆ. ನೀರಿನ ಬೆಲೆ ಅಲ್ಲಿನ ಜನರಿಗಿಂತ ಇನ್ಯಾರಿಗೆ ಚೆನ್ನಾಗಿ ಗೊತ್ತಿರುತ್ತೆ. ಅದರಲ್ಲೂ ಈಗ ಬೇಸಿಗೆ ಕಾಲ ಬೇರೆ ಶುರು ಆಗಿದೆ. ಹಾಗಾಗಿ ನೀರಿಗೆ ಅಭಾವ ಇದ್ದೇ ಇರುತ್ತದೆ. ಆದರೆ ನಗರದ ಹೊರವಲಯದ ಕಲ್ಯಾಣ ಮಂಟಪ ಒಂದರಲ್ಲಿ ನೀರಿಲ್ಲ ಅಂತ ಕ್ಯಾತೆ ತೆಗೆದು ಮದುವೆಯನ್ನೇ ನಿಲ್ಲಿಸಿದ ಪ್ರಕರಣ ಇದಾಗಿದೆ. ವಧು-ವರ ಇಬ್ಬರೂ ಎಂಜಿನಿಯರಿಂಗ್ ಪದವೀಧರರು. ಎರಡೂ ಕಡೆಯವರು ಒಪ್ಪಿ ನಡೆಯಬೇಕಿದ್ದ ಮದುವೆಯ ಹಿಂದಿನ ದಿನ ರಾತ್ರಿ ಊಟಕ್ಕೆ ಹೋದ ವರನ ಕಡೆಯವರಿಗೆ ಕುಡಿಯೋಕೆ ನೀರು ಸಿಕ್ಕಿಲ್ಲ. ತಿಂದ ಊಟ ನೆತ್ತಿಗೇರಿ ನೀರು ಸಿಕ್ಕದೇ ಇದ್ದಿದ್ದಕ್ಕೋ ಅಥವಾ ಕುಡಿಯೋಕೆ ನೀರೂ ಇಲ್ಲ ಅಂತ ಸಿಟ್ಟು ಬಂದು ಪಿತ್ತ ನೆತ್ತಿಗೇರಿದ್ದಕ್ಕೋ ಅಂತೂ ಜಗಳ ಶುರು ಆಗಿದೆ. ಈ ನೀರಿನ ಜಗಳ ವಿಕೋಪಕ್ಕೆ ಹೋಗಿದ್ದನ್ನು ನೋಡಿ ಹಿರಿಯರು ಮದುವೆಯ ಹಿಂದಿನ ದಿನದಿಂದಲೇ ಸಂಧಾನಕ್ಕಾಗಿ ಪ್ರಯತ್ನ ಪಟ್ಟಿದ್ದರು. ಈ ಪ್ರಕ್ರಿಯೆ ಮರುದಿನ ಬೆಳಗ್ಗೆಯೂ ಮುಂದುವರಿದಿದೆ. ಜಗಳ ಮರೆತು ಹಸೆಮಣೆ ಏರುವಂತೆ ಎಲ್ಲರೂ ಒತ್ತಾಯ ಮಾಡಿದರೂ ವಧುವಿನ ಕಡೆಯವರು ಅದರಲ್ಲೂ ವಧು ಮಾತು ಕೇಳಲಿಲ್ಲವಂತೆ. ಹಾಗಾಗಿ ಮಧ್ಯಾಹ್ನದವರೆಗೂ ಈ ಸಂಧಾನ ನಡೆದು ನಂತರ ವಿಧಿ ಇಲ್ಲದೆ ಮದುವೆಯನ್ನು ನಿಲ್ಲಿಸಲಾಗಿದೆ. ಒಟ್ಟಿನಲ್ಲಿ ಕುಡಿಯುವ ನೀರು ಇಲ್ಲ ಅನ್ನೋ ಕಾರಣಕ್ಕೆ ಮದುವೆ ನಿಂತು, ಮದುವೆಗಾಗಿ ನೀರಿನಂತೆ ಹಣ ಖರ್ಚು ಮಾಡಿದ್ದರೂ ಅದು ಉಪಯೋಗ ಆಗದೆ ಮಾಡಿದ್ದೆಲ್ಲಾ ನೀರಿನಲ್ಲಿ ಹೋಮ ಮಾಡಿದಂತಾಗಿ ಎಲ್ಲವೂ ವ್ಯರ್ಥ ಎನಿಸಿಕೊಂಡಿದೆ.

ಸಂಪಾದಕರ ಸದ್ಯಶೋಧನೆ

ಇಲ್ಲಿ ಉಗುಳಿದರೆ ಜೋಕೆ!

ಸಿಂಗಾಪುರದಲ್ಲಿ ಏನನ್ನಾದರೂ ತಿಂದು ಜೀರ್ಣಿಸಿಕೊಳ್ಳಬಹುದು. ಆದರೆ ಸಾರ್ವಜನಿಕ ಸ್ಥಳಗಳಲ್ಲಿ ಉಗುಳಿ (Spitting), ಬಚಾವ್ ಆಗುವುದು ಸಾಧ್ಯವೇ ಇಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವುದನ್ನು ಪೊಲೀಸರು ಕಂಡರೆ, ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ. ನಿಮ್ಮ ಮೇಲೆ ಕೇಸು ಜಡಿಯುತ್ತಾರೆ, ಸಾವಿರಾರು ಡಾಲರ್ ದಂಡ ಕಕ್ಕಿಸುತ್ತಾರೆ. ಕೋರ್ಟ್ ಮುಂದೆ ನಿಲ್ಲಿಸಿ ಮಾನ ಕಳೆಯುತ್ತಾರೆ. ಅಷ್ಟೇ ಅಲ್ಲ, ನ್ಯಾಯಾಧೀಶರ ಆದೇಶ ಪಡೆದು ಛಡಿಯೇಟು ಕೊಡುತ್ತಾರೆ. ಈ ವಿಷಯದಲ್ಲಿ ಮಾತ್ರ ಆ ದೇಶ ರಾಜಿ ಮಾಡಿಕೊಂಡಿಲ್ಲ, ಉಗುಳುವುದನ್ನು ಸಹಿಸಿಕೊಂಡಿಲ್ಲ. ಜನರ ಸಾರ್ವಜನಿಕ ವರ್ತನೆಗಳನ್ನು ಬದಲಿಸಲು, ಸುಧಾರಿಸಲು ಸಿಂಗಾಪುರ ಕಾಲಕಾಲಕ್ಕೆ ರಾಷ್ಟ್ರೀಯ ಅಭಿಯಾನ (Campaign)ವನ್ನು ಹಮ್ಮಿಕೊಳ್ಳುತ್ತಾ ಬಂದಿದೆ. 1958ರಿಂದ 1982ರವರೆಗಿನ 26 ವರ್ಷಗಳಲ್ಲಿ 66 ರಾಷ್ಟ್ರೀಯ ಅಭಿಯಾನಗಳನ್ನು ಅದು ಹಮ್ಮಿಕೊಂಡಿದ್ದು ಗಮನಾರ್ಹ. ಸಿಂಗಾಪುರಕ್ಕೆ ಸ್ವಾತಂತ್ರ್ಯ ಸಿಗುವುದಕ್ಕಿಂತ 7 ವರ್ಷಗಳ ಮೊದಲು (ಸ್ವಾತಂತ್ರ್ಯ ಸಿಕ್ಕಿದ್ದು 1965 ಆಗಸ್ಟ್ 9), ಅಂದರೆ 1958ರಲ್ಲಿ ಸಿಂಗಾಪುರ ಪ್ರಪ್ರಥಮ ಅಭಿಯಾನವನ್ನು ಆರಂಭಿಸಿತು. ಅದು ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವುದರ (Anti-Spitting Campaign) ವಿರುದ್ಧ. ಸಿಂಗಾಪುರದ ಸಿಟಿ ಕೌನ್ಸಿಲ್ ಚುನಾವಣೆಯಲ್ಲಿ ಪೀಪಲ್ಸ್ ಆಕ್ಷನ್ ಪಾರ್ಟಿ ಗೆದ್ದ ನಂತರ, ಉಗುಳುವುದರ ವಿರುದ್ಧ ಅಭಿಯಾನವನ್ನು ಹಮ್ಮಿಕೊಳ್ಳಲು ನಿರ್ಧರಿಸಿತು. 'ಪ್ರಜೆಗಳಿಗೆ ಸಾರ್ವಜನಿಕ ವರ್ತನೆಯನ್ನು ಹೇಳಿಕೊಡದಿದ್ದರೆ, ಅವರಲ್ಲಿ ಗುಣಾತ್ಮಕ ಪರಿವರ್ತನೆಯನ್ನು ತರಲು ಸಾಧ್ಯವಿಲ್ಲ' ಎಂಬುದನ್ನು ಅರಿತು ಆ ಅಭಿಯಾನವನ್ನು ವ್ಯಾಪಕವಾಗಿ ಹಮ್ಮಿಕೊಳ್ಳಲಾಯಿತು. ಆ ದಿನಗಳಲ್ಲಿ ಸಾರ್ವಜನಿಕರು ಮನಬಂದಂತೆ ಎಲ್ಲೆಡೆ ಎಂಜಲು ಉಗುಳುತ್ತಿದ್ದರು. ಯಾರಿಗಾದರೂ ಉಗುಳಬಾರದೆಂದು ಹೇಳಿದರೆ ಅದು ಜಗಳಕ್ಕೆ ಕಾರಣವಾಗುತ್ತಿತ್ತು. ಉಗುಳುವುದಕ್ಕೆ ಕಡಿವಾಣ ಹಾಕದೇ ದೇಶವನ್ನು ಸುಂದರ ಮತ್ತು ಸ್ವಚ್ಛವಾಗಿ ಇಟ್ಟುಕೊಳ್ಳಲು ಸಾಧ್ಯವಿಲ್ಲ ಎಂದು ಮನಗಂಡ ಸ್ಥಳೀಯ ಆಡಳಿತ, ಈ ಅಸಹ್ಯ ವರ್ತನೆ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸಲು ನಿರ್ಧರಿಸಿತು. ಆ ದಿನಗಳಲ್ಲಿ, ಸಿಟಿ ಕೌನ್ಸಿಲ್ ಕಟ್ಟಡದ ಮುಂದೆ ದೊಡ್ಡ ಪೋಸ್ಟರನ್ನು ಅಂಟಿಸಲಾಗಿತ್ತು. ಸೇತುವೆ, ಟೆಲಿಗ್ರಾಫ್ ಕಂಬ, ಮರಗಳ ಮೇಲೆಯೂ ಈ ಪೋಸ್ಟರುಗಳನ್ನು ಅಂಟಿಸಿ ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ಕೆ ಚಾಲನೆ ನೀಡಲಾಯಿತು. ಆ ಪ್ರಯುಕ್ತ ಆರೋಗ್ಯ ಮತ್ತು ಜಲ ಇಲಾಖೆಯ ನೂರು ಸಿಬ್ಬಂದಿ ಮನೆಮನೆಗೆ ಹೋಗಿ, ಕರಪತ್ರಗಳನ್ನು ಹಂಚಿ ಜನರಲ್ಲಿ ಅರಿವು ಮೂಡಿಸುವ ಕೆಲಸವನ್ನು ಆರಂಭಿಸಿದರು. ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವುದು, ಸೀನುವುದು, ಕೆಮ್ಮುವುದು ಅಸಹನೀಯ ಮತ್ತು ಅಸಹ್ಯಕರ ವರ್ತನೆ ಎಂಬ ಬಗ್ಗೆ ವ್ಯಾಪಕ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಅಂದು ಆರಂಭವಾದ ಆ ಅಭಿಯಾನ ಇಡೀ ದೇಶವನ್ನು ಸ್ವಚ್ಛವಾಗಿ ಕಾಪಾಡುವಲ್ಲಿ ಮಹತ್ವವಾದ ಪಾತ್ರವನ್ನು ವಹಿಸಿದೆ. ಸಿಂಗಾಪುರಕ್ಕೆ ಮೊದಲ ಸಲ ಭೇಟಿ ನೀಡಿದ ಪ್ರವಾಸಿಗರು ಸಾರ್ವಜನಿಕ ಸ್ಥಳಗಳಲ್ಲಿ ಉಗುಳಿದರೂ, ಅವರಿಗೆ ಸಾವಿರ ಡಾಲರ್ ದಂಡ ಹಾಕಲಾಗುತ್ತದೆ. ಎರಡನೇ ಸಲ ಆ ತಪ್ಪನ್ನು ಮಾಡಿದರೆ, 2000 ಡಾಲರ್ ಪೀಕಿಸುತ್ತಾರೆ. ಅಲ್ಲಿನ ರಸ್ತೆ ಅಥವಾ ಪಾದಚಾರಿ ಹಾದಿ ಮೇಲೆ ಉಗುಳುವುದನ್ನೂ ಅಪರಾಧ ಎಂದೇ ಭಾವಿಸಲಾಗಿದೆ. ಕಳೆದ ವರ್ಷ ಭಾರತದಿಂದ ತೆರಳಿದ ನಾಲ್ವರು ಪ್ರವಾಸಿಗರು ಸಾರ್ವಜನಿಕ ಸ್ಥಳಗಳಲ್ಲಿ ಎಲೆ ಅಡಕೆ ಜಗಿದು ಉಗುಳಿದ್ದರು. ಅವರ ಆ ವರ್ತನೆ ಸಿಸಿಟಿವಿ ಕೆಮರಾದಲ್ಲಿ ಸೆರೆಯಾಗಿತ್ತು. ಅವರು ವಿಮಾನ ನಿಲ್ದಾಣಕ್ಕೆ ತೆರಳುವ ಮಾರ್ಗದಲ್ಲಿ ಹಾಗೆ ಮಾಡಿದ್ದರು. ಅವರು ವಿಮಾನ ನಿಲ್ದಾಣ ತಲುಪುತ್ತಿದ್ದಂತೆ ಪೊಲೀಸರು ಅವರ ಸ್ವಾಗತಕ್ಕೆ ನಿಂತಿದ್ದರು. ನಾಲ್ವರು 4000 ಡಾಲರ್ (ಎರಡೂವರೆ ಲಕ್ಷ ರುಪಾಯಿ) ದಂಡ ತೆತ್ತ ಬಳಿಕವೇ ಅವರಿಗೆ ಸ್ವದೇಶಕ್ಕೆ ಮರಳಲು ಅನುಮತಿ ನೀಡಲಾಯಿತು. ಇಲ್ಲದಿದ್ದರೆ ಅಲ್ಲೇ ಕಂಬಿ ಎಣಿಸಬೇಕಿತ್ತು.

ಬೇರುಗಳನ್ನು ಗಟ್ಟಿಗೊಳಿಸುವುದು ಯಾವಾಗ?

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ

ranjith.hoskere@gmail.com

ವ್ಯಕ್ತಿಗಿಂತ ಪಕ್ಷ ಮುಖ್ಯ' ಎನ್ನುವುದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಮಾತಾಗಿದ್ದರೂ, ಯಾವುದೇ ಒಂದು ಪಕ್ಷ ನಿರಂತರವಾಗಿ ಬಲಿಷ್ಠವಾಗಿರಬೇಕು ಎಂದರೆ ಈ ಮಾತನ್ನು ಪಾಲಿಸಬೇಕು. ಯಾವುದೇ ಪಕ್ಷ ಅಧಿಕಾರದಲ್ಲಿದ್ದಾಗ ಇತರೆ ಪಕ್ಷಗಳಿಂದ 'ನಾಯಕರು' ವಲಸೆ ಬರಬಹುದು ವಿನಾ ಕಾರ್ಯಕರ್ತರಲ್ಲ. ಪಕ್ಷ ಬಲಿಷ್ಠ ಸಂಘಟನೆಯನ್ನು ಹೊಂದಿರಬೇಕು ಎಂದರೆ ಕಾರ್ಯಕರ್ತರ ಪಡೆ ಗಟ್ಟಿಯಾಗಿರಬೇಕು. ಈ ಪಡೆ ಗಟ್ಟಿಯಾಗಿರಬೇಕು ಎಂದರೆ, ಅಧಿಕಾರ ವಿಕೇಂದ್ರೀಕರಣವಾಗಿರಬೇಕು. ಅದಾಗದೇ, ಕೆಲವರು ಕೈಯಲ್ಲಿ ಅಧಿಕಾರ ಕೀಲಿ ಸಿಕ್ಕರೆ ಎಷ್ಟೇ ಬಲಿಷ್ಠ ಸಂಘಟನೆಯಿದ್ದರೂ, ಹಂತ-ಹಂತವಾಗಿ ಈ ಸಂಘಟನೆ ಕುಸಿಯುವುದರಲ್ಲಿ ಅನುಮಾನವಿಲ್ಲ.

ಕರ್ನಾಟಕದ ಇಂದಿನ ಪರಿಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ. ಬೂತ್‌ಮಟ್ಟದಲ್ಲಿ ಸಂಘಟನೆ ಬಲಿಷ್ಠವಾಗಿರಲು ರಾಜ್ಯ ಮಟ್ಟದ ನಾಯಕತ್ವಕ್ಕಿಂತ ಹೆಚ್ಚಾಗಿ ಸ್ಥಳೀಯ ಮಟ್ಟದ ನಾಯಕತ್ವ ಗಟ್ಟಿಯಾಗಿರಬೇಕು. ಬೂತ್ ಮಟ್ಟದ ಸಂಘಟನೆಯನ್ನು ಗಟ್ಟಿಗೊಳಿಸಲು ಶಾಸಕರು, ಪದಾಧಿಕಾರಿಗಳು, ಸಚಿವರು, ರಾಜ್ಯಾಧ್ಯಕ್ಷರಿಂದ ಸಾಧ್ಯವಿಲ್ಲ. ಬದಲಿಗೆ ಎರಡನೇ, ಮೂರನೇ ಹಂತದ ನಾಯಕತ್ವದಿಂದ ಮಾತ್ರ ಸಾಧ್ಯವಾಗುತ್ತದೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಕರ್ನಾಟಕದಲ್ಲಿ ಎರಡನೇ ಹಾಗೂ ಮೂರನೇ ಹಂತದ ನಾಯಕತ್ವವನ್ನೇ ಮೊಟಕುಗೊಳಿಸುವ ಪ್ರಯತ್ನವು ಮೂರೂ ರಾಜಕೀಯ ಪಕ್ಷಗಳಲ್ಲಿ ಸದ್ದಿಲ್ಲದೇ ನಡೆಯುತ್ತಿದೆ.

ಅದರಲ್ಲಿಯೂ ಚುನಾವಣಾ ರಾಜಕೀಯದಲ್ಲಿ ಎರಡು, ಮೂರನೇ ಹಂತದ ನಾಯಕತ್ವ ಬೆಳೆಯುವುದು ಸ್ಥಳೀಯ ಸಂಸ್ಥೆಯ ಚುನಾವಣೆಯ ಮೂಲಕ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಸ್ಥಳೀಯ ಸಂಸ್ಥೆ ಚುನಾವಣೆ ನಡೆದೇ ವರ್ಷಗಳು ಕಳೆದಿವೆ. ಹಲವು ವಿಷಯದಲ್ಲಿ ಭಿನ್ನಾಭಿಪ್ರಾಯವಿರುವ ಮೂರೂ ಪಕ್ಷದ ಶಾಸಕರಿಗೆ, ಚುನಾವಣೆ ನಡೆಸದೇ ಇರುವ ವಿಷಯದಲ್ಲಿ ಮಾತ್ರ 'ಸರ್ವಾನುಮತ'ದ ಒಪ್ಪಿಗೆಯಿದೆ ಎಂದರೆ ತಪ್ಪಾಗುವುದಿಲ್ಲ. ಇದನ್ನು ಬಹಿರಂಗವಾಗಿ ಹೇಳದಿದ್ದರೂ, ಬಹುತೇಕ ಶಾಸಕರು ಸ್ಥಳೀಯ ಸಂಸ್ಥೆ ಚುನಾವಣೆ ನಡೆಯುವುದಕ್ಕಿಂತ ಸುಮ್ಮನಿರುವುದು ಸೂಕ್ತ ಎನ್ನುವ ಲೆಕ್ಕಾಚಾರದಲ್ಲಿದ್ದಾರೆ.

ಅಧಿಕಾರ ವಿಕೇಂದ್ರೀಕರಣದಿಂದ ಮಾತ್ರವೇ ದೇಶದ ಅಭಿವೃದ್ಧಿ ಸಾಧ್ಯ ಎಂದು ಪ್ರತಿಪಾದಿಸಿ, ಮಾಜಿ ಪ್ರಧಾನ ಮಂತ್ರಿ ದಿ. ರಾಜೀವ್ ಗಾಂಧಿ ಅವರು ದೇಶದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸಿದರು. ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಸೇರಿದಂತೆ ಪುರಸಭೆ, ನಗರಸಭೆ, ಮಹಾನಗರಪಾಲಿಕೆ ಎಂದು ವಿವಿಧ ಹಂತಗಳಲ್ಲಿ ಸ್ಥಳೀಯ ಸಂಸ್ಥೆಗಳನ್ನು ರಚಿಸಲಾಯಿತು. ಈ ರೀತಿ ವಿವಿಧ ಹಂತದಲ್ಲಿ ಸ್ಥಳೀಯ ಸಂಸ್ಥೆಗಳನ್ನು ರಚಿಸುವ ಮೂಲಕ, ಅಧಿಕಾರ ವಿಕೇಂದ್ರೀಕರಣ ಮಾಡುವುದು ಒಂದು ಭಾಗವಾದರೆ, ಇನ್ನೊಂದೆಡೆ ಈ ಸ್ಥಳೀಯ ಸಂಸ್ಥೆಗಳ ಮೂಲಕ ರಾಜಕೀಯಕ್ಕೆ ಬರುತ್ತಿದ್ದವರ ಸಂಖ್ಯೆಯೂ ಕಡಿಮೆ ಏನಿಲ್ಲ. ಈಗ ರಾಜಕೀಯದ ಆಯಕಟ್ಟಿನ ಹುದ್ದೆಯಲ್ಲಿರುವ ಬಹುತೇಕ ನಾಯಕರು, ದಶಕಗಳ ಹಿಂದೆ ಗ್ರಾಮ ಪಂಚಾಯಿತಿಗೋ, ನಗರಸಭೆಗೋ ಅಥವಾ ಬೆಂಗಳೂರಿನ ಶಾಸಕರು ಬಿಬಿಎಂಪಿ ಕಾರ್ಪೋರೇಟರ್‌ಗಳಾಗುವ ಮೂಲಕವೋ ರಾಜಕೀಯ ಜೀವನಕ್ಕೆ ಕಾಲಿಟ್ಟವರು. ಅದರಲ್ಲಿಯೂ ಬೆಂಗಳೂರಿನ 28 ಕ್ಷೇತ್ರಗಳ ಶಾಸಕರ ಪೈಕಿ ಶೇ.60ಕ್ಕೂ ಹೆಚ್ಚು ಮಂದಿ ಈ ಹಿಂದೆ ಬಿಬಿಎಂಪಿ ಕಾರ್ಪೋರೇಟರ್‌ಗಳಾಗಿಯೇ ಬೆಳಕಿಗೆ ಬಂದವರು.

ಈ ಅಧಿಕಾರ ವಿಕೇಂದ್ರೀಕರಣದ ಭಾಗವಾಗಿಯೇ ಕರ್ನಾಟಕದಲ್ಲಿ 31 ಜಿಲ್ಲಾ ಪಂಚಾಯಿತಿ, 226 ತಾಲೂಕು ಪಂಚಾಯಿತಿ ಮತ್ತು 6022 ಗ್ರಾಮ ಪಂಚಾಯಿತಿಗಳೊಂದಿಗೆ, 10 ಮಹಾನಗರ ಪಾಲಿಕೆ, 61 ನಗರಸಭೆ, 123 ಪುರಸಭೆ, 117 ಪಟ್ಟಣ ಪಂಚಾಯಿತಿಗಳಿವೆ. ಈ ಎಲ್ಲ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆದಾಗ ಸುಮಾರು 15 ಸಾವಿರಕ್ಕೂ ಹೆಚ್ಚು ಮಂದಿ ಆಯ್ಕೆಯಾಗುತ್ತಾರೆ. ಗ್ರಾಮ ಪಂಚಾಯಿತಿಗಳಿಗೆ ಪಕ್ಷದ ಚಿಹ್ನೆ ಸಿಗದಿದ್ದರೂ, ಪಕ್ಷದ ಬೆಂಬಲದೊಂದಿಗೆ ಚುನಾವಣೆ ನಡೆಯುವುದು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಆದ್ದರಿಂದ ಈ ಎಲ್ಲ ಚುನಾವಣೆಗಳು ಪಕ್ಷಗಳ ಬಲಾಬಲವನ್ನು ತೋರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಕೇವಲ ತೋರಿಸುವುದಷ್ಟೇ ಅಲ್ಲದೇ, ಬಲವನ್ನು ಹೆಚ್ಚಿಸಿಕೊಳ್ಳುವಲ್ಲಿ, ಕಾರ್ಯಕರ್ತರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಆದರೆ 2016ರಿಂದ ಈಚೆಗೆ, ಅಂದರೆ ಕಳೆದ ಒಂಬತ್ತು ವರ್ಷಗಳಿಂದ ಜಿಲ್ಲಾ ಹಾಗೂ ತಾಲೂಕು ಪಂಚಾಯಿತಿ ಚುನಾವಣೆ ನಡೆದಿಲ್ಲ. ಇನ್ನು ರಾಜ್ಯದ ಶೇ.65ರಷ್ಟು ತೆರಿಗೆಯನ್ನು ಸಂಗ್ರಹಿಸುವ ಬೆಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆ ನಡೆಯದೇ ಐದು ವರ್ಷ ಕಳೆದಿದೆ. ಈ ಚುನಾವಣೆಗಳ ಮೂಲಕ ರಾಜಕೀಯವಾಗಿ ಗುರುತಿಸಿಕೊಳ್ಳುವ ಉತ್ಸಾಹದಲ್ಲಿದ್ದ ಮೂರನೇ ಹಂತದ ನಾಯಕರನ್ನು ಹಾಗೂ ಈ ಚುನಾವಣೆಗಳಲ್ಲಿ ಗೆದ್ದು 'ಲೀಡರ್' ಎನಿಸಿಕೊಳ್ಳುವ ಉತ್ಸಾಹದಲ್ಲಿದ್ದ ಎರಡನೇ ಹಂತದ ನಾಯಕತ್ವದ ಧ್ವನಿಯನ್ನು ಸದ್ದಿಲ್ಲದೇ ಅಡಗಿಸಲಾಗಿದೆ.



ಹಾಗೆ ನೋಡಿದರೆ, ಈ ರೀತಿ ರಾಜಕೀಯ ಪಕ್ಷಗಳ ಎರಡನೇ ಹಾಗೂ ಮೂರನೇ ಹಂತದ ನಾಯಕತ್ವದ ಸದ್ದು ಅಡಗಿಸುವಲ್ಲಿ ಯಾವುದೋ ಒಂದು ಪಕ್ಷದ ಕೈವಾಡದವಿದೆ ಎನ್ನಲು ಬರುವುದಿಲ್ಲ. ಚುನಾವಣೆ ನಡೆಸುವ ವಿಷಯದಲ್ಲಿ ಆಡಳಿತ ಪಕ್ಷಕ್ಕೆ 'ಆಸಕ್ತಿ' ಇಲ್ಲವೆಂದು ವಿರೋಧ ಪಕ್ಷದಲ್ಲಿ ಕೂತ ಶಾಸಕರು ಕೂಗಾಡುತ್ತಾರೆ. ಬಿಜೆಪಿ ಸರಕಾರದ ಅವಧಿಯಲ್ಲಿ ಕಾಂಗ್ರೆಸ್ ಶಾಸಕರು ಮಾಡಿದ್ದನ್ನೇ, ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಬಿಜೆಪಿ-ಜೆಡಿಎಸ್ ನಾಯಕರು ಮಾಡಿಕೊಂಡು ಬಂದಿದ್ದಾರೆ. ಆದರೆ ನೈಜವಾಗಿ ಹೇಳಬೇಕೆಂದರೆ ಈ ಬಿಬಿಎಂಪಿ ಅಥವಾ ಇತರೆ ಸ್ಥಳೀಯ ಸಂಸ್ಥೆ ಚುನಾವಣೆ ನಡೆಯುವುದು ಮೂರೂ ಪಕ್ಷಗಳ ಯಾವ ಶಾಸಕರಿಗೂ 'ಇಷ್ಟ'ವಿಲ್ಲ. ಅದರಲ್ಲಿಯೂ ಬಿಬಿಎಂಪಿ ಚುನಾವಣೆ ನಡೆಸುವ ವಿಷಯದಲ್ಲಿ ಮೂರೂ ಪಕ್ಷದ ಶಾಸಕರದ್ದು 'ಒಂದೇ ಧ್ವನಿ' ಎಂದರೆ ತಪ್ಪಾಗುವುದಿಲ್ಲ.

ಈ ರೀತಿ ಸ್ಥಳೀಯ ಸಂಸ್ಥೆ ಚುನಾವಣೆಗೆ ವಿರೋಧಿಸುವುದಕ್ಕೆ ಕಾರಣವಿಲ್ಲವೆಂದಲ್ಲ. ಯಾವುದೇ ಸ್ಥಳೀಯ ಸಂಸ್ಥೆಯಾದರೂ ವಾರ್ಷಿಕವಾಗಿ ಕೋಟ್ಯಂತರ ರುಪಾಯಿ ಅನುದಾನ ಬರುತ್ತದೆ. ಬಿಬಿಎಂಪಿಯಂಥ ಮಹಾನಗರ ಪಾಲಿಕೆಯಿರುವ ಭಾಗದಲ್ಲಿ ಶಾಸಕರಿಗೆ ಸಿಗುವ ಅನುದಾನಕ್ಕಿಂತ ಕಾರ್ಪೋರೇಟರ್‌ಗಳಿಗೆ ಸಿಗುವ 'ಅನುದಾನ' ಹೆಚ್ಚಾಗಿರುತ್ತದೆ. ಉದಾಹರಣೆಗೆ ಬೆಂಗಳೂರಿನ ಯಾವುದೇ ಭಾಗದ ಬಿಬಿಎಂಪಿ ವಾರ್ಡ್‌ಗಳಿಗೆ ವಿವಿಧ ಯೋಜನೆಯಡಿ ವಾರ್ಷಿಕವಾಗಿ ಕನಿಷ್ಠ ನೂರು ಕೋಟಿ ರು. ಅನುದಾನ ಸಿಗುತ್ತದೆ. ಆದರೆ ಇದೇ ಪ್ರಮಾಣದ ಅನುದಾನ ಶಾಸಕರಿಗೆ ಸಿಗುತ್ತದೆ ಎನ್ನುವ ಗ್ಯಾರಂಟಿ ಇರುವುದಿಲ್ಲ. ಒಂದು ಕ್ಷೇತ್ರಕ್ಕೆ ಕನಿಷ್ಠ ಎಂಟು ವಾರ್ಡ್‌ಗಳಿರುತ್ತವೆ. ಅಂದರೆ, ಬಿಬಿಎಂಪಿ ಜನಪ್ರತಿನಿಧಿ ಇಲ್ಲದಿದ್ದರೆ ಒಬ್ಬ ಶಾಸಕನಿಗೆ ವಾರ್ಷಿಕ ಕನಿಷ್ಠ 700ರಿಂದ 800 ಕೋಟಿ ರು. ಮೊತ್ತದ ಅನುದಾನ ಸಿಕ್ಕಂತಾಗುತ್ತದೆ. ಒಂದು ವೇಳೆ ಚುನಾವಣೆ ನಡೆದು ಬಿಬಿಎಂಪಿ ಪ್ರತಿನಿಧಿಗಳು ನೇಮಕವಾದರೆ, ಈ 800 ಕೋಟಿ ರು. ಅನುದಾನದ ಹಿಡಿತ ಶಾಸಕನಿಂದ ನೇರವಾಗಿ ಕಾರ್ಪೋರೇಟರ್‌ಗಳ ಕೈ ಸೇರಲಿದೆ. ಈ ಕಾರಣಕ್ಕಾಗಿಯೇ ಪ್ರತಿಬಾರಿ ಚುನಾವಣೆ ಎಂದಾಗಲೂ, ಯಾವುದೋ ಒಂದು ನೆಪವನ್ನು ಮುಂದಿಟ್ಟುಕೊಂಡು ಚುನಾವಣೆ ಮುಂದಕ್ಕೆ ಹಾಕಿಸುವ ಪ್ರಯತ್ನದಲ್ಲಿಯೇ ಬಹುತೇಕ ಶಾಸಕರಿದ್ದಾರೆ. ಈ ಆಲೋಚನೆ ಕೇವಲ ಬಿಬಿಎಂಪಿಗೆ ಸೀಮಿತವಾಗದೇ, ರಾಜ್ಯದ ಎಲ್ಲ ಸ್ಥಳೀಯ ಸಂಸ್ಥೆಗಳ ಚುನಾವಣಾ ವಿಷಯದಲ್ಲಿಯೂ ಇದೆ ಎನ್ನುವುದು ವಾಸ್ತವ.

ಸ್ಥಳೀಯ ಸಂಸ್ಥೆ ಚುನಾವಣೆಗಳು ನಡೆದರೆ ಕನಿಷ್ಠ 15 ಸಾವಿರ ಮಂದಿ ಗೆಲುವಿನ ದಡ ಸೇರಿ ರಾಜಕೀಯ ಭವಿಷ್ಯ ರೂಪಿಸಿಕೊಳ್ಳುತ್ತಾರೆ. ಆದರೆ ಸ್ಥಳೀಯ ಸಂಸ್ಥೆ ಚುನಾವಣೆಯ ಹೆಸರಲ್ಲಿ ಮೂರೂ ಪಕ್ಷದಿಂದ ಕನಿಷ್ಠ 40 ಸಾವಿರ ಕಾರ್ಯಕರ್ತರು ಮುನ್ನೆಲೆಗೆ ಬರುತ್ತಾರೆ. ಸೋಲು ಗೆಲುವಿನ ಲೆಕ್ಕಾಚಾರಗಳು ಚುನಾವಣೆಯ ಬಳಿಕವಾದರೂ, ಕಾರ್ಯಕರ್ತರು, ನಾಯಕರು ಬೂತ್ ಮಟ್ಟದಲ್ಲಿ ಪಕ್ಷದ ಸಂಘಟನೆಗೆ ಒತ್ತು ನೀಡುತ್ತಾರೆ. ಆದರೆ ಈ ಚುನಾವಣೆ ನಡೆಯುವ ನಂಬಿಕೆಗಳೇ ಇಲ್ಲದಿರುವುದರಿಂದ ಸ್ಥಳೀಯ ಸಂಸ್ಥೆ ಚುನಾವಣೆಯ ನಿರೀಕ್ಷೆಯಲ್ಲಿ ಪಕ್ಷದ ಕಾರ್ಯಗಳಲ್ಲಿ ತೊಡಗಿದ್ದ ಬಹುತೇಕರು ಪಕ್ಷದ ಕೆಲಸದತ್ತ ಮುಖ ಮಾಡದೇ, ತಮ್ಮ ವೈಯಕ್ತಿಕ ವ್ಯವಹಾರಗಳಲ್ಲಿ ತೊಡಗಿದ್ದಾರೆ. ಈ ರೀತಿ ರಾಜಕೀಯದಲ್ಲಿ ನಿಷ್ಕ್ರಿಯರಾಗಿರುವ ಕಾಂಗ್ರೆಸ್ ಕಾರ್ಯಕರ್ತರೊಬ್ಬರು, "ನಿತ್ಯ ಮನೆ ಮುಂದೆ ಹತ್ತಾರು ಜನ ಬರುತ್ತಾರೆ. ಅವರಿಗೆ ಕಾಫಿ-ಟೀ ಎಂದರೂ ತಿಂಗಳಿನಿಂದ ಲಕ್ಷಕ್ಕೂ ಹೆಚ್ಚು ಖರ್ಚಾಗುತ್ತದೆ. ಇಷ್ಟು ಖರ್ಚು ಮಾಡಿದರೂ ಯಾವುದೇ ಲಾಭವಿಲ್ಲ ಎಂದಾಗ ನಾವೇಕೆ ಕೆಲಸ ಮಾಡಬೇಕು? ಈಗಿನ ಸ್ಥಿತಿ ನೋಡಿದರೆ ಯಾವ ಶಾಸಕರಿಗೂ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಬೇಕು ಎನ್ನುವ ಇಚ್ಛೆ ಇಲ್ಲ. ಹೀಗಿರುವಾಗ, ಸುಮ್ಮನೆ ಕಾರ್ಯಕರ್ತರ ಪಡೆ ಕಟ್ಟಿಕೊಂಡು ಓಡಾಡುವ ಬದಲು ಮನೆ ಕೆಲಸ, ವ್ಯವಹಾರವನ್ನಾದರೂ ನೋಡಿಕೊಳ್ಳುತ್ತೇವೆ" ಎಂದಿದ್ದರು. ಇದು ಕೇವಲ ಕಾಂಗ್ರೆಸ್ ಕಾರ್ಯಕರ್ತನ ಮಾತಲ್ಲ, ಬದಲಿಗೆ ಮೂರೂ ಪಕ್ಷದ ಕಾರ್ಯಕರ್ತರ ಅಂತರಂಗದ ಮಾತಾಗಿದೆ.

ಯಾವುದೇ ಒಂದು ಪಕ್ಷವು ಸುದೀರ್ಘ ಕಾಲದವರೆಗೆ ಬಲಿಷ್ಠವಾಗಿರಬೇಕು ಎಂದರೆ ಆ ಪಕ್ಷದ 'ಬೇರು'ಗಳೆನಿಸಿರುವ ಕಾರ್ಯಕರ್ತರು ಗಟ್ಟಿಯಾಗಿರಬೇಕು. ಆ ಬೇರುಗಳು ಗಟ್ಟಿಯಾಗಿರಲು ಸಮಯಕ್ಕೆ ಸರಿಯಾಗಿ 'ಅಧಿಕಾರ' ಅಥವಾ 'ಜವಾಬ್ದಾರಿ' ಎನ್ನುವ ನೀರನ್ನು ಹಾಕಿ ಪೋಷಿಸುತ್ತಿರಬೇಕು. ಆದರೆ ಮೇಲಿನ ನಾಯಕರು ಸ್ವಹಿತಾಸಕ್ತಿಗಾಗಿ ಸೂಕ್ತ ಸಮಯದಲ್ಲಿ ಎರಡನೇ, ಮೂರನೇ ಹಂತದ ನಾಯಕರನ್ನು ಬೆಳೆಸುವ ಪ್ರಯತ್ನ ಮಾಡದಿದ್ದರೆ ಭವಿಷ್ಯದಲ್ಲಿ ಪಕ್ಷದ ಬುಡ ಅಲ್ಲಾಡುವ ಸಾಧ್ಯತೆಯಿರುತ್ತದೆ. ಕರ್ನಾಟಕದ ಇಂದಿನ ಪರಿಸ್ಥಿತಿಯಲ್ಲಿ, ಮೂರೂ ಪಕ್ಷಗಳು ತಂತಮ್ಮ ಕಾರ್ಯಕರ್ತರನ್ನು ಗಣನೆಗೆ ತೆಗೆದುಕೊಳ್ಳದೇ, ತಮ್ಮದೇ ಆದ 'ರಾಜಕೀಯ'ದಲ್ಲಿ ತೊಡಗಿರುವುದರಿಂದ ಎಲ್ಲ ಪಕ್ಷದ ಕಾರ್ಯಕರ್ತರು ಸಮಾನದುಃಖಿಗಳಾಗಿದ್ದಾರೆ ಎಂದರೆ ತಪ್ಪಾಗುವುದಿಲ್ಲ. ಮೂರೂ ಪಕ್ಷಗಳನ್ನು ಮೀರಿ, ಪರ್ಯಾಯ ಆಲೋಚನೆಗೆ ಸದ್ಯದ ರಾಜಕೀಯ ಸ್ಥಿತಿಯಲ್ಲಿ ಸಾಧ್ಯವಿಲ್ಲದೇ ಇರುವುದರಿಂದ ಅನೇಕ 'ಬಡ್ಡಿಂಗ್ ಪೊಲಿಟಿಷಿಯನ್ಸ್' ರಾಜಕೀಯ ಬಿಟ್ಟು ಬದುಕು ಕಟ್ಟಿಕೊಳ್ಳೋಣ ಎನ್ನುವ ಮನಸ್ಥಿತಿಗೆ ಜಾರಿರುವುದು ವಾಸ್ತವ. ಇನ್ನಾದರೂ ಸ್ಥಳೀಯ ಸಂಸ್ಥೆಗಳಿಗೆ ದಶಕದಿಂದ ನಡೆಯದ ಚುನಾವಣೆಯನ್ನು ನಡೆಸುವ ಮೂಲಕ ಎರಡನೇ, ಮೂರನೇ ಹಂತದ ನಾಯಕತ್ವ ಬೆಳೆಸುವ ನಿಟ್ಟಿನಲ್ಲಿ ಎಲ್ಲ ನಾಯಕರು ಆಲೋಚಿಸಬೇಕಿದೆ.

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಉತ್ಕೃಷ್ಟ ಲೇಖನ

ವಿನಾಯಕ ವೆಂ.ಭಟ್ಟ ಅವರು ತಮ್ಮ 'ವಿದ್ಯಮಾನ' ಅಂಕಣದಲ್ಲಿ (ಮಾ.16) ನೀಡಿದ 'ಕನ್ಯಾಸಮರ್ಪಣೆಯ ಭಾವೋತ್ಕರ್ಷದ ಕ್ಷಣ' ಎಂಬ ಬರಹವು, ವರ್ತಮಾನದ ನವವಿವಾಹಿತರ ಕಣ್ತೆರೆಸುವ ಉದ್ದೇಶದಿಂದಲೇ ರಚಿತವಾಗಿದೆ ಎನಿಸುತ್ತದೆ.

ಗಂಡಿನ ಪ್ರಭುತ್ವವನ್ನು ಹೊಂದಿರುವ ಈ ಜಗತ್ತು, ಹೆಣ್ಣೆಂಬ ಜೀವವು (ಅದು ಪತ್ನಿಯ ರೂಪದಲ್ಲಿರಲಿ ಅಥವಾ ತಾಯಿಯೇ ಆಗಿರಲಿ) ಗಂಡಿನ ಸೇವೆಗಾಗಿಯೇ ಮುಡಿಪಾಗಿರಿಸಲ್ಪಟ್ಟಿದೆ ಎಂದೇ ಭಾವಿಸುತ್ತದೆ. ಆಧುನಿಕ ಜಗತ್ತಿನ ಹೆಣ್ಣುಮಗಳು ತನಗಿರುವ ವಿದ್ಯಾಸಂಸ್ಕಾರದಿಂದಾಗಿ ಸಂಸಾರ ಮತ್ತು ಸಮಾಜವನ್ನು ಚೆನ್ನಾಗಿ ಬಲ್ಲವಳಾಗಿರುವುದರಿಂದ, ಬರೀ ಸೇವಕಿಯಾಗಿರಲು ಇಷ್ಟಪಡುವುದಿಲ್ಲ. ಸಂಸಾರದಲ್ಲಿ ಮಾತಿನ ಚಕಮಕಿ, ವಾಗ್ವಾದಗಳು ಬರುವುದು ಸಹಜ ಪ್ರಕ್ರಿಯೆ. 'ಇವಳು ಉಡಾಫೆಯವಳು, ಸರಿಯಿಲ್ಲ' ಎಂದು ಪತ್ನಿಯನ್ನು ತ್ಯಜಿಸುವ ಗಂಡು ಆಧುನಿಕ ಸಮಾಜದಲ್ಲಿ ಸ್ವೇಚ್ಛಾಚಾರಿಯಾಗಿದ್ದಾನೆ. ಇವನ ದಿಢೀರ್ ತೀರ್ಮಾನಗಳಿಗೆ ಹೆಣ್ಣು ಜೀವ ಬಲಿಯಾಗುತ್ತಿದೆ. ವಿದ್ಯೆಯಿಂದಾಗಿ ಹೆಣ್ಣಿಗೆ ಒದಗುವ ಜ್ಞಾನವ್ಯಾಪ್ತಿ ಮತ್ತು ವೈಶಾಲ್ಯಗಳೇ ಗಂಡಿಗೆ ಕಂಟಕವಾಗಿ ಕಾಣುವುದೂ ಇದೆ. ವಿವಾಹ ಬಂಧನಕ್ಕೊಳಗಾಗಿ, ಜೀವನಪರ್ಯಂತ ಮಾತಾ-ಪಿತೃಗಳಿಂದ ದೂರಾಗುವ ಹೆಣ್ಣುಜೀವದ ವಿಷಯದಲ್ಲಿ ಗಂಡು ಎನಿಸಿಕೊಂಡಾತ ವಿಹಿತವಾಗಿ ನಡೆದುಕೊಳ್ಳಬೇಕಾಗುತ್ತದೆ; ಗುಣ-ಸ್ವಭಾವಗಳಲ್ಲಿ ಎಷ್ಟೇ ವ್ಯತ್ಯಾಸಗಳಿದ್ದರೂ ಪತಿಯ ಸ್ಥಾನದಲ್ಲಿರುವ ಗಂಡು, ಸಹನೆ ಮತ್ತು ತ್ಯಾಗ ಮನೋಭಾವನೆಗಳಿಂದ ವರ್ತಿಸಬೇಕಾಗುತ್ತದೆ. ಈ ಪರಿಪಾಠವು ವ್ಯಕ್ತಿಗತ ನೆಲೆಯಲ್ಲಿಯೂ ಸಮಾಜದ ಹಿತದೃಷ್ಟಿಯಿಂದಲೂ ಒಳ್ಳೆಯದು.

ದಾಂಪತ್ಯ ಜೀವನದ ಪಾಠವೆಂಬಂತೆ ನಿರೂಪಿಸಲ್ಪಟ್ಟಿರುವ ಈ ಲೇಖನವು, ಮಾತೆತ್ತಿದರೆ 'ಡೈವೋರ್ಸ್' ಎಂಬ ಸುಲಭದ ಉತ್ತರವನ್ನು ಕಂಡುಕೊಳ್ಳುವ ವರ್ತಮಾನದ ಕೆಲ ವಿವಾಹಿತರಿಗೆ ಕಿವಿಮಾತಾಗಲಿ, ಹಿತನುಡಿಯಾಗಲಿ. ಪ್ರಾಚೀನದಿಂದ ಅರ್ವಾಚೀನದವರೆಗಿನ ವಿವಾಹ ಸಂಬಂಧಿತ ಪಾವಿತ್ರ್ಯಗಳ ಮಹತ್ವವನ್ನು ಮತ್ತು ಅವುಗಳ ಅಗತ್ಯವನ್ನು ಒತ್ತಿ ಹೇಳುವುದಕ್ಕಾಗಿ, ಶಕುಂತಲೆಯನ್ನು ಕಳುಹಿಸಿಕೊಡುವಾಗಿನ ಕಣ್ವ ಮಹರ್ಷಿಯವರ ಮಾತುಗಳನ್ನು ಉಲ್ಲೇಖಿಸಿರುವುದು ಲೇಖನದ ಉತ್ಕೃಷ್ಟತೆಯನ್ನು ಮತ್ತಷ್ಟು ಹೆಚ್ಚಿಸಿದೆ.

- ಚಿತ್ತರಂಜನ ಜೋಶಿ, ಬೆಂಗಳೂರು

ಸ್ವರ್ಗಕ್ಕಿಂತ ಮಿಗಿಲು

ಹುಟ್ಟೂರು ಎಂದರೆ ಎಲ್ಲರಿಗೂ ಪ್ರೀತಿಯೇ. ಆದರೆ ತಮ್ಮ ಹುಟ್ಟೂರು ಸಂತೇಶಿವರದಲ್ಲಿನ ಬಾಲ್ಯದ ಬದುಕು ಸುಖಕರವಾಗಿರದೆ ಸಂಕಟಮಯವಾಗಿದ್ದರೂ, 'ನನಗೆ ಹುಟ್ಟೂರೇ ಸ್ವರ್ಗ' ಎಂಬ ಸದ್ಭಾವವನ್ನು ಇಟ್ಟುಕೊಂಡಿರುವವರು ಖ್ಯಾತ ಸಾಹಿತಿ ಎಸ್.ಎಲ್.ಭೈರಪ್ಪನವರು. ತಮ್ಮೂರಿನ ಕೆರೆಗೆ ನೀರು ತರಬೇಕೆಂದು ಶತಪ್ರಯತ್ನ ಪಟ್ಟು, ಆ ನಿಟ್ಟಿನಲ್ಲಿ ಯಶಸ್ವಿಯೂ ಆದ ಅವರ ಸಾಹಸವನ್ನು ಪ್ರತಿಯೊಬ್ಬರೂ ಮೆಚ್ಚಲೇಬೇಕು. ತಂದೆಯ ಬೇಜವಾಬ್ದಾರಿ, ಸೋದರಮಾವನ ಕಿರುಕುಳ, ಪ್ಲೇಗು ಅಪ್ಪಳಿಸಿ ಸೋದರ-ಸೋದರಿ ಇಬ್ಬರನ್ನೂ ಒಂದೇ ದಿನದಂದು ಕಳೆದುಕೊಂಡಿದ್ದು ಮುಂತಾದ ದುರಂತಗಳಿಗೆ ಸಾಕ್ಷಿಯಾದವರು ಭೈರಪ್ಪನವರು. ತಾವು ಹದಿನಾರು ವರ್ಷದವರಿದ್ದಾಗ, ಪ್ಲೇಗ್‌ನಿಂದಾಗಿ ಸತ್ತ 6 ವರ್ಷದ ತಮ್ಮ ಸೋದರನ ಅಂತ್ಯಸಂಸ್ಕಾರಕ್ಕೆ ಯಾರೂ ಹೆಗಲು ಕೊಡದಿದ್ದಾಗ, ಆತನ ಹೆಣವನ್ನು ಹೆಗಲ ಮೇಲೆ ಹೊತ್ತುಕೊಂಡು ಹೋಗಿ ಸ್ವತಃ ಸುಟ್ಟುಹಾಕಿ ಬಂದವರು ಭೈರಪ್ಪನವರು. ಈ ಘಟನೆ ಎಂಥವರ ಮನವನ್ನೂ ಕಲಕದೇ ಇರುವುದಿಲ್ಲ. ಚಿಕ್ಕಂದಿನಲ್ಲೇ ಇಷ್ಟೆಲ್ಲಾ ಕಷ್ಟಗಳನ್ನು ಅನುಭವಿಸಿದ ಭೈರಪ್ಪನವರು, ತಮ್ಮ ತಾಯಿಯವರ ಇಚ್ಛೆಯಂತೆ ಓದಿನ ಕಡೆಗೆ ಹೆಚ್ಚು ಒಲವು ತೋರಿಸಿ ಉತ್ತಮ ಸಾಹಿತಿಯಾಗಿ ವಿಶ್ವದ ಮನೆಮಾತಾಗಿದ್ದು ಅವರಲ್ಲಿನ ಸಂಕಲ್ಪಶಕ್ತಿಗೆ ದ್ಯೋತಕ. ಆಳುಗರಿಂದ ಸ್ವಂತಕ್ಕೆ ಏನನ್ನೂ ನಿರೀಕ್ಷಿಸದೆ, ಯಾವುದೇ ಸನ್ಮಾನಗಳಿಗೆ ಆಸೆ ಪಡದೆ, ತಮ್ಮೂರಿನ ಕೆರೆಗೆ ನೀರು ಬೇಕು ಎಂದಷ್ಟೇ ಕೇಳಿದ ಭೈರಪ್ಪನವರ ವ್ಯಕ್ತಿತ್ವದಲ್ಲೇ ಮಹಾನತೆ ಅಡಗಿದೆ. ಭೈರಪ್ಪನವರ ಪ್ರಯತ್ನಕ್ಕೆ ಪ್ರತಿಯೊಂದು ಹಂತದಲ್ಲೂ ಸಹಕರಿಸಿದ 'ವಿಶ್ವವಾಣಿ' ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ಟರು, 25 ಕೋಟಿ ರು. ಅನುದಾನ ನೀಡಿದ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು, ಶಾಸಕ ಬಾಲಕೃಷ್ಣರವರು ಹಾಗೂ ಈ ಕಾರ್ಯದಲ್ಲಿ ಸಹಕರಿಸಿದ ಪ್ರತಿಯೊಬ್ಬರೂ ಅಭಿನಂದನಾರ್ಹರು.

- ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು

ವಿವಿ ಮುಚ್ಚಲಿ, ಬಿಡಲಿ; ಶಿಕ್ಷಣದ ಗುಣಮಟ್ಟ ಹೆಚ್ಚಲಿ!

ಸದಾಶಯ

ರವೀ ಸಜಂಗದ್ದೆ

vveditoped@gmail.com

ಇನ್ನೂ ಸಂಪೂರ್ಣ 'ಟೇಕಾಫ್' ಆಗಿಲ್ಲದ, ಬಿಳಿಯಾನೆಗಳಂತಾಗಿರುವ ರಾಜ್ಯದ 9 ವಿಶ್ವವಿದ್ಯಾಲಯಗಳನ್ನು ಮುಚ್ಚುವ/ಮುಂದುವರಿಸುವ ಕುರಿತು ಪರ-ವಿರೋಧದ ಚರ್ಚೆಗಳು ನಡೆಯುತ್ತಿವೆ. ಈ ವಿಷಯಕ್ಕೆ ಸಂಬಂಧಿಸಿ ಅನೇಕ ಕಾಂಗ್ರೆಸ್ಸಿಗರ ವಿರೋಧದ ಜತೆಗೆ, ಬಿಜೆಪಿ ನಾಯಕರು ಸದನದ ಒಳಗೆ ಮತ್ತು ಹೊರಗೆ ಹೋರಾಟ ನಡೆಸುವ ಸುಳಿವು ಸಿಕ್ಕ ಪರಿಣಾಮ, ಈ ವಿವಿಗಳನ್ನು ಮುಚ್ಚುವ/ಮುಂದುವರಿಸುವ ಕುರಿತಂತೆ ಸರಕಾರದಲ್ಲಿನ್ನೂ ಯಾವುದೇ ಸ್ಪಷ್ಟತೆ ಇದ್ದಂತಿಲ್ಲ. "ವಿವಿಗಳನ್ನು ಮುಚ್ಚುವ ಬದಲು, ಈಗಿರುವ ಇತರ ಪ್ರತಿಷ್ಠಿತ (?!) ವಿವಿಗಳ ಮಾದರಿಯಲ್ಲಿ ಹಂತಹಂತವಾಗಿ ಮೇಲ್ದರ್ಜೆಗೇರಿಸಲಾಗುವುದು" ಎಂದು ಸರಕಾರ ಹೇಳುತ್ತಿದೆ. ಹಾಗಾದಲ್ಲಿ ಅದು ಒಂದು ರೀತಿಯಲ್ಲಿ ಸ್ವಾಗತಾರ್ಹ ಬೆಳವಣಿಗೆಯೇ! ಆದರೆ, ಆ ನಿರ್ಧಾರದಿಂದಾಗಿ ವಿವಿಗಳ ಈಗಿರುವ ಸಮಸ್ಯೆಗೆ ಮತ್ತಷ್ಟು ಕೂಡಿಕೊಂಡು, ಆರ್ಥಿಕ ಹೊರೆ ಇನ್ನೂ ಹೆಚ್ಚಾಗಿ ಗಾಯದ ಮೇಲೆ ಮತ್ತಷ್ಟು ಬರೆ ಎಳೆದಂತಾಗುತ್ತದೆ.

ರಾಜ್ಯದಲ್ಲಿ ಈಗಿರುವ ಹಳೆಯ ವಿವಿಗಳಿಗೇ ಅಗತ್ಯ ಅನುದಾನವನ್ನು ಕೊಡಲಾಗದೆ ಸರಕಾರ ಒದ್ದಾಡುತ್ತಿದೆ, ಇದರಿಂದಾಗಿ ವಿವಿಗಳು ಸುಗಮವಾಗಿ ಕಾರ್ಯನಿರ್ವಹಿಸಲಾಗುತ್ತಿಲ್ಲ, ಅನೇಕ ವಿವಿಗಳಲ್ಲಿ ಸಿಬ್ಬಂದಿಗೆ ತಿಂಗಳ ವೇತನ ನೀಡಲೂ ಸಾಲ ಮಾಡಬೇಕಾದ ಪರಿಸ್ಥಿತಿಯಿದೆ. ಹೀಗಿರುವಾಗ, ಹೊಸ ವಿವಿಗಳನ್ನು ಉಳಿಸಿಕೊಳ್ಳುವ ನಿರ್ಧಾರಕ್ಕೆ ಬದ್ಧವಾದರೆ, 'ಇರುವ ಒಂದು ಮಗುವಿನ ಸಂಸಾರವನ್ನೇ ನಿಭಾಯಿಸಲು ಹೆಣಗುತ್ತಿರುವಾತನ ಹೆಂಡತಿಯು ತ್ರಿವಳಿ ಮಕ್ಕಳಿಗೆ ಜನ್ಮ ನೀಡಿದ' ಪರಿಸ್ಥಿತಿ ಎದುರಾಗಬಹುದಲ್ಲವೇ?!

ಕರ್ನಾಟಕದಲ್ಲಿ ಈ ಹಿಂದೆ ಆಡಳಿತ ನಡೆಸಿದವರು ದೂರಾಲೋಚನೆ ಮಾಡದೆಯೇ, ಪ್ರಮಾಣಿತ ಮಾನದಂಡಗಳನ್ನು ಅನುಸರಿಸದೆಯೇ, ತಂತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಬೇಕಾಬಿಟ್ಟಿಯಾಗಿ ವಿವಿಗಳನ್ನು ಅನುಮೋದಿಸಿ ಸ್ಥಾಪಿಸಿದ್ದಾರೆ. ಯಾವುದೇ ಹೊಸ ವಿವಿಯ ಸ್ಥಾಪನೆಗೆ ಪಾಲಿಸಬೇಕಾದ ಒಂದಷ್ಟು ಶಿಫಾರಸು ಮತ್ತು ಮಾನದಂಡಗಳನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ದಾಖಲೀಕರಿಸಿದೆ; ಆದರೆ ಅದರಲ್ಲಿನ ಕನಿಷ್ಠ ಅಂಶಗಳನ್ನೂ ಪರಿಗಣಿಸದೆ ಕಾಲಕಾಲಕ್ಕೆ ವಿವಿಗಳನ್ನು ಘೋಷಿಸಲಾಗಿದೆ. ಹೊಸ ವಿವಿಯ ಸ್ಥಾಪನೆ, ಸಂಪೂರ್ಣ ಬೆಳವಣಿಗೆ ಮತ್ತು ಸಾಮಾನ್ಯ ಕಾರ್ಯನಿರ್ವಹಣೆಗೆ 50ರಿಂದ 250 ಎಕರೆ ಭೂಮಿ ಬೇಕು. ಜತೆಗೆ ಕಟ್ಟಡ, ವೇತನ, ನಿರ್ವಹಣೆ ಮತ್ತಿತರ ವ್ಯವಸ್ಥೆಗಾಗಿ 5 ವರ್ಷಗಳ ಕಾಲಾವಧಿಗೆ ಕನಿಷ್ಠ 370 ಕೋಟಿ ರುಪಾಯಿಗಳನ್ನು ಸರಕಾರ ವ್ಯಯಿಸಬೇಕು ಎನ್ನುವ ಸೂಚನೆ ನೀಡಲಾಗಿದೆ. ಆದರೆ ಪ್ರಸ್ತುತ ಚರ್ಚೆಯಲ್ಲಿರುವ ಎಲ್ಲಾ 9 ವಿವಿಗಳಿಗೆ ಕಳೆದ ಕೆಲ ವರ್ಷಗಳಲ್ಲಿ ಸರಕಾರ ನೀಡಿದ ಅನುದಾನ ಕೇವಲ 2 ಕೋಟಿ! ಪರಿಣಾಮವಾಗಿ, ಅವು ಕಟ್ಟಡ ಸೇರಿದಂತೆ ಕನಿಷ್ಠ ಮೂಲಭೂತ ಸೌಕರ್ಯಗಳಿಲ್ಲದೆ ಅವ್ಯವಸ್ಥೆಯ ತಾಣಗಳಾಗಿವೆ, ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿವೆ. ಕೆಲ ವಿವಿಗಳ ಕುಲಪತಿಗಳು ಬಾಡಿಗೆ ಕಾರಿನಲ್ಲಿ ಓಡಾಡುತ್ತಿದ್ದಾರೆ. ಸಿಬ್ಬಂದಿ ನೇಮಕವಾಗಿಲ್ಲ, ಆದವರಿಗೂ ಕ್ಲುಪ್ತ ಸಮಯದಲ್ಲಿ ವೇತನ ಪಾವತಿಯಾಗುತ್ತಿಲ್ಲ.

ಲಭ್ಯ ಮಾಹಿತಿಯ ಪ್ರಕಾರ, ರಾಜ್ಯದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿವಿ, ರಾಜೀವ್ ಗಾಂಧಿ ಆರೋಗ್ಯ ವಿವಿ ಮತ್ತು ಕರ್ನಾಟಕ ರಾಜ್ಯ ಮುಕ್ತ ವಿವಿ ಸೇರಿದಂತೆ ಒಟ್ಟು 41 ಸರಕಾರಿ ವಿವಿಗಳಿವೆ. ರಾಜಕೀಯ ಪಕ್ಷಗಳ ಮುಖಂಡರು, ಕ್ರೈಸ್ತ ಸಂಘಟನೆಗಳು, ಮಠ-ಮಾನ್ಯಗಳ ನಿರ್ವಹಣೆಯಲ್ಲಿರುವ 27 ಖಾಸಗಿ ವಿವಿ ಮತ್ತು 11 ಡೀಮ್ಡ್ ವಿವಿಗಳಿವೆ. ಬೆಂಗಳೂರಿನಲ್ಲಿರುವ ಸೇಂಟ್ ಜೋಸೆಫ್ ವಿವಿಯು, ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ನಡೆಯುತ್ತಿರುವ ಮತ್ತೊಂದು ವಿವಿ. ಇವುಗಳ ಹೊರತಾಗಿ 10 ಉನ್ನತ ಶಿಕ್ಷಣ ಸಂಸ್ಥೆಗಳು ಕೇಂದ್ರ ಸರಕಾರದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ.

ರಾಜ್ಯದ ಎಲ್ಲಾ 41 ಸರಕಾರಿ ವಿವಿಗಳು ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುತ್ತವೆ. ಅವುಗಳಡಿ ಸಂಯೋಜಿತಗೊಂಡ ಅಂದಾಜು 3440 ಕಾಲೇಜುಗಳಿವೆ. ಮಂಜೂರಾದ 4158 ಬೋಧಕ ಹುದ್ದೆಗಳ ಪೈಕಿ 2266ಕ್ಕೆ ನೇಮಕವಾಗದೆ ಖಾಲಿ ಉಳಿದಿವೆ. ಈ ಕಾಲೇಜುಗಳಲ್ಲಿ 2300ರಷ್ಟು ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ. ಒಟ್ಟಿನಲ್ಲಿ ಯಾವ ವಿವಿಯೂ ಸುವ್ಯವಸ್ಥಿತವಾಗಿ ನಡೆಯುತ್ತಿಲ್ಲ ಮತ್ತು ಹೆಚ್ಚಿನ ವಿವಿಗಳಲ್ಲಿ ಆರ್ಥಿಕ ಬಿಕ್ಕಟ್ಟು ತೀವ್ರವಾಗಿದೆ.

ಒಂದು ಕಾಲಕ್ಕೆ ದೇಶಾದ್ಯಂತ ಖ್ಯಾತವಾಗಿದ್ದ ಮೈಸೂರು ವಿವಿಯು, ಮಂಗಳೂರು-ಬೆಂಗಳೂರು-ಶಿವಮೊಗ್ಗದಲ್ಲಿ ಪ್ರತ್ಯೇಕ ವಿವಿಗಳು ಸ್ಥಾಪನೆಯಾದ ಕಾರಣ ವ್ಯಾಪ್ತಿ ತಗ್ಗಿಸಿಕೊಂಡು ಈಗ ಮೈಸೂರಿಗಷ್ಟೇ ಸೀಮಿತವಾಗಿದೆ. ಪಿಂಚಣಿಗೂ ಹಣವಿಲ್ಲದೆ ವಾರ್ಷಿಕ 50 ಕೋಟಿ ರು. ಕೊರತೆ ಎದುರಿಸುತ್ತಿದೆ. ಚಾಮರಾಜನಗರ, ಹಾಸನ ಮತ್ತು ಮಂಡ್ಯ ಜಿಲ್ಲೆಗಳ ಕಾಲೇಜುಗಳು ಇತ್ತೀಚೆಗೆ ಹೊಸ ವಿವಿಗಳಡಿಯಲ್ಲಿ ಸಂಯೋಜನೆಗೊಂಡ ಕಾರಣಕ್ಕೆ ಮೈಸೂರು ವಿವಿಯ ಸಂಪನ್ಮೂಲವೂ ತಗ್ಗಿದೆ. ಹೆಸರಾಂತ ಬೋಧಕರಿದ್ದ ಈ ವಿವಿ ಈಗ ಪಾಠ-ಪ್ರವಚನಕ್ಕೆ ಗುತ್ತಿಗೆ ಆಧಾರದ ಅರೆಕಾಲಿಕ ಉಪನ್ಯಾಸಕರನ್ನು ನೆಚ್ಚಿದೆ.

ಕೆಲ ರಾಜಕಾರಣಿಗಳ ತೆವಲು ಮತ್ತು ದುರಾಸೆಗೆ ನಲುಗುತ್ತಿರುವ, 60 ವರ್ಷಗಳ ಇತಿಹಾಸವಿರುವ ಬೆಂಗಳೂರು ವಿವಿಯದ್ದು ಇನ್ನೊಂದು ದುರಂತ ಕಥೆ! ಸಾರ್ವಜನಿಕರು ಮತ್ತು ತಜ್ಞರ ವಿರೋಧದ ಮಧ್ಯೆಯೂ ಇದನ್ನು 'ಬೆಂಗಳೂರು ನಗರ' ಮತ್ತು 'ಬೆಂಗಳೂರು ಉತ್ತರ' ಎಂದು ವಿಭಜಿಸಿ ಕಾಲೇಜುಗಳನ್ನು ಹಂಚಲಾಯಿತು. ಕಳೆದ ವರ್ಷ ಸಲ್ಲಿಸಲಾಗಿದ್ದ 67 ಕೋಟಿ ರುಪಾಯಿಗಳ ಪ್ರಸ್ತಾವನೆಗೆ ಸರಕಾರದಿಂದ ಮಂಜೂರಾಗಿದ್ದು 15 ಕೋಟಿ ಮಾತ್ರ! ಪರಿಣಾಮವಾಗಿ, 1536 ನಿವೃತ್ತರ ಪಿಂಚಣಿಗೆ ಸಮಸ್ಯೆಯಾಗಿದೆ.

ಅಮೃತ ಮಹೋತ್ಸವ ವರ್ಷಾಚರಣೆಯಲ್ಲಿರುವ ಧಾರವಾಡದ ಕರ್ನಾಟಕ ವಿವಿಯು ನಿವೃತ್ತ ಉಪನ್ಯಾಸಕರು/ನೌಕರರಿಗೆ ಪಿಂಚಣಿ ನೀಡಲಾಗದೆ ಸುಸ್ತಾಗಿದೆ. ಈ ವಿವಿಯ ಬೋಧಕ ಹುದ್ದೆಗಳ ಮುಕ್ಕಾಲು ಭಾಗ ಖಾಲಿ ಉಳಿದಿದ್ದು, ಬಹುತೇಕ ಎಲ್ಲ ವಿಭಾಗಗಳಲ್ಲಿ ಅತಿಥಿ ಉಪನ್ಯಾಸಕರೇ ಪಾಠ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳು ಪಾವತಿಸುವ ಶುಲ್ಕವಷ್ಟೇ ಈ ವಿವಿಯ ಆದಾಯ. ಅದು ಏನೇನೂ ಸಾಲದು!

ಮಂಗಳೂರು ವಿವಿಯೂ ಕಳೆದ ಕೆಲ ವರ್ಷಗಳಿಂದ 'ಐಸಿಯು'ನಲ್ಲಿದೆ! ಯುಜಿಸಿಯಿಂದ ಬರುತ್ತಿದ್ದ ಅನುದಾನ ನಿಂತು ವರ್ಷಗಳೇ ಆಗಿವೆ, ರಾಜ್ಯ ಸರಕಾರದ ಅನುದಾನವೂ ಕಡಿತಗೊಂಡಿದೆ. ಬೋಧಕ ಹುದ್ದೆಗಳಿಗೆ ನೇಮಕ ಪ್ರಕ್ರಿಯೆ ನಡೆದು ಎಷ್ಟೋ ಕಾಲವಾಯಿತು. ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿಯನ್ನು ನೇಮಿಸಿಕೊಂಡು ವಿವಿ ಕುಂಟುತ್ತಾ ಸಾಗುತ್ತಿದೆ.

ಕಲಬುರ್ಗಿ ಮತ್ತು ಹಂಪಿ ವಿವಿಗಳ ಆರೋಗ್ಯವೂ ಕ್ಷೀಣಿಸಿದೆ. ಕಲಬುರ್ಗಿ ವಿವಿಯಲ್ಲಿ ಕೊನೆಯ ಬಾರಿ ನೇಮಕಾತಿ ನಡೆದಿದ್ದು 27 ವರ್ಷಗಳ ಹಿಂದೆ ಅಂದರೆ ನಂಬಲೇಬೇಕು! ಹಂಪಿ ವಿವಿಗೆ ಕೊನೆಯ ಬಾರಿಗೆ ಯುಜಿಸಿ ಅನುದಾನ ಬಂದು ವರ್ಷಗಳೇ ಆದವು! ಶಿಗ್ಗಾವಿಯ ಜಾನಪದ ವಿವಿ, ಹುಬ್ಬಳ್ಳಿಯ ಕಾನೂನು ವಿವಿ, ಮೈಸೂರಿನ ಡಾ.ಗಂಗೂಬಾಯಿ ಹಾನಗಲ್ ಸಂಗೀತ ವಿವಿ ಸೇರಿದಂತೆ, ವಿಭಿನ್ನ ದೃಷ್ಟಿಕೋನದೊಂದಿಗೆ ಸ್ಥಾಪಿತವಾದ ವಿವಿಗಳಿಗೂ ಸರಕಾರದ ಅನುದಾನ ಮರೀಚಿಕೆಯಾಗಿದೆ. ಕೃಷಿ ವಿವಿ ಮತ್ತು ತಾಂತ್ರಿಕ ಶಿಕ್ಷಣ ವಿವಿಗಳೂ ಕಾರ್ಯನಿರ್ವಹಿಸಲು ಹೆಣಗಾಡುತ್ತಿವೆ. ಇಷ್ಟು ಸಾಲದೆಂಬಂತೆ, ಬಹುತೇಕ ವಿವಿಗಳಲ್ಲಿ ಸಾಲುಸಾಲು ಹಗರಣಗಳು, ಪಿಎಚ್‌ಡಿ ಸೀಟುಗಳ ಮಾರಾಟ, ಕುಲಪತಿ ಮತ್ತಿತರ ಆಯಕಟ್ಟಿನ ಹುದ್ದೆಗಳಿಗೆ ದರಗಳ ನಿಗದಿ/ರಾಜಕೀಯ ಶಿಫಾರಸು/ವಶೀಲಿಬಾಜಿ ಹಾಗೂ ಭ್ರಷ್ಟಾಚಾರದ ಆರೋಪಗಳು ಕೇಳಿಬರುತ್ತಿವೆ. ಅಧ್ಯಯನಶೀಲತೆ, ಹೊಸದನ್ನು ಕೊಡುವಿಕೆ, ಸಂಶೋಧನೆ ಮತ್ತು ಅಭಿವೃದ್ಧಿ ವಿಚಾರದಲ್ಲಿ ರಾಜ್ಯದ ಬಹುತೇಕ ವಿವಿಗಳು ಎಡವಿವೆ ಮತ್ತು ಓಬೀರಾಯನ ಕಾಲದಲ್ಲಿವೆ ಎಂಬುದು ಕಹಿಸತ್ಯ.

ಇಷ್ಟೆಲ್ಲಾ ಅವಾಂತರಗಳ ನಡುವೆಯೂ, ರಾಜಕೀಯ ಮೈಲೇಜ್‌ಗಾಗಿ ಎಲ್ಲ ಅಧಿಕಾರಾರೂಢರೂ ಕಳೆದೊಂದು ದಶಕದಿಂದ ಒಟ್ಟಾರೆಯಾಗಿ 10 ಹೊಸ ವಿವಿಗಳನ್ನು ಸ್ಥಾಪಿಸಿದರು. ಆದರೆ ಅವುಗಳ ನಿರ್ವಹಣಾ ವೆಚ್ಚದ ಹೊರೆಯನ್ನು ಸರಿದೂಗಿಸಲು ಈಗಿನ ಸರಕಾರ ಹೆಣಗಾಡುತ್ತಿದೆ. ಅಪಾರ ಕೋಟಿಗಳಲ್ಲಿ ಅನುದಾನ ಬೇಡುವ ಈ ವಿವಿಗಳನ್ನು ಮುಚ್ಚುವ ಪ್ರಸ್ತಾವ ಸಲ್ಲಿಸಲು ತಜ್ಞರ ಸಮಿತಿಯೇ ಬೇಕೆಂದಿಲ್ಲ; ಅದಕ್ಕೆ ಪ್ರಾಥಮಿಕ ಶಿಕ್ಷಣ ಪಡೆದ ಒಬ್ಬ ಸಾಮಾನ್ಯ ವ್ಯಕ್ತಿ ಸಾಕು. ಹಾಗಂತ, ನಿರ್ವಹಿಸಲಾಗದಿರುವುದನ್ನು ಹಿಂದು-ಮುಂದು ನೋಡದೆ ಮುಚ್ಚುವುದೇ ಏಕೈಕ ಪರಿಹಾರವಲ್ಲ. ಹಾಗಾದರೆ ಏನು ಮಾಡಬಹುದು ಎಂಬುದನ್ನು ಅವಲೋಕಿಸೋಣ:

- ದಶಕಗಳಿಂದ ಅಸ್ತಿತ್ವದಲ್ಲಿರುವ ವಿವಿಗಳನ್ನು ಮೊದಲು ಆಮೂಲಾಗ್ರವಾಗಿ ರಿಪೇರಿ ಮಾಡಬೇಕು. ಅವುಗಳ ಬೇಕು-ಬೇಡಗಳನ್ನು ಪರಿಶೀಲಿಸಿ ಪೂರೈಸುವ ಕೆಲಸವಾಗಬೇಕು. ಅದಕ್ಕೆ ಒಂದಿಷ್ಟು ಅನುದಾನ ಎತ್ತಿಟ್ಟು ವಿನಿಯೋಗಿಸಬೇಕು. ಅಂಥ 20-22 ಹಳೆಯ ವಿವಿಗಳನ್ನು ಹಳಿಗೆ ತಂದು, ಗುಣಮಟ್ಟವನ್ನು ಮೇಲ್ದರ್ಜೆಗೇರಿಸಬೇಕು. ಈ ವಿವಿಗಳಲ್ಲಿ ತೂರಿಕೊಂಡಿರುವ ಎಲ್ಲ ನಕಾರಾತ್ಮಕ ವ್ಯವಸ್ಥೆಗಳು, ದಂಧೆಕೋರರು, ಕೆಲಸಗಳ್ಳರನ್ನು ಮುಲಾಜಿಲ್ಲದೆ ತೊಲಗಿಸಬೇಕು. ವಿವಿಗಳಲ್ಲಿ ರಾರಾಜಿಸುತ್ತಿರುವ ರಾಜಕಾರಣಕ್ಕೆ ಬ್ರೇಕ್ ಹಾಕಬೇಕು.
- ಹೀಗೆ ಹಂತಹಂತವಾಗಿ ವಿವಿಗಳ ಶುದ್ಧೀಕರಣವಾದಲ್ಲಿ, ಪ್ರವೇಶ ಪಡೆಯಲು ವಿದ್ಯಾರ್ಥಿಗಳು ಉತ್ಸುಕರಾಗುತ್ತಾರೆ. ಈ ಸಂದರ್ಭವನ್ನು ಸರಿಯಾಗಿ ಬಳಸಿಕೊಂಡು, ನಿರ್ವಹಣೆ ಕಷ್ಟವಿರುವ ಒಂದೊಂದೇ ವಿವಿ ಮತ್ತು ಅದರ ಅಧೀನದಲ್ಲಿರುವ ಕಾಲೇಜುಗಳನ್ನು ಅವಲೋಕಿಸಿ, ಗುಣಮಟ್ಟ ಸುಧಾರಿಸಿದ ಹಳೆಯ ವಿವಿಗಳ ಜತೆ ವಿಲೀನಗೊಳಿಸಬೇಕು. ಹಾಗಾದಾಗ ಕ್ರಮೇಣ ಗುಣಮಟ್ಟ ವೃದ್ಧಿಸಿ ಅವು ನಿಜಾರ್ಥದಲ್ಲಿ ಜ್ಞಾನದೇಗುಲಗಳಾಗುತ್ತವೆ. ಬಹುಪಾಲು ಜೊಳ್ಳು/ಹುಳುಕು ನಿವಾರಣೆಯಾಗಿ ವ್ಯವಸ್ಥೆ ಸಂಪೂರ್ಣ ಸ್ವಚ್ಛಗೊಳ್ಳುವವರೆಗೆ ಈ ಪ್ರಕ್ರಿಯೆ ಸಾಗುತ್ತಿದ್ದಲ್ಲಿ, ಕೊನೆಗೊಮ್ಮೆ ವಿವಿ/ಕಾಲೇಜು ಉತ್ಕೃಷ್ಟ ಮಟ್ಟಕ್ಕೇರುವುದು.
- ಉನ್ನತ ಶಿಕ್ಷಣ ಇಲಾಖೆಯ ಅವಾಂತರಗಳು ಜಗಜ್ಜಾಹೀರು. ಇದನ್ನು 'ಶುಚಿಗೊಳಿಸಿ' ಶೈಕ್ಷಣಿಕವಾಗಿ ಬಲಗೊಳಿಸುವ ಸಂಕಲ್ಪ ಆಳುಗರಿಂದ ಹೊಮ್ಮಬೇಕು. ಸರಕಾರ ನಡೆಸುವ ವಿವಿಗಳು ಗುಣಮಟ್ಟದ ಕೊರತೆಯಿಂದಾಗಿ ವಿಶ್ವಾಸಾರ್ಹ ಅಲ್ಲವೆಂದು ಸಾಬೀತಾದರೆ ಆ ಜಾಗವನ್ನು ಖಾಸಗಿ ಮತ್ತು ಡೀಮ್ಡ್ ವಿವಿಗಳು ಆಕ್ರಮಿಸಿಕೊಳ್ಳುತ್ತವೆ. ಹಾಗಾದಾಗ, ಸರಕಾರಿ ವಿವಿಗಳು ಮುಚ್ಚುತ್ತಾ ಹೋಗಿ ಖಾಸಗಿಯವರ (ಪರೋಕ್ಷವಾಗಿ ಕೆಲ ರಾಜಕಾರಣಿಗಳ) ಕಬಂಧಬಾಹು ಎಲ್ಲೆಡೆ ಚಾಚಿ, ಉನ್ನತ ಶಿಕ್ಷಣ ಮತ್ತಷ್ಟು ದುಬಾರಿಯಾಗಿ ಬಡವರಿಗೆ ಮರೀಚಿಕೆಯಾಗುತ್ತದೆ. ಹಾಗಾಗಿ ಸರಕಾರಿ ವಿವಿಗಳು ಉಳಿಯಬೇಕಾದ್ದು ಈಗಿನ ತುರ್ತು.

ವಿವಿಗಳನ್ನು ಅಚಾನಕ್ಕಾಗಿ ಮುಚ್ಚಲು ಅಥವಾ ಅವೈಜ್ಞಾನಿಕವಾಗಿ ವಿಲೀನಗೊಳಿಸಲು ನಿರ್ಧರಿಸುವ ಸ್ಥಾನದಲ್ಲಿರುವವರು ರಾಜಕೀಯವನ್ನು ಪಕ್ಕಕ್ಕಿಟ್ಟು ಮೇಲೆ ಸೂಚಿಸಿರುವಂತೆ ಆಲೋಚಿಸಿದರೆ, ಒಂದಷ್ಟು ಸಕಾರಾತ್ಮಕ ಫಲಿತಾಂಶ ಹೊಮ್ಮೀತು. ಇಲ್ಲಿನ ಒಟ್ಟಾರೆ ಆಶಯವಿಷ್ಟೇ- ವಿವಿಯನ್ನು ಮುಚ್ಚಲಿ, ಬಿಡಲಿ; ಶಿಕ್ಷಣದ ಗುಣಮಟ್ಟ ಹೆಚ್ಚಲಿ!

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಭಟ್ಟರ್ ಸ್ಕಾಚ್

- **ತಗಡೂರು ಸುಬ್ಬಣ್ಣ, ನಂಜನಗೂಡು**
ಭಟ್ರೇ, ದ್ರಾಕ್ಷಿ ಬೆಳೆಗಾರರು ಕ್ರೇಜಿ ಸ್ಟಾರ್ ರವಿಚಂದ್ರನ್ ಅವರನ್ನು ಯಾಕೆ ಇಷ್ಟಪಡುತ್ತಾರೆ?
– **ಪ್ರಣಯ ದೃಶ್ಯಗಳಲ್ಲಿ ದ್ರಾಕ್ಷಿಗೆ ಕೊಟ್ಟ ಮಹತ್ವದಿಂದಾಗಿ!**

- **ಸರ್ಪಭೂಷಣ ಶಾಸ್ತ್ರಿ, ನಂಜನಗೂಡು**
ಭಟ್ರೇ, ರನ್ಯಾ ಚಿನ್ನದ ಬಿಸ್ಕೆಟ್‌ಗಳನ್ನು ಯಾವ ಜಾಗದಲ್ಲಿ ಹುದುಗಿಸಿಕೊಂಡಿದ್ದಳು ಅಂತ ವಿಶದವಾಗಿ ವರದಿ ಮಾಡ್ಲಿಲ್ಲ ಏಕೆ?
– **ಅದು 'ಜಾಗ'ತಿಕ ಸಮಸ್ಯೆ!**

- **ಸತೀಶ ಎಲ್.ವಿ., ಮೈಸೂರು**
ಭಟ್ರೇ, ಓದುವಾಗ ನಿದ್ರೆ ಬರುತ್ತದಲ್ಲ?
– **ನಿದ್ರೆ ಮಾಡುವಾಗ ಓದುತ್ತೀಯ ಅಂತ ಅನಿಸುತ್ತೆ!**

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ಹೋಳಿ, ದೀಪಾವಳಿಯಿಂದ ಪಲ್ಯೂಷನ್ ಅಂತ ಅಮೀರ್ ಖಾನ್ ಹೇಳ್ತಾನಲ್ಲ?
– **ಪಾಪ್ಯುಲೇಷನ್‌ನಿಂದ ಇನ್ನೂ ಜಾಸ್ತಿ ಪಲ್ಯೂಷನ್ ಅಂತ ಆ ಅವಿವೇಕಿಗೆ ಹೇಳಬೇಕಿತ್ತು!**

- **ರೂಪಶ್ರೀ ಗುರುರಾಜ, ಬೆಂಗಳೂರು**
ಭಟ್ರೇ, ಆದರ್ಶ ಸಮಾಜ ಅಂದ್ರೆ ಯಾವುದು?
– **ವೀಕೆಂಡಿನಲ್ಲಿ ಏನೇ, ಎಷ್ಟೇ ತಿಂದರೂ ಕ್ಯಾಲರಿ ಜಾಸ್ತಿ ಆಗಲ್ಲ**

- **ಶ್ವೇತಾ ಬಿ.ಎಸ್., ಕಾರವಾರ**
ಭಟ್ರೇ, ಉಚಿತ ಬಸ್ ಪ್ರಯಾಣದಿಂದ ದೇವಸ್ಥಾನಗಳ ಆಡಳಿತ ಮಂಡಳಿ ಹಣ ಮಾಡಿಕೊಳ್ಳುತ್ತಿವೆ ಯಾವನೋ ಹೇಳಿದ್ದಾನಲ್ಲ?
– **ಏನೇ ಮಾಡಿದರೂ ಹಿಂದೂಗಳಿಗೆ ಅನುಕೂಲವಾಗಬಾರದು ಎಂಬುದು ಆತನ ಯೋಚನೆ ಆಗಿರಬೇಕು!**

- **ವಾಸುದೇವ ಹೊಳ್ಳ, ಚಿಕ್ಕಬಳ್ಳಾಪುರ**
ಭಟ್ರೇ, ಹಿಪ್ಪಿಯ ಹೆಂಡತಿಯ ಹೆಸರು ಏನಿರಬಹುದು?
– **ಮಿಸ್ಸಿಸಿಪ್ಪಿ!**

- **ಚೇತನಾ, ಗುಡಿಬಂಡೆ**
ಭಟ್ರೇ, ಮದುವೆ ಆಗುವ ತನಕ ಸಂತೋಷ ಅಂದರೆ ಏನು ಎಂಬುದೇ ಅನೇಕರಿಗೆ ಗೊತ್ತಿರುವುದಿಲ್ಲವಲ್ಲ?
– **ಆನಂತರ ಅದು ಗೊತ್ತಾದರೂ ಸಿಗುವುದಿಲ್ಲ!**

- **ಚನ್ನಕೇಶವ ಪಾಳ್ಯ, ಬೇಲೂರು**
ಭಟ್ರೇ, ಮನೆಯಲ್ಲಿ ಸದಾ ಶಾಂತಿ ನೆಲೆಸಿರಬೇಕು ಎಂದರೆ ಏನು ಮಾಡಬೇಕು?
– **ಶಾಂತಿ ಹೆಸರಿನವಳನ್ನು ಮದುವೆಯಾಗಬೇಕು!**

ದಿನವೂ ರಜೆಯಾದರೆ, ಭಾನುವಾರಕ್ಕೆಲ್ಲಿ ಮಜಾ?!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಮನುಷ್ಯನು ಬದುಕಿನಲ್ಲಿ ಹಣ ಮತ್ತು ಹೆಸರು ಸಂಪಾದಿಸಬೇಕು ಎಂಬುದೇನೋ ನಿಜ; ಆದರೆ ದೈಹಿಕವಾಗಿ ಕಷ್ಟಪಡುವುದರಿಂದ ಮಾತ್ರವೇ ಅದು ಎಂದಿಗೂ ಸಾಧ್ಯವಿಲ್ಲ. ಮನುಷ್ಯನ ಬುದ್ಧಿಶಕ್ತಿ, ಚಿಂತನೆ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ 'ಇಮ್ಯಾಜಿನೇಷನ್' ಅವನನ್ನು ಯಾವ ಎತ್ತರಕ್ಕೂ ಏರಿಸಬಲ್ಲದು ಎನ್ನುವುದಕ್ಕೆ ಸಾಕ್ಷಿಯಾಗಿ ನಿಂತಿದ್ದಾರೆ ಸ್ಟಾನ್ ಲಿ. ಹಣ ಮತ್ತು ಹೆಸರನ್ನು ಗಳಿಸುವುದು ಬದುಕಿನ ಒಂದು ಸಣ್ಣ ಭಾಗ; ನಂತರದ ಕಥೆಯಿದೆಯಲ್ಲಾ, ಬದುಕಿದೆಯಲ್ಲಾ, ಗಳಿಸಿದ ಹೆಸರು ಮತ್ತು ಸಂಪತ್ತನ್ನು ಉಳಿಸಿಕೊಳ್ಳುವುದು, ಬೆಳೆಸಿಕೊಳ್ಳುವುದು ಮತ್ತು ಜನಮಾನಸವು ಮಾಡಿಕೊಂಡಿದ್ದ ಕಲ್ಪನೆಯಂತೆ ಬದುಕುವುದು ಎಲ್ಲಕ್ಕಿಂತ ದೊಡ್ಡ ಸವಾಲು. ಈ ಸವಾಲನ್ನು ಜಯಿಸುವುದರಲ್ಲಿ ಮುಕ್ಕಾಲುಪಾಲು ಜನ ಎಡವುತ್ತಾರೆ. ಬದುಕು ಎಂದ ಮೇಲೆ ಸೋಲು-ಗೆಲುವು, ಏರಿಳಿತಗಳು ಇದ್ದದ್ದೇ. ಅದು ಇರಬೇಕು ಕೂಡ! ಎಲ್ಲಾ ದಿನಗಳೂ ರಜಾದಿನಗಳೇ ಆಗಿಬಿಟ್ಟರೆ, ಭಾನುವಾರಕ್ಕೆ ಈಗಿರುವ ವಿಶೇಷ ಬೆಲೆ ಇರುತ್ತಿರಲಿಲ್ಲ.

1922ರ ಡಿಸೆಂಬರ್ 28ರಂದು ಜನಿಸಿದ ಸ್ಟಾನ್ ಲಿ, ಯೆಹೂದಿ ರೀತಿನೀತಿಗಳಲ್ಲಿ ಬೆಳೆದರು. ಇವರ ತಂದೆ-ತಾಯಿ ಮೂಲತಃ ರುಮೇನಿಯನ್ನರು. ಸ್ಟಾನ್ ಲಿ ತನ್ನ ರುಮೇನಿಯನ್ ಮೂಲದ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ. ''ನನಗೆ ಆ ಬಗ್ಗೆ ಹೆಚ್ಚಿನದು ಗೊತ್ತಿಲ್ಲ, ನಾನು ರುಮೇನಿಯಾಗೆ ಹೋಗಿಲ್ಲ'' ಎನ್ನುವುದು ಅವರ ಮಾತು. ಸ್ಟಾನ್ ಹೆತ್ತವರ ಹಣಕಾಸು ಪರಿಸ್ಥಿತಿ ಉತ್ತಮವಾಗಿರಲಿಲ್ಲ. ಹೀಗಾಗಿ ಸ್ಟಾನ್ ಬಾಲ್ಯದಲ್ಲಿ ಹತ್ತಾರು ನೋವುಗಳನ್ನು ಅನುಭವಿಸಬೇಕಾಗಿ ಬಂತು. ಬಡತನವೆಂಬುದು 'ಬಾಳಿನಲ್ಲಿ' ಇದ್ದರೆ ಅದನ್ನು ಹೇಗೋ ಸಂಭಾಳಿಸಬಹುದು, ಆದರೆ ಬಡತನವು 'ಮನಸಿಗೆ' ಹತ್ತಬಾರದು. ಅದ್ಯಾವ ಜನ್ಮದ ಪುಣ್ಯವೋ ಗೊತ್ತಿಲ್ಲ, ಬಾಲಕ ಸ್ಟಾನ್ ಮಾನಸಿಕವಾಗಿ ಸಿರಿವಂತನಾಗಿದ್ದ. 1929ರ ಕಾಲಘಟ್ಟದಲ್ಲಿ ಅಮೆರಿಕ ದೇಶವು 'ಗ್ರೇಟ್ ಡಿಪ್ರೆಶನ್'ಗೆ ಒಳಗಾಗಿತ್ತು; ಅಂದರೆ ದೇಶದ ಆರ್ಥಿಕತೆ ಹದಗೆಟ್ಟು ಜನರು ಬದುಕನ್ನು ಅರಸಿಕೊಂಡು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಗುಳೆ ಹೋಗುವಂಥ ಸ್ಥಿತಿ ನಿರ್ಮಾಣವಾಗಿ ದೇಶ ನಲುಗುತ್ತಿತ್ತು. ಅಂತೆಯೇ, ಸ್ಟಾನ್ ಹೆತ್ತವರು ಅನ್ನವನ್ನು ಅರಸಿ ಒಂದು ಜಾಗದಿಂದ ಮತ್ತೊಂದಕ್ಕೆ ಗುಳೆ ಹೋಗುತ್ತಿದ್ದರು. ಆರೇಳು ವರ್ಷದ ಸ್ಟಾನ್ ಬಡತನವನ್ನು ಹತ್ತಿರದಿಂದ ನೋಡಿದ್ದು, ಇದನ್ನು ಬದಲಿಸಲು ಏನೂ ಮಾಡಲಾಗದ ಅಸಹಾಯಕತೆ ಮುಂದೆ ಸೂಪರ್ ಪವರ್ ಇರುವ, ಎಲ್ಲಾ ಸಮಸ್ಯೆಗಳನ್ನೂ ಕ್ಷಣಮಾತ್ರದಲ್ಲಿ ಸರಿಮಾಡಬಲ್ಲ ಕಾಲ್ಪನಿಕ ಹೀರೋಗಳ ಸೃಷ್ಟಿಗೆ ಕಾರಣವಾಗುತ್ತದೆ ಎಂದು ಅಂದಿಗೆ ಯಾರಿಗೂ ಗೊತ್ತಿರಲಿಲ್ಲ. 'ಇಮ್ಯಾಜಿನೇಷನ್' ಎಂಬುದು ಜ್ಞಾನಕ್ಕಿಂತ ಹೆಚ್ಚು ಬಲಶಾಲಿ ಎನ್ನುವುದನ್ನು ಸ್ಟಾನ್ ನಿಜ ಮಾಡುತ್ತಾರೆ. ಅವರು ಟೀನೇಜ್‌ಗೆ ಬರುವ ಸಮಯಕ್ಕೆ ಒಂದು ಕೊಠಡಿಯ ಮನೆಯಲ್ಲಿ ವಾಸಿಸುವಷ್ಟರ ಮಟ್ಟಿಗೆ ಅವರ ಆರ್ಥಿಕತೆ ಸುಧಾರಿಸಿತ್ತು ಎಂದು ಇತಿಹಾಸದಲ್ಲಿ ದಾಖಲಾಗಿದೆ ಎಂದರೆ, ಅದಕ್ಕಿಂತ ಮುಂಚಿನ ಅವರ ಬದುಕನ್ನು ಊಹಿಸಿಕೊಳ್ಳಬಹುದು.

ಮೇಲಿನ ಸಾಲುಗಳಲ್ಲಿ ಹೇಳಿದಂತೆ, ಬಾಲಕ ಸ್ಟಾನ್ ಮಾನಸಿಕವಾಗಿ ಸಿರಿವಂತನಾಗಿದ್ದ. ಹೀಗಾಗಿ ಬದುಕಿನಲ್ಲಿದ್ದ ಹಣಕಾಸಿನ ಬಡತನ ಆತನನ್ನು ಕುಗ್ಗಿಸಲಿಲ್ಲ. ಆ ನೋವಿನಲ್ಲೂ ಆತನಿಗೆ ಬರೆಯುವ ಹುಚ್ಚು ಮತ್ತು ಆಸಕ್ತಿ ಹೆಚ್ಚಾಗಿತ್ತು. ಆದರೆ, ಎಲ್ಲಿಂದ ಮತ್ತು ಹೇಗೆ ಶುರುಮಾಡಬೇಕು ಎಂದು ಗೊತ್ತಿಲ್ಲದ ಕಾರಣ ವರ್ತಮಾನ ಪತ್ರಿಕೆಗಳಿಗೆ ಸತ್ತವರ ಬಗ್ಗೆ ಸಂತಾಪ ಬರೆಯುವುದು, ಕಾರ್ಯಕ್ರಮದ ಪ್ರೆಸ್ ನೋಟ್ ಬರೆದುಕೊಡುವುದು ಮಾಡಿ ಒಂದಷ್ಟು ಪುಡಿಗಾಸು ಸಂಪಾದಿಸಲು ಶುರುಮಾಡಿದ. ಆದರೆ ಇಷ್ಟು ಮಾಡುವುದರಿಂದ ಬದುಕಿನ ಬಂಡಿ ಎಳೆಯುವಲ್ಲಿ ಹೆತ್ತವರಿಗೆ ಹೆಚ್ಚು ಸಹಾಯ ಆಗುತ್ತಿಲ್ಲ ಎಂದು ಅವನಿಗೆ ಅನಿಸುತ್ತದೆ.

ಹೀಗಾಗಿ, ತಮ್ಮ ಯೌವನದ ದಿನಗಳಲ್ಲಿ ಒಂದಲ್ಲ ಹತ್ತಾರು ಪುಡಿ ನೌಕರಿಯನ್ನು ಸ್ಟಾನ್ ಮಾಡುತ್ತಾರೆ. 15ನೇ ವಯಸ್ಸಿನಲ್ಲಿ ಹೈಸ್ಕೂಲ್ ಓದುತ್ತಿರುವಾಗ ಜೀವನದ ಮೊದಲ ತಿರುವನ್ನು ಕಾಣುತ್ತಾರೆ. ಮೊದಲ ಗೆಲುವು, ಮೊದಲ ಪ್ರವರ್ಧಮಾನವನ್ನು ಅವರು ಕಂಡಿದ್ದು ಆಗಲೇ. ಪ್ರಸಿದ್ಧ 'ನ್ಯೂಯಾರ್ಕ್ ಹೆರಾಲ್ಡ್' ಪತ್ರಿಕೆಯು 'ಬಿಗ್ಗೆಸ್ಟ್ ನ್ಯೂಸ್ ಆಫ್ ದಿ ವೀಕ್ ಕಾಂಟೆಸ್ಟ್' ಎನ್ನುವ ಸ್ಪರ್ಧೆಯನ್ನು ಏರ್ಪಡಿಸಿರುತ್ತದೆ. ಈ ಸ್ಪರ್ಧೆಯಲ್ಲಿ ಸ್ಟಾನ್ ಸತತವಾಗಿ 3 ವಾರ ಗೆಲ್ಲುತ್ತಾರೆ. ಈ ಸ್ಪರ್ಧೆಯ ಆಯೋಜಕರು, 'ಬೇರೆಯವರು ಕೂಡ ಗೆಲ್ಲಲಿ, ನೀವು ಇನ್ನು ಸ್ಪರ್ಧಿಸುವುದು ಬೇಡ' ಎಂದು ಹೇಳುತ್ತಾರೆ. ಇದು ಯುವಕ ಸ್ಟಾನ್‌ಗೆ ಅತೀವ ಆತ್ಮವಿಶ್ವಾಸವನ್ನು ನೀಡುತ್ತದೆ. ಅದೇ ಪತ್ರಿಕೆಯವರು, 'ನೀವು ವೃತ್ತಿಪರ ಬರಹಗಾರರಾಗಲು ಪ್ರಯತ್ನಿಸಬಹುದು'' ಎನ್ನುವ ಮಾತುಗಳನ್ನು ಕೂಡ ಆಡುತ್ತಾರೆ. ಸ್ಟಾನ್ ಅದೇ ವರ್ಷ ಬರೆದ ಕಥೆ 7ನೇ ಸ್ಥಾನ ಪಡೆಯುತ್ತದೆ, ಅದಕ್ಕೆ ಸಂಭಾವನೆಯಾಗಿ ಅವರಿಗೆ ಎರಡೂವರೆ ಡಾಲರ್ ಕೂಡ ಸಿಗುತ್ತದೆ. ಸ್ಟಾನ್ ವಿಶ್ವಪ್ರಸಿದ್ಧರಾದ ನಂತರ, ''ನನ್ನ ಬದುಕನ್ನು ಬದಲಿಸಿದ್ದು ಆ ಸ್ಪರ್ಧೆ, ಆ ಕಥೆಗೆ ಸಿಕ್ಕ ಸಂಭಾವನೆ'' ಎನ್ನುತ್ತಾರೆ. ಯಶಸ್ಸು ಎನ್ನುವುದು ಒಮ್ಮೆಲೇ ಬರುವುದಿಲ್ಲ, ನಿತ್ಯಜೀವನದಲ್ಲಿ ಸಿಗುವ ಸಣ್ಣ ಸಣ್ಣ ಗೆಲುವುಗಳ ಒಟ್ಟಾರೆ ಮೊತ್ತವೇ ಯಶಸ್ಸು. ಕೇವಲ ಎರಡೂವರೆ ಡಾಲರ್ ಪಡೆಯುವುದರಿಂದ ಶುರುವಾದ ಕಥೆ ಬರೆಯುವ ಪಯಣವು, ಮುಂದೆ ಸ್ಟಾನ್‌ರನ್ನು 'ಮಲ್ಟಿ ಮಿಲಿಯನೇರ್' ಮಾಡುತ್ತದೆ. ಊಹೆಗೂ ಮೀರಿದ ಹಣವನ್ನು ಅವರು ಸಂಪಾದಿಸುತ್ತಾರೆ, ತಪ್ಪುಗಳಿಂದ ಕಳೆಯುತ್ತಾರೆ. ಸಾಯುವ ವೇಳೆಯಲ್ಲೂ ಸ್ಟಾನ್ ಅವರ ನೆಟ್‌ವರ್ತ್ 70 ಮಿಲಿಯನ್ ಡಾಲರ್ ಆಗಿತ್ತು. ಕಲ್ಪನೆಗೆ ಇರುವ ಶಕ್ತಿಯ ಸಣ್ಣ ಉದಾಹರಣೆಯಿದು.

1939ರಲ್ಲಿ ಟೈಮ್ಲಿ ಕಾಮಿಕ್ಸ್ ಡಿವಿಷನ್‌ಗೆ ಸಹಾಯಕರಾಗಿ ಸ್ಟಾನ್ ಸೇರಿಕೊಳ್ಳುತ್ತಾರೆ. ಪಲ್ಪ್ ಮ್ಯಾಗಜಿನ್ ಇದನ್ನು ಹೊರತರುತ್ತಿರುತ್ತದೆ. ಮುಂದೆ, ಅಂದರೆ 1960ರ ಸಮಯದಲ್ಲಿ ಇದು 'ಮಾರ್ವೆಲ್ ಕಾಮಿಕ್ಸ್' ಎನ್ನುವ ಹೆಸರಿನಲ್ಲಿ ವಿಶ್ವಮಾನ್ಯತೆಯನ್ನು ಪಡೆದುಕೊಳ್ಳುತ್ತದೆ. ಆದರೆ ಅಂದಿಗೆ ಕಾಮಿಕ್ಸ್ ಹೆಚ್ಚಿನ ಜನಪ್ರಿಯತೆಯನ್ನು ಹೊಂದಿರಲಿಲ್ಲ. ''ಎಲ್ಲಿ ಕೆಲಸ ಮಾಡುತ್ತೀರಿ?'' ಎನ್ನುವುದೇ ಜನಸಾಮಾನ್ಯರ ಮೊದಲ ಮಾತು ಆಗಿರುತ್ತದೆ. ಯಾರಾದರೂ ಹೀಗೆ ಕೇಳಿದಾಗ, ''ಕಾಮಿಕ್ಸ್ ಬುಕ್‌ನಲ್ಲಿ ಸಹಾಯಕನಾಗಿ ಬರೆಯುತ್ತಿದ್ದೇನೆ'' ಎಂದರೆ ಜನ ಏನೆಂದುಕೊಂಡಾರು? ಎನ್ನುವ ಭಯದಲ್ಲಿ ಸ್ಟಾನ್ ತಮ್ಮ ಪೆನ್‌ನೇಮ್ ಆಗಿ 'ಸ್ಟಾನ್ಲಿ' ಎಂಬ ಹೆಸರನ್ನು ಇಟ್ಟುಕೊಳ್ಳುತ್ತಾರೆ. ಮುಂದೆ ಅದನ್ನೇ ಲೀಗಲ್ ನೇಮ್ ಆಗಿ ಕೂಡ ಮಾಡಿಕೊಳ್ಳುತ್ತಾರೆ.

1941ರಲ್ಲಿ ಇವರು ರಚಿಸಿದ 'ಕ್ಯಾಪ್ಟನ್ ಅಮೆರಿಕ' ಪುಸ್ತಕ ಮನೆಮಾತಾಗುತ್ತದೆ. ಅದು ಕಾಮಿಕ್ಸ್ ಇಂಡಸ್ಟ್ರಿಗೆ ಸ್ವರ್ಣಯುಗಾರಂಭ ಕೂಡ ಆಗುತ್ತದೆ. ನಂತರ ಅವರ 'ಕಾಮಿಕ್ಸ್ ದಿ ಡೆಸ್ಟ್ರಾಯರ್' ಕೂಡ ಪ್ರಸಿದ್ಧವಾಗುತ್ತದೆ. 1942-1945ರ ಅವಧಿಯಲ್ಲಿ ಅಮೆರಿಕದ ಸೇನೆಯಲ್ಲೂ ಸೇವೆ ಸಲ್ಲಿಸುತ್ತಾರೆ, 1946ರಲ್ಲಿ ಕಾಮಿಕ್ಸ್ ಲೋಕಕ್ಕೆ ಮರಳುತ್ತಾರೆ, 1947ರಲ್ಲಿ ಒಂದು ಕಾಮಿಕ್ ಬುಕ್ ಬರೆಯುತ್ತಾರೆ. ಅಲ್ಲಿಂದ 1961ರವರೆಗೆ ಜೀವನದ ಗತಿ ಪರವಾಗಿಲ್ಲ ಎನ್ನುವಂತಿರುತ್ತದೆ. ಯಾವುದನ್ನೇ ಆಗಲಿ ಸೋತೆವು ಎಂದು ಬಿಡಬಾರದು ಎನ್ನುವುದಕ್ಕೆ ಸ್ಟಾನ್ ಉತ್ತಮ ನಿದರ್ಶನ. ಅವರು ತಾವು ಮಾಡುತ್ತಿದ್ದ ಕೆಲಸದಲ್ಲಿ ನಂಬಿಕೆಯಿಟ್ಟು ತಾಳ್ಮೆಯಿಂದ ಕಾದರು. 1961ರಲ್ಲಿ 'ದಿ ಫೆಂಟಾಸ್ಟಿಕ್ ಫೋರ್'

ಎನ್ನುವ ಕಾಮಿಕ್ಸ್ ಬರೆಯುತ್ತಾರೆ. ಅದು ಅಮೆರಿಕ ಮಾತ್ರವಲ್ಲದೆ ಜಗತ್ತಿನಾದ್ಯಂತ ಹೆಸರು ತಂದು ಕೊಡುತ್ತದೆ. ಇಂದಿಗೂ ಈ ಕಾಮಿಕ್ಸ್‌ನ ಹೆಸರು ಕೇಳದವರಿಲ್ಲ. ನಂತರದ ವರ್ಷದಲ್ಲಿ, ಅಂದರೆ 1962ರಲ್ಲಿ ಸ್ಪೈಡರ್‌ಮ್ಯಾನ್, ಥೋರ್, ಹಲ್ಕ್ ಎನ್ನುವ ಪಾತ್ರಗಳನ್ನು ಸೃಷ್ಟಿಸುತ್ತಾರೆ. 1963ರಲ್ಲಿ 'ಎಕ್ಸ್ ಮ್ಯಾನ್' ಉದಯಿಸುತ್ತಾನೆ. ಡಾಕ್ಟರ್ ಸ್ಟ್ರೇಂಜ್, ಡೇರ್‌ಡೆವಿಲ್, ವಂಡರ್‌ಮ್ಯಾನ್, ಬ್ಲ್ಯಾಕ್ ಪ್ಯಾಂಥರ್, ಕ್ಯಾಪ್ಟನ್ ಮಾರ್ವೆಲ್ ಹೀಗೆ ಒಟ್ಟಾರೆ 300ಕ್ಕೂ ಹೆಚ್ಚು ಪಾತ್ರಗಳನ್ನು ಸೃಷ್ಟಿಸುತ್ತಾರೆ.

ಸ್ಪೈಡರ್‌ಮ್ಯಾನ್ ಮತ್ತು ಎಕ್ಸ್ ಮ್ಯಾನ್ ಅಮೆರಿಕದ ಸಂಸ್ಕೃತಿಯ ಭಾಗವಾಗಿ ಹೋಗಿದ್ದಾರೆ. ಜಗತ್ತಿನ ವಿಷಯಕ್ಕೆ ಬಂದರೂ ಹೆಚ್ಚುಕಡಿಮೆ ಈ ಕಾಲ್ಪನಿಕ ಹೀರೋಗಳು, ಜೀವವಿರುವ ಹೀರೋಗಳಿಗಿಂತ ಹೆಚ್ಚೇ ಪ್ರಸಿದ್ಧರು. 1922ರ ಡಿಸೆಂಬರ್ 28ರಂದು ಜನಿಸಿದ ಸ್ಟಾನ್, 2018ರ ನವೆಂಬರ್ 12ರಂದು ಈ ಜಗತ್ತಿಗೆ 'ಗುಡ್ ಬೈ' ಹೇಳಿ ಹೊರಡುವ ಮುನ್ನ 96 ವರ್ಷಗಳ ತುಂಬುಜೀವನವನ್ನ ಸವೆಸಿದ್ದರು. ಹೆಸರು, ಹಣದ ಜತೆಗೆ ಅದನ್ನ ಅನುಭವಿಸಲು ಆಯಸ್ಸು ಕೂಡ ಸಿಕ್ಕಿದ್ದು ಸುಕೃತ.

ಜಗತ್ತಿಗೆ ತನ್ನ ಮೊದಲ ಹಿಟ್ ಕಾಮಿಕ್ 'ದಿ ಫೆಂಟಾಸ್ಟಿಕ್ ಫೋರ್' ಕೊಟ್ಟಾಗ ಸ್ಟಾನ್‌ಗಿನ್ನೂ 39 ತುಂಬಿರಲಿಲ್ಲ! ಇದಾಗಿ ಕೆಲವೇ ವರ್ಷದಲ್ಲಿ ಲೆಜೆಂಡರಿ ಮಾರ್ವೆಲ್ ಯೂನಿವರ್ಸ್ ಅನ್ನು ಸೃಷ್ಟಿಸುತ್ತಾರೆ. ಲಾರ್ಜರ್ ದ್ಯಾನ್ ಲೈಫ್ ಕಾಮಿಕ್ ಹೀರೋಗಳಾದ ಸ್ಪೈಡರ್ ಮ್ಯಾನ್ ಮತ್ತು ಎಕ್ಸ್ ಮ್ಯಾನ್‌ಗಳ ಉದಯವಾಗುತ್ತದೆ. ಅಮೆರಿಕದ ಜತೆಗೆ ಇವರು ವಿಶ್ವದ ಮನೆಮಾತಾಗುತ್ತಾರೆ. 1960ರಿಂದ 1990ರವರೆಗೆ ಜಾಗತಿಕ ಮಟ್ಟದ ಮನ್ನಣೆ, ಯಶಸ್ಸು ಸಿಗುವ ಮಧ್ಯೆ, ಕಾಮಿಕ್ಸ್ ಬುಕ್ ಎಂದರೆ ಹೀಗೆ ಇರಬೇಕು ಎನ್ನುವ ಕಮಿಟಿಯ ಕೆಂಗಣ್ಣಿಗೆ ಗುರಿಯಾಗುತ್ತಾರೆ. ಅದರ ವಿರುದ್ಧ ಕಾನೂನು ಸಮರ ಸಾರುತ್ತಾರೆ. ಕೊನೆಗೂ ಆ ಸಂಸ್ಥೆ ತನ್ನ ರೀತಿ-ನೀತಿ-ನಿಯಮಗಳನ್ನು ಬದಲಿಸಿಕೊಳ್ಳುತ್ತದೆ. ಯಶಸ್ಸಿನ ಉತ್ತುಂಗದಲ್ಲಿದ್ದಾಗ, ಅಂದರೆ 1990ರಲ್ಲಿ ಮಾರ್ವೆಲ್ ಸಂಸ್ಥೆಯಿಂದ ಹೊರಬರುತ್ತಾರೆ. ವಾರ್ಷಿಕವಾಗಿ ಒಂದು ಮಿಲಿಯನ್ ಡಾಲರ್ ಹಣವನ್ನು ನೀಡುವುದರ ಜತೆಗೆ, ಬದುಕಿರುವವರೆಗೂ ಮಾರ್ವೆಲ್ ಸಂಸ್ಥೆಯ 'ಗೌರವ ಚೇರ್ಮನ್' ಎನ್ನುವ ಪಟ್ಟವನ್ನು ನೀಡಲು ಒಪ್ಪಂದವಾಗುತ್ತದೆ.

1998ರಲ್ಲಿ ಪೀಟರ್ ಪೌಲ್ ಎನ್ನುವವರ ಜತೆ ಸೇರಿಕೊಂಡು 'ಸ್ಟಾನ್ಲಿ ಮೀಡಿಯಾ' ಎನ್ನುವ ಸಂಸ್ಥೆಯನ್ನು ತೆರೆಯುತ್ತಾರೆ. ಸೂಪರ್ ಹೀರೋ ಕ್ರಿಯೇಷನ್, ಪ್ರೊಡಕ್ಷನ್ ಆ್ಯಂಡ್ ಮಾರ್ಕೆಟಿಂಗ್ ಮಾಡುವ ಇಂಟರ್ನೆಟ್ ಬೇಸ್ಡ್ ಸಂಸ್ಥೆ ಇದಾಗಿರುತ್ತದೆ. ಎರಡು ಸಾವಿರದ ಇಸವಿಯ ಡಾಟ್‌ಕಾಂ ಬಬಲ್ ಒಡೆಯುತ್ತದೆ. ಅಲ್ಲದೆ, ಪೌಲ್ ಇನ್ನಿತರ ಹೂಡಿಕೆದಾರರ ಜತೆ ಸೇರಿಕೊಂಡು ಷೇರುಗಳ ಮೌಲ್ಯದಲ್ಲಿ ಏರುಪೇರು ಮಾಡಿರುವುದಾಗಿ ಸ್ಟಾಕ್ ಎಕ್ಸ್‌ಚೇಂಜ್ ದೂರುತ್ತದೆ. 2001ರಲ್ಲಿ ಸಂಸ್ಥೆ ದಿವಾಳಿ ಘೋಷಿಸಿಕೊಳ್ಳುತ್ತದೆ. ಸ್ಟಾನ್ಲಿ ಇದರಲ್ಲಿ ಭಾಗಿಯಾಗಿಲ್ಲ ಎಂದು ಸ್ವತಃ ಸ್ಟಾನ್ಲಿ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಬೇಕಾಗುತ್ತದೆ. ಕೊನೆಗೆ ಈ ಕೇಸ್‌ನಲ್ಲಿ ಅವರು ಭಾಗಿಯಲ್ಲ ಎಂದು ನ್ಯಾಯಾಲಯ ಘೋಷಿಸುತ್ತದೆ.

ಸ್ಟಾನ್ಲಿ ಮೀಡಿಯಾ ದಿವಾಳಿಯಾದ ವರ್ಷ, ಅಂದರೆ 2001ರಲ್ಲೇ ಅದಕ್ಕೆ ಉತ್ತರ ಎನ್ನುವಂತೆ ಸ್ಟಾನ್ಲಿ POW ಎನ್ನುವ ಸಂಸ್ಥೆಯನ್ನು ಇನ್ನಿಬ್ಬರ ಜತೆಗೆ ಸೇರಿ ಕಟ್ಟುತ್ತಾರೆ. ಅವರ ಸ್ಟಾನ್ಲಿ ಮೀಡಿಯಾ ಸಂಸ್ಥೆಯನ್ನು 2007ರಲ್ಲಿ ಬೇರೆ ಹೂಡಿಕೆದಾರರು ಕೊಳ್ಳುತ್ತಾರೆ. ಕೊಂಡ ತಕ್ಷಣ, ತಮ್ಮಲ್ಲಿನ ಜ್ಞಾನ ಮತ್ತು ಕ್ಯಾರೆಕ್ಟರ್ ಬಳಸಿಕೊಂಡಿರುವುದಾಗಿ POW ಸಂಸ್ಥೆಯ ಮೇಲೆ ಕೇಸು ಹಾಕುತ್ತಾರೆ. ಈ ಮಧ್ಯೆ 2002ರಲ್ಲಿ ತಾವು ಹೊರಬಂದಿದ್ದ ಮಾರ್ವೆಲ್ ಸಂಸ್ಥೆಯ ಮೇಲೆ, ಸ್ಪೈಡರ್‌ಮ್ಯಾನ್ ಮೊದಲ ಚಿತ್ರದ ಲಾಭದಲ್ಲಿ ಭಾಗ ನೀಡಿಲ್ಲ ಎಂದು ಸ್ಟಾನ್ಲಿ ಕೇಸು ಹಾಕುತ್ತಾರೆ, ಬರೋಬ್ಬರಿ 10 ಮಿಲಿಯನ್ ಡಾಲರ್ ಪರಿಹಾರವನ್ನು ಕೇಳಿರುತ್ತಾರೆ. 2005ರಲ್ಲಿ ಈ ಕೇಸನ್ನು ಗೆಲ್ಲುತ್ತಾರೆ. ಇಂದಿಗೆ, ಅಂದರೆ ಸ್ಟಾನ್ಲಿ ಸಾವಿನ ನಂತರ 2020ರಿಂದ ಮಾರ್ವೆಲ್, ಜೀನಿಯಸ್ ಬ್ರಾಂಡ್ಸ್, POW ಎಂಟರ್‌ಟೈನ್‌ಮೆಂಟ್ ಮೂರೂ ಸಂಸ್ಥೆಗಳು ಸ್ಟಾನ್ಲಿ ಹೆಸರನ್ನು ತಮ್ಮ ಚಿತ್ರಗಳು ಮತ್ತು ಪುಸ್ತಕಗಳಲ್ಲಿ ಬಳಸಿಕೊಳ್ಳುವ ಹಕ್ಕುಗಳನ್ನು ಹಣ ಕೊಟ್ಟು ಪಡೆದುಕೊಂಡಿವೆ. ಸ್ಟಾನ್ಲಿ ಇದ್ದಾಗ ಆಗುತ್ತಿದ್ದ ಬಿಸಿನೆಸ್, ಅವರು ಸತ್ತ ನಂತರವೂ ಆಗುತ್ತಿದೆ. ಅವರು ಸೃಷ್ಟಿಸಿದ ಸೂಪರ್ ಹೀರೋಗಳಿಗೆ ಸಾವಿಲ್ಲ ನೋಡಿ!

ನಾರದ ಸಂಚಾರ

ಕಲಹಪ್ರಿಯ
naadigru@gmail.com

ಕಾಂಗ್ರೆಸ್ ಪಕ್ಷವು 'ಶಾಂತಿ'ನಿವಾಸವೇ?!

ನಿಮಗೆ ವಿಜಯಶಾಂತಿ ಗೊತ್ತುಂಟಲ್ಲವೋ?! ಅದೇ ಮಾರಾಯ್ರೇ... 'ಲೇಡಿ ಅಮಿತಾಭ್ ಬಚ್ಚನ್' ಎಂದೇ ಕಂಡಾಬಟ್ಟೆ ಫೇಮಸ್ ಆಗಿದ್ದ ತೆಲುಗು ಚಿತ್ರರಂಗದ ಲೇಡಿ ಸೂಪರ್‌ಸ್ಟಾರ್... ಅವರೀಗ ಭಾರಿ ಸುದ್ದಿಯಲ್ಲಿದ್ದಾರೆ ನೋಡಿ! ಕಾರಣ, ಇತ್ತೀಚೆಗಷ್ಟೇ ಅವರು ತೆಲಂಗಾಣ ಕಾಂಗ್ರೆಸ್‌ನಿಂದ 'ಎಂಎಲ್‌ಸಿ' ಅಭ್ಯರ್ಥಿಯಾಗಿ ನಾಮನಿರ್ದೇಶನಗೊಂಡು, ವಿಧಾನ ಪರಿಷತ್ತಿನ ಸದಸ್ಯರಾಗಲು ಸಜ್ಜಾಗಿದ್ದಾರೆ. ಇಷ್ಟು ಮಾತ್ರವೇ ಅಲ್ಲ ಸ್ವಾಮೀ, ತೆಲಂಗಾಣ ಸರಕಾರದ ಸಚಿವ ಸಂಪುಟವೂ ಸದ್ಯದಲ್ಲೇ ಪುನರ್‌ರಚನೆಗೊಳ್ಳಲಿರುವುದರಿಂದ, ಈ ಲೇಡಿ ಸೂಪರ್‌ಸ್ಟಾರ್‌ಗೆ ಮಂತ್ರಿಗಿರಿಯ ಬಂಪರ್ ಲಾಟರಿ ಹೊಡೆದರೂ

ಅಚ್ಚರಿಯಿಲ್ಲ ಎಂಬುದು ಅಲ್ಲಿನ ಒಂದಷ್ಟು 'ಇನ್ಫರ್ಮೆಂಟುಗಳು' ತ್ರಿಲೋಕ ಸಂಚಾರಿ ನಾರದರಿಗೆ ಒಪ್ಪಿಸಿರುವ ವರದಿ!

ತೆಲುಗು ಸಿನಿಮಾಗಳಲ್ಲಿ 'ದುಷ್ಟ ಶಿಕ್ಷಣೆ, ಶಿಷ್ಟ ರಕ್ಷಣೆ'ಯ ಪಾತ್ರಗಳನ್ನೇ ಹೆಚ್ಚಾಗಿ ನಿರ್ವಹಿಸಿದ ಹೆಗ್ಗಳಿಕೆ ವಿಜಯಶಾಂತಿ ಅವರದ್ದು. ಅದರಲ್ಲೂ, ನಮ್ಮ ಕನ್ನಡದ ಚರಣ್‌ರಾಜ್ ಅವರು ಖಳನಾಯಕರಾಗಿ ಕಾಣಿಸಿಕೊಂಡಿದ್ದ 'ಪ್ರತಿಘಟನ' ಚಿತ್ರದಲ್ಲಿ ವಿಜಯಶಾಂತಿ ಅಬ್ಬರಿಸಿದ ಪರಿಯನ್ನು ಕಂಡು, ''ಇವರು ರಾಜಕೀಯಕ್ಕೆ ಬಂದ್ರೆ, ಶಾನೆ ಚೆನ್ನಾಗಿರುತ್ತಲ್ವಾ?'' ಅಂದೋರು ಬಹಳಷ್ಟು ಮಂದಿ. ಇದು ಅದ್ಯಾವಾಗ ವಿಜಯಶಾಂತಿಯವರ ಕಿವಿಗೆ ಬಿತ್ತೋ ಗೊತ್ತಿಲ್ಲ, ಚಿತ್ರರಂಗವನ್ನು ಚಿಮ್ಮುಹಲಗೆಯಾಗಿಸಿಕೊಂಡು ರಾಜಕೀಯಕ್ಕೆ ಧುಮುಕಿಬಿಡೋದೇ?!

ಹಾಗೆ ನೋಡಿದರೆ, ರಾಜಕೀಯ ರಂಗದಲ್ಲೂ 'ವೈವಿಧ್ಯಮಯ' ಪಾತ್ರಗಳನ್ನು ನಿರ್ವಹಿಸಿದ್ದು ವಿಜಯಶಾಂತಿಯವರ ಹೆಗ್ಗಳಿಕೆ. 'ವೈವಿಧ್ಯಮಯ' ಅಂದಾಕ್ಷಣ ಅದನ್ನು ನೀವು 'ವಿಭಿನ್ನತೆ' ಎಂಬ ಪರಿಕಲ್ಪನೆಯೊಂದಿಗೆ ಸಮೀಕರಿಸಿಕೊಳ್ಳಬಾರದು; ಅವರು ವಿವಿಧ ಪಕ್ಷಗಳಿಗೆ ಜಂಪ್ ಮಾಡಿದ್ದನ್ನು ಸಂಕ್ಷೇಪಿಸಿ ಹಾಗೆ ಹೇಳಲಾಗಿದೆಯಷ್ಟೇ! ಈ ಮಾತಿಗೆ ಪುರಾವೆ ಬೇಕೇ, ಇಲ್ಲಿದೆ ನೋಡಿ- ಮೊದಲಿಗೆ ಬಿಜೆಪಿಯಿಂದ ತಮ್ಮ ರಾಜಕೀಯ ಪಯಣವನ್ನು ಶುರುಹಚ್ಚಿಕೊಂಡ ವಿಜಯಶಾಂತಿ, ನಂತರ ಅಲ್ಲೇಕೋ ಗಿಟ್ಟಲಿಲ್ಲವೆಂದು ಹೊರಬಂದು ತಮ್ಮದೇ ಆದ ಪಕ್ಷವನ್ನು ಪ್ರಾರಂಭಿಸಿದರು. ಅದೂ ಯಾಕೋ ಸರಿಹೋಗಲಿಲ್ಲವೆಂದು 'ಭಾರತ ರಾಷ್ಟ್ರ ಸಮಿತಿ' (ಬಿಆರ್‌ಎಸ್) ಪಕ್ಷವನ್ನು ಸೇರಿದರು. ಅದೂ ಯಾಕೋ ಅಡ್ಜಸ್ಟ್ ಆಗಲಿಲ್ಲ, 'ಹೋಗ್ ಅತ್ಲಾಗಿ' ಅಂದ್ಕೊಂಡು ಕಾಂಗ್ರೆಸ್‌ಗೆ ಕಾಲಿಟ್ಟರು. ಅಲ್ಲೂ ಪರಿಸ್ಥಿತಿ 'ಅನುಕೂಲಕರವಾಗಿ' ಇರಲಿಲ್ಲ ಅನ್ಸುತ್ತೆ, 'ಟಣ್' ಅಂತ ಬಿಜೆಪಿಗೆ ಜಿಗಿದರು. ಅಲ್ಲೊಂದಿಷ್ಟು ದಿನ ಏಗಿದ ನಂತರ ಮತ್ತೆ ಈಗ ಕಾಂಗ್ರೆಸ್ ಪಕ್ಷಕ್ಕೆ ಮರಳಿದ್ದಾರೆ ವಿಜಯಶಾಂತಿ. ಅವರು ಇಷ್ಟೊಂದು 'ಪಾತ್ರ ವೈವಿಧ್ಯ' ಮೆರೆದು ಮತ್ತೆ ಹೀಗೆ ಕಾಂಗ್ರೆಸ್‌ಗೇ ಮರಳಿರೋದನ್ನು ಕಂಡ ಕೆಲವರು, ''ಕಾಂಗ್ರೆಸ್ಸು ವಿಜಯ'ಶಾಂತಿ'ನಿವಾಸವೇ?'' ಎಂದು ಪ್ರಶ್ನಿಸುತ್ತಿದ್ದಾರಂತೆ!!

ಗ್ರಂಥೇತಿಹಾಸಿಕವಾಗಿ ಇಷ್ಟಲಿಂಗ ಪರಿಕಲ್ಪನೆ 8ನೇ ಶತಮಾನದಲ್ಲೂ ಇತ್ತು

ಬಸವ ಮಂಟಪ
ರವಿ ಹಂಜ್
vveditoped@gmail.com

ಭಾಗ-1

ವೈಜ್ಞಾನಿಕವಾಗಿ ಭಾರತದ ಇತಿಹಾಸದ ಕಾಲಮಾನವು ಹರಪ್ಪಾ-ಮೊಹೆಂಜೋದಾರೋ ನಾಗರಿಕತೆಯಿಂದ ಆರಂಭವಾಗುತ್ತದೆ. ಅದಕ್ಕೂ ಮುಂಚಿನ ಯಾವುದೇ ಐತಿಹಾಸಿಕ ದಾಖಲೆಗಳು ಈವರೆಗೆ ಸಿಕ್ಕದ ಕಾರಣ ಭಾರತೀಯ ಇತಿಹಾಸವನ್ನು ಇಲ್ಲಿಂದಲೇ ಆರಂಭಿಸಬೇಕಾಗಿದೆ. ಅಂತೆಯೇ ವೀರಶೈವದ ಮೂಲ ಕೂಡ ಹರಪ್ಪಾ-ಮೊಹೆಂಜೋದಾರೋ ಕಾಲವೇ ಎಂದು ಅಲ್ಲಿನ ಉತ್ಖನನದಿಂದ ತಿಳಿದುಬರುತ್ತದೆ. ಅಂದರೆ ಭಾರತಕ್ಕೆ ಯಾವ ಐತಿಹಾಸಿಕ ಕಾಲಮಾನದ ಮಾನ್ಯತೆ ಇದೆಯೋ ಅದೇ ಐತಿಹಾಸಿಕ ಕಾಲಮಾನದ ಮಾನ್ಯತೆ ವೀರಶೈವಕ್ಕೂ ಮತ್ತದರ ಇಷ್ಟಲಿಂಗ ಸಾಧನೆಗೂ ಇದೆ. ಅಂದರೆ ಭಾರತದ ಪರಂಪರೆಯಷ್ಟೇ ಪ್ರಾಚೀನ ಪರಂಪರೆಯು ವೀರಶೈವದ್ದೂ ಆಗಿದೆ!

ಇದಕ್ಕೆ ಪುರಾವೆಯಾಗಿ ಬ್ರಿಟಿಷ್ ಇತಿಹಾಸಜ್ಞ ಸರ್ ಜಾನ್ ಮಾರ್ಷಲ್ ತಮ್ಮ MohenjoDaro and the Indus Civilization ಸಂಶೋಧನಾ ಗ್ರಂಥದಲ್ಲಿ ''ಕಲ್ಲಿನಿಂದ ಮಾಡಿದ ಸಣ್ಣ ಲಿಂಗಾಕೃತಿಗಳು ಮೊಹೆಂಜೋದಾರೋ ಉತ್ಖನನದ ಸಮಯದಲ್ಲಿ ಸಿಕ್ಕಿದ್ದು, ಶೈವಾರಾಧನೆ ಅಥವಾ ಲಿಂಗಾರಾಧನೆಯು ಈ ಕಾಲದಲ್ಲಿಯೂ ಪ್ರಚಲಿತವಿತ್ತೆಂದು ಸಾಕ್ಷ್ಯವನ್ನು ನೀಡುತ್ತವೆ. ಇಲ್ಲಿ ದೊರೆತ ಸಣ್ಣ ಲಿಂಗಾಕೃತಿಗಳು ದಕ್ಷಿಣ ಭಾರತದಲ್ಲಿನ ಇಂದಿನ ವೀರಶೈವರು ಕೊರಳಿಗೆ ಕಟ್ಟಿಕೊಂಡಿರುವ, ಕರಂಡದಲ್ಲಿ ಇಟ್ಟುಕೊಳ್ಳುವ ಲಿಂಗಗಳಷ್ಟು ಚಿಕ್ಕದಿವೆ'' ಎಂದಿದ್ದಾರೆ. ಇವರ ಈ ಕೃತಿ 1931ರಲ್ಲಿ ಪ್ರಕಟಗೊಂಡಿದ್ದು, ಸರ್ ಜಾನ್ ಮಾರ್ಷಲ್ ಬ್ರಿಟಿಷ್ ಭಾರತದ ಭಾರತೀಯ ಪುರಾತತ್ವ ಇಲಾಖೆಯ ಡೈರೆಕ್ಟರ್ ಜನರಲ್ ಆಗಿ ಕಾರ್ಯ ನಿರ್ವಹಿಸಿದ್ದರು. ಆಸಕ್ತರು ಇವರ ಈ ಗ್ರಂಥವನ್ನು ಪರಿಶೀಲಿಸಬಹುದು. ಒಂದು ವೇಳೆ ಈ ಗ್ರಂಥವು ಅನುಪಲಬ್ಧವಾಗಿದ್ದರೆ ಹಂಪಿ ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿರುವ ಕರ್ನಾಟಕದ ಹೆಸರಾಂತ ಸಂಶೋಧಕರಾದ ಆರ್.ಸಿ.ಹಿರೇಮಠ ಅವರ 'ಮಹಾಯಾತ್ರೆ' ಕೃತಿಯನ್ನು ಪರಿಶೀಲಿಸಬಹುದು. ಅವರು ತಮ್ಮ ಈ ಕೃತಿಯಲ್ಲಿ ಸರ್ ಜಾನ್ ಮಾರ್ಷಲ್ ಅವರ ಗ್ರಂಥವನ್ನು ಉಲ್ಲೇಖಿಸುತ್ತ ತಮ್ಮ ಸಂಶೋಧನೆಯ ಇನ್ನಷ್ಟು ಪೂರಕ ವಿಷಯಗಳನ್ನು ಮಂಡಿಸಿದ್ದಾರೆ. ಇದೇ ರೀತಿ ಸಾಹಿತಿ ಜೆ.ರುದ್ರಪ್ಪನವರು 'ಶೈವಮತ' ಎಂಬ ತಮ್ಮ ಲೇಖನದಲ್ಲಿ ಸಹ ಸರ್ ಜಾನ್ ಮಾರ್ಷಲ್ ಅವರ ಗ್ರಂಥವನ್ನು ಆಕರವಾಗಿ ಉಲ್ಲೇಖಿಸಿದ್ದಾರೆ. ಇವರ ಈ ಲೇಖನವು ಅ.ನ.ಕೃ. ಸಂಪಾದಿಸಿರುವ 'ಭಾರತೀಯ ಸಂಸ್ಕೃತಿ ದರ್ಶನ' ಕೃತಿಯಲ್ಲಿ ಅಧ್ಯಾಯವಾಗಿದೆ (ಪುಟ 216).

ಮೊಹೆಂಜೋದಾರೋ ಉತ್ಖನನದಲ್ಲಿ ದೊರೆತ ಈ ಲಿಂಗಗಳು ಲಿಂಗಗಳಾಗಿದ್ದರೂ ಅವುಗಳ ಕೆಳಗಿನ ಪೀಠ ಯೋನಿಪೀಠ ಎಂದು ಹೇಳಲಾಗದು ಎಂದು ಆರ್ಥರ್ ಬಾಶಂ ಸಂದೇಹವನ್ನು ವ್ಯಕ್ತಪಡಿಸಿದ್ದರು. ಆದರೆ ಬ್ರಿಟಿಷ್ ಭಾರತದ ಮತ್ತಿಬ್ಬರು ಉತ್ಖನನ ಸಂಶೋಧಕರಾದ ಜೋನ್ಸ್ ಮತ್ತು ರಾಯನ್, ಹರಪ್ಪಾ ಮತ್ತು ಮೊಹೆಂಜೋದಾರೋದಲ್ಲಿ ತಮಗೆ ಲಿಂಗ ಮತ್ತು ಯೋನಿಪೀಠ ಇರುವ ಇಂದಿನ ರೂಪದ ಲಿಂಗಗಳೇ ಸಿಕ್ಕಿವೆ ಎಂದಿದ್ದಾರೆ. ಭಾರತ ಇತಿಹಾಸಜ್ಞೆ ವೆಂಡಿ ಡೋನಿಗರ್, ಸಿಂಧೂ ಕಣಿವೆ ನಾಗರಿಕತೆಯು ಬಳಸುತ್ತಿದ್ದ ಮೊಹರುಗಳಲ್ಲಿ ಒಂದಾದ ಪಶುಪತಿ ಮೊಹರಿನಲ್ಲಿರುವ ಲಿಂಗಾಕೃತಿಯನ್ನು ತೋರಿ ಇಲ್ಲಿ ಸಿಕ್ಕ ಪಳೆಯುಳಿಕೆಗಳು ಲಿಂಗಗಳೇ ಆಗಿರುವವು ಎಂದಿದ್ದಾರೆ. ಒಟ್ಟಾರೆ ಈ ಎಲ್ಲಾ ಉತ್ಖನನಗಳು ಮತ್ತು ಸಂಶೋಧನೆಗಳು ಲಿಂಗಾರಾಧನೆಯು ಸಿಂಧೂ ನಾಗರಿಕತೆಯ ಭಾಗವಾಗಿತ್ತು ಎಂದೇ ಪ್ರತಿಪಾದಿಸಿವೆ. ಹಾಗಾಗಿ ಲಿಂಗಾರಾಧನೆಯು ಭಾರತದಲ್ಲಿ ಆರ್ಯನ್ ವಲಸಿಗರು ಬರುವ ಮುಂಚಿನಿಂದಲೂ ಇದ್ದ ಮೂಲ ಸಂಸ್ಕೃತಿಯೆನ್ನಬಹುದು. ಅಲ್ಲಿಗೆ ಮೂಲನಿವಾಸಿ ಪಶುಪಾಲಕರ ಪಶುಪತಿಗೂ ಹರಪ್ಪಾ ಮೊಹೆಂಜೋದಾರೋ ಮೊಹರಿಗೂ ನೇರ ಸಂಬಂಧವಲ್ಲದೆ ಲಿಂಗ ಯಾನೆ (ವೀರ)ಶೈವಕ್ಕೆ ಮತ್ತವರ ಇಷ್ಟಲಿಂಗಕ್ಕೆ ಪುರಾವೆಯನ್ನೂ ಸ್ಥಾಪಿಸುತ್ತದೆ.

ಬ್ರಿಟಿಷ್ ಉತ್ಖನನ ಅಧಿಕಾರಿ ಸರ್ ಜಾನ್ ಮಾರ್ಷಲ್ ಅವರ ಮೊಹೆಂಜೋದಾರೋ ಉತ್ಖನನದಲ್ಲಿ ಸಿಕ್ಕ ಸಣ್ಣ ಲಿಂಗಾಕೃತಿಗಳನ್ನು ಶೈವಿಗರು ತಮ್ಮ ಕೊರಳಿಗೆ ಅಥವಾ ತೋಳಿಗೆ ಕಟ್ಟಿಕೊಂಡು ತಿರುಗುವ ಜಂಗಮ ಸಂಸ್ಕೃತಿಯವರು ಎಂದಿದ್ದಾರೆ. ಇದಕ್ಕೆ ಪೂರಕವಾಗಿ ವೀರಶೈವ ಪದದ ಪ್ರಾಚೀನತೆಯನ್ನು ಶಂ.ಬಾ.ಜೋಷಿಯವರು ವೇದಗಳ ಕಾಲಕ್ಕೆ ಒಯ್ಯುವರು. 'ಶಿವರಹಸ್ಯ'ವೆಂಬ ಅವರ ಕೃತಿಯಲ್ಲಿ, ''ನನಗೆ ತಿಳಿದಮಟ್ಟಿಗೆ ವೀರಶೈವ ಶಬ್ದದ ಮೂಲವು ಋಗ್ವೇದದಲ್ಲಿದೆ. ರುದ್ರನು ವೃಷಭನು, ಎಂದರೆ ವೀರನು. ಆದುದರಿಂದ ಆತನ ಉಪಾಸಕರೂ ವೀರರು; ಅದರಿಂದ ಈ ಹೆಸರು. ಹೀಗೆ ಬರಿಯ ತರ್ಕದಿಂದ ಇದನ್ನು ಎಣಿಕೆ ಹಾಕಬೇಕಾದುದಿಲ್ಲ. 'ಇಮಾ ರುದ್ರಾಯ ತವಸೇ ಕಪರ್ದಿನೇ ಕ್ಷಯದ್ವೀರಾಯ ಪ್ರಭರಾಮಹೇ ಮತಿಃ । ಯಥಾ ಶಮಸದ್ವಿಪದೇ ಚತುಸ್ಪದೇ ವಿಶ್ವಂ ಪುಷ್ಟಂ ಗ್ರಾಮೇ ಅಸ್ಮಿನ್ನನಾತುರಂ॥' ಅಂದರೆ, ಬಲಿಷ್ಟನೂ, ಜಟಾಧಾರಿಯೂ, ವೀರಪುತ್ರರನ್ನುಳ್ಳವನೂ ಆದ ರುದ್ರನನ್ನು ಕೊಂಡಾಡುವ; ಅದರಿಂದ ಈ ಊರಿನಲ್ಲಿ ಎರಡು ಕಾಲಿನವರ ಹಾಗೂ ನಾಲ್ಕು ಕಾಲಿನವರ ಕಲ್ಯಾಣವಾಗಿ ಎಲ್ಲರೂ ನಿರೋಗಿಗಳೂ ಪುಷ್ಟರೂ ಆಗುವರು. ಇದರ ಮುಂದಿನ ಮಂತ್ರದಲ್ಲಿಯೂ, ಬೇರೆ ಮಂಡಲಗಳಲ್ಲಿಯೂ ರುದ್ರಶಿವನು ವೀರರ ತಂದೆ, ವೀರರ ಒಡೆಯ ಎಂಬ ಮಾತುಗಳು ಅಲ್ಲಲ್ಲಿ ಬಂದಿವೆ. ಶಿವ (ರುದ್ರ) ನ ಪುತ್ರರು (ಶಿವಪುತ್ರರು) ಎಂದು ಗೌರವದಿಂದ ಹೇಳಿಕೊಳ್ಳುವ ಮತ್ತು ಆ ಬಗೆಯಾದ ದೃಢಶ್ರದ್ಧೆಯಿರುವ ಶಿವಭಕ್ತರಿಗೆ ಮಾತ್ರವಲ್ಲದೆ, ಬೇರೆ ಇನ್ನಾರಿಗೂ ವೀರ (ಶೈವ) ಎಂಬ ಹೆಸರು ಸಮರ್ಪಕವಾಗಲಾರದು. ಕರ್ನಾಟಕದಲ್ಲಿಯೇ ಈ ವೀರರು ರುದ್ರನ ಅನುಯಾಯಿಗಳಾದ ರುದ್ರೀಯರು ಇರುತ್ತಿರುವುದರಿಂದ ಈ ನಾಡಿನ ಜನಾಂಗಗಳ ವೇದಕಾಲದ ಐತಿಹ್ಯವನ್ನು ಅರಿತುಕೊಳ್ಳಲು ಈ ಶಬ್ದವು ಬಹಳ ಉಪಯುಕ್ತವಾಗಿದೆ. ವೀರ ಬಣಂಜುಗಳು, ವೀರ ಪಂಚಾಳರು ಎಲ್ಲರೂ ರುದ್ರೀಯರೇ'' ಎಂದಿದ್ದಾರೆ.

ಅಲ್ಲಿಗೆ ಇಂದಿನ ವೀರಶೈವರಲ್ಲಿರುವ ವರ್ಗಗಳಾದ ವೀರ ಮಾಹೇಶ್ವರ (ಜಂಗಮ), ವೀರ ಬಣಂಜು (ಬಣಜಿಗ), ವೀರ ಪಂಚಾಳ (ಪಂಚಮಸಾಲಿ) ರ ಬಗ್ಗೆ ಸಹ ಐತಿಹಾಸಿಕ ಸ್ಪಷ್ಟತೆ ಸಿಗುತ್ತದೆ. ಮತ್ತವರೆಲ್ಲರೂ ಇಷ್ಟಲಿಂಗಧಾರಿಗಳಾಗಿದ್ದರು.

ಈ ವೀರಶೈವ ಸಂಸ್ಕೃತಿಯು ಬೌದ್ಧರ ಮೇಲೆ ಸಾಕಷ್ಟು ಪ್ರಭಾವ ಬೀರಿತ್ತು. ಆ ಪ್ರಭಾವದಿಂದಲೇ ಬೌದ್ಧರು ಬುದ್ಧನ ಅಥವಾ ನಂತರದ ಬೌದ್ಧ ಗುರುಗಳ ಜೈವಿಕ ಪಳೆಯುಳಿಕೆಗಳಾದ ಹಲ್ಲು, ಮೂಳೆ, ಕೂದಲುಗಳನ್ನೋ ಕರಂಡಕಗಳಲ್ಲಿಟ್ಟು ಪೂಜಿಸುತ್ತಿದ್ದರು ಮತ್ತು ತಮ್ಮೊಟ್ಟಿಗೆ ದೇಶಾಂತರದಲ್ಲಿ ತೆಗೆದುಕೊಂಡು ಹೋಗುತ್ತಿದ್ದರು. ಮುಂದೆ ಸ್ತೂಪಗಳನ್ನು ಕಟ್ಟಲು ತೊಡಗಿದಾಗ ಆ ಸ್ತೂಪಗಳಲ್ಲಿ ಈ ಕರಂಡಕಗಳನ್ನು ಸ್ಥಾವರಗೊಳಿಸಲಾರಂಭಿಸಿದರು. ಆ ಕರಂಡಕಗಳ ಸಂಸ್ಕೃತಿಯಿಂದ ಪ್ರಭಾವಿತರಾಗಿ ಶೈವರು ತೋಳು ಕೊರಳಿಗೆ ಕಟ್ಟಿಕೊಳ್ಳುತ್ತಿದ್ದ ತಮ್ಮ ಲಿಂಗಗಳನ್ನು ಇಂಥ ಕರಂಡಕಗಳಲ್ಲಿಟ್ಟು ಅವುಗಳನ್ನು ತೋಳು ಕೊರಳಿಗೆ ಕಟ್ಟಿಕೊಳ್ಳಲಾರಂಭಿಸಿರಬೇಕು ಅಥವಾ ಶೈವಿಗರೇ ಬೌದ್ಧರ ಈ ಪದ್ಧತಿಯನ್ನು ಅಳವಡಿಸಿಕೊಂಡಿರಲೂಬಹುದು. ಒಟ್ಟಾರೆ ಲಿಂಗಗಳನ್ನು ಕರಡಿಗೆಯಲ್ಲಿಟ್ಟುಕೊಳ್ಳುವ ಸಂಸ್ಕೃತಿ ಸಹ ಕ್ರಿಸ್ತಶಕ ಒಂದನೇ ಶತಮಾನದಲ್ಲಿಯೇ ಬಳಕೆಯಲ್ಲಿದ್ದಿತು. ಪುನರ್ಜನ್ಮದಲ್ಲಿ ನಂಬಿಕೆಯಿರದ ಬೌದ್ಧರು ನಿರ್ವಾಣ ಹೊಂದಿದ ಜೀವಿಗಳ ಭೌತಿಕ ಪಳೆಯುಳಿಕೆಗಳಾದ ಹಲ್ಲು, ಕೂದಲು, ಮೂಳೆಗಳನ್ನು ಕರಂಡಕದಲ್ಲಿಟ್ಟು ಪೂಜಿಸಿದರೆ, ಶೈವರು ತಮ್ಮ ಆತ್ಮವನ್ನೇ ಲಿಂಗದ ರೂಪವಾಗಿಸಿಟ್ಟು ಪೂಜಿಸುತ್ತಿದ್ದರು.

ಕ್ರಿ.ಶ. 127ರಲ್ಲಿ ಕಾನಿಷ್ಕನ ಪಟ್ಟಾಭಿಷೇಕದ ಪ್ರಥಮ ವಾರ್ಷಿಕೋತ್ಸವದಲ್ಲಿ ರಚಿಸಿದ ಕರಂಡಕದ ಆಕಾರದಂತೆಯೇ ಶೈವಿಗರ ಲಿಂಗವಿಡುವ ಕರಂಡಕ ಯಾನೆ ಕರಡಿಗೆಯ ಆಕಾರವಿದೆ. ಹೀಗೆ ಪರಸ್ಪರ ಪ್ರಭಾವಿಸುವ ಸಂಸ್ಕೃತಿಯಿಂದಲೇ ಹಿಂದೂ, ಬೌದ್ಧ, ಜೈನ, ಪಾಶುಪತ ಶೈವಗಳು ಒಂದೇ ಸಂಸ್ಕೃತಿಯ ಕವಲುಗಳು ಎನಿಸುವುದು. ಕಾನಿಷ್ಕನ ಈ ಕರಂಡಕವು ಇಂದು ಪಾಕಿಸ್ತಾನದ ಪೇಶಾವರ್ ವಸ್ತುಸಂಗ್ರಹಾಲಯದಲ್ಲಿದೆ ಎಂಬುದು ಇಲ್ಲಿ ಉಲ್ಲೇಖಾರ್ಹ.

ಇದಿಷ್ಟು ಐತಿಹಾಸಿಕವಾಗಿ ವೀರಶೈವ, ಇಷ್ಟಲಿಂಗ, ಕರಡಿಗೆ ಮತ್ತು ವೀರಶೈವ ವರ್ಗ(ಜಂಗಮ, ಬಣಜಿಗ, ಪಂಚಮಸಾಲಿ)ದ ಸಂಸ್ಕೃತಿಯು ಭಾರತದಲ್ಲಿ ಬಸವಪೂರ್ವದ ಅದೆಷ್ಟೋ ಶತಮಾನಗಳಿಗೂ ಮುನ್ನವೇ ಇದ್ದಿತು ಎಂಬ ಪುರಾವೆಯನ್ನೊದಗಿಸುತ್ತದೆ. ಕ್ರಿ.ಶ. 11ನೇ ಶತಮಾನದ ವೀರಶೈವ ಕೊಂಡಗುಳಿ ಕೇಶಿರಾಜ ವಚನಗಳಲ್ಲಿರುವ ವಿಚಾರಗಳನ್ನೇ ಕಂದಪದ್ಯದ ರೂಪದಲ್ಲಿ ಬರೆದಿದ್ದಾನೆ ಎನ್ನಲಾಗಿದೆ. ಬಸವಣ್ಣನಿಗಿಂತ ಒಂದು ಶತಮಾನದಷ್ಟು ಹಿಂದಿನವನಾದ ಈತನ ಕುರಿತು ಶಿಲಾಶಾಸನಗಳಿರುವುದಲ್ಲದೆ ಆತನು ಇಷ್ಟಲಿಂಗ ಪೂಜೆ, ಜಂಗಮ ದಾಸೋಹ ಮಾಡುತ್ತಿದ್ದನೆಂದು ದಾಖಲೆಗಳು ಇವೆ.

ಆದರೆ ಬಸವಾಭಿಮಾನಿ ಸಂಶೋಧಕರು ಈತನ ಕಂದಪದ್ಯಗಳ ತಾಳೆಗರಿಗಳಲ್ಲಿ ಶ್ರೀ ಗುರು ಬಸವಲಿಂಗಾಯ ನಮಃ ಎಂದಿರುವ ಕಾರಣ ಇವೆಲ್ಲವೂ ಪ್ರಕ್ಷಿಪ್ತ ಎಂದು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ತಾಳೆಗರಿಗಳ ನಕಲು ಪ್ರತಿಗಳನ್ನು ಮಾಡುವಾಗ ಲಿಪಿಕಾರರು (ಗುಮಾಸ್ತರು) ತಮ್ಮ ತಮ್ಮ ಇಷ್ಟದೇವತೆಗಳ 'ನಮಃ', 'ಪ್ರಸನ್ನ' ಎಂದು ಬರೆಯುತ್ತಿದ್ದುದು ವಾಡಿಕೆ. ಹೀಗೆ 15ನೇ ಶತಮಾನದಲ್ಲಿ ನಕಲು ಮಾಡಿರುವ ವ್ಯಕ್ತಿ ಈ 'ನಮಃ' ಅನ್ನು ಬರೆದಿರಬಹುದು. ಆದರೆ ಇತರೆ ಆಕರಗಳನ್ನು ಗಮನಿಸಿದಾಗ ಕೊಂಡಗುಳಿಯ ಅಸ್ತಿತ್ವ ಬಸವಣ್ಣನಿಗಿಂತ ಹೆಚ್ಚು ವಾಸ್ತವ ಎನಿಸುತ್ತದೆ. ಆದರೆ ಇದೇ ತರ್ಕವನ್ನು ವಚನಗಳ ಓಲೆಗರಿಗೆ ಅನ್ವಯಿಸಿದರೆ ಈವರೆಗೆ ಸಿಕ್ಕಿರುವ ವಚನಗಳ ಓಲೆಗರಿಗಳು 15ನೇ ಶತಮಾನದವು ಮತ್ತು ಶರಣರು 12ನೇ ಶತಮಾನದಲ್ಲಿ ಕ್ರಾಂತಿ ಮಾಡಿದ್ದರು ಎನ್ನುವ ಯಾವ ಪುರಾವೆಗಳೂ ಇಲ್ಲ ಎಂಬಲ್ಲಿಗೆ ಬಸವಾಭಿಮಾನಿಗಳ ತರ್ಕ ಬಿದ್ದುಹೋಗುತ್ತದೆ.

ಇದೇ ರೀತಿ ದೇವರ ದಾಸಿಮಯ್ಯ ಸಹ ಬಸವಪೂರ್ವ ಇಷ್ಟಲಿಂಗ ಆರಾಧನೆಯ ವೀರಶೈವ ವಚನಕಾರ ಎಂದು ಸಾಬೀತಾಗಿದೆ. ಗುರು ಲಿಂಗ ಜಂಗಮ ಉಲ್ಲೇಖದ ಆತನ ವಚನವೊಂದು ಹೀಗಿದೆ: 'ಗುರುಭಕ್ತನಾದಲ್ಲಿ ಘಟಧರ್ಮ ವಳಿದು, ಲಿಂಗಭಕ್ತನಾದಲ್ಲಿ ಮನಸಂಚಲ ನಿಂದು, ಜಂಗಮ ಭಕ್ತಿಯಲ್ಲಿ ಧನದಾಸೆಯಳಿದು, ತ್ರಿವಿಧಾಂಗ ಸಲೆ ಸಂದು ತ್ರಿಕರಣ ಶುದ್ಧನಾಗಿದ್ದವಂಗೆ, ಮತ್ರ್ಯ ಕೈಲಾಸವೆಂಬ ಕಾಳುಮಾತಿಲ್ಲ, ಆತ ನಿಶ್ಚಿಂತ ನಿಜಮುಕ್ತನಯ್ಯಾ, ರಾಮನಾಥ'. ಇನ್ನು ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿ ಬಸವಣ್ಣನನ್ನು ಭೇಟಿ ಮಾಡುವ ಮೊದಲೇ ಇಷ್ಟಲಿಂಗಾಧಾರಿಗಳಾಗಿದ್ದರು ಎನ್ನುವುದು ಗಮನಾರ್ಹ.

★★★

ಗ್ರಂಥೇತಿಹಾಸದ ಪ್ರಕಾರವಾಗಿ ವೀರಶೈವ ಇಷ್ಟಲಿಂಗದ ಕುರಿತಾಗಿ ವೇದವ್ಯಾಸರು ಬರೆದಿರುವರೆನ್ನುವ ಸ್ಕಂದ ಪುರಾಣದಲ್ಲಿ, ''ಯೋ ಹಸ್ತಪೀಠೇ ನಿಜಮಿಷ್ಟಲಿಂಗಂ ವಿನ್ಯಸ್ಯ ತಲ್ಲೀನಮನಃ ಪ್ರಚಾರಃ ಬಾಹ್ಯಕ್ರಿಯಾಸಂಕುಲನಿಸ್ಪೃಹಾತ್ಮಾ । ಸಂಪೂಜಯತ್ಯಂಗ ಸ ವೀರಶೈವಂ।'' ಎಂಬ ಶ್ಲೋಕದಲ್ಲಿ ಬರುತ್ತದೆ. ಈ ಶ್ಲೋಕದ ಅರ್ಥ, ''ಯಾರು ತನ್ನ ಹಸ್ತಪೀಠದಲ್ಲಿ ಇಷ್ಟಲಿಂಗವನ್ನಿಟ್ಟು ತನ್ನ ಮನಸ್ಸನ್ನು ನೆಲೆಗೊಳಿಸಿ ಬಾಹ್ಯ ಕ್ರಿಯೆಗಳನ್ನು ದೂರಮಾಡಿ ಶ್ರದ್ಧೆಯಿಂದ ಪೂಜಿಸುವನೋ ಅವನೇ ವೀರಶೈವ'' ಎಂದಾಗುತ್ತದೆ. ಸ್ಕಂದ ಪುರಾಣವನ್ನು ಬಹಳಷ್ಟು ಶತಮಾನಗಳ ಹಿಂದೆಯೇ ಬರೆದಿದೆ ಎನ್ನಲಾದರೂ ಇತಿಹಾಸತಜ್ಞರು ಲಭ್ಯ ಪುರಾವೆಗಳ ಪ್ರಕಾರ ಕ್ರಿ.ಶ. 8ನೇ ಶತಮಾನ ಎಂದು ಮಾನ್ಯ ಮಾಡಿದ್ದಾರೆ. ಹಾಗಾಗಿ ಗ್ರಂಥೇತಿಹಾಸಿಕವಾಗಿ ಇಷ್ಟಲಿಂಗ ಪರಿಕಲ್ಪನೆ 8ನೇ ಶತಮಾನದಲ್ಲಿ ಸಹ ಇದ್ದಿತು ಎಂದೇ ಸಾಬೀತಾಗುತ್ತದೆ. ವಚನಕಾರ ಸಿದ್ಧವೀರ ದೇಶಿಕೇಂದ್ರನು ತನ್ನ ವಚನದಲ್ಲಿ ಸ್ಕಂದ ಪುರಾಣವನ್ನು ಹೀಗೆ ಉಲ್ಲೇಖಿಸಿದ್ದಾನೆ: 'ವ್ಯಾಸನುಸುರ್ದ ಸ್ಕಂದಪುರಾಣದಲ್ಲಿಯ ಶ್ರೀಶೈಲಕಲ್ಪ ನೋಳ್ಪುದಯ್ಯಾ. ಅಲ್ಲಿ ಸಿದ್ಧಸಾಧಕರ ಸನ್ನಿಧ್ಧಿಯಿಂದರಿಯಬಹುದಯ್ಯಾ. ಮಾಡಿದನೊಬ್ಬ ಪೂರ್ವದಲ್ಲಿ ಗೋರಕ್ಷ ಮಾಡಿದನೊಬ್ಬ ಮತ್ಸ್ಯೇಂದ್ರನಾಥ, ಮಾಡಿದರೆಮ್ಮ ವಂಶದ ಶ್ರೀಗುರುಶಾಂತ ದೇವರು. ಇದು ಕಾರಣ, ಯೋಗದ ಭೇದ ಯೋಗಿಗ ಳಂತರಂಗದಿಂದರಿತಡೆ ಯೋಗಸಿದ್ಧಿ ಸತ್ಯ ಸತ್ಯ, ಶ್ರೀಗುರು ತೋಂಟದಸಿದ್ಧಲಿಂಗೇಶ್ವರ''.

ಸ್ಕಂದ ಪುರಾಣದಲ್ಲಿ ''ಶಿವಾಶ್ರಿತೇಷು ತೇ ಶೈನಾ ಜ್ಞಾನಯಜ್ಞ ರತಾ ನರಾಃ । ಮಾಹೇಶ್ವರಾಃ ಸಮಾಖ್ಯಾ ತಾಃ ಕರ್ಮಯಜ್ಞ ರತಾ ಭುವಿ।'' ಎಂಬ ಮತ್ತೊಂದು ಶ್ಲೋಕವಿದೆ. ಅರ್ಥಾತ್ ವೀರಶೈವ ಮಾಹೇಶ್ವರರು ಜ್ಞಾನಯಜ್ಞದಲ್ಲಿ, ಕರ್ಮಯಜ್ಞದಲ್ಲಿ ರತರಾಗಿರುವವರು ಎಂದು. ಇವೇ ಶ್ಲೋಕಗಳು ಸಿದ್ಧಾಂತ ಶಿಖಾಮಣಿಯಲ್ಲಿಯೂ ಇವೆ. ವೀರಶೈವ ಪದದ ನಿವೇಚನೆಯನ್ನು 'ವಿ' ಎಂದರೆ ವಿದ್ಯಾ, 'ರ' ಎಂದರೆ ರಮಿಸುವುದು; ವೀರಶೈವ ಎಂದರೆ ಶೈವವಿದ್ಯೆಯಲ್ಲಿ ರತನಾದವನು ಎಂದು ಪಂಡಿತರುಗಳು ನಿರ್ವಚಿಸಿದ್ದಾರೆ.

ಡಾ. ಪರಮೇಶ್ವರಿ ಹಿರೇಮಠ ಅವರು ತಮ್ಮ 'ಶಿವಾಗಮಗಳು ಮತ್ತು ವಚನ ಸಾಹಿತ್ಯ' ಎಂಬ ಸಂಶೋಧನಾ ಗ್ರಂಥದಲ್ಲಿ ಉಲ್ಲೇಖಿಸಿರುವಂತೆ ಸೂಕ್ಷ್ಮಾಗಮವು ಲಿಂಗದಿಂದಲೇ ಸಕಲ ದೇವಾನುದೇವತೆಗಳು ಉದಯಿಸಿದರು ಎನ್ನುತ್ತದೆ. ಲಿಂಗದಿಂದಲೇ ದೇವಾನುದೇವತೆಗಳು ಸೃಷ್ಟಿಗೊಂಡ ವಿಸ್ತೃತ ವರ್ಣನೆಯನ್ನು ಸೂಕ್ಷ್ಮಾಗಮದಲ್ಲಿ ಹೀಗೆ ನಿರೂಪಿಸುತ್ತದೆ: 'ದೇವದಾನವಗಂಧರ್ವಾ ವೇದಾಃ ಸಾಂಗಾಃ ಸನಾತನಾಃ। ಉತ್ಪದ್ಯತೇತ್ರ ಕಲ್ಪಾದೌ ಕಲ್ಪಾಂತೇ ಚ ಲಯಂಗತಾಃ॥ ದಕ್ಷಿಣಾಂಗಾತ್ತತೋ ಬ್ರಹ್ಮಾ ವಿಷ್ಣುರ್ವಾಮಾಂಗತಸ್ತಥಾ। ಸಮಸ್ತವೇದಜನನೀ ಗಾಯತ್ರೀ ಹೃದಯಾದಭೂತ್॥ ವೇದಾಃ ಶಿರಃಸಮುದ್ಭೂತಾಃ ಸಾಂಗೋಪಾಂಗಾಃ ಸಹಸ್ರಶಃ।' ಅಂದರೆ, ''ದೇವತೆಗಳು, ರಾಕ್ಷಸರು, ಗಂಧರ್ವರು, ವೇದಗಳು ಕಲ್ಪದ ಆರಂಭದಲ್ಲಿ ಲಿಂಗದಿಂದಲೇ ಉದ್ಭವಿಸಿದವು, ಮತ್ತೆ ಕಲ್ಪದ ಕೊನೆಯಲ್ಲಿ ಅದರಲ್ಲೇ ಲಯ ಹೊಂದಿದವು. ಲಿಂಗದ ಬಲಭಾಗದಿಂದ ಬ್ರಹ್ಮನು, ಎಡಭಾಗದಿಂದ ವಿಷ್ಣು ಮತ್ತು ಹೃದಯದಿಂದ ಸರ್ವವೇದಗಳ ಜನನಿಯಾದ ಗಾಯತ್ರಿಯು ಉತ್ಪನ್ನರಾದರು. ಅಂಗ-ಉಪಾಂಗಗಳಿಂದ ಕೂಡಿದ ವೇದಗಳು ಅದರ ಶಿರಸ್ಸಿನಿಂದ ಉದ್ಭವಿಸಿದವು'' ಎಂದು ತಿಳಿಸಿದೆ.

ಇದನ್ನೇ ವಚನಕಾರ ಬಾಲಸಂಗಯ್ಯ ಆಗಮಗಳ ಉಲ್ಲೇಖಗಳೊಂದಿಗೆ ವಿವರಿಸುತ್ತಾ, ''...ಅನಂತ ಕೋಟಿ ಬ್ರಹ್ಮರು, ಅನಂತ ಕೋಟಿ ವಿಷ್ಣಾದಿಗಳು, ಅನಂತ ಕೋಟಿ ಇಂದ್ರಾದಿಗಳು, ಅನಂತ ಕೋಟಿ ದೇವರ್ಕಳು, ಇವರೆಲ್ಲ ಎಲ್ಲಿ ಹುಟ್ಟುವರು ಅದೇ 'ಗಂ' ಎಂಬ ಶಬ್ದ. ಇದಕ್ಕೆ ಅಖಂಡಾಗಮೇ; 'ಅಸಂಖ್ಯಾತಮಹಾವಿಷ್ಣುಃ ಅಸಂಖ್ಯಾತಪಿತಾಮಹಾಃ। ಅಸಂಖ್ಯಾತಸುರೇಂದ್ರಾಣಾಂ ಲೀಯತೇ ಸರ್ವದೇವತಾಃ॥ ವಿಷ್ಣು ಸಂಜ್ಞಾ ಅಸಂಖ್ಯಾತಾಃ ಅಸಂಖ್ಯಾತಪಿತಾಮಹಾಃ। ಅಸಂಖ್ಯಾತಸುರೇಂದ್ರಾಣಾಂ ಗಮ್ಯತೇ ಸರ್ವದೇವತಾಃ॥ ಲೀಯತೇ ಗಮ್ಯತೇ ಯತ್ರಬ್ರಹ್ಮ ವಿಷ್ಣ್ವಾದಿ ದೇವತಾಃ। ತದೇತಲ್ಲಿಂಗಮಿತ್ಯುಕ್ತಂ ಲಿಂಗತತ್ವಂ ಪರಾಯಣೈಃ॥'' ಎಂದು ಸಕಲ ದೇವಾನುದೇವತೆಗಳು ಲಿಂಗದಿಂದ ಸೃಷ್ಟಿಗೊಂಡ ಬಗೆಯನ್ನು ಸಮರ್ಥಿಸಿದ್ದಾರೆ. ಅಲ್ಲದೇ 'ಲೀಯಂತೇ ಮೂರ್ಧ್ನಿ ವೈ ವೇದಾಃ ಸಷಡಂಗಪದಕ್ರಮಾಃ॥' ಎಂದು ಲಿಂಗದ ಶಿರಸ್ಸಿನಲ್ಲಿ ಗಾಯತ್ರೀಮಂತ್ರ ಸಹಿತವಾದ, ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ ಮತ್ತು ಜ್ಯೋತಿಷ್ಯವೆಂಬ ಆರು ಅಂಗಗಳಿಂದ ಕೂಡಿದ ಸಮಗ್ರ ವೇದವು ಮತ್ತು ಜಟಾ, ಮಾಲಾ, ಶಿಖಾ, ರೇಖಾ, ಧ್ವಜ, ದಂಡ, ರಥ ಮತ್ತು ಘನಗಳೆಂಬ ಎಂಟು ಪಾಠಕ್ರಮಗಳಿಂದ ಕೂಡಿದ ವೇದಾಂಗಗಳು ಲಿಂಗದಲ್ಲಿ ನೆಲೆಯಾಗಿದೆ ಎಂದು ಹೇಳುವ ಮೂಲಕ ಚಂದ್ರಜ್ಞಾನಾಗಮವು ಲಿಂಗದ ಜ್ಞಾನಮಯಸ್ವರೂಪವನ್ನು ನಿರೂಪಿಸುತ್ತದೆ. ಲಿಂಗ ಮಹಿಮೆಯನ್ನು ಸೂಕ್ಷ್ಮಾಗಮವು ಕೊಂಡಾಡುತ್ತ, ಈ ಜ್ಯೋತಿರ್ಲಿಂಗದ ತೇಜಸ್ಸಿನಿಂದಲೇ ಚಂದ್ರಾದಿಗ್ರಹ ನಕ್ಷತ್ರಗಳು ನಿಯಮಿತರಾಗಿ, ಕಾಲಕ್ಕನುಸಾರವಾಗಿ, ಹಗಲಿರುಳು ಬೆಳಗುತ್ತವೆ. ಲಿಂಗದ ಭಯದಿಂದಲೇ ಗಾಳಿಯು ಮೂರು ಲೋಕಗಳಲ್ಲೂ ಸದಾ ಬೀಸುತ್ತಿದೆ. ರವಿ ಉದಯಿಸುತ್ತಾನೆ. ಬೆಂಕಿ ಸುಡುತ್ತದೆ. ಚಂದ್ರ ತಂಪಾಗಿರುವನು, ಯಮನು (ಮೃತ್ಯುರೂಪದಲ್ಲಿ ಎಲ್ಲೆಡೆಯೂ) ಓಡಾಡುತ್ತಾನೆ. ಆದ್ದರಿಂದ ಲಿಂಗವು ಸತ್-ಚಿತ್-ಆನಂದ ಸ್ವರೂಪದ ಪರಬ್ರಹ್ಮವಾಗಿದೆ. ಈ ಲಿಂಗವು ಅವ್ಯಕ್ತವಾಗಿದ್ದರೂ, ಈ ಜಗತ್ತಿನ ರೂಪದಲ್ಲಿ ವ್ಯಕ್ತವಾಗಿದೆ ಮತ್ತು ಅನಂತವೂ ವಿಶ್ವತೋಮುಖವೂ, ನಿರ್ಮಲವೂ, ಪರಮಪದವೂ, ಜ್ಯೋತಿಸ್ವರೂಪವೂ ಆಗಿರುವ ಲಿಂಗವನ್ನು ಜ್ಞಾನಿಗಳು ದರ್ಶನ ಮಾಡುತ್ತಾರೆ ಎಂದು ಪ್ರತಿಪಾದಿಸಿದೆ. (ಆಕರ ಗ್ರಂಥ: 'ಶಿವಾಗಮಗಳು ಮತ್ತು ವಚನ ಸಾಹಿತ್ಯ' ಡಾ. ಪರಮೇಶ್ವರಿ ಹಿರೇಮಠ ಅವರ ಪಿಎಚ್‌ಡಿ ಸಂಶೋಧನಾ ಗ್ರಂಥ).

ಒಟ್ಟಾರೆ ಉತ್ಖನನ ಇತಿಹಾಸವು ಇಷ್ಟಲಿಂಗ ಪರಿಕಲ್ಪನೆಯು ಭಾರತ ಇತಿಹಾಸದ ಮೂಲದಿಂದಲೂ ಇದ್ದು, ಕರಡಿಗೆ ಪದ್ಧತಿ ಬೌದ್ಧರ ಕಾಲದಿಂದಲೂ ಇದ್ದಿತು ಎಂದರೆ, ಗ್ರಂಥೇತಿಹಾಸವು 8ನೇ ಶತಮಾನದ ಪುರಾವೆ ಕೊಟ್ಟು ಈ ಸಂಸ್ಕೃತಿ ಅನವರತವಾಗಿ ನಡೆದುಕೊಂಡು ಬರುತ್ತಿತ್ತು ಎಂದು ಸಾಬೀತುಪಡಿಸುತ್ತದೆ. ಇನ್ನುಳಿದಂತೆ ಬಸವಪೂರ್ವದಿಂದಲೂ ಇರುವ ಆಗಮಗಳು ಸೃಷ್ಟಿಯ ಮೂಲವೇ ಲಿಂಗವೆಂದು ಲಿಂಗಾರಾಧನೆಯ ಮಹತ್ವವನ್ನು ಕೊಂಡಾಡಿವೆ. ಬಸವಾದಿ ಶರಣರು ಹೇರಳವಾಗಿ ತಮ್ಮ ವಚನಗಳಲ್ಲಿ ಆಗಮಗಳ ಉಲ್ಲೇಖವನ್ನು ಮಾಡಿರುವ ಕಾರಣ ಆಗಮಗಳು ಬಸವಪೂರ್ವದಿಂದಲೂ ಇದ್ದವೆನ್ನಬಹುದು.

(ಮುಂದುವರಿಯುವುದು)

(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 63

ಸಮಾಚಾರ ಸಣ್ಣದಲ್ಲ

ಟ್ರಂಪ್-ಪುಟಿನ್ ಇಂದು ಮಾತುಕತೆ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಉಕ್ರೇನ್ ಶಾಂತಿ ಒಪ್ಪಂದದ ಬಗ್ಗೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಜತೆ ಮಂಗಳವಾರದಂದು

ಮಾತನಾಡಲಿದ್ದಾರೆ. ಕಳೆದ ವಾರ ಡೊನಾಲ್ಡ್ ಟ್ರಂಪ್ ಹಾಗೂ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ನಡುವಿನ ಮಾತುಕತೆ ವಿಫಲವಾದಾಗ ಉಕ್ರೇನ್ ಯುದ್ಧ ಕೊನೆಗೊಳ್ಳಲು ಸಾಧ್ಯವೇ ಎನ್ನುವ ಅನುಮಾನ ಉದ್ಭವವಾಗಿತ್ತು. ಶಾಂತಿ ಒಪ್ಪಂದದ ಕುರಿತು ಡೊನಾಲ್ಡ್ ಟ್ರಂಪ್ ರಷ್ಯಾ ಅಧ್ಯಕ್ಷ ಪುಟಿನ್ ಜತೆ ಭಹುಶಃ ಮಾತನಾಡುವುದಿಲ್ಲ ಎಂದು ಕೆಲವರು ಅಂದುಕೊಂಡಿದ್ದರು ಫ್ಲೋರಿಡಾ ದಿಂದ ವಾಷಿಂಗ್ಟನ್‌ಗೆ ಏರ್‌ಫೋರ್ಸ್ ಒನ್‌ನಲ್ಲಿ ಹಾರಾಟ ನಡೆಸುವಾಗ, ಯುದ್ಧವನ್ನು ಕೊನೆಗೊಳಿಸಲು ಸಾಧ್ಯವೇ ಎಂಬುದನ್ನು ನೋಡಬೇಕಿದೆ, ವಾರಾಂತ್ಯದಲ್ಲಿ ಸಾಕಷ್ಟು ಕೆಲಸಗಳನ್ನು ಮಾಡಲಾಗಿದೆ ಎಂದು ಹೇಳಿದ್ದಾರೆ.

ನಾಲ್ವರು ಮಕ್ಕಳ ಸಾವು

ಚೈಬಾಸಾ(ಜಾರ್ಖಂಡ್): ಒಣ ಹುಲ್ಲಿಗೆ ದಿಢೀರ್ ಬೆಂಕಿ ಹೊತ್ತಿಕೊಂಡ ಪರಿಣಾಮ ಅದರಲ್ಲಿ ಆಟವಾಡುತ್ತಿದ್ದ ನಾಲ್ವರು ಮಕ್ಕಳು ಸಜೀವ ದಹನಗೊಂಡ ಘಟನೆ ಜಾರ್ಖಂಡ್‌ನ ಪಶ್ಚಿಮ ಸಿಂಗ್‌ಭೂಮ್ ಜಿಲ್ಲೆಯ ಜಗನ್ನಾಥಪುರ ಪೊಲೀಸ್ ಠಾಣೆ ವ್ಯಾಪ್ತಿಯ ಗೀತಿಲಿಪಿ ಎಂಬ ಗ್ರಾಮದಲ್ಲಿ ನಡೆದಿದೆ. ಸೋಮವಾರ ಬೆಳಗ್ಗೆ 11ರ ಸುಮಾರಿಗೆ ಘಟನೆ ನಡೆದಿದೆ. ಘಟನಾ ಸ್ಥಳಕ್ಕೆ ಪೊಲೀಸರು ಹಾಗೂ ಅಗ್ನಿಶಾಮಕ ದಳದ ವಾಹನ ಅಧಿಕಾರಿಗಳು ತೆರಳುತ್ತಿದ್ದಂತೆ ನಾಲ್ವರೂ ಸುಟ್ಟು ಕರಕಲಾಗಿದ್ದರು. ಮಕ್ಕಳ ಶವಗಳನ್ನು ಹೊರತೆಗೆಯಲಾಗುತ್ತಿದೆ. ದಿಢೀರ್ ಬೆಂಕಿ ಹೊತ್ತಿಕೊಳ್ಳಲು ಕಾರಣವೇನು ಎಂಬುದರ ಬಗ್ಗೆ ತಿಳಿದು ಬಂದಿಲ್ಲ, ತನಿಖೆ ನಡೆಸಲಾಗುತ್ತದೆ. ಗ್ರಾಮದ ಮಹಿಳೆಯೊಬ್ಬರು ನೀರು ತರಲೆಂದು ಹೊರಗೆ ಬಂದಿದ್ದಾಗ ಬೆಂಕಿ ಕಾಣಿಸಿಕೊಂಡಿದೆ. ಅದಕ್ಕೂ ಮುನ್ನ ಒಣಹುಲ್ಲಿನಲ್ಲಿ ಮಕ್ಕಳು ಆಟವಾಡುತ್ತಿದ್ದರು ಎಂದು ಜನರು ಹೇಳಲಾಗುತ್ತಿದೆ. ಒಣಹುಲ್ಲು ಆಗಿದ್ದರಿಂದ ಕ್ಷಣಾರ್ಧದಲ್ಲಿ ಮಕ್ಕಳು ಸಜೀವ ದಹನವಾಗಿದ್ದಾರೆ. ಸ್ಥಳೀಯರು ಮಕ್ಕಳನ್ನು ರಕ್ಷಿಸುವ ಪ್ರಯತ್ನ ಮಾಡಿದ್ದರೂ, ಬೆಂಕಿಯ ಕೆನ್ನಾಲಿಗೆಯಿಂದ ಮೃತಪಟ್ಟಿರುವುದಾಗಿ ಪ್ರಾಥಮಿಕ ತನಿಖಾದಿಂದ ತಿಳಿದು ಬಂದಿದೆ. ಘಟನೆಯ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಆಗಮಿಸಿ ಪರಿಶೀಲನೆ ನಡೆಸುತ್ತಿದ್ದಾರೆ.

ನಾಲ್ಕು ಕಾಯ್ದೆಗಳಲ್ಲಿ ಇರುವ ಅಂಶಗಳನ್ನೊಳಗೊಂಡ ಮಸೂದೆ | ಶಿಕ್ಷೆ, ದಂಡ ಹೆಚ್ಚಳ

ಕೇಂದ್ರದಿಂದ ನೂತನ ವಲಸೆ ಮಸೂದೆ

ದೆಹಲಿ: ಕೇಂದ್ರ ಸರಕಾರವು ವಲಸೆ ಮತ್ತು ವಿದೇಶಿಯರ ಮಸೂದೆ-2025 ಅನ್ನು ಸಿದ್ಧಪಡಿಸಿದೆ. 1920ರ ಪಾಸ್‌ಪೋರ್ಟ್ (ಭಾರತಕ್ಕೆ ಪ್ರವೇಶ) ಕಾಯ್ದೆ, 1939ರ ವಿದೇಶಿಯರ ನೋಂದಣಿ ಕಾಯ್ದೆ, 1946ರ ವಿದೇಶಿಯರ ಕಾಯ್ದೆ ಮತ್ತು 2000ರ ವಲಸೆ (ಸಂಚಾರ ಸಾಧನ) ಕಾಯ್ದೆಗಳ ಬದಲಿಗೆ ಈ ಮಸೂದೆಯನ್ನು ಕೇಂದ್ರ ಸರಕಾರವು ರೂಪಿಸಿದೆ.

ನಾಲ್ಕೂ ಕಾಯ್ದೆಗಳಲ್ಲಿ ಇರುವ ಅಂಶಗಳನ್ನು ಈ ಮಸೂದೆಯು ಒಳಗೊಂಡಿದ್ದು, ನಿಯಮಗಳನ್ನು ಸರಳಗೊಳಿಸಲಾಗಿದೆ ಎಂದು ಕೇಂದ್ರ ಸರಕಾರ ಹೇಳಿದೆ. ಕೆಲವು ನಿಯಮಗಳಲ್ಲಿ ನಿರ್ದಿಷ್ಟ ವರ್ಗದ ವಿದೇಶಿಯರು ಎಂಬ ಹೊಸ ವ್ಯಾಖ್ಯಾನವನ್ನು ಮಸೂದೆಯಲ್ಲಿ ಮಾಡಲಾಗಿದೆ. ಹಾಗೆಯೇ ಶಿಕ್ಷೆ ಮತ್ತು ದಂಡದ ಪ್ರಮಾಣವನ್ನು ಹೆಚ್ಚಿಸಲಾಗಿದೆ. ಯಾವೆಲ್ಲಾ ಬದಲಾವಣೆ ಮಾಡಿದೆ ಎಂದು ತಿಳಿದುಕೊಳ್ಳೋಣ:

ಸೆಕ್ಷನ್ 7: ನಿರ್ದಿಷ್ಟ ವರ್ಗದ ವಿದೇಶಿಯರು ಭಾರತವನ್ನು ಪ್ರವೇಶಿಸದಂತೆ ತಡೆಯುವ ಅಥವಾ ಅಂತವರ ಪ್ರವೇಶವನ್ನು ನಿಷೇಧಿಸುವ ಆದೇಶವನ್ನು ಕೇಂದ್ರ ಸರಕಾರ ಹೊರಡಿಸಬಹುದು. ಅಂತಹ ವಿದೇಶಿಯರು ಯಾವಾಗ ಭಾರತವನ್ನು ಬಿಟ್ಟು ಹೊರಡಬೇಕು ಎಂಬುದನ್ನು ಸರಕಾರವೇ ನಿರ್ಧರಿಸಲಿದೆ.

ನಿರ್ದಿಷ್ಟ ವರ್ಗದ ವಿದೇಶಿಯರಿಗೆ ಕೆಲವು ನಿರ್ದಿಷ್ಟ ಸಮಯದಲ್ಲಿ ಕೆಲವು ನಿರ್ದಿಷ್ಟ ಸೂಚನೆಗಳನ್ನು ಕೇಂದ್ರ ಸರಕಾರ ನೀಡಬಹುದು. ಅಂತಹವರು ಸರಕಾರವು ಕೇಳಿದ ವಿವರಗಳನ್ನು ನೀಡಬೇಕಾಗುತ್ತದೆ, ಅಗತ್ಯ ಬಿದ್ದರೆ ವಿಚಾರಣೆಗೆ ಒಳಗಾಗಬೇಕಾಗುತ್ತದೆ. ನಿರ್ದಿಷ್ಟ ಸ್ಥಳದಲ್ಲಿಯೇ ವಾಸ ಮಾಡುವಂತೆ ಸರಕಾರ ಸೂಚಿಸಬಹುದು, ಅವರ ಸಂಚಾರಕ್ಕೂ ನಿರ್ಬಂಧ ಹೇರಬಹುದು. ತಮ್ಮ ಬಯೋಮೆಟ್ರಿಕ್ ವಿವರಗಳು, ಛಾಯಾಚಿತ್ರ, ಕೈಬರಹ ಮತ್ತು ಸಹಿಯ ಮಾದರಿಯನ್ನು ನೀಡಬೇಕಾಗುತ್ತದೆ.

ಅಧಿಕಾರಿಗಳು ಬಯಸಿದರೆ ವೈದ್ಯಕೀಯ ಪರೀಕ್ಷೆಗೂ ಒಳಗಾಗಬೇಕಾಗುತ್ತದೆ. ಸರಕಾರ ಸೂಚಿದರೆ, ನಿರ್ದಿಷ್ಟ ಜನರೊಂದಿಗೆ ಮಾತುಕತೆ ಅಥವಾ ಅವರೊಂದಿಗೆ ಯಾವುದೇ ಚಟುವಟಿಕೆಗಳಲ್ಲಿ ಭಾಗವಹಿಸುವಂತಿಲ್ಲ

ಸೆಕ್ಷನ್ 8,9,10: ವಿದೇಶಿಯರು ತಂಗಿರುವ ಸ್ಥಳಗಳ ಮಾಲಿಕರು, ಅವರ ಕುರಿತು ಸರಕಾರಕ್ಕೆ ಮಾಹಿತಿ ನೀಡುವುದು ಕಡ್ಡಾಯ. ವಿಶ್ವವಿದ್ಯಾಲಯಗಳು, ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆಗಳು ಕೂಡ ವಿದೇಶಿಯರ ಮಾಹಿತಿಯನ್ನು ನೀಡಬೇಕಾಗುತ್ತದೆ.

ಸೆಕ್ಷನ್ 21: ನಕಲಿ ದಾಖಲೆಗಳ ಮೂಲಕ ವಿದೇಶಿಯರು ಭಾರತವನ್ನು ಪ್ರವೇಶಿಸಿದರೆ ಐದು ವರ್ಷ ಜೈಲು ಅಥವಾ 15 ಲಕ್ಷಗಳವರೆಗೆ ದಂಡ ವಿಧಿಸಬಹುದಾಗಿದೆ.

ಸೆಕ್ಷನ್ 22: ಭಾರತವನ್ನು ಪ್ರವೇಶಿಸಲು, ಇಲ್ಲಿಯೇ ಉಳಿದುಕೊಳ್ಳಲು ಅಥವಾ ಭಾರತದಿಂದ ಹೊರ ಹೋಗಲು ನಕಲಿ ಪಾಸ್‌ಪೋರ್ಟ್, ವೀಸಾವನ್ನು ಬಳಸಿದರೆ ಮತ್ತು ಈ ಅಕ್ರಮಕ್ಕಾಗಿ ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿದರೆ, ಅಂತಹವರಿಗೆ ಕನಿಷ್ಠ 2 ವರ್ಷದಿಂದ 7 ವರ್ಷಗಳವರೆಗೆ ಜೈಲು ಶಿಕ್ಷೆ ಇಲ್ಲವೇ 1 ಲಕ್ಷದಿಂದ 10 ಲಕ್ಷ ರು.ವರೆಗೆ ದಂಡ ವಿಧಿಸಬಹುದಾಗಿದೆ.

ಸೆಕ್ಷನ್ 28: ಈ ಕಾಯ್ದೆಯಲ್ಲಿ ಹೇಳಲಾಗಿರುವ ನಿಯಮಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಕೇಂದ್ರ ಸರಕಾರವು ರಾಜ್ಯ ಸರಕಾರಗಳಿಗೆ ಅಥವಾ ತಮ್ಮ ಅಧಿಕಾರಿಗಳಿಗೆ ಸೂಚಿಸಬಹುದಾಗಿದೆ.

ಬಾಂಗ್ಲಾ ಪ್ರಜೆಗಳ ಬಂಧನ

ದೇಶದಲ್ಲಿ ಅಕ್ರಮವಾಗಿ ನೆಲೆಸಿದ್ದ ಆರೋಪದಡಿ ಬಾಲಕಿ ಸೇರಿದಂತೆ ಏಳು ಬಾಂಗ್ಲಾದೇಶಿ ಪ್ರಜೆಗಳನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ದೃಢಪಡಿಸಿದ್ದಾರೆ. ಬಂಧಿತರನ್ನು ದಿಲಾವರ್ ಖಾನ್ (48) ಬ್ಯೂಟಿ ಬೇಗಂ (39) ರಫಿಕುಲ್ (43) ತೌಹಿದ್ (20) ಎಂ.ಡಿ. ಅಜರ್ (28), ಜಾಕಿರ್ ಮಲ್ಲಿಕ್ (40) ಮತ್ತು 15 ವರ್ಷದ ಬಾಲಕಿ ಎಂದು ಗುರುತಿಸಲಾಗಿದೆ.

ಮಾರ್ಚ್ 16ರಂದು ಸುಳಿವು ಮತ್ತು ದೂರಿನ ಆಧಾರದ ಮೇಲೆ ಪೊಲೀಸರು ದೆಹಲಿ-ಎನ್‌ಸಿಆರ್‌ನ ವಿವಿಧ ಪ್ರದೇಶಗಳಲ್ಲಿ ದಾಳಿ ನಡೆಸಿದ್ದು, ಆ ವೇಳೆ ಏಳು ಮಂದಿಯನ್ನು ಬಂಧಿಸಲಾಗಿದೆ. ಬಂಧಿತರಲ್ಲಿ ಒಬ್ಬರು ನಾವು ಪಶ್ಚಿಮ ಬಂಗಾಳದ ನಿವಾಸಿಗಳು ಎಂದು ಹೇಳಿಕೊಂಡಿದ್ದರು, ಆದರೆ ವಿಚಾರಣೆ ಮತ್ತು ಪರಿಶೀಲನೆಯ ಬಳಿಕ ಬಂಧಿತರು ಬಾಂಗ್ಲಾದೇಶದ ಪ್ರಜೆಗಳು ಎಂದು ತಿಳಿದು ಬಂದಿದೆ. ಬಂಧಿತರನ್ನು ಗಡೀಪಾರು ಮಾಡುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ ಎಂದು ದೆಹಲಿ ಉಪ ಪೊಲೀಸ್ ಆಯುಕ್ತ (ಪೂರ್ವ ದೆಹಲಿ) ಅಭಿಷೇಕ್ ಧಾನಿಯಾ ತಿಳಿಸಿದ್ದಾರೆ.

ಬಾಗ್ಚಿ ಪ್ರಮಾಣ ವಚನ ಸ್ವೀಕಾರ

ದೆಹಲಿ: ಸುಪ್ರೀಂ ಕೋರ್ಟ್ ನೂತನ ನ್ಯಾಯಮೂರ್ತಿಯಾಗಿ ಕಲ್ಕತ್ತಾ ಹೈಕೋರ್ಟ್‌ನ ಹಿರಿಯ ನ್ಯಾಯಮೂರ್ತಿ ಜಾಯ್ ಮಲ್ಯ ಬಾಗ್ಚಿ ಅವರು ಸೋಮವಾರ ಪ್ರಮಾಣ

ವಚನ ಸ್ವೀಕರಿಸಿದರು. ಸುಪ್ರೀಂ ಕೋರ್ಟ್ ಆವರಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ಇತರ ಸುಪ್ರೀಂ ಕೋರ್ಟ್ ನ್ಯಾಯಾಧೀಶರ ಸಮ್ಮುಖದಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ಬಾಗ್ಚಿ ಅವರಿಗೆ ಪ್ರಮಾಣ ವಚನ ಬೋಧಿಸಿದರು. ನ್ಯಾ.ಬಾಗ್ಚಿ ಅವರ ಪ್ರಮಾಣ ವಚನದೊಂದಿಗೆ ಸುಪ್ರೀಂ ಕೋರ್ಟ್‌ನಲ್ಲಿ ಮಂಜೂರಾದ 34 ನ್ಯಾಯಾಧೀಶರ ಪೈಕಿ 33 ನ್ಯಾಯಾಧೀಶರ ಸ್ಥಾನಗಳು ತುಂಬಿದಂತಾಗಿವೆ. ನ್ಯಾ.ಬಾಗ್ಚಿ ಸುಪ್ರೀಂ ಕೋರ್ಟ್‌ನಲ್ಲಿ ಆರು ವರ್ಷಗಳಿಗಿಂತ ಹೆಚ್ಚು ಅಧಿಕಾರಾವಧಿ ಹೊಂದಿರುತ್ತಾರೆ, ಆ ವೇಳೆ ಅವರು ಸಿಜೆಐ ಆಗಿಯೂ ಸೇವೆ ಸಲ್ಲಿಸಲಿದ್ದಾರೆ. ಸಿಜೆಐ ಖನ್ನಾ ನೇತೃತ್ವದ ಐದು ಸದಸ್ಯರ ಕೊಲಿಜಿಯಂ ಮಾರ್ಚ್ 6ರಂದು ಅವರ ಹೆಸರನ್ನು ಶಿಫಾರಸು ಮಾಡಿದ ಕೆಲವೇ ದಿನಗಳ ನಂತರ ಮಾರ್ಚ್ 10ರಂದು ಕೇಂದ್ರ ಸರಕಾರವು ನ್ಯಾ.ಬಾಗ್ಚಿ ಅವರ ಹೆಸರನ್ನು ಸುಪ್ರೀಂ ಕೋರ್ಟ್ ನ್ಯಾಯಾಧೀಶರಾಗಿ ನೇಮಕ ಮಾಡಲು ಅನುಮೋದನೆ ನೀಡಿತ್ತು.

ಪಿಎಂ ಇಂಟರ್ನ್‌ಶಿಪ್ ಆ್ಯಪ್: ವಿತ್ತ ಸಚಿವೆಯಿಂದ ಚಾಲನೆ

ದೆಹಲಿ: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ನವದೆಹಲಿಯ ಹೊಸ ಸಂಸತ್ ಭವನದಲ್ಲಿ ಪ್ರಧಾನ ಮಂತ್ರಿ ಇಂಟರ್ನ್‌ಶಿಪ್

ಸ್ಕೀಮ್ ಆ್ಯಪ್ ಅನ್ನು ಬಿಡುಗಡೆ ಮಾಡಿದರು. ಇಂದಿನ ಯುವಕರು ತಮ್ಮ ಸಾಮರ್ಥ್ಯದ ಆಧಾರದ ಮೇಲೆ ವೈವಿಧ್ಯಮಯ ಕೋರ್ಸ್‌ಗಳನ್ನು ಅನುಸರಿಸುತ್ತಿದ್ದಾರೆ. ಕೈಗಾರಿಕೆಗಳಲ್ಲಿ ಗಮನಾರ್ಹ ಬದಲಾವಣೆಗಳಾಗುತ್ತಿವೆ. ಕೃತಕ ಬುದ್ಧಿಮತ್ತೆ, ರೊಬೊಟಿಕ್ಸ್ ಮತ್ತು ಇತರ ಪ್ರಗತಿಗಳನ್ನು ಒಳಗೊಂಡಿವೆ ಎಂದಿರುವ ನಿರ್ಮಲಾ ಸೀತಾರಾಮನ್ ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯ ವಿಧಾನವನ್ನು ಶ್ಲಾಘಿಸಿದರು. ಪ್ರಧಾನ ಮಂತ್ರಿ ಇಂಟರ್ನ್‌ಶಿಪ್ ಸ್ಕೀಮ್ ಆ್ಯಪ್ ಬಿಡುಗಡೆ ಸಂದರ್ಭದಲ್ಲಿ ಉದ್ಯೋಗ ದಾಖಲಾತಿ ಗಳನ್ನು ಹೆಚ್ಚಿಸಲು, ಉದ್ಯೋಗಾಕಾಂಕ್ಷಿಗಳು ಮತ್ತು ಉದ್ಯೋಗದಾತರಿಗೆ ಬೆಂಬಲ ನೀಡಲು 5 ವಿಭಿನ್ನ ಯೋಜನೆಗಳನ್ನು ಘೋಷಿಸಲಾಗಿದೆ ಎಂದು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಕಠಿಣ ಕ್ರಮ ಕೈಗೊಳ್ಳುವಂತೆ ಅಮೆರಿಕಾಕ್ಕೆ ಮನವಿ

ಖಲಿಸ್ತಾನಿ ಚಟುವಟಿಕೆ: ರಾಜನಾಥ್ ಸಿಂಗ್ ಕಳವಳ

ದೆಹಲಿ: ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಅಮೆರಿಕದ ರಾಷ್ಟ್ರೀಯ ಗುಪ್ತಚರ ನಿರ್ದೇಶಕಿ ತುಳಸಿ ಗಬ್ಬಾರ್ಡ್ ಸೋಮವಾರ ಮಾತುಕತೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಅಮೆರಿಕದಲ್ಲಿ ಖಲಿಸ್ತಾನಿ ಸಂಘಟನೆಯಾಗಿರುವ ಸಿಖ್ ಫಾರ್ ಜಸ್ಟೀಸ್ (ಸಿಎಫ್‌ಜೆ) ನಡೆಸುತ್ತಿರುವ ಭಾರತ ವಿರೋಧಿ ಚಟುವಟಿಕೆಗಳ ವಿಷಯವನ್ನು ರಾಜನಾಥ್ ಸಿಂಗ್ ಪ್ರಸ್ತಾಪಿಸಿದ್ದಾರೆ. ಈ ವೇಳೆ ಭಾರತವು ತನ್ನ ಕಳವಳಗಳನ್ನು ವ್ಯಕ್ತಪಡಿಸಿ, ಕಾನೂನುಬಾಹಿರ ಸಂಘಟನೆಯ ವಿರುದ್ಧ ಕಠಿಣವಾದ ಕ್ರಮ ಕೈಗೊಳ್ಳುವಂತೆ ಅಮೆರಿಕ ಸರಕಾರಕ್ಕೆ ಮನವಿ ಮಾಡಿದ್ದಾರೆ.

ಕಳೆದ ವರ್ಷ ನವೆಂಬರ್‌ನಲ್ಲಿ ಗುರುಪತ್ವಂತ್ ಸಿಂಗ್ ಪನ್ನುನ್ ಅವರ ಹತ್ಯೆಯ ಪಿತೂರಿಯಲ್ಲಿ ಮತ್ತೊಬ್ಬ ಭಾರತೀಯ ಸರಕಾರಿ ಅಧಿಕಾರಿಯೊಂದಿಗೆ ಭಾಗಿಯಾಗಿದ್ದಾರೆ ಎಂಬ ಆರೋಪದ ಮೇಲೆ ಭಾರತೀಯ ಪ್ರಜೆ ನಿಖಿಲ್ ಗುಪ್ತಾ ಅವರ ಮೇಲೆ ಅಮೆರಿಕದ ಪ್ರಾಸಿಕ್ಯೂಟರ್‌ಗಳು ಆರೋಪ ಹೊರಿಸಿದ್ದರಿಂದ ಸಿಖ್ ಫಾರ್ ಜಸ್ಟೀಸ್ ಬಗ್ಗೆ ರಾಜನಾಥ್ ಸಿಂಗ್ ಕಳವಳ ವ್ಯಕ್ತಪಡಿಸಿದ್ದಾರೆ. ಗುರುಪತ್ವಂತ್ ಸಿಂಗ್ ಪನ್ನುನ್ ಮೇಲಿನ ಹತ್ಯೆ ಯತ್ನದಲ್ಲಿ ಭಾರತ ಯಾವುದೇ ಪಾತ್ರ ವಹಿಸಿಲ್ಲ ಎಂದು ರಾಜನಾಥ್ ಸಿಂಗ್ ಹೇಳಿದ್ದಾರೆ. ಸರಕಾರ ಈ ಪ್ರಕರಣದ ಬಗ್ಗೆ ಉನ್ನತ ಮಟ್ಟದ ತನಿಖೆಯನ್ನು ಪ್ರಾರಂಭಿಸಿದೆ.

ಡೊನಾಲ್ಡ್ ಟ್ರಂಪ್ ಸರ್ಕಾರದ ಉನ್ನತ ಅಧಿಕಾರಿಯೊಬ್ಬರು ಭಾರತಕ್ಕೆ ನೀಡಿದ ಮೊದಲ ಉನ್ನತ ಮಟ್ಟದ ಭೇಟಿಯಲ್ಲಿ ಎರಡೂವರೆ ದಿನಗಳ ಪ್ರವಾಸದಲ್ಲಿ ತುಳಸಿ ಗಬ್ಬಾರ್ಡ್ ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ (ಎನ್‌ಎಸ್‌ಎ) ಅಜಿತ್ ದೋವಲ್ ಅವರನ್ನು ಭೇಟಿಯಾದ ತುಳಸಿ ಅವರು, ದೆಹಲಿಯಲ್ಲಿ ಆಯೋಜಿಸಿದ್ದ ಜಾಗತಿಕ ಗುಪ್ತಚರ ಮುಖ್ಯಸ್ಥರ ಸಮಾವೇಶದಲ್ಲಿ ಭಾಗವಹಿಸಿದ ನಂತರ ರಾಜನಾಥ್ ಸಿಂಗ್ ಅವರೊಂದಿಗಿನ ಮಾತುಕತೆ ನಡೆಸಿದರು. ಈ ಸಮಾವೇಶದಲ್ಲಿ ಅಮೆರಿಕ, ಕೆನಡಿಯನ್ ಮತ್ತು ಬ್ರಿಟನ್ ಪ್ರತಿನಿಧಿಗಳು ಭಾಗವಹಿಸಿದ್ದರು. ಕಳೆದ ತಿಂಗಳು ವಾಷಿಂಗ್ಟನ್ ಡಿ.ಸಿ.ಗೆ ಭೇಟಿ ನೀಡಿದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ತುಳಸಿ ಗಬ್ಬಾರ್ಡ್ ಅವರನ್ನು ಭೇಟಿಯಾಗಿದ್ದರು.

ಖಲಿಸ್ತಾನ್ ಪರ ಗುಂಪುಗಳೂ ಸೇರಿದಂತೆ ವಿದೇಶಿ ನೆಲದಿಂದ ಕಾರ್ಯನಿರ್ವಹಿಸುತ್ತಿರುವ ಭಾರತ ವಿರೋಧಿ ಅಂಶಗಳ ಬಗ್ಗೆ ಭಾರತದ ಕಡೆಯಿಂದ ಕಳವಳಗಳು ವ್ಯಕ್ತವಾಗಿದ್ದವು. ರಷ್ಯಾ-ಉಕ್ರೇನ್ ಯುದ್ಧ ಮತ್ತು ಮಧ್ಯಪ್ರಾಚ್ಯ ಸಂಘರ್ಷಗಳಂತಹ ಜಾಗತಿಕ ಸವಾಲುಗಳ ಕುರಿತು ಸಮಾವೇಶದಲ್ಲಿ ಚರ್ಚೆಗಳು ನಡೆದವು. ತುಳಸಿ ಗಬ್ಬಾರ್ಡ್ ಅವರ ಬಹು-ರಾಷ್ಟ್ರ ಪ್ರವಾಸವು ಜಪಾನ್, ಥಾಯ್ಲೆಂಡ್ ಮತ್ತು ಫ್ರಾನ್ಸ್ ದೇಶಗಳನ್ನು ಒಳಗೊಂಡಿದೆ.

ನಾನು ಕೃಷ್ಣನ ಭಕ್ತೆ: ತುಳಸಿ

ಅಮೆರಿಕದ ರಾಷ್ಟ್ರೀಯ ಗುಪ್ತಚರ ವಿಭಾಗದ ನಿರ್ದೇಶಕಿ ತುಳಸಿ ಗಬ್ಬಾರ್ಡ್, ತಾನೊಬ್ಬಳು ಶ್ರೀಕೃಷ್ಣನ ಕಟ್ಟಾ ಭಕ್ತೆ ಎಂದು ಹೇಳಿಕೊಂಡಿದ್ದಾರೆ. ಅರ್ಜುನನಿಗೆ ಶ್ರೀಕೃಷ್ಣನು ಮಾಡಿರುವ ಬೋಧನೆ ದಿನವಿಡೀ ಶಕ್ತಿ, ಶಾಂತಿ ಮತ್ತು ಸಾಂತ್ವನವನ್ನು ತನಗೆ ನೀಡುತ್ತದೆ ಎಂದು ಅವರು ಹೇಳಿದ್ದಾರೆ. ನನಗೆ ಭಾರತದ ಬಗ್ಗೆ ತುಂಬಾ ಪ್ರೀತಿ ಇದೆ, ನಾನು ಇಲ್ಲಿ ಇರುವಾಗ ನನಗೆ ಯಾವಾಗಲೂ ಮನೆಯಲ್ಲಿರುವಂತೆ ಭಾಸವಾಗುತ್ತದೆ ಎಂದೂ ಅವರು ಹೇಳಿದ್ದಾರೆ.

ಕೇಂದ್ರ ಮಧ್ಯಸ್ಥಿಕೆಯ ಸಭೆಯಲ್ಲಿ ಡಿಸಿಎಂ ಶಿವಕುಮಾರ್ ಭಾಗಿ

ಪಿನಾಕಿನಿ ಜಲ ವಿವಾದ: ಇಂದು ಸಭೆ

ದೆಹಲಿ: ಕರ್ನಾಟಕ ಮತ್ತು ತಮಿಳು ನಾಡು ನಡುವಿನ ದಕ್ಷಿಣ ಪಿನಾಕಿನಿ (ಪೆನ್ನಾರ್) ನದಿ ನೀರು ಹಂಚಿಕೆ ವಿವಾದ ಬಗೆಹರಿಸಲು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಅವರು ಮಂಗಳವಾರ (ಮಾ.18) ಸಮಾಲೋಚನಾ ಸಮಿತಿ ಸಭೆ ನಡೆಸಲಿದ್ದಾರೆ. ಈ ಸಭೆಯಲ್ಲಿ ಜಲಸಂಪನ್ಮೂಲ ಖಾತೆಯನ್ನೂ ಹೊಂದಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಭಾಗವಹಿಸಲಿದ್ದಾರೆ. ತಮಿಳು ನಾಡು, ಪುದುಚೇರಿ ಮತ್ತು ಆಂಧ್ರ ಪ್ರದೇಶ ದಿಂದಲೂ ಆಯಾ ರಾಜ್ಯಗಳ ಜಲಸಂಪನ್ಮೂಲ ಸಚಿವರು ಪಾಲ್ಗೊಳ್ಳುವ ನಿರೀಕ್ಷೆ ಇದೆ.

2024ರ ಜನವರಿಯಲ್ಲಿ, ಕರ್ನಾಟಕದ ಕೋರಿಕೆಯ ಮೇರೆಗೆ ಹೊಸ ಸಮಾಲೋಚನಾ ಸಮಿತಿ ರಚಿಸುವಂತೆ ಸುಪ್ರೀಂಕೋರ್ಟ್ ಜಲಶಕ್ತಿ ಸಚಿವಾಲಯಕ್ಕೆ ನಿರ್ದೇಶನ ನೀಡಿತ್ತು. ತಮಿಳು ನಾಡು ಮತ್ತು ಕರ್ನಾಟಕದ ನಡುವೆ ಮಧ್ಯಸ್ಥಿಕೆ ವಹಿಸಲು ಮತ್ತು ಪರಿಹಾರ ಕಂಡುಕೊಳ್ಳಲು ಅಂತಾರಾಜ್ಯ ನದಿ ನೀರು ವಿವಾದಗಳ ಕಾಯ್ದೆ-1956ರ ಸೆಕ್ಷನ್ 4ರ ಅಡಿಯಲ್ಲಿ ಈ ಸಮಿತಿ ರಚಿಸಲಾಗಿದೆ.

ಕೇಂದ್ರ ಜಲ ಆಯೋಗವು (ಸಿಡಬ್ಲ್ಯುಸಿ) ಕಳೆದ ಒಂದು ವರ್ಷದಲ್ಲಿ ಪಿನಾಕಿನಿ ಜಲ ವಿವಾದ ಸಂಬಂಧ ಹಲವು ಸಭೆಗಳನ್ನು ನಡೆಸಿದೆ. ಆದರೆ ಕರ್ನಾಟಕದ ಪ್ರಸ್ತಾಪವನ್ನು ತಮಿಳುನಾಡು ಮತ್ತು ಪುದುಚೇರಿ ವಿರೋಧಿಸಿದ್ದು, ಈ ವಿಷಯದಲ್ಲಿ ಸಿಡಬ್ಲ್ಯುಸಿಯ ಸಲಹೆಯನ್ನೂ ವಿರೋಧಿಸಿವೆ. ಅಧಿಕಾರಿಗಳ ಮಟ್ಟದ ಸಭೆಗಳು ವಿವಾದ ಬಗೆಹರಿಸುವಲ್ಲಿ ವಿಫಲವಾದ ಹಿನ್ನೆಲೆಯಲ್ಲಿ ಇದೀಗ ಕೇಂದ್ರ ಸಚಿವರ ನೇತೃತ್ವದಲ್ಲಿ ಸಚಿವರ ಮಟ್ಟದ ಸಭೆ ಕರೆಯಲಾಗಿದೆ.

ಏನಿದು ಪೆನ್ನಾರ್ ನದಿ ವಿವಾದ?

ಕರ್ನಾಟಕದಲ್ಲಿ ಉತ್ತರ ಪಿನಾಕಿನಿ ಎಂದು ಕರೆಯುವ ನದಿಯನ್ನು ತಮಿಳುನಾಡಿನಲ್ಲಿ ಪೆನ್ನಾರ್ ನದಿ ಎಂದು ಕರೆಯಲಾಗುತ್ತಿದೆ. ಚಿಕ್ಕಬಳ್ಳಾಪುರ ಜಿಲ್ಲೆ ನಂದಿಬೆಟ್ಟದಲ್ಲಿ ಉಗಮಿಸುವ ಈ ನದಿ ಆಂಧ್ರ ಪ್ರದೇಶದ ಮೂಲಕ ಬಂಗಾಳ ಕೊಲ್ಲಿಯನ್ನು ತಲುಪುತ್ತದೆ. ಕರ್ನಾಟಕವು ಪಿನಾಕಿನಿ ನದಿಯ ಉಪನದಿ ಮಾರ್ಕಂಡೇಯ ನದಿಗೆ ಅಡ್ಡಲಾಗಿ ಕೋಲಾರ ಜಿಲ್ಲೆಯ ಯರಗೋಳದಲ್ಲಿ ಕುಡಿಯುವ ನೀರಿನ ಉದ್ದೇಶದಿಂದ 240 ಕೋಟಿ ರು. ವೆಚ್ಚದಲ್ಲಿ ಅಣೆಕಟ್ಟನ್ನು ನಿರ್ಮಿಸುತ್ತಿದೆ. ಆದರೆ ಈ ಅಣೆಕಟ್ಟು ನಿರ್ಮಾಣಕ್ಕೆ ತಮಿಳುನಾಡು ತಗಾದೆ ತೆಗೆದಿದೆ. ಅಣೆಕಟ್ಟು ನಿರ್ಮಾಣಗೊಂಡರೆ ನದಿಯ ನೈಸರ್ಗಿಕ ಹರಿವಿಗೆ ತೊಂದರೆಯಾಗಲಿದ್ದು, ಕೃಷಿ ಚಟುವಟಿಕೆ ಹಾಗೂ ಕುಡಿಯುವ ನೀರಿನ ಮೇಲೆ ಪ್ರಭಾವ ಬೀರಲಿದೆ ಎಂದು ಸುಪ್ರೀಂಕೋರ್ಟ್ ಮುಂದೆ ಅರ್ಜಿ ಸಲ್ಲಿಸಿದೆ. ವಿವಾದ ಬಗೆಹರಿಸಲು ಜಲ ವಿವಾದ ನ್ಯಾಯಮಂಡಳಿ ರಚಿಸಬೇಕೆಂದು ತಮಿಳುನಾಡು ಒತ್ತಾಯಿಸುತ್ತಿದ್ದರೆ, ಇದಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವ ಕರ್ನಾಟಕವು, ಈ ನದಿಯ ನೀರಿನ ಲಭ್ಯತೆಯು ಕಡಿಮೆ ಇದ್ದು, ಮಳೆಗಾಲದಲ್ಲಿ ಮಾತ್ರ ನೀರಿನ ಹರಿವು ಇರುವುದರಿಂದ ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಲು ಸಲಹೆ ನೀಡಿದೆ.

ಪದ್ಮ ಪ್ರಶಸ್ತಿಗಳಿಗೆ ಹೆಸರುಗಳ ಆಹ್ವಾನ

ದೆಹಲಿ: 2026ರ ಪದ್ಮ ಪ್ರಶಸ್ತಿಗಳಿಗೆ ನಾಮನಿರ್ದೇಶನಗಳು ಮತ್ತು ಶಿಫಾರಸುಗಳ ಪ್ರಕ್ರಿಯೆಯು ಅಧಿಕೃತವಾಗಿ ಪ್ರಾರಂಭವಾಗಿದೆ. ಅರ್ಜಿಗಳನ್ನು ಸಲ್ಲಿಸಲು ಕೊನೆಯ 2025ರ ಜುಲೈ 31 ಎಂದು ಕೇಂದ್ರ ಸರ್ಕಾರ ಘೋಷಿಸಿದೆ. ಈ ಪ್ರತಿಷ್ಠಿತ ನಾಗರಿಕ ಪ್ರಶಸ್ತಿಗಳು ಪದ್ಮವಿಭೂಷಣ, ಪದ್ಮಭೂಷಣ ಮತ್ತು ಪದ್ಮಶ್ರೀ ಪ್ರಶಸ್ತಿಗಳನ್ನು ಒಳಗೊಂಡಿರುತ್ತದೆ. ವಿವಿಧ ಕ್ಷೇತ್ರಗಳಲ್ಲಿ ಅವರ ಅಸಾಧಾರಣ ಸಾಧನೆಗಳು ಮತ್ತು ವಿಶಿಷ್ಟ ಸೇವೆಯನ್ನು

ಗುರುತಿಸಿ ಈ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಅಧಿಕೃತ ಹೇಳಿಕೆಯ ಪ್ರಕಾರ, ಎಲ್ಲಾ ನಾಮನಿರ್ದೇಶನಗಳು ಮತ್ತು ಶಿಫಾರಸುಗಳನ್ನು ರಾಷ್ಟ್ರೀಯ ಪುರಸ್ಕಾರ ಪೋರ್ಟಲ್ (awards.gov.in) ಮೂಲಕ ಮಾತ್ರ ಆನ್‌ಲೈನ್‌ನಲ್ಲಿ ಸಲ್ಲಿಸಬೇಕು.

1954ರಲ್ಲಿ ಸ್ಥಾಪಿಸಲಾದ ಪದ್ಮ ಪ್ರಶಸ್ತಿಗಳು ಭಾರತದ ಅತ್ಯುನ್ನತ ನಾಗರಿಕ ಗೌರವಗಳಲ್ಲಿ ಒಂದಾಗಿದೆ. ಗಣರಾಜ್ಯೋತ್ಸವದ ಮುನ್ನಾದಿನದಂದು ವಾರ್ಷಿಕವಾಗಿ ಘೋಷಿಸಲಾಗುವ ಈ ಪ್ರಶಸ್ತಿಗಳು, ವಿವಿಧ ಕ್ಷೇತ್ರಗಳಲ್ಲಿ 'ವಿಶಿಷ್ಟ ಕಾರ್ಯ'ವನ್ನು ಗುರುತಿಸುವ ಗುರಿಯನ್ನು ಹೊಂದಿವೆ.

ಜನಾಂಗ, ಉದ್ಯೋಗ, ಸ್ಥಾನ ಅಥವಾ ಲಿಂಗವನ್ನು ಲೆಕ್ಕಿಸದೆ ಎಲ್ಲಾ ವ್ಯಕ್ತಿಗಳನ್ನು ಈ ಪ್ರಶಸ್ತಿಗಳಿಗೆ ಶಿಫಾರಸು ಮಾಡಲಾಗುತ್ತದೆ. ಆದರೆ, ಸಾರ್ವಜನಿಕ ಉದ್ದಿಮೆಗಳ ಉದ್ಯೋಗಿಗಳೂ ಸೇರಿದಂತೆ ಸರಕಾರಿ ನೌಕರರ ಪೈಕಿ ವೈದ್ಯರು ಮತ್ತು ವಿಜ್ಞಾನಿಗಳನ್ನು ಹೊರತುಪಡಿಸಿ ಬೇರೆ ಸರಕಾರಿ ನೌಕರರು ಈ ಪ್ರಶಸ್ತಿಗಳಿಗೆ ಅರ್ಹರಲ್ಲ.

2014ರಲ್ಲಿ ನರೇಂದ್ರ ಮೋದಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಾಗಿನಿಂದ, ಹೆಚ್ಚು ಪ್ರಸಿದ್ಧಿಯಾಗದ ಸಾಧಕರನ್ನು ಗೌರವಿಸಲು ಪದ್ಮ ಪ್ರಶಸ್ತಿಗಳನ್ನು ಮರು ವ್ಯಾಖ್ಯಾನಿಸಲಾಗಿದೆ. ಸಮಾಜಕ್ಕೆ ಅಸಾಧಾರಣ ಕೊಡುಗೆಗಳನ್ನು ನೀಡುವ ಸಾಮಾನ್ಯ ವ್ಯಕ್ತಿಗಳನ್ನು ಗುರುತಿಸಲು 'ಜನರ ಪದ್ಮ' ಎಂದು ಕರೆಯಲ್ಪಡುವ ಈ ಉಪಕ್ರಮವನ್ನು ಆರಂಭಿಸಿದೆ. ಇದು ತಳಮಟ್ಟದ ಸಾಧಕರಿಗೆ ರಾಷ್ಟ್ರೀಯ ಮನ್ನಣೆಯನ್ನು ತಂದಿದ್ದು, ಜನರೇ ತಮ್ಮ ನಡುವಿನ ಎಲೆಮರೆಯ ಸಾಧಕರನ್ನು ಗುರುತಿಸಿ ಈ ಪ್ರಶಸ್ತಿಗಳಿಗೆ ಶಿಫಾರಸು ಮಾಡುವ ಉಪಕ್ರಮವೂ ಆಗಿದೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392-200293
ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ-2/2024-25/2658 ದಿ:12.03.2025
ಅಲ್ಪಾವಧಿ ಟೆಂಡರ್ ಪ್ರಕಟಣೆ
("KPPP" ಪೋರ್ಟಲ್ ಕೆ.ಡಬ್ಲ್ಯೂ-4 ಮುಖಾಂತರ)
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ 4702 ಪ್ರಧಾನ ಕಾಮಗಾರಿ (ಹೊಸಕೆರೆ) ಯೋಜನೆಯಡಿ ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಚನ್ನಿಹಳ್ಳಿ ತಾಂಡಾ ಗ್ರಾಮದ ಹತ್ತಿರ ಜಿನುಗು ಕೆರೆ ನಿರ್ಮಾಣ ಕಾಮಗಾರಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಅಂದಾಜು ಮೊತ್ತ ರೂ. 404.25 ಲಕ್ಷಗಳಿರುತ್ತದೆ ಟೆಂಡರ್‌ನ್ನು ದಿನಾಂಕ: 12.03.2025 ರಿಂದ ದಿನಾಂಕ: 19.03.2025 ರ ಸಂಜೆ 5.30 ಗಂಟೆಯವರಗೆ ಸಲ್ಲಿಸಬಹುದು. ಕಾಮಗಾರಿಯ ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 21.03.2025 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ಗಳನ್ನು ದಿನಾಂಕ: 25.03.2025 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು "KPPP" ವೆಬ್‌ಸೈಟ್ http://kppp.karnataka.gov.in ನಲ್ಲಿ ಪಡೆಯುಬಹುದು.
ಸಹಿ/ ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/1031/ಕೆಎಸ್‌ಎಂಸಿಎ/2024-25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರವರ ಕಛೇರಿ,
ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ಫೋನ್ ನಂ : 08182-222943, ಇ-ಮೇಲ್: spdivision@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ-ಲಕೋಟೆ ಪದ್ಧತಿ) (ಕೆ.ಪಿ.ಪಿ ಪೋರ್ಟ್‌ಲ್ ಮೂಲಕ)
ಐ.ಎಫ್.ಟಿ ಸಂಖ್ಯೆ: 45/2024-25 ದಿನಾಂಕ : 15.03.2025
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ-4 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 2ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಭದ್ರಾವತಿ ತಾಲ್ಲೂಕಿನಲ್ಲಿ 5054-04-337-0-01-154 ಜಿಲ್ಲಾ ಮತ್ತು ಇತರೆ ರಸ್ತೆ ಕಾಮಗಾರಿಗಳು ಸುಧಾರಣೆ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ ಭದ್ರಾವತಿ ತಾಲ್ಲೂಕು ಭದ್ರಾವತಿ-ಹೊಳೆಹೊನ್ನೂರು ರಸ್ತೆಯಿಂದ (ಕಾಗೆಕೊಡಮಗ್ಗೆಯಿಂದ) ಗುಡ್ಡದನೇರಲಕೆರೆಯನ್ನು, ಹಸೂರು, ತಿಪ್ಲಾಪುರ, ಅರಳಿಹಳ್ಳಿ, ಬಸಲಿಕಟ್ಟೆ, ಸಿದ್ದಾಪುರ ರೆಡ್ಡಿಕ್ಯಾಂಪ್ ಮತ್ತು ಸಿದ್ದರಮಟ್ಟಿ ಮಾರ್ಗವಾಗಿ ಸೇರುವ ರಸ್ತೆ ಸರಪಳಿ 1.00 ರಿಂದ 2.00 ಕಿ.ಮೀ. ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ (ಇಂಡೆಂಟ್ ನಂ.20159) ಮತ್ತು 4059-80-051-0-29-386 ಇಲಾಖಾ ಕಟ್ಟಡಗಳು ನಿರ್ಮಾಣ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ ಭದ್ರಾವತಿ ತಾಲ್ಲೂಕು, ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಹೆಚ್ಚುವರಿ 6 ಸಂಖ್ಯೆ ತರಗತಿ ಕೊಠಡಿ ಕಟ್ಟಡ ನಿರ್ಮಾಣ. (ಇಂಡೆಂಟ್ ನಂ.19165) ಕಾಮಗಾರಿಗೆ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್ ಗಿಟ್ಟ ಗರಿಷ್ಠ ಮೊತ್ತ ರೂ.394.56 ಲಕ್ಷಗಳು ಮತ್ತು ಕನಿಷ್ಠ ಮೊತ್ತ ರೂ.233.38 ಲಕ್ಷಗಳು ಮತ್ತು ಇ.ಎಂ.ಡಿ. ಗರಿಷ್ಠ ಮೊತ್ತ ರೂ.5.92 ಲಕ್ಷಗಳು ಮತ್ತು ಕನಿಷ್ಠ ಮೊತ್ತ ರೂ.3.50 ಲಕ್ಷಗಳು, ಸದರಿ ಕಾಮಗಾರಿಗಳ ಟೆಂಡರ್ ಕಾಲಾವಧಿ 11 ತಿಂಗಳು ಮಳೆಗಾಲ ಸೇರಿ.
ಅರ್ಹ ಗುತ್ತಿಗೆದಾರರು ಕೆ.ಪಿ.ಪಿ.ಪೋರ್ಟ್‌ಲ್‌ನಲ್ಲಿ ಪೋರ್ಟಲ್ http://KPPP.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್-2ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್-3 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 15-03-2025 ರಿಂದ 01-04-2025 ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: 01-04-2025ರ ಸಂಜೆ 5:00 ಗಂಟೆಯೊಳಗೆ ಕೆ.ಪಿ.ಪಿ ಪೋರ್ಟ್‌ಲ್‌ನಲ್ಲಿ ಭರಿಸತಕ್ಕದ್ದು, ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಕೆ.ಪಿ.ಪಿ ಪೋರ್ಟ್‌ಲ್‌ನಲ್ಲಿ ದಿನಾಂಕ: 02-04-2025 ರಂದು ಸಂಜೆ 5.30 ಕ್ಕೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 03-04-2025 ರ ನಂತರ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.
ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ
ವಾಸಾಸಂಇ/ಶಿ/ನಂ.121-03
ಝೆಂಕಾರ್/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಉಪ ಆಯುಕ್ತರು (ಆಡಳಿತ) ರವರ ಕಛೇರಿ, 1ನೇ ಮಹಡಿ, ಅನೆಕ್ಸ್ ಕಟ್ಟಡ-1,
ನರಸಿಂಹರಾಜಚೌಕ, ಬೃಬೆಂಮಪಾ ಕೇಂದ್ರ ಕಛೇರಿ, ಬೆಂಗಳೂರು - 560002
ಸಂ. ಉಆ/ಆಡಳಿತ/ಟೆಂಡರ್/02/2024-25 ದಿನಾಂಕ : 17-03-2025
ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿಲಕೋಟೆ ಪದ್ಧತಿ) (ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಗೌರವಾನ್ವಿತ ಮುಖ್ಯ ಆಯುಕ್ತರು, ಬೃಬೆಂಮಪಾ, ಬೆಂಗಳೂರು ಇವರ ಪರವಾಗಿ ಉಪ ಆಯುಕ್ತರು (ಆಡಳಿತ) ಇವರು ಕೆಳಕಂಡ ಕೋಷ್ಟಕದಲ್ಲಿ ವಿವರಿಸಲಾದ ಸೇವೆಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕಾಮಗಾರಿಯ ಹೆಸರು
1	ಬೃಬೆಂಮಪಾ ಸಭೆಗಳು ಮತ್ತು ಸಮಾರಂಭಗಳಿಗೆ ಊಟೋಪಹಾರದ ಸರಬರಾಜು. ಅಂದಾಜು ವೆಚ್ಚ : ರೂ.99.00 ಲಕ್ಷಗಳು. ಟೆಂಡರ್‌ಗಿಟ್ಟ ಮೊತ್ತ : ರೂ.94,26,750/. ಇಎಂಡಿ : ರೂ.1,89,000/-

(1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ https://kppp.karnataka.gov.in ನಿಂದ 18-03-2025 ರಿಂದ ಡೌನ್‌ಲೋಡ್ ಮಾಡಬಹುದು. (2) ವಿಚಾರಣೆಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಲು ಕೊನೆಯ ದಿನಾಂಕ : 20-03-2025 ರಂದು 17.00 ಗಂಟೆಗೆ ಮುಂಚಿತವಾಗಿ. (3) ಕೆಪಿಪಿ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಟೆಂಡರ್‌ಗಳನ್ನು 25-03-2025 ರಂದು 17.30 ಗಂಟೆ ಅಥವಾ ಮುಂಚಿತವಾಗಿ ಸಲ್ಲಿಸಬೇಕು ಮತ್ತು ಕೆಪಿಪಿ ಪೋರ್ಟಲ್ ಮಾರ್ಗಸೂಚಿಗಳಿಗೆ ಅನುಸಾರವಾಗಿ ಟೆಂಡರ್‌ಗಳನ್ನು ತೆರೆಯಲಾಗುವುದು.
(4) ಉಪ ಆಯುಕ್ತರು (ಆಡಳಿತ) ವಿಭಾಗ ಇವರ ಕಛೇರಿಯಲ್ಲಿ 26-03-2025 ರಂದು 17.30 ಗಂಟೆಗೆ ವೆಬ್‌ಸೈಟ್ https://kppp.karnataka.gov.in ನಲ್ಲಿ ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗುವುದು.
ಸಹಿ/- ಉಪ ಆಯುಕ್ತರು - ಆಡಳಿತ, ಬೃಬೆಂಮಪಾ

ಕರ್ನಾಟಕ ಸರಕಾರ
ಕೃಷಿ ಇಲಾಖೆ
ಸಹಾಯಕ ಕೃಷಿ ನಿರ್ದೇಶಕರ ಕಾರ್ಯಾಲಯ ರಾಯಬಾಗ,
ಸಂಖ್ಯೆ:ಸಕೃನಿ/ರಾ/RKVY/RPS/S.TENDER/2024-25 ದಿನಾಂಕ: 15.03.2025
: ಇ-ಪ್ರೋಕ್ಯೂರ್‌ಮೆಂಟ್ ಅಲ್ಪಾವಧಿ-ಟೆಂಡರ್ ಪ್ರಕಟಣೆ :
2024-25 ನೇ ಸಾಲಿನಲ್ಲಿ ರಾಯಬಾಗ ತಾಲ್ಲೂಕಿಗೆ ಸಂಬಂದಿಸಿದಂತೆ, ಈ ಕೆಳಕಂಡಂತೆ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸಮಸ್ಯಾತ್ಮಕ ಮಣ್ಣುಗಳ ಸುಧಾರಣೆ ಕಾರ್ಯಕ್ರಮದಡಿಯಲ್ಲಿ (MANAGEMENT OF PROBLEMETIC SOILS) ಕಾಮಗಾರಿಗಳ ಅನುಷ್ಠಾನಕ್ಕಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ-ಟೆಂಡರ್ ಕರೆಯಲಾಗಿದೆ. ವಿವರ ಈ ಕೆಳಗಿನಂತಿದೆ
ಕ್ರ.ಸಂ:1:ಟೆಂಡರ್ ಸಂಖ್ಯೆ:AD/2024-25/OW/WORK_INDENT114, ವಿವರ:RECLAMATION OF PROBLEMATIC SOILS AT KHEMALAPUR TQ: RAIBAG, DIST: BELAGAVI.
ಮೇಲ್ಕಂಡ ಟೆಂಡರ್‌ಗಳ ಅರ್ಜಿ ಸಲ್ಲಿಸುವ ದಿನಾಂಕ, ಹಾಗೂ ಕೊನೆಯ ದಿನಾಂಕಗಳು ಈ ಕೆಳಕಂಡಂತಿವೆ.
1:ಟೆಂಡರ್ ಪ್ರಕಟಣೆ ದಿನಾಂಕ:15.03.2025, 2:ಟೆಂಡರ್‌ದಾರರು ಆನ್‌ಲೈನ್ ಮೂಲಕ ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ:24.03.2025 ರಂದು ಸಾಯಂಕಾಲ 4.00 ಗಂಟೆಯವರೆಗೆ. 3:ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಸ್ಥಳ ದಿನಾಂಕ ಮತ್ತು ಸಮಯ: 25.03.2025 ರಂದು ಸಾಯಂಕಾಲ 04.00 ಗಂಟೆಗೆ. ಸಹಾಯಕ ಕೃಷಿ ನಿರ್ದೇಶಕರ ಕಾರ್ಯಾಲಯ, ಸ್ಟೇಶನ್ ರಸ್ತೆ ರಾಯಬಾಗ, 4:ಆರ್ಥಿಕ ಬಿಡ್‌ಗಳನ್ನು ತೆರೆಯುವ ಸ್ಥಳ ದಿನಾಂಕ ಮತ್ತು ಸಮಯ:ತಾಂತ್ರಿಕ ದಾಖಲಾತಿಗಳ ಪರಿಶೀಲನೆ ನಂತರದಲ್ಲಿ ತೆರೆಯಲಾಗುವುದು. 5:ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿ ಹಾಗೂ ಅರ್ಜಿ ಪಡೆಯಬೇಕಾದ ಕಛೇರಿ ವಿಳಾಸ ಮತ್ತು ದೂರವಾಣಿ ಸಂಖ್ಯೆ:ಸಹಾಯಕ ಕೃಷಿ ನಿರ್ದೇಶಕರ ಕಾರ್ಯಾಲಯ, ಸ್ಟೇಶನ್ ರಸ್ತೆ ರಾಯಬಾಗ. ದೂರವಾಣಿ ಸಂ: 08331-295055, 6:ಇ-ಟೆಂಡರ್‌ಬಗ್ಗೆ ಟೆಕ್ನಿಕಲ್ ಮಾಹಿತಿಗಾಗಿ ಸಂಪರ್ಕಿಸಬಹುದಾದ ಇ-ಮೇಲ್ ವಿಳಾಸ:https://kppp. karnataka. gov.in
*Website:www.kppp.karnataka.gov.in ನಲ್ಲಿ ಪಡೆಯಬಹುದಾಗಿದೆ. * ಟೆಂಡರ್ ಅರ್ಜಿ ದಿನಾಂಕವನ್ನು ವಿಸ್ತರಿಸುವ ಮತ್ತು ರದ್ದುಪಡಿಸುವ ಅಥವಾ ಬದಲಾವಣೆ ಹಕ್ಕನ್ನು ಈ ಟೆಂಡರ್ ಸಮಿತಿಯ ಅಧ್ಯಕ್ಷರು ಹೊಂದಿದ್ದು, ಅವರ ನಿರ್ಣಯವೇ ಅಂತಿಮವಾಗಿರುತ್ತದೆ.
ಸಹಿ/-ಸಹಾಯಕ ಕೃಷಿ ನಿರ್ದೇಶಕರು
ರಾಯಬಾಗ
DIPR/BGM/RO-NO-1941/KSMCA/2024-25

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.
ಪ್ರಕಟಣೆ ಸಂ: ಐಎಫ್‌ಟಿ-33/ಜೆಇ/2024-25/3639 ದಿನಾಂಕ:- 17.03.2025
ಅಲ್ಪಾವಧಿ ಕೆಪಿಪಿಪಿ ಟೆಂಡರ್ ಪ್ರಕಟಣೆ
ಉಲ್ಲೇಖ : ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ-33/ಜೆಇ/2024-25 ದಿನಾಂಕ: 17.03.2025.
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ದಾವಣಗೆರೆ, ಹರಿಹರ ಮತ್ತು ಚನ್ನಗಿರಿ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ-2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಲೆಕ್ಕಶೀರ್ಷಿಕೆ :5054-03-337-0-17-154 ಯೋಜನೆ (ರಾಜ್ಯ ಹೆದ್ದಾರಿ ಸುಧಾರಣೆ) ಯಡಿ ಒಟ್ಟು 2 ಕಾಮಗಾರಿಗಳಿಗೆ (ವರ್ಕ್ ಇಂಡೆಂಟ್ ನಂ. 18743-2ನೇ ಕರೆ, 20107) ಕನಿಷ್ಟ ಮೊತ್ತ ಮೊತ್ತ ರೂ. 100.00 ಲಕ್ಷ ಮತ್ತು ಗರಿಷ್ಟ ಮೊತ್ತ ರೂ. 500.00 ಲಕ್ಷ, ಲೆಕ್ಕಶೀರ್ಷಿಕೆ : 5054-03-337-0-17-160 ಯೋಜನೆ(ರಾಜ್ಯ ಹೆದ್ದಾರಿ ನವೀಕರಣ) ಅಡಿ ಒಟ್ಟು 2 ಕಾಮಗಾರಿಗಳಿಗೆ (ವರ್ಕ್ ಇಂಡೆಂಟ್ ನಂ. 19374-3ನೇ ಕರೆ, 18848-2ನೇ ಕರೆ) ಕನಿಷ್ಟ ಮೊತ್ತ ಮೊತ್ತ ರೂ. 100.00 ಲಕ್ಷ ಮತ್ತು ಗರಿಷ್ಟ ಮೊತ್ತ ರೂ. 200.00 ಲಕ್ಷ, ಲೆಕ್ಕಶೀರ್ಷಿಕೆ : 5054-04-337-0-01-154 ಯೋಜನೆ(ಜಿಲ್ಲಾ ಮತ್ತು ಇತರೆ ರಸ್ತೆಗಳು ಸುಧಾರಣೆ) ಲೆಕ್ಕಶೀರ್ಷಿಕೆಯಡಿ ಒಟ್ಟು 4 ಕಾಮಗಾರಿಗಳಿಗೆ (ವರ್ಕ್ ಇಂಡೆಂಟ್ ಸಂ: 18683-3ನೇ ಕರೆ, 19751-2ನೇ ಕರೆ, 18595-2ನೇ ಕರೆ ಮತ್ತು 19587) ಕನಿಷ್ಟ ಮೊತ್ತ ಮೊತ್ತ ರೂ. 100.00 ಲಕ್ಷ ಮತ್ತು ಗರಿಷ್ಟ ಮೊತ್ತ ರೂ. 500.00 ಲಕ್ಷ, ಲೆಕ್ಕಶೀರ್ಷಿಕೆ 4059-80-051-0-29-386 ಇಲಾಖಾ ಕಟ್ಟಡಗಳು ಅಡಿ 1 ಕಾಮಗಾರಿಗೆ (ಇಂಡೆಂಟ್ ಸಂಖ್ಯೆ 19350-2ನೇ ಕರೆ) ರೂ. 75.00 ಲಕ್ಷ, ಲೆಕ್ಕಶೀರ್ಷಿಕೆ 8443-ಠೇವಣಿವಂತಿಕೆ ಅಡಿ 1 ಕಾಮಗಾರಿಗೆ ರೂ. 29.98 ಲಕ್ಷ ಮತ್ತು ಲೆಕ್ಕಶೀರ್ಷಿಕೆ : 3034-04-337-1-10-200 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಅಡಿ 1 ಕಾಮಗಾರಿಗೆ ರೂ. 50.00 ಲಕ್ಷ (ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಏಕ ಲಕೋಟೆ ಮತ್ತು ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.
ವರ್ಕ್ ಇಂಡೆಂಟ್ ಸಂಖ್ಯೆ : 20107 ಮತ್ತು 19587 ಕಾಮಗಾರಿಗಳ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 01.04.2025 ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 02.04.2025 ಸಂಜೆ 4.30 ಗಂಟೆಯವರೆಗೆ ಮತ್ತು ವರ್ಕ್ ಇಂಡೆಂಟ್ ಸಂಖ್ಯೆ : 18743, 19374, 18848, 18683, 19751, 18595, 19350 ಮತ್ತು 19934ರ ಕಾಮಗಾರಿಗಳ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 25.03.2025 ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 26.03.2025 ಸಂಜೆ 4.30 ಗಂಟೆಯವರೆಗೆ ಮತ್ತು ವರ್ಕ್ ಇಂಡೆಂಟ್ ಸಂಖ್ಯೆ : 20462ರ ಕಾಮಗಾರಿಯ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 01.04.2025 ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 02.04.2025 ಸಂಜೆ 4.30 ಗಂಟೆಯವರೆಗೆ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.
ವಾಸಾಇ/ಡಿವಿಜಿ/858/
ಕೆಎಸ್‌ಎಂಸಿಎ/2024-25
ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ಸಮಾಚಾರ ಸಣ್ಣದಲ್ಲ

ಮುಖ್ಯ ಪೇದೆ ಅಸ್ಥಿಪಂಜರ ಪತ್ತೆ

ಬೆಂಗಳೂರು: ಪೊಲೀಸ್ ಹೆಡ್ ಕಾನ್‌ಸ್ಟೇಬಲ್ ಆತ್ಮಹತ್ಯೆ ಮಾಡಿಕೊಂಡು ಪ್ರಕರಣ ಬೆಳಕಿಗೆ ಬಂದಿದೆ. ಮುಬಾರಕ್ ಸಿಕಂದರ್ ಮುಜಾವರ್ ಆತ್ಮಹತ್ಯೆ ಮಾಡಿಕೊಂಡ ಪೊಲೀಸ್ ಪೇದೆ. ಒಂದೂವರೆ ತಿಂಗಳ ಹಿಂದೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದು ಶಂಕಿಸಲಾಗಿದೆ. ಆಡುಗೋಡಿಯಲ್ಲಿ ನ ಶಿಥಿಲ ಕಟ್ಟಡದಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತದೇಹದ ವಾಸನೆ ಬಂದ ಕಾರಣ ಘಟನೆ ಸೋಮವಾರ ಬೆಳಕಿಗೆ ಬಂದಿದ್ದು, ಮೇಲ್ನೋಟಕ್ಕೆ ಒಂದೂವರೆ ತಿಂಗಳ ಹಿಂದೆಯೇ ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದು ಶಂಕಿಸಲಾಗಿದೆ. ಬೆಳಗಾವಿ ಮೂಲದ ಮುಬಾರಕ್ ಕಳೆದ ಏಳು ವರ್ಷಗಳಿಂದ ಸಿಎಆರ್ ದಕ್ಷಿಣದಲ್ಲಿ ಕೆಲಸ ಮಾಡಿಕೊಂಡಿದ್ದರು. ಮೂರು ವರ್ಷಗಳ ಹಿಂದೆ ಮದುವೆಯಾಗಿದ್ದರು. ಪತ್ನಿ ಹೆರಿಗೆಗೆಂದು ಬೆಳಗಾವಿಗೆ ಹೋಗಿದ್ದರು. ಮುಜಾವರ್ ಲಕ್ಷಗಟ್ಟಲೆ ಸಾಲ ಮಾಡಿಕೊಂಡಿದ್ದು, ಆನ್‌ಲೈನ್ ಗೇಮ್ ಚಟಕ್ಕೆ ಬಿದ್ದಿದ್ದರು ಎಂದು ಶಂಕಿಸಲಾಗಿದೆ. ಮುಬಾರಕ್ ಸಂಬಳದ ಮೇಲೆ ಬ್ಯಾಂಕ್ ಆಫ್ ಬರೋಡದಲ್ಲಿ 20 ಲಕ್ಷ ಸಾಲ, ಬೇರೆಯವರಿಂದ 10 ಲಕ್ಷದವರೆಗೂ ಸಾಲ ಮಾಡಿದ್ದರು. ಜತೆಗೆ ಇತ್ತೀಚೆಗೆ ಕುಡಿತದ ಚಟಕ್ಕೂ ಬಿದ್ದಿದ್ದ ಮುಬಾರಕ್, ಇದೇ ಕಾರಣಕ್ಕೆ ಸಾಲ ಮಾಡಿಕೊಂಡು ಆತ್ಮಹತ್ಯೆ ಮಾಡಿರಬಹುದು ಎಂದು ಶಂಕಿಸಲಾಗಿದೆ.

ಕನ್ನಡ ಬೋಧಿಸದ ಶಾಲೆ ವಿರುದ್ಧ ಕ್ರಮ ಅಗತ್ಯ

ಬೆಂಗಳೂರು: ಬೆಂಗಳೂರು ನಗರದಲ್ಲಿಯೇ ಹೆಚ್ಚು ಖಾಸಗಿ ಕೇಂದ್ರ ಪಠ್ಯಕ್ರಮದ ಶಾಲೆಗಳು ಕನ್ನಡ ಭಾಷಾ ಬೋಧನೆ ಕೈಗೊಳ್ಳದಿದ್ದರೂ ಶಿಕ್ಷಣ ಇಲಾಖೆ ಶಾಲೆಗಳ ವಿರುದ್ಧ ಯಾವುದೇ ಕ್ರಮಕ್ಕೆ ಮುಂದಾಗದಿರುವುದು ವಿಷಾದನೀಯ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಬೇಸರ ವ್ಯಕ್ತಪಡಿಸಿದ್ದಾರೆ.

ಶಾಲಾ ಶಿಕ್ಷಣ ಇಲಾಖೆ ಆಯುಕ್ತರಿಗೆ ಪತ್ರ ಬರೆದಿರುವ ಅವರು, ಕನ್ನಡ ಅಭಿವೃದ್ಧಿ ಪ್ರಾಧಿಕಾರವೇ ಕನ್ನಡ ಬೋಧಿಸದ ಶಾಲೆಗಳ ಪಟ್ಟಿ ಮಾಡಿ ಇಲಾಖೆಗೆ ನೀಡಿದೆ, ಅಧಿಕಾರಿಗಳು ಕಾಯ್ದೆ ಉಲ್ಲಂಘಿಸುವ ಶಾಲೆಗಳ ವಿರುದ್ಧ ಯಾವುದೇ ಕ್ರಮಕ್ಕೆ ಮುಂದಾಗದಿರುವುದು, ಕನ್ನಡ ಭಾಷೆಯ ಬಗ್ಗೆ ಇಲಾಖೆ ತೋರುವ ಅಗೌರವವಷ್ಟೇ ಅಲ್ಲ ನೆಲದ ಕಾನೂನಿನ ಉಲ್ಲಂಘನೆಯೂ ಆಗಿರುತ್ತದೆ. ಈ ಬಗ್ಗೆ ಇಲಾಖೆ ಎಚ್ಚೆತ್ತುಕೊಳ್ಳಬೇಕಿದೆ. ಕೂಡಲೇ ಶಿಕ್ಷಣ ಇಲಾಖೆ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ಕರೆದು ಸೂಕ್ತ ಕ್ರಮ ಜರುಗಿಸುವಂತೆ ಬಿಳಿಮಲೆ ಆಗ್ರಹಿಸಿದ್ದಾರೆ.

ಗೋಹತ್ಯೆ ವಿರುದ್ಧ ಜನಜಾಗೃತಿ

ಬೆಂಗಳೂರು: ರಾಷ್ಟ್ರಾದ್ಯಂತ ಗೋಹತ್ಯೆ ನಿಷೇಧಿಸುವಂತೆ ಹಾಗೂ ಅಕ್ರಮ ಹಿಂಸಾತ್ಮಕ ಗೋಸಾಗಣೆಗೆ ಕಠಿಣ ಶಿಕ್ಷೆ ವಿಧಿಸಲು ಆಗ್ರಹಿಸಿ ಮಾ.21 ರಂದ 23ರವರೆಗೆ ಮಾಗಡಿ ರಸ್ತೆಯ ಚನ್ನೇನ ಹಳ್ಳಿಯಲ್ಲಿ ಸಮಾವೇಶ ನಡೆಯಲಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಭಾರತೀಯ ಗೋ ಪರಿವಾರ್ ಚಾರಿಟ ಬಲ್ ಟ್ರಸ್ಟ್‌ನ ಅಧ್ಯಕ್ಷ ಶೈಲೇಂದ್ರ, ರಾಷ್ಟ್ರಾದ್ಯಂತ ಗೋಹತ್ಯೆ ನಿಷೇಧ ಮಾಡಿ ಎಲ್ಲಾ ರಾಜ್ಯಗಳಲ್ಲೂ ಒಂದೇ ರೀತಿ ಕಾನೂನು ಜಾರಿ ಮಾಡುವಂತೆ ಕೇಂದ್ರಕ್ಕೆ ಒತ್ತಾಯಿಸಲಾಗುವುದು. ಗೋರಕ್ಷೆ ಆಂದೋಲನ ಬೆಂಬಲಿಸುವಂತೆ ಭಾರತೀಯ ಸಮುದಾಯಕ್ಕೆ ಕರೆ ನೀಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು.

ಪ್ರತ್ಯೇಕ ಕೋರ್ಟ್ ಸ್ಥಾಪನೆಗೆ ಪ್ರಸ್ತಾವನೆ

ವಿಧಾನಪರಿಷತ್: ನಕಲಿ ಔಷಧ ಕಂಪೆನಿಗಳು ಹಾಗೂ ಮಾರಾಟಗಾರರ ವಿರುದ್ಧ ಔಷಧ ಮತ್ತು ಕಾಂತಿವರ್ಧಕ ಅಧಿನಿಯಮದಡಿ ತ್ವರಿತ ಕಾನೂನು ಕ್ರಮ ಕೈಗೊಳ್ಳಲು ಪ್ರತ್ಯೇಕ ನ್ಯಾಯಾಲಯ ರಚಿಸುವಂತೆ ಕಾನೂನು ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ನಕಲಿ ಔಷಧ ತಯಾರಿಕಾ ಕಂಪೆನಿಗಳು ಹಾಗೂ ಮಾರಾಟಗಾರರ ವಿರುದ್ಧ ಕೈಗೊಂಡ ಕ್ರಮ ಬಗ್ಗೆ ಕಾಂಗ್ರೆಸ್ ಸದಸ್ಯ ಎಸ್.ವಿ. ರವಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಗುಂಡೂರಾವ್, ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ನಕಲಿ ಔಷಧ ಮಾರಾಟ ಮಾಡುತ್ತಿದ್ದ 21 ಪ್ರಕರಣ ಪತ್ತೆ ಹಚ್ಚಲಾಗಿದೆ. ಔಷಧ ಮತ್ತು ಕಾಂತಿವರ್ಧಕ ಅಧಿನಿಯಮದ ಅಡಿ ವಿವಿಧ ನ್ಯಾಯಾಲಯಗಳಲ್ಲಿ ಪ್ರಕರಣ ದಾಖಲಿಸಲಾಗಿದೆ. ಇವೆಲ್ಲವೂ ವಿಚಾರಣೆ ಹಂತದಲ್ಲಿದೆ. ನಕಲಿ ಔಷಧಿ ತಯಾರಕರ ಹಾಗೂ ಮಾರಾಟಗಾರರ ವಿರುದ್ಧ ತ್ವರಿತಗತಿ ವಿಚಾರಣೆ ನಡೆಸಿ, ಶಿಕ್ಷೆಗೊಳಪಡಿಸಲು ಕಾನೂನು ಇಲಾಖೆಗೆ ಪ್ರತ್ಯೇಕ ನ್ಯಾಯಾಲಯ ಸ್ಥಾಪಿಸುವಂತೆ ಪ್ರಸ್ತಾವನೆ ಕಳುಹಿಸಲಾಗಿದೆ ಎಂದರು.



ಕಾನೂನು, ನಿಯಮ ಪಾಲಿಸದವರನ್ನು ತಡೆಯಲು ಅಂತಾರಾಷ್ಟ್ರೀಯ ಸಂಸ್ಥೆ ವಿಫಲ: ಪ್ರಧಾನಿ ವಿಶ್ಲೇಷಣೆ

ವಿಶ್ವಸಂಸ್ಥೆ ಅಪ್ರಸ್ತುತವಾಗಿದೆ: ಮೋದಿ

ದೆಹಲಿ: ವಿಶ್ವಸಂಸ್ಥೆ ಸೇರಿದಂತೆ ಅಂತಾರಾಷ್ಟ್ರೀಯ ಸಂಸ್ಥೆಗಳು ದುರ್ಬಲ ಗೊಂಡಿದ್ದು ಅಪ್ರಸ್ತುತವಾಗುತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ತೀವ್ರ ಅಸಮಾಧಾನ ವ್ಯಕ್ತಪಡಿ ಸಿದ್ದಾರೆ.

ಭಾನುವಾರ ಅಮೆರಿಕದ ವಿಜ್ಞಾನಿ ಲೆಕ್ಸ್ ಫ್ರಿಡ್ ಮನ್ ಅವರ ಪಾಡ್‌ಕ್ಯಾಸ್ಟ್‌ನಲ್ಲಿ ಸುಮಾರು ಮೂರು ಗಂಟೆ ಕಾಲ ಮಾತನಾಡಿದ ಪ್ರಧಾನಿ, ನಾನಾ ವಿಷಯಗಳ ಬಗ್ಗೆ ತಮ್ಮ ಅನಿಸಿಕೆ ಯನ್ನು ಹಂಚಿಕೊಂಡರು.

ಜಾಗತಿಕ ಸಂಘರ್ಷಗಳು, ಮಧ್ಯಪ್ರಾಚ್ಯ ಯುದ್ಧ ಮತ್ತು ಚೀನಾ-ಅಮೆರಿಕದ ಉದ್ವಿಗ್ನತೆಗಳನ್ನು ಉಲ್ಲೇಖಿಸಿದ ಪ್ರಧಾನಿ ವಿಶ್ವಸಂಸ್ಥೆ ಮತ್ತು ಇತರ ಅಂತರರಾಷ್ಟ್ರೀಯ ಸಂಸ್ಥೆಗಳಿಗೆ ಈ ವಿಷಯದಲ್ಲಿ ಯಾವುದೇ ಪ್ರಭಾವ ಬೀರಲು ಸಾಧ್ಯವಾಗಿಲ್ಲ. ಈ ಸಂಸ್ಥೆಗಳಲ್ಲಿ ಯಾವುದೇ ಸುಧಾರಣೆಗೆ ಅವಕಾಶ ವಿಲ್ಲದ ಕಾರಣ ಇವು ಬಹುತೇಕ ಅಪ್ರಸ್ತುತವಾಗಿವೆ ಎಂದು ಮೋದಿ ವಿಶ್ಲೇಷಿಸಿದರು.

ಕಾನೂನುಗಳು ಮತ್ತು ನಿಯಮಗಳ ಬಗ್ಗೆ ಕಾಳಜಿ ವಹಿಸದ ಜಗತ್ತಿನಲ್ಲಿ ಜನರು ಎಲ್ಲವನ್ನೂ ಮಾಡುತಿದ್ದಾರೆ. ಆದರೆ ಇಂತಹವರನ್ನು ಯಾವ ಅಂತಾರಾಷ್ಟ್ರೀಯ ಸಂಸ್ಥೆಗಳಿಗೂ ತಡೆಯಲು ಸಾಧ್ಯವಾಗುತ್ತಿಲ್ಲ. ವಿಶ್ವಸಂಸ್ಥೆಯಂತಹ ಸಂಸ್ಥೆಗಳು ತಮ್ಮ ಪಾತ್ರವನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎಂದು ಪ್ರಧಾನಿ ಹೇಳಿದರು.

ಕೋವಿಡ್ -19 ಸಾಂಕ್ರಾಮಿಕ ರೋಗ ಕಲಿಸಿದ ಪಾಠಗಳನ್ನು ನೆನಪಿಸಿದ ಪ್ರಧಾನಿ, ಉಲ್ಬಣಗೊಳ್ಳುತ್ತಿರುವ ಜಾಗತಿಕ ಉದ್ವಿಗ್ನತೆಗಳ ನಡುವೆ ಏಕತೆಯ ಅಗತ್ಯವನ್ನು ಒತ್ತಿ ಹೇಳಿದರು. ಕೋವಿಡ್ -19 ನಮ್ಮೆಲ್ಲರ ಮಿತಿಗಳನ್ನು ಬಹಿರಂಗಪಡಿಸಿದೆ. ನಾವು ನಮ್ಮನ್ನು ನಾವು ಶ್ರೇಷ್ಠ ರಾಷ್ಟ್ರವೆಂದು ಎಷ್ಟೇ ಪರಿಗಣಿಸಿದರೂ, ಬಹಳ ಪ್ರಗತಿಪರರು, ವೈಜ್ಞಾನಿಕವಾಗಿ ಬಹಳ ಮುಂದುವರಿದವರು, ಪ್ರತಿಯೊಬ್ಬರೂ ತಮ್ಮದೇ ಆದ ರೀತಿಯಲ್ಲಿ ಏನೇ ಇರಲಿ, ಆದರೆ ಕೋವಿಡ್ -19 ರ ಕಾಲದಲ್ಲಿ, ನಾವೆಲ್ಲರೂ ಭೂಮಿಗೆ ಕುಸಿದಿದ್ದೆವು. ಪ್ರಪಂಚದ ಪ್ರತಿಯೊಂದು ದೇಶವೂ ಸಂಕಷ್ಟದಲ್ಲಿ ಸಿಲುಕಿತ್ತು ಎಂದು ನೆನಪಿಸಿದರು. ''ಜಗತ್ತು ಅದರಿಂದ ಏನನ್ನಾದರೂ ಕಲಿಯುತ್ತದೆ ಮತ್ತು ನಾವು ಹೊಸ ವಿಶ್ವಕ್ರಮದತ್ತ ಸಾಗುತ್ತೇವೆ ಎಂಬ ನಿರೀಕ್ಷೆ ಇತ್ತು. ಆದರೆ ದುರದೃಷ್ಟವಶಾತ್ ಪರಿಸ್ಥಿತಿ ಏನಾಯಿತು ಎಂದರೆ ಶಾಂತಿಯತ್ತ ಸಾಗುವ ಬದಲು, ಜಗತ್ತು ವಿಭಜನೆಯಾಯಿತು, ಅನಿಶ್ಚಿತತೆಯ ಅವಧಿ ಬಂದಿತು. ಯುದ್ಧವು ಜಗತ್ತನ್ನು ಹೆಚ್ಚು ತೊಂದರೆಗೆ ಸಿಲುಕಿಸಿತು ಎಂದು ಪ್ರಧಾನಿ ಮೋದಿ ಫ್ರಿಡ್‌ಮನ್ ನೊಂದಿಗಿನ ಪಾಡ್‌ಕ್ಯಾಸ್ಟ್‌ನಲ್ಲಿ ಹೇಳಿದ್ದಾರೆ.

ಜಗತ್ತು ಸಂಘರ್ಷದಿಂದ ಸಹಕಾರಕ್ಕೆ ಜಗತ್ತು ಬದಲಾಗಬೇಕು ಎಂದು ಕರೆ ನೀಡಿದ ಪ್ರಧಾನಿ, ಅಭಿವೃದ್ಧಿ-ಚಾಲಿತ ವಿಧಾನವನ್ನು ಮುಂದಿನ ಮಾರ್ಗವಾಗಿ ಪ್ರತಿಪಾದಿಸಿದರು. ವಿಸ್ತರಣಾವಾದವು ಪರಸ್ಪರ ಅವಲಂಬಿತ ಮತ್ತು ಪರಸ್ಪರ ಅವಲಂಬಿತ ಜಗತ್ತಿನಲ್ಲಿ ಕೆಲಸ ಮಾಡುವುದಿಲ್ಲ ಎಂದ ಅವರು ರಾಷ್ಟ್ರಗಳು ಪರಸ್ಪರ ಬೆಂಬಲಿಸುವ ಅಗತ್ಯವನ್ನು ಒತ್ತಿ ಹೇಳಿದರು. ಜಗತ್ತು ಪರಸ್ಪರ ಅವಲಂಬಿತವಾಗಿದೆ, ಪರಸ್ಪರ ಸಂಬಂಧ ಹೊಂದಿದೆ.

ಪ್ರತಿಯೊಬ್ಬರಿಗೂ ಎಲ್ಲರೂ ಬೇಕು, ಯಾರೂ ಒಬ್ಬಂಟಿಯಾಗಿ ಏನನ್ನೂ ಮಾಡಲು ಸಾಧ್ಯವಿಲ್ಲ. ನಾನು ಭೇಟಿ ನೀಡುವ ಎಲ್ಲಾ ವಿಭಿನ್ನ ವೇದಿಕೆಗಳಲ್ಲಿ, ಪ್ರತಿಯೊಬ್ಬರೂ ಸಂಘರ್ಷದ ಬಗ್ಗೆ ಚಿಂತಿತರಾಗಿರುವುದನ್ನು ನಾನು ನೋಡುತ್ತಿದ್ದೇನೆ. ಈ ವಾತಾವರಣದಿಂದ ನಮಗೆ ಶೀಘ್ರದಲ್ಲೇ ಪರಿಹಾರ ಸಿಗುತ್ತದೆ ಎಂದು ನಾವು ಭಾವಿಸುತ್ತೇವೆ ಎಂದು ಪ್ರಧಾನಿ ಮೋದಿ ಹೇಳಿದರು.

ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಿ: ತುಷಾರ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚನೆ ನೀಡಿದರು. ಹೈಕೋರ್ಟ್ ನಿರ್ದೇಶನದಂತೆ, ಬಿಬಿಎಂಪಿ ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವಂತಹ ಕೆರೆಗಳ ಒತ್ತುವರಿಯನ್ನು ತೆರವುಗೊಳಿಸುವ ಕುರಿತು ಪಾಲಿಕೆ ಕೇಂದ್ರ ಕಚೇರಿಯ ನೌಕರರ ಭವನದ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿ, ಬಿಬಿಎಂಪಿ ವ್ಯಾಪ್ತಿಯಲ್ಲಿ 183 ಕೆರೆಗಳು ಬರಲಿದ್ದು, ಈ ಪೈಕಿ ಕಂದಾಯ ಇಲಾಖೆಯ ಭೂಮಾಪಕರು 168 ಕೆರೆಗಳಲ್ಲಿ ಸಮೀಕ್ಷೆ ಮಾಡಿರುತ್ತಾರೆ. ಈ ಪೈಕಿ 28 ಕೆರೆಗಳಲ್ಲಿ ಯಾವುದೇ ಒತ್ತುವರಿಯಾಗಿರುವುದಿಲ್ಲ ಎಂದು ವರದಿ ನೀಡಿದ್ದು, 26 ಕೆರೆಗಳಲ್ಲಿ ಸರಕಾರಿ ಒತ್ತುವರಿಗಳಾಗಿವೆ. ಪಾಲಿಕೆ ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವ ಉಳಿದ 114 ಕೆರೆಗಳಿಗೆ ಸಂಬಂಧಿಸಿದಂತೆ ಆಯಾ ವಲಯ ವ್ಯಾಪ್ತಿಯ ಕಾರ್ಯಪಾಲಕ ಅಭಿಯಂತರರಿಗೆ ಜವಾಬ್ದಾರಿ ನೀಡಲಾಗಿದೆ. 114 ಕೆರೆಗಳ ಪೈಕಿ ವಲಯಗಳ ಕಾರ್ಯಪಾಲಕ ಅಧಿಕಾರಿಗಳಿಗೆ ಆಯಾ ವಲಯವಾರು ಕೆರೆಗಳ ನಕ್ಷೆ ನೀಡಲಾಗಿದೆ. ಅದರಂತೆ ಕೆರೆಗಳನ್ನು ಒತ್ತುವರಿ ಮಾಡಿರುವವರಿಗೆ ನೋಟಿಸ್ ಜಾರಿ ಮಾಡಿ, ತೆರವು ಕಾರ್ಯಾಚರಣೆ ನಡೆಸಬೇಕು ಎಂದು ಸೂಚನೆ ನೀಡಿದರು.

ಈ ವೇಳೆ ಅರಣ್ಯ, ಪರಿಸರ ಹಾಗೂ ಹವಾಮಾನ ವೈಪರೀತ್ಯ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ಮತ್ತಿತರರು ಇದ್ದರು.

ವರೂರಿನ ಶ್ರೀನವಗ್ರಹ ತೀರ್ಥಕ್ಷೇತ್ರದ ಗುಣಧರನಂದಿ ಮಹಾರಾಜರ ಎಚ್ಚರಿಕೆ

ಸರಕಾರ ಬೇಡಿಕೆ ಈಡೇರಿಸದಿದ್ದರೆ ಸಲ್ಲೇಖನ ವ್ರತ

ಹುಬ್ಬಳ್ಳಿ: ಜೈನ್ ಸಮುದಾಯದ ಅಭಿವೃದ್ಧಿಗಾಗಿ ಜೈನ್ ಅಭಿವೃದ್ಧಿ ನಿಗಮ-ಮಂಡಳಿ ಸ್ಥಾಪನೆ ಮಾಡುವುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಎಪ್ರಿಲ್-19ರೊಳಗಾಗಿ ರಾಜ್ಯ ಸರಕಾರ ಈಡೇರಿಸಬೇಕು, ಇಲ್ಲವಾದರೆ ವಿಧಾನಸೌಧದ ಮುಂಭಾಗದಲ್ಲಿ ಸಲ್ಲೇಖನ ವ್ರತ ಆಚರಿಸಿ ದೇಹ ತ್ಯಾಗ ಮಾಡಲಾಗುವುದು ಎಂದು ವರೂರಿನ ಶ್ರೀನವಗ್ರಹ ತೀರ್ಥಕ್ಷೇತ್ರದ ಪರಮಪೂಜ್ಯ ರಾಷ್ಟ್ರಸಂತ ಆಚಾರ್ಯ ಶ್ರೀ108 ಗುಣಧರನಂದಿ ಮಹಾರಾಜರು ಎಚ್ಚರಿಸಿದ್ದಾರೆ.

ವರೂರಿನ ನವಕ್ಷೇತ್ರ ತೀರ್ಥಕ್ಷೇತ್ರದಲ್ಲಿ ಪತ್ರಿಕಾಗೋಷ್ಠಿ ಏರ್ಪಡಿಸಿ ಮಾತನಾಡಿದ ಅವರು, ಜೈನ್ ಧರ್ಮವು ಪ್ರಾಚೀನ ಧರ್ಮವಾಗಿದ್ದು, ಸಂಸ್ಕೃತಿ, ಸಾಹಿತ್ಯ, ದಾನ-ಧರ್ಮದಲ್ಲಿ ನಮ್ಮ ಸಮುದಾಯ ಅಗ್ರಸ್ಥಾನದಲ್ಲಿದೆ. ನಮ್ಮ ಸಮುದಾಯ ದಾನ ಮಾಡುವ ಸಮುದಾಯವಾಗಿದ್ದು, ಇದೀಗ ಬೇಡುವ ಪರಿಸ್ಥಿತಿ ನಿರ್ಮಾಣ ಆಗಿದೆ ಎಂದು ಕಿಡಿಕಾರಿದರು.

ಈಗಾಗಲೇ ನಿಗಮ ಸ್ಥಾಪನೆ ಕುರಿತಂತೆ ಮುಖ್ಯಮಂತ್ರಿ, ಗೃಹ ಸಚಿವರು, ಜಿಲ್ಲಾ ಸಚಿವರು ಮುಂತಾದವರಿಗೆ ಹಲವಾರು ಬಾರಿ ಮನವಿ ಸಲ್ಲಿಸಿದ್ದೇವೆ, ಆದರೂ ಸಹ ಯಾವುದೇ ಪ್ರಯೋಜನವಾಗಿಲ್ಲ. ಈ ಹಿಂದೆ ಉಪವಾಸ ಸತ್ಯಾಗ್ರಹ ಮಾಡಿದಾಗ ಸ್ವತಃ ಸಿಎಂ ಮಾತನಾಡಿ ಶೀಘ್ರವಾಗಿ ನಿಗಮ, ಮಂಡಳಿ ಸ್ಥಾಪನೆ ಮಾಡುವುದಾಗಿ ಭರವಸೆ ಕೊಟ್ಟಿದ್ದರು, ಆದರೆ ಬಜೆಟ್‌ನಲ್ಲಿ ಇದರ ಬಗ್ಗೆ ಚಕಾರ ಎತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯದ ಪ್ರತಿಯೊಂದು ಹಳ್ಳಿಯ ಸಮುದಾಯದ ನಾಯಕರ ಸಭೆ ನಡೆಸಲಾಗಿದ್ದು, ಸರಕಾರಕ್ಕೆ ಅಂತಿಮ ಮನವಿ ಸಲ್ಲಿಸಲು ಮಾರ್ಚ್ 18ರಂದು ಬೆಂಗಳೂರು ಚಲೋ ಹಮ್ಮಿಕೊಳ್ಳಲಾಗಿದೆ. ಸುಮಾರು 500ಕ್ಕೂ ಹೆಚ್ಚು ವಾಹನಗಳು, ಸಾವಿರಾರು ಜನರು ಬೆಂಗಳೂರಿನ ಕೆ.ಜಿ. ಜೈನ್ ಮಂಗಲ ಕಾರ್ಯಾಲಯದಲ್ಲಿ ಪ್ರತಿಭಟನೆ ನಡೆಸಲಿದ್ದೇವೆ. ಈ ವೇಳೆ ಸರಕಾರಕ್ಕೆ ಅಂತಿಮ ಮನವಿ ಸಲ್ಲಿಸಲಿದ್ದೇವೆ. ಒಂದು ವೇಳೆ ಸರಕಾರವು ಎಪ್ರಿಲ್ 19ರೊಳಗಾಗಿ ನಮ್ಮ ಸಮುದಾಯದ ಬೇಡಿಕೆ ಈಡೇರಿಸದಿದ್ದರೆ ಏಪ್ರಿಲ್ 20ರಂದು ಮಹಾವೀರ ಜಯಂತಿಯ ಆಚರಣೆ ಮೆರವಣಿಗೆಯನ್ನು ಕೈಬಿಟ್ಟು ರಾಜ್ಯಾದ್ಯಂತ ಸರಕಾರದ ವಿರುದ್ಧ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.



ಸ್ವಾಮೀಜಿ ಕಣ್ಣೀರು

ಅಲ್ಪಸಂಖ್ಯಾತ ಸಮಾಜ ನಿರ್ಲಕ್ಷ್ಯ ಮಾಡುವ ನಿರ್ದಯಿ ಮುಖ್ಯಮಂತ್ರಿ ಇರಬಾರದು. ಕಳೆದ ಏಳು ವರ್ಷಗಳಿಂದ ಸರಕಾರಕ್ಕೆ ನಾವು ಬೇಡಿಕೆಯನ್ನು ಇಡುತ್ತಾ ಬಂದಿದ್ದೇವೆ. ಆದ್ರೂ ನಮ್ಮ ಕಡೆ ನೋಡುತ್ತಿಲ್ಲ. ನಮಗೆ ಯಾಕೆ ಹೀಗೆ ಮಾಡುತ್ತಿದ್ದೀರಿ. ನಮ್ಮ ಸಮಾಜ ಮಾಡಿದ ಅಪರಾಧವಾದರೂ ಏನು? ಎಲ್ಲಾ ಸಮಯದಲ್ಲಿ ನಾವು ನಿಮ್ಮ ಕೈ ಹಿಡಿದಿದ್ದೇವೆ. ನೀವು ಕೈ ಬಿಟ್ಟಿದ್ದೀರಿ. ಸರಕಾರದಮಟ್ಟದಲ್ಲಿ ನಮ್ಮ ಸಮಾಜದಿಂದ ಕಸಗುಡಿಸುವವರೂ ಇಲ್ಲ ಎಂದು ಕಣ್ಣೀರಾದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಬೆಂಗಳೂರು: ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಸೌಂದರ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಆ್ಯಂಡ್ ಸೈನ್ಸ್ ಕಾಲೇಜಿನಲ್ಲಿ ಆಚರಿಸಲಾಯಿತು.

ಮಹಿಳಾ ಸಾಧಕರಿಗೆ ಗೌರವ ಸಲ್ಲಿಸುವ ಜತೆಗೆ ನಾವೀನ್ಯತೆ, ವ್ಯವಹಾರ, ತಂತ್ರಜ್ಞಾನ ಮತ್ತು ಸಮಾಜದಲ್ಲಿ ಮಹಿಳೆಯರ ಸಬಲೀಕರಣ ಕುರಿತು ಸಾಮಾಜಿಕ ಪ್ರಭಾವಿತ ಕ್ಷೇತ್ರಗಳಲ್ಲಿ ಪ್ರಮುಖ ಕೊಡುಗೆ ನೀಡಿದ ಮಹಿಳಾ ಸಾಧಕರ ಸಮ್ಮುಖದಲ್ಲಿ ಚರ್ಚಾಗೋಷ್ಠಿ ನಡೆಯಿತು.

ಡಾ. ಆಭಾ ಭರ್ತಿಯಾ ಮಾತನಾಡಿ, ಮಹಿಳೆ ಎಲ್ಲಾ ವಲಯಗಳಲ್ಲೂ ಪ್ರಮುಖ ಪಾತ್ರ ವಹಿಸುತ್ತಿದ್ದು ಗಮನಾರ್ಹ ಸಾಧನೆ ಮಾಡುತ್ತಿದ್ದಾಳೆ. ಸಮಾಜ ಮತ್ತು ಕುಟುಂಬ ಸಮರ್ಥವಾಗಿ ನಿಭಾಯಿಸುವಲ್ಲಿ ಮಹಿಳೆ ಯಶಸ್ವಿಯಾಗಿದ್ದಾಳೆ ಎಂದರು. ಶ್ರೇಯಾ ಕೃಷ್ಣನ್ ಮಾತನಾಡಿ, ಮಹಿಳೆಯರು ಮನನಶೀಲ, ಜ್ಞಾನವರ್ಧಕ ಮತ್ತು ಪ್ರೇರಣಾದಾಯಕವಾಗಿ ಕಾರ್ಯನಿರ್ವಹಿಸಬೇಕು. ನಾಯಕತ್ವದ ಸವಾಲುಗಳನ್ನು ಮೆಟ್ಟಿ ನಿಂತು ನಾವೀನ್ಯತೆಗೆ ಉತ್ತೇಜನ ನೀಡಬೇಕು. ಉದ್ಯೋಗ ಸ್ಥಳಗಳನ್ನು ಮತ್ತಷ್ಟು ಸಹನೀಯಗೊಳಿಸಲು ಮಹಿಳಾ ನಾಯಕತ್ವ ಅಗತ್ಯವಿದೆ ಎಂದರು.

ಸೌಂದರ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಅಂಡ್ ಸೈನ್ಸ್ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನ ಆಚರಣೆ ನಡೆಯಿತು.

ನೀರಿನ ಉಳಿತಾಯ, ಸಮರ್ಪಕ ಬಳಕೆಗೆ ಜನಜಾಗೃತಿಗಾಗಿ ಕಾರ್ಯಕ್ರಮ

ಸ್ಯಾಂಕಿ ಕೆರೆಯಲ್ಲಿ ಕಾವೇರಿ ಆರತಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೆಂಗಳೂರು ನಗರಕ್ಕೆ ನೀರು ಪೂರೈಸುವ ಕಾವೇರಿ ನದಿಗೆ ನಮನ ಸಲ್ಲಿಸುವ ಉದ್ದೇಶ ಮತ್ತು ನೀರಿನ ಉಳಿತಾಯ, ಸಂಸ್ಕರಿಸಿದ ನೀರಿನ ಮರು ಬಳಕೆ, ಅಂತರ್ಜಲ ಮರುಪೂರಣ ಹಾಗೂ ಮಳೆನೀರು ಕೊಯ್ಲು ಬಗ್ಗೆ ಜಾಗೃತಿ ಮೂಡಿಸಲು ರಾಜ್ಯ ಸರಕಾರ , ಬೆಂಗಳೂರು ಜಲಮಂಡಳಿ ಹಾಗೂ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಮೊದಲ ಬಾರಿಗೆ ಬೆಂಗಳೂರಿನಲ್ಲಿ ಕಾವೇರಿ ಆರತಿ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.

ಸದಾಶಿವನಗರದಲ್ಲಿರುವ ಸ್ಯಾಂಕಿ ಕೆರೆಯಲ್ಲಿ ಮಾ. 21ರ ಸಂಜೆ 6 ಗಂಟೆಗೆ ಕಾವೇರಿ ಆರತಿ ಆಯೋಜಿಸಲಾಗುತ್ತಿದ್ದು, ಇದೇ ವೇಳೆ ವಿಶ್ವ ಜಲ ಪ್ರತಿಜ್ಞೆ ಸ್ವೀಕಾರ ಅಭಿಯಾನವನ್ನೂ ಉದ್ಘಾಟಿಸಲಾಗುವುದು.

ಸೋಮವಾರ ಸ್ಯಾಂಕಿ ಕೆರೆ ಆವರಣದಲ್ಲಿ ಆರಂಭವಾದ ಕಾವೇರಿ ಆರತಿ ಕುರಿತ ಸಿದ್ಧತೆಗಳನ್ನು ಪರಿಶೀಲಿಸಿದ ಜಲ ಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ಮಾತನಾಡಿ, ಕಾವೇರಿ ನದಿ ಶತಮಾನಗಳಿಂದ ಕರ್ನಾಟಕದ ಜೀವನಾಡಿಯಾಗಿದೆ. ಬೆಂಗಳೂರು ನಗರ ಬೆಳೆಯುವಲ್ಲಿ ಮತ್ತು ನಗರಕ್ಕೆ ನೀರು ಪೂರೈಸುವಲ್ಲಿ ಕಾವೇರಿ ನದಿ ಮಹತ್ವದ ಪಾತ್ರ ವಹಿಸುತ್ತದೆ. ಕಾವೇರಿ ತಾಯಿ ಬರೀ ನೀರು ಮಾತ್ರವಲ್ಲದೆ, ರಾಜ್ಯದ ಜನರಿಗೆ ಅನ್ನ ಕೊಡುತ್ತಿದ್ದಾಳೆ. ನೀರಿನ ಲಭ್ಯತೆ ಹಾಗೂ ಸಮರ್ಪಕ ಬಳಕೆಯ ಬಗ್ಗೆ ಹಲವಾರು ಸವಾಲುಗಳು ಎದುರಾಗುತ್ತಿರುವುದರಿಂದ, ಈ ಅಮೂಲ್ಯ ಸಂಪತ್ತನ್ನು ಸಂರಕ್ಷಿಸುವುದು ಹಾಗೂ ಗೌರವಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಈ ಹಿನ್ನಲೆಯಲ್ಲಿ ಆಯೋಜಿಸಲಾಗಿರುವ ಕಾವೇರಿ ಆರತಿ ಕೇವಲ ಒಂದು ಕಾರ್ಯಕ್ರಮವಲ್ಲ, ಇದು ನೀರಿನ ಸಂರಕ್ಷಣೆ, ಸಮರ್ಪಕ ಬಳಕೆ, ಸುಸ್ಥಿರ ನೀರು ನಿರ್ವಹಣಾ ಪದ್ಧತಿಗಳ ಅಳವಡಿಸಿಕೊಳ್ಳುವ ಬಗ್ಗೆ ವ್ಯಾಪಕವಾಗಿ ಜಾಗೃತಿ ಮೂಡಿಸುವ ಒಂದು ಅಭಿಯಾನವಾಗಿದೆ ಎಂದರು.

ಈ ಅಭಿಯಾನದ ಮೂಲಕ ನಾವು ಸಾರ್ವಜನಿಕರಲ್ಲಿ ನೀರಿನ ಬಗೆಗಿನ ಅರಿವನ್ನು ಹೆಚ್ಚಿಸುವ ಉದ್ದೇಶ ಹೊಂದಿದ್ದೇವೆ. ನೀರು ಅಮೂಲ್ಯ ಹಾಗೂ ಪವಿತ್ರವಾದ ಸಂಪನ್ಮೂಲಗಳಲ್ಲೊಂದಾಗಿದೆ. ಇದರ ಸಂರಕ್ಷಣೆ ಹಾಗೂ ಸಮರ್ಪಕ ಬಳಕೆಗೆ ನಮ್ಮ ದಿನನಿತ್ಯದ ಮನಃಸ್ಥಿತಿಯಲ್ಲಿ ಬದಲಾವಣೆಯ ಅಗತ್ಯವಿದೆ. ಕಾವೇರಿ ಆರತಿಯ ಮೂಲಕ ನಾವು ಈ ಅಮೂಲ್ಯ ಹಾಗೂ ಪವಿತ್ರ ಸಂಪನ್ಮೂಲವನ್ನು ಜವಾಬ್ದಾರಿಯುತವಾಗಿ ಬಳಸುವ ನಿಟ್ಟಿನಲ್ಲಿ ನಮ್ಮೆಲ್ಲರ ಕರ್ತವ್ಯದ ಬಗ್ಗೆ ಸಾಂಕೇತಿಕವಾಗಿ ಪ್ರೇರೇಪಿಸುವ ಕಾರ್ಯ ಮಾಡಲಿದ್ದೇವೆ. ಅಲ್ಲದೇ, ಮನೆ, ಮನೆಗಳಿಂದ ಕೈಗಾರಿಕೆಗಳ ವರೆಗೆ ಪ್ರತಿಯೊಂದು ನೀರಿನ ಬಳಕೆಯ ಸಂದರ್ಭದಲ್ಲಿ ಹಾಗೂ ದೈನಂದಿನ ಜೀವನದಲ್ಲಿ ನೀರು ಉಳಿಸುವ ಅಭ್ಯಾಸಗಳನ್ನು ಅಳವಡಿಸಿಕೊಳ್ಳಲು ಜನರನ್ನು ಪ್ರೋತ್ಸಾಹಿಸುವುದಾಗಿದೆ ಎಂದು ಹೇಳಿದರು.

ಜಲ ಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ಮತ್ತಿತರರು ಸ್ಯಾಂಕಿ ಕೆರೆಯಲ್ಲಿ ಕಾವೇರಿ ಆರತಿ ಕುರಿತಾದ ಸಿದ್ಧತೆಗಳನ್ನು ಪರಿಶೀಲಿಸಿದರು.

ವಿವಿಗಳ ಖಾಲಿ ಹುದ್ದೆ ಶೀಘ್ರ ಭರ್ತಿ

ವಿಧಾನ ಪರಿಷತ್: ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ಆರ್ಥಿಕ ಸಂಪನ್ಮೂಲ ಹೆಚ್ಚಿಸಲು, ತೆರವು ಹಾಗೂ ಮಂಜೂರಾಗಿರುವ ಹುದ್ದೆಗಳ ಮಾಹಿತಿ ಪರಿಶೀಲಿಸಿ ಸಮಗ್ರ ವರದಿ ನೀಡಲು ಸಚಿವ ಸಂಪುಟದ ಉಪಸಮಿತಿ ರಚಿಸಲಾಗಿದೆ. ವರದಿ ಬಂದ ಬಳಿಕ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ತಿಳಿಸಿದ್ದಾರೆ.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ಎಸ್.ವಿ. ಸಂಕನೂರು ಕೇಳಿದ ರಾಜ್ಯದ ವಿವಿಗಳಲ್ಲಿ ಖಾಲಿಯಿರುವ ಹುದ್ದೆಗಳೆಷ್ಟು, ನಿವೃತ್ತ ನೌಕರರ ಪಿಂಚಣಿಗೆ ಸರಕಾರ ಕೈಗೊಂಡ ಕ್ರಮಗಳೇನು ಪ್ರಶ್ನೆಗೆ ಉತ್ತರಿಸಿದ ಸಚಿವರು, ಕರ್ನಾಟಕ ವಿವಿ, ಬೆಂಗಳೂರು ಮೈಸೂರು ಸೇರಿ ಎಲ್ಲ ವಿವಿಗಳಲ್ಲಿ ಸರಾಸರಿ 2,800 ಹುದ್ದೆಗಳು ಖಾಲಿ ಉಳಿದಿವೆ. ಹಿಂದಿನ ಸರಕಾರ ತೆರವಾಗಿರುವ ಹುದ್ದೆಗಳನ್ನು ಭರ್ತಿ ಮಾಡದಿದ್ದರಿಂದ ಸಮಸ್ಯೆ ತಲೆದೋರಿದೆ. ಕೆಲ ವಿವಿಗಳಲ್ಲಿ ಅವೈಜ್ಞಾನಿಕ ಹುದ್ದೆಗಳು ಸೃಷ್ಟಿಯಾದರೆ, ಕೆಲವೆಡೆ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯ ಹುದ್ದೆಗಳು ಖಾಲಿಯಿವೆ ಎಂದರು.

ಜನಪದ ವಿ.ವಿ. ಹುದ್ದೆ ಭರ್ತಿಗೆ ಕ್ರಮ: ರಾಯಚೂರು ವಿವಿಯಲ್ಲಿ ಖಾಲಿಯಿದ್ದ 25 ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಈಗಾಗಲೇ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪರೀಕ್ಷೆ ನಡೆಸಿದೆ. ಜನಪದ ವಿವಿಯಲ್ಲಿ ತೆರವಾಗಿರುವ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ. ರಾಜ್ಯದ ಎಲ್ಲಾ ವಿವಿಗಳಲ್ಲಿ ಸರಾಸರಿ ಪ್ರಮಾಣ 2,800 ಹುದ್ದೆಗಳು ಖಾಲಿಯಿವೆ. ವೈಜ್ಞಾನಿಕ ಹಾಗೂ ಅಗತ್ಯ ಹುದ್ದೆಗಳನ್ನು ಭರ್ತಿ ಮಾಡಲು ನಿರ್ದಿಷ್ಟ ಮಾನದಂಡ ರೂಪಿಸಲಾಗುತ್ತಿದೆ. ಹಂತಹಂತವಾಗಿ ತೆರವಾಗಿರುವ ಹುದ್ದೆಗಳಿಗೆ ನೇಮಕಾತಿ ಮಾಡಲಾಗುವುದು ಎಂದು ವಿವರಿಸಿದರು.

140 ಕೋಟಿ ಪಿಂಚಣಿ ಹಣ ಬಾಕಿ ಉಳಿದಿತ್ತು

ನಿವೃತ್ತ ನೌಕರರಿಗೆ ಪಿಂಚಣಿ ನೀಡಲು ವಿವಿಗಳಲ್ಲಿದ್ದ ಮೂಲಧನ ಖಾಲಿಯಾಗಿದ್ದು, ಸರಕಾರ ಅನುದಾನ ಬಿಡುಗಡೆ ಮಾಡಿಲ್ಲವೆಂಬ ಸಂಕನೂರು ಉಪಪ್ರಶ್ನೆಗೆ ಉತ್ತರಿಸಿದ ಸಚಿವರು, ಕರ್ನಾಟಕ ಮುಕ್ತ ವಿವಿ ರಚನೆ ಪರಿಣಾಮ ಆರ್ಥಿಕ ಸಂಪನ್ಮೂಲ ಕ್ರೋಢೀಕರಣ ಕಷ್ಟವಾಗಿದೆ. ವಿವಿಗಳ ವಿಭಜನೆ ಸಂದರ್ಭದಲ್ಲಿ ನೌಕರರ ಪಿಂಚಣಿ ಹಣ ಸೇರಿದಂತೆ ಸಂಪನ್ಮೂಲಗಳ ಬಗ್ಗೆ ನಿರ್ಧರಿಸಬೇಕಿತ್ತು. ಅದನ್ನು ಮಾಡದ ಕಾರಣ ವಿವಿಗಳ ನಿವೃತ್ತ ನೌಕರರಿಗೆ ನೀಡಲಾಗುವ ಪಿಂಚಣಿ ಮೊತ್ತ 140 ಕೋಟಿ ರು. ಬಾಕಿ ಉಳಿದಿತ್ತು. ಕಳೆದ ವರ್ಷ 91 ಕೋಟಿ ನೀಡಿದರೆ ಈ ವರ್ಷ ಹಂತಹಂತವಾಗಿ 70 ಕೋಟಿ ರು. ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಆರ್ಥಿಕ ಸಹಾಯ ನೀಡಲು ಸರಕಾರ ಬದ್ಧ: ಶರಣಪ್ರಕಾಶ್ ಪಾಟೀಲ್

ಯುವನಿಧಿ ಯೋಜನೆ ಸ್ಥಗಿತ ಇಲ್ಲ

ವಿಧಾನ ಪರಿಷತ್: ರಾಜ್ಯ ಸರಕಾರದ ಪಂಚ ಗ್ಯಾರಂಟಿಗಳಲ್ಲೊಂದಾದ ಯುವನಿಧಿ ಯೋಜನೆಯಲ್ಲಿ ಆರ್ಥಿಕ ಸಹಾಯವನ್ನು ನೀಡಲು ಸರಕಾರ ಬದ್ಧವಾಗಿದೆ. ಯಾವುದೇ ಕಾರಣಕ್ಕೂ ಅದನ್ನು ಸ್ಥಗಿತಗೊಳಿಸುವ ಪ್ರಶ್ನೆಯಿಲ್ಲ ಎಂದು ಕೌಶಲ್ಯಾಭಿವೃದ್ಧಿ ಇಲಾಖೆ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಸ್ಪಷ್ಟಪಡಿಸಿದ್ದಾರೆ. ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಅರುಣ್ ಅವರಿಗೆ ಉತ್ತರಿಸಿದ ಸಚಿವರು, ಚುನಾ ವಣೆಗೂ ಮುನ್ನ ಜನತೆಗೆ ನಾವು ಕೊಟ್ಟ ಭರವಸೆ ಗಳನ್ನು ಈಡೇರಿಸಲು ನಾವು ಬದ್ಧರಾಗಿದ್ದೇವೆ. ಯುವನಿಧಿ ಯೋಜನೆಯನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ ಎಂದು ವದಂತಿಗಳಿಗೆ ತೆರೆ ಎಳೆದರು. ಕೆಲವು ತಾಂತ್ರಿಕ ಕಾರಣಗಳಿಂದ ಯುವನಿಧಿ ಯೋಜನೆಯಡಿ ನೀಡಲಾಗುತ್ತಿರುವ ಆರ್ಥಿಕ ನೆರವು ವಿಳಂಬವಾಗಿರಬಹುದು. ಹಾಗೆಂದು ಇದನ್ನು ಸ್ಥಗಿತಗೊಳಿಸುತ್ತೇವೆ ಎಂದು ಯಾರೂ ಭಾವಿಸಬೇಕಾಗಿಲ್ಲ. ಅನುದಾನದ ಕೊರತೆಯೂ ಇಲ್ಲ. ನಿಯಮಗಳ ಅನುಸಾರವಾಗಿ ನೀಡಬೇಕು ಎಂದು ಸ್ಪಷ್ಟಪಡಿಸಿದರು. ಯುವನಿಧಿಗೆ ಇಂತಿಷ್ಟೇ ಎಂದು ಟಾರ್ಗೆಟ್ ಮಾಡಿಕೊಂಡಿಲ್ಲ, ಇದು ಅನ್‌ಲಿಮಿಟೆಡ್, ತಿಂಗಳಿನಿಂದ ತಿಂಗಳು, ವರ್ಷದಿಂದ ವರ್ಷಕ್ಕೆ ಫಲಾನುಭವಿಗಳ ಸಂಖ್ಯೆ ಹೆಚ್ಚಾಗುತ್ತದೆ. ಮುಂದಿನ ವರ್ಷ 5 ಲಕ್ಷವಾಗಬಹುದು. ನಂತರ 10 ಲಕ್ಷ ತಲುಪುವ ಸಾಧ್ಯತೆಯೂ ಇದೆ ಎಂದು ಡಾ.ಶರಣಪ್ರಕಾಶ್ ಪಾಟೀಲ್ ತಿಳಿಸಿದರು.

1,74,181 ವಿದ್ಯಾರ್ಥಿಗಳಿಗೆ ನೆರವು

ಪದವಿ ಡಿಪ್ಲೊಮಾ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಈ ಯೋಜನೆಯಲ್ಲಿ ಆರ್ಥಿಕ ನೆರವು ಪಡೆಯಬೇಕಾದರೆ ಮೊದಲು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕು. ಇದಕ್ಕಾಗಿ ಇಲಾಖೆಗೆ ಸೇವಾ ಸಿಂಧು ಪೋರ್ಟಲ್ ಸೃಜಿಸಿದೆ. ಇಲ್ಲಿವರೆಗೆ 1,74,181 ವಿದ್ಯಾರ್ಥಿಗಳು ಇದರ ನೆರವು ಪಡೆದಿದ್ದಾರೆ. ಹೆಸರು ನೋಂದಣಿ ಮಾಡಿದ ಮೇಲೆ ಅಭ್ಯರ್ಥಿಗಳು ಆರು ತಿಂಗಳು ಕಾಯಬೇಕಾಗುತ್ತದೆ. ಈ ಹಂತದಲ್ಲಿ 49 ಸಾವಿರ ಜನರಿದ್ದಾರೆ. ಹೆಚ್ಚಿನ ವಿದ್ಯಾಭ್ಯಾಸ ಅಥವಾ ಉದ್ಯೋಗಕ್ಕೆ ಸೇರಿದರೆ ಇದರ ನೆರವು ಸಿಗುವುದಿಲ್ಲ. ಪದವಿ ಹಾಗೂ ಡಿಪ್ಲೊಮಾ ಪೂರ್ಣಗೊಳಿಸಿದ ತಕ್ಷಣವೇ ಅರ್ಹರಿಗೆ ಇದು ಅನ್ವಯವಾಗುತ್ತದೆ. ಹೆಸರು ನೋಂದಾಯಿಸಿಕೊಂಡು ಪೋರ್ಟಲ್‌ನಲ್ಲಿ ಅರ್ಜಿ ಹಾಕಿದರೆ ನೋಂದಣಿಯಾಗುತ್ತದೆ. ಇದಕ್ಕೆ ಇಲಾಖೆ ಸಕಲ ಸಿದ್ಧತೆ ಪೂರ್ಣಗೊಳಿಸಿದೆ ಎಂದರು.

ಮತ್ತೊಮ್ಮೆ ಪರಿಶೀಲಿಸಿ ಕ್ರಮ: ಸಚಿವ ಮಧು ಬಂಗಾರಪ್ಪ ಭರವಸೆ

ದೈಹಿಕ ಶಿಕ್ಷಣ ಶಿಕ್ಷಕರಿಗೆ ಮುಂಬಡ್ತಿ ಸಾಧ್ಯವಿಲ್ಲ

ವಿಧಾನ ಪರಿಷತ್: ವೃಂದ ಮತ್ತು ನೇಮಕಾತಿ ನಿಯಮಗಳು ಬೇರೆ ಬೇರೆಯಾಗಿರುವುದರಿಂದ ಸರಕಾರಿ ಪ್ರೌಢಶಾಲಾ ದೈಹಿಕ ಶಿಕ್ಷಣ ಶಿಕ್ಷಕರಿಗೆ ಮುಂಬಡ್ತಿ ನೀಡಲು ಸಾಧ್ಯವಿಲ್ಲ. ಅದಾಗ್ಯೂ ಮತ್ತೊಮ್ಮೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ಭರವಸೆ ನೀಡಿದ್ದಾರೆ.

ಪ್ರಶ್ನೋತ್ತರ ಅವಧಿ ವೇಳೆ ರಾಮೋಜಿಗೌಡ ಅವರಿಗೆ ಉತ್ತರಿಸಿದ ಸಚಿವರು, ಪ್ರೊ. ಎಲ್. ಆರ್. ವೈದ್ಯನಾಥನ್ ವರದಿ ಆಧರಿಸಿ ದೈಹಿಕ ಶಿಕ್ಷಕರಿಗೆ ಮುಂಬಡ್ತಿ ನೀಡುವುದನ್ನು ಪರಿಶೀಲಿಸಲಾಗುವುದು. ಇಲಾಖೆಯ ಶಿಕ್ಷಣ ಪ್ರಸ್ತುತ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳಂತೆ ಗ್ರೂಪ್ ಬಿ ಮುಖ್ಯ ಶಿಕ್ಷಕರು/ಉಪಪ್ರಾಂಶುಪಾಲರು ವೃಂದದ ಹುದ್ದೆಗೆ ಬಡ್ತಿಗೆ, ಸರಕಾರಿ ಪ್ರೌಢಶಾಲಾ ಸಹ ಶಿಕ್ಷಕರ ವೃಂದವು ಪೋಷಕ ವೃಂದವಾಗಿದೆ. ಮುಖ್ಯ ಶಿಕ್ಷಕರ ವೃಂದಕ್ಕೆ, ವೃಂದ ಮತ್ತು ನೇಮಕಾತಿ ನಿಯಮದಂತೆ ನಿಗದಿಪಡಿಸಿರುವ ವಿದ್ಯಾರ್ಹತೆ ಎಂದರೆ ಪದವಿ ಜತೆಗೆ ಶೈಕ್ಷಣಿಕ ಆಡಳಿತಕ್ಕೆ ಅಗತ್ಯವಿರುವ ಬಿಇಡಿ ಪದವಿ ನಿಗದಿ ಪಡಿಸಲಾಗಿದೆ. ದೈಹಿಕ ಶಿಕ್ಷಣ ಶಿಕ್ಷಕರು ಬಿಇಡಿ ಪದವಿಯನ್ನು ಹೊಂದಿರುವುದಿಲ್ಲ, ಆದ್ದರಿಂದ ಮುಂಬಡ್ತಿ ನೀಡುವುದು ಸಮಸ್ಯೆಯಾಗಿದೆ ಎಂದರು.

ಮುಖ್ಯ ಶಿಕ್ಷಕರು ಬೋಧನೆಯಲ್ಲಿ ವಿಷಯ ಪ್ರಾವೀಣ್ಯ ಹಾಗೂ ಅನುಭವ ಹೊಂದಿರುತ್ತಾರೆ. ಸಹ ಶಿಕ್ಷಕರ ಅನುಪಸ್ಥಿತಿಯಲ್ಲಿ ಸದರಿ ವಿಷಯ ಬೋಧಿಸಲಿದ್ದಾರೆ. ಆದರೆ, ದೈಹಿಕ ಶಿಕ್ಷಕರಿಗೆ ವಿಷಯ ಬೋಧನೆ ತರಬೇತಿಯಿಲ್ಲ, ಹೀಗಾಗಿ, ಸಹ ಶಿಕ್ಷಕರ ಅನುಪಸ್ಥಿತಿಯಲ್ಲಿ ವಿಷಯ ಬೋಧನೆಯನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲ ಎಂದು ಮಧು ಬಂಗಾರಪ್ಪ ಸ್ಪಷ್ಟಪಡಿಸಿದರು.

ಕಾಲಮಿತಿಯೊಳಗೆ ವೇತನ ಬಿಡುಗಡೆ

ಅತಿಥಿ ಉಪನ್ಯಾಸಕರ ಬಾಕಿ ಇರುವ ವೇತನವನ್ನು ಕಾಲಮಿತಿಯೊಳಗೆ ಬಿಡುಗಡೆ ಮಾಡಲಾಗುವುದು. ಅತಿಥಿ ಉಪನ್ಯಾಸಕರಿಗೆ ಸರಕಾರ ವತಿಯಿಂದ ಪ್ರತಿ ತಿಂಗಳು 10,500 ರು. ಗೌರವಧನ ನೀಡಲಾಗುತ್ತಿದೆ. ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಮತ್ತೆ 2 ಸಾವಿರ ರು. ಹೆಚ್ಚಳ ಮಾಡಿದ್ದಾರೆ. ಮಂಡ್ಯ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಮಾತ್ರ ಗೌರವ ಧನ ನೀಡುವುದು ಬಾಕಿ ಇದೆ. ಇದಕ್ಕೆ ತಾಂತ್ರಿಕ ಕಾರಣಗಳು ಇರುವ ಕಾರಣ ಈ ಸಮಸ್ಯೆ ಎದುರಾಗಿದೆ. ಇನ್ನು 3 ದಿನಗಳಲ್ಲಿ ಹಣ ಬಿಡುಗಡೆ ಮಾಡಲಾಗುವುದು. ಅತಿಥಿ ಉಪನ್ಯಾಸಕರ ಗೌರವಧನ ಹೆಚ್ಚಳಕ್ಕೆ ಸದಸ್ಯರು ಮನವಿ ಮಾಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ಚರ್ಚಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು. ಅತಿಥಿ ಉಪನ್ಯಾಸಕರ ಹಿತ ಕಾಪಾಡಲು ಸರಕಾರ ಬದ್ಧ ಎಂದು ಸಚಿವರು ಭರವಸೆ ನೀಡಿದರು.

ಆರಾಮ

ಬೆಂಗಳೂರು 18-03-2025 ಮಂಗಳವಾರ

ವಿಶ್ವವಾಣಿ @vishwavaninews

ಚಿತ್ತವಿಹಾರ

ಒಂದಷ್ಟು ಶ್ರಮ ಪಡೋಣ

• ಮಹಾದೇವ ಬಸರಕೋಡ

ನಮ್ಮ ಯೋಚನೆಗಳೇ ಎಷ್ಟೇ ದೊಡ್ಡದಾಗಿದ್ದರೂ ಸರಿ, ಆದರ್ಶ ಪೂರ್ಣವಾಗಿದ್ದರೂ ಅಷ್ಟೇ, ಅವುಗಳನ್ನು ಕಾರ್ಯಗತಗೊಳಿಸದೇ ಇದ್ದರೆ ಯಾವುದೇ ಪ್ರಯೋಜನವಾಗದು. ಸಮೃದ್ಧ ಯೋಚನೆಗಳಗಿಂತ ಕನಿಷ್ಠ ಕ್ರಿಯೆ ಬಹುಮುಖ್ಯವಾಗುತ್ತದೆ. ಶ್ರಮ ನಾವು ಪಡದೇ ಏನನ್ನು ಪಡೆಯಲಾಗದು ಎಂಬುದು ಸಾರ್ವ ತ್ರಿಕ ನಿಯಮವಾಗಿದೆ ಎಂಬ ಅರಿವಿದ್ದರೂ ನಮ್ಮ ಮನಸ್ಸು ಕಿಂಚತ್ತೂ ಪ್ರಯತ್ನ ಪಡದೇ ಎಲ್ಲವನ್ನು ಪಡೆಯಬೇಕೆಂದು ಹಾತೊರೆಯುತ್ತಲೇ ಇರುತ್ತದೆ. ನಮ್ಮ ಸೋಮಾರಿತನದ ನಿಲುವುಗಳು ನಮಗೆ ನಿರಾಸೆಯನ್ನಲ್ಲದೇ ಬೇರೆ ಏನನ್ನೂ ಕೊಡಲು ಸಾಧ್ಯವಿಲ್ಲ. ಜ್ಞಾನವೇ ಶಕ್ತಿ ಎಂಬ ಮಾತು ಮೇಲ್ನೋಟಕ್ಕೆ ಸತ್ಯದಂತೆ ತೋರಿದರೂ ವಾಸ್ತವಿಕ ನೆಲೆಯಲ್ಲಿ ಅದು ಸಂಪೂರ್ಣವಾಗಿ ಒಪ್ಪತಕ್ಕ ಸಂಗತಿಯಲ್ಲ. ಯಾವುದಾದರೂ ಒಂದು ಕೆಲಸ ಕೈಗೂಡಬೇಕಾದರೆ ವಿಚಾರಕ್ಕಿಂತ ಕ್ರಿಯೆ ಅತ್ಯವೆನಿಸುತ್ತದೆ.. ಸಮೃದ್ಧ ಫಸಲನ್ನು ಹೊತ್ತಿರುವ ಹಣ್ಣಿನ ಮರದ ಕೆಳಗೆ ನಿಂತು ಹಣ್ಣನ್ನು ನೋಡುತ್ತ ನನಗೆ ಇದು ಬೇಕು ಎಂದು ಯೋಚಿಸುತ್ತ, ಸುಮ್ಮನೆ ನಿಂತರೆ ಅದು ಕಾಲಹರಣವಾಗುವುದಲ್ಲದೇ ಮತ್ತೇನೂ ಆಗಲು ಸಾಧ್ಯವಿಲ್ಲ. ಮರ ಹತ್ತಿ ಹಣ್ಣು ಕೀಳಲು ಸಾಧ್ಯವಾಗದೆ ಹೋದರು ಕನಿಷ್ಠ ಕಲ್ಲನ್ನಾದರೂ ಬೀಸಬೇಕು. ಲಂಕೆಯಿಂದ ಸೀತೆಯನ್ನು ಕರೆತರಲು ಸೇತುವೆ ನಿರ್ಮಾಣ ಕಾರ್ಯದಲ್ಲಿ ವಾನರ ಸೈನ್ಯವೇ ಭಾಗಿಯಾಗಿತ್ತು. ಸೇತುವೆ ನಿರ್ಮಾಣದಲ್ಲಿ ನಾನು ಭಾಗಿಯಾಗಬೇಕೆಂಬ ಆಸೆಯನ್ನು ಹೊತ್ತುಕೊಂಡಿದ್ದ, ಅಳಿಲು ಇದೆಲ್ಲವನ್ನು ಗಮನಿಸುತ್ತಲೇ ಇತ್ತು. ನಾನು ಪುಟ್ಟದೇಹಿ ನಾನು ಇಂತಹ ಸೇತುವೆ ನಿರ್ಮಾಣ ಕಾರ್ಯದಲ್ಲಿ ಏನು ಮಾಡಲು ಸಾಧ್ಯ? ಎಂಬ ನಿರಾಸೆಯಿಂದ ನಿಲ್ಲಲಿಲ್ಲ. ತನ್ನ ಆಲೋಚನೆಯಲ್ಲಿಯೇ ಕಾಲ ಕಳೆಯಲಿಲ್ಲ. ತಕ್ಷಣಕ್ಕೆ ಯೋಚನೆಯನ್ನು ಕಾರ್ಯರೂಪಕ್ಕೆ ತರುವ ಹಿನ್ನೆಲೆಯಲ್ಲಿ ಮತ್ತೆ ಮತ್ತೆ ಮರಳಿನಲ್ಲಿ ಹೊರಳಾಡಿ ಮೈಗೆ ಮರಳನ್ನು ಅಂಟಿಸಿಕೊಂಡು ಮೈಗೆ ಅಂಟಿದ ಮರಳನ್ನು ಸೇತುವೆ ಕಟ್ಟುವ ಜಾಗದಲ್ಲಿ ಜಾಡಿಸಿ ಬರುವ ಕೆಲಸದಲ್ಲಿ ತೊಡಗಿತು. ರಾಮನ ಪ್ರೀತಿಗೆ ಪಾತ್ರವಾಗಿತ್ತು.

ಚಿಕ್ಕ ಚಿಕ್ಕ ಕಾರ್ಯಗಳನ್ನು ಕೈಗೊಳ್ಳುವುದರಿಂದ ಖಂಡಿತವಾಗಿ ದೊಡ್ಡ ಯಶಸ್ಸು ಪಡೆಯಲು ಸಾಧ್ಯವಿದೆ. ನಮ್ಮ ಬದುಕನ್ನು ಸಮೃದ್ಧಗೊಳಿಸಿಕೊಳ್ಳಲು, ಸಾರ್ಥಕವಾಗಿಸಲು ಏನು ಮಾಡಬೇಕೆಂದು ನಮಗೆ ತಿಳಿದಿದ್ದರೂ ನಾವು ನಮ್ಮ ಯೋಚನೆಗಳನ್ನು ಕಾರ್ಯರೂಪಕ್ಕೆ ತರದೇ ಹೋದರೆ ಯಾವುದೇ ಬದಲಾವಣೆಯಾಗಲು ಸಾಧ್ಯವೇ ಇಲ್ಲ. ಕನಸು ಕಾಣುವುದಕ್ಕೂ ಒಂದ ಘನತೆ ಇದೆಯಾದರೂ, ಅವುಗಳನ್ನು ನನಸಾಗುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವ ನಮ್ಮ ನಡೆ ಮಾತ್ರವೇ ಯಶಸ್ಸನ್ನು ತಂದು ಕೊಡಬಲ್ಲದು. ಬದುಕನ್ನು ಸಮೃದ್ಧಗೊಳಿಸಬಲ್ಲದು.

ಹನಿ ಮಳೆ

ಅಹಿಂಸಾಮಂತ್ರ

ಬಾಂಬ್ ಸಿಡಿದಿದೆ ಬೆಚ್ಚಿದೆ ಪಾಕ್
ಅದ ಕಂಡು ವಿಶ್ವವೇ ಆಗಿದೆ ಅವಾಕ್
ದೌರ್ಜನ್ಯ ಬೇಡ ಎಂದಿದೆ ಬಲೂಚ್
ಒಮ್ಮೆಗೇ ಸಿಡಿದಿದೆ ಹಿಂಸೆ ಹಠಾತ್
ಬೇಕು ಅಲ್ಲಿಗೆ ಇಂದು 'ಗಾಂಧೀವಾದ'
ಜೀವಹಾನಿ ತಡೆಯಲು ಅಹಿಂಸಾಮಂತ್ರ
ಇದೇ ಸ್ವಾತಂತ್ರ್ಯ ಪಡೆಯುವ ತಂತ್ರ!

• ಕಿರಣ್ ಕೊಕ್ಕರ್ಣೆ

ಗೊಂದಲಿಗರ ಕಲೆ

ಗೊಂದಲ ಹಾಕುವುದು ಎಂಬುದು ಅಪರೂಪದ ಕಲೆ. ಗೊಂದಲ ಕಲೆಯು ಇಂದು ನಿಧಾನವಾಗಿ ಮರೆಯಾಗುತ್ತಿದೆ. ಅಲೆಮಾರಿ ಜನಾಂಗದ ಈ ವಿಶಿಷ್ಟ ಕಲಾವಿದರು ತಮ್ಮದೇ ಭಾಷೆಯನ್ನು ಮಾತನಾಡುತ್ತಾರೆ. ಜತೆಗೆ ಕನ್ನಡ ಭಾಷೆಯನ್ನು ಸ್ಪಷ್ಟ ಉಚ್ಚಾರದ ಏರಿತಗಳೊಂದಿಗೆ ಸಂಭಾಷಿಸುತ್ತಾರೆ.



• ರಮೇಶ ಶ್ರೀ ಬನ್ನಿಕೊಪ್ಪ ಹಲಗೇರಿ

ಇಂದಿನ ಮೊಬೈಲ್ ರಭಸಕ್ಕೆ ಕೊಚ್ಚಿ ಹೋಗುತ್ತಿರುವ ನಮ್ಮ ನೆಲಮೂಲದ ಜಾನಪದ ಕಲೆಗಳು ಉಳಿದಿರುವುದು ಕೆಲವೇ ಕೆಲವು ಕಲಾವಿದರಿಂದ. ಅಂತಹ ವಿರಳಾತಿವಿರಳ ಕಲಾವಿದರಲ್ಲಿ ಕುಷ್ಟಗಿ ತಾಲೂಕಿನ ತಾವರಗೇರಿಯ ತಿಪ್ಪಣ್ಣ ಅಂಬಾಜಿ, ಸುಗೇತಕರ್ ಅವರು, ಗೊಂದಲಿಗರ ಮೂಲ ಜಾನಪದ ಕಲೆಯನ್ನು ಉಳಿಸಿ ಬೆಳೆಸುತ್ತಿದ್ದಾರೆ.

ಗೊಂದಲಿಗರು ಮಹಾರಾಷ್ಟ್ರದ ಮೂಲದಿಂದ ವಲಸೆ ಬಂದ ವರಾಗಿದ್ದು, ಇವರು ರಾಜ ಶಿವಾಜಿಯ ಕಾಲದಲ್ಲಿ ರಾಜನ ಪರವಾಗಿ, ಗೂಢಚಾರಿಕೆಯನ್ನು ಮಾಡುವ ಕಾರ್ಯದಲ್ಲಿ ತೊಡಗಿದ್ದರು ಎಂಬ ಐತಿಹ್ಯವಿದೆ. ಇವರ ವಿಭಿನ್ನ ವೇಷಭೂಷಣಗಳನ್ನು ಧರಿಸಿಕೊಂಡು ತಮ್ಮ ಮೂಲ ಪಾತ್ರವನ್ನು ಮರೆಮಾಚಿ, ಶಿವಾಜಿ ಮಹಾರಾಜನಿಗೆ ಸಹಾಯ ಮಾಡುತ್ತಿದ್ದ ಒಂದು ನೆಲಮೂಲದ ಪ್ರವರ್ಗ ಒಂದರ ಅಲೆಮಾರಿ ಜನಾಂಗವಾಗಿದೆ.

ಗೊಂದಲ ಹಾಕುವುದು ಎಂದರೆ ಶ್ರೀದೇವಿ, ರೇಣುಕಾ ಎಲ್ಲಮ್ಮ.. ಮುಂತಾದ ಮಹಿಳಾ ಪ್ರಧಾನ ದೇವರುಗಳ ಆರಾಧನೆಯನ್ನು ಮಾಡುವುದಾಗಿದೆ. ಈ ಆರಾಧನೆಯನ್ನು ಮಾಡಿಸುವ ಮನೆತನದವರು ಇವರನ್ನು ಎಲೆ, ಅಡಿಕೆ ಕೊಟ್ಟು ಕರೆಸುತ್ತಾರೆ. ಕರೆಸಿದ ನಂತರ ಇಡೀ ರಾತ್ರಿ ಜಾಗರಾಣೆ ಮಾಡುತ್ತಾ, ದೇವರ ಆರಾಧನೆಯ ನಿಮಿತ್ಯ ಇವರು ವಿವಿಧ ರೀತಿಯ ಕಥೆಗಳನ್ನು ಹಾಡಿನ ರೂಪದಲ್ಲಿ ಹಾಡುತ್ತಾರೆ. ಇದನ್ನು 'ಗೊಂದಲ ಹಾಕುವುದು' ಎನ್ನುತ್ತಾರೆ.

'ಗೊಂದಲ ಹಾಕುವ' ಸಮಯದಲ್ಲಿ ಇವರು ಮುಖ್ಯವಾಗಿ ಕೇಳುಗರಿಗೆ ಮತ್ತು ಪ್ರೇಕ್ಷಕರನ್ನು ಆಕರ್ಷಿಸಲು ವಿಭಿನ್ನವಾದ ವೇಷ ಭೂಷಣಗಳನ್ನು ಧರಿಸುತ್ತಾರೆ. ಧೋತರ, ಪಟುಗ, ಉದ್ದನೆಯ ಶಲ್ಯವನ್ನು ಧರಿಸಿ, ಕಾಲಿಗೆ ಗೆಜ್ಜೆ ಕಟ್ಟುತ್ತಾರೆ. ಎರಡು ತಬಲಾದ ಸಾಂಬಳ, ಚೌಡಕಿ ಭಾರಿಸುತ್ತಾ, ನೋಡುಗರನ್ನು ಆಕರ್ಷಿಸುತ್ತಾರೆ.

ತಿಪ್ಪಣ ಅಂಬಾಜಿ ಸುಗೇತರ್ಕ

ಇಂತಹ ಗೊಂದಲಿಗರ ಕಲಾ ಪರಂಪರೆಯನ್ನು ಮಾಡುವ, ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ತಾವರಗೇರಿ ಗ್ರಾಮದ ತಿಪ್ಪಣ್ಣ ಅಂಬಾಜಿ ಸುಗೇತಕಾರ್ ಅವರು ಮೂಲತಃ ಬಾಗಲಕೋಟೆ ಜಿಲ್ಲೆಯವರು. ಅಲ್ಲಿಂದ ಅವರ ಕುಟುಂಬ ವಲಸೆ ಬಂದು ಹಲವು ವರ್ಷಗಳೇ ಕಳೆದಿವೆ. ತಂದೆ ಅಂಬಾಜಿ ಸುಗೇತ್ಕಲ್, ತಾಯಿ ಎಲ್ಲೂಬಾಯಿಯವರ ಉದರದಲ್ಲಿ ಜನಿಸಿದ ತಿಪ್ಪಣ್ಣನವರಿಗೆ, ಐದು ಜನ ಸೋದರರು, ಒಬ್ಬ ಸಹೋದರಿಯಿದ್ದಾರೆ. ಇವರ ಧರ್ಮಪತ್ನಿ ಲತಾ ಸಂಭಾಜಿಯವರು ಮತ್ತು ಇವರಿಗೆ ಒಬ್ಬ ಸುಪುತ್ರನ್ನು ಇದ್ದು, ಅವರ ಗೊಂದಲಿಗರ ಕಲೆಗೆ ಬೆನ್ನೆಲುಬಾಗಿ ನಿಂತಿದ್ದಾರೆ.

ಕಲಾ ಸೇವೆ

ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ಕೇರಳ ಮುಂತಾದ ರಾಜ್ಯಗಳಲ್ಲಿಯೂ ಇವರ ಕಲೆಯ ಪ್ರದರ್ಶನಗಳು ಜರುಗಿ, ಜನಮನ ಮೆಚ್ಚುಗೆಯನ್ನು ಪಡೆದುಕೊಂಡಿವೆ. 1982 ರಲ್ಲಿಯೇ ಆಕಾಶವಾಣಿ ಧಾರವಾಡದಲ್ಲಿ ಇವರು ಗೊಂದಲಿಗರ

ಹಾಡು ಕಥಾ ಪರಂಪರೆಯನ್ನು ಪ್ರಸ್ತುತಪಡಿಸಿದ್ದಾರೆ. ಊರೂರು ಅಲೆಯುವ ಅಲೆಮಾರಿ ಜನಾಂಗದ ತಿಪ್ಪಣ್ಣ ಅಂಬಾಜಿ ಸುಗತೇಕರ್ ಅವರು ವಿವಿಧ ಗ್ರಾಮಗಳಿಗೆ ತೆರಳಿ ಗೊಂದಲಿಗರ ಹಾಡುಗಳನ್ನು ಹಾಡುತ್ತಾ, ಇವರ ಕಲೆಯ ಪರಂಪರೆಯನ್ನು ಆಸ್ವಾದಿಸಿದ ಗ್ರಾಮದ ವಿವಿಧ ಜನರು ಇವರಿಗೆ ಜೀವನೋಪಾಯಕ್ಕಾಗಿ ದವಸ ಧಾನ್ಯಗಳನ್ನು, ಅಲ್ಪಸ್ವಲ್ಪ ಹಣದ ಸಹಾಯವನ್ನು ಮಾಡುತ್ತಾರೆ.

ಗೌರವ

ಕರ್ನಾಟಕ ಸರ್ಕಾರವು 2020– 21ರ ಸಾಲಿನಲ್ಲಿ 'ಕರ್ನಾಟಕ ಜಾನಪದ ಅಕಾಡೆಮಿ' ಪ್ರಶಸ್ತಿಗೆ ಭಾಜನರಾಗಿರುವುದು ಇವರ ನೆಲಮೂಲದ ಜಾನಪದ ಕಲೆಗೆ ಸಿಕ್ಕ ಗೌರವ ಎನ್ನಬಹುದು.

ಬಹುತೇಕ ಗೊಂದಲಿಗರ ನೆಲಮೂಲದ ಕಲೆಯನ್ನು ಮರೆತು, ಬೇರೊಂದು ಆಯಾಮಕ್ಕೆ ತೆರೆದುಕೊಳ್ಳುವ ಅಲೆಮಾರಿ ಜನಾಂಗವು ತಮ್ಮ ಮಕ್ಕಳಿಗೆ ಶಿಕ್ಷಣ ನೀಡುವ ಬಗ್ಗೆ ಹೆಚ್ಚು ಒತ್ತು ಕೊಟ್ಟಿರುವುದಿಲ್ಲ. ಈ ಅಲೆಮಾರಿ ಜನಾಂಗದ ಮಕ್ಕಳಿಗೆ ಶಿಕ್ಷಣ ನೀಡುವ ಬಹುದೊಡ್ಡ ಜವಾಬ್ದಾರಿ ಅವರ ಹಿರಿಯರ ಮತ್ತು ಸಮುದಾಯದ ಮೇಲಿದೆ. ಹಿರಿಯ ಸಾಧಕರು ಡಾ. ಎ. ಎಮ್ ಮದರಿ 'ಗೊಂದಲಿಗ್ಯಾ' ಎನ್ನುವ ಕೃತಿಯ ಮೂಲಕ ನೆಲಮೂಲದ ಸಮುದಾಯವನ್ನು ಪರಿಚಯ ಮಾಡಿಕೊಟ್ಟಿದ್ದಾರೆ.

ತೆಂಗು ದುಬಾರಿ ಗೃಹಿಣಿ ಕಂಗಾಲು

• ಅಜಯ್ ಅಂಚೆಪಾಳ್ಯ

ಪಾರಂಪರಿಕ ಅಡುಗೆಯ ಅವಿಭಾಜ್ಯ ಅಂಗ ಎನಿಸಿರುವ ತೆಂಗಿನ ಕಾಯಿಗೆ ಒಮ್ಮೆಲೇ ಎಲ್ಲಿಲ್ಲದ ಬೇಡಿಕೆ ಬಂದಿದೆ! ಎಷ್ಟರ ಮಟ್ಟಿಗೆ ಎಂದರೆ, ನಮ್ಮ ರಾಜ್ಯದ ಕೆಲವು ಪ್ರದೇಶಗಳಲ್ಲಿ ತೆಂಗಿನ ಕಾಯಿ ಈಗ ಸುಲಭವಾಗಿ ಖರೀದಿಗೆ ಸಿಗುವುದಿಲ್ಲ. ಸಿಕ್ಕಿದರೂ, ಮಧ್ಯಮ ಗಾತ್ರದ ಒಂದು ತೆಂಗಿನ ಕಾಯಿಗೆ ಸುಮಾರು ರು.40 ರಿಂದ 50ರ ತನಕ ಬೆಲೆ ಇದೆ. ಪ್ರತಿ ದಿನ ತೆಂಗಿನ ಕಾಯಿಯನ್ನು ಅಡುಗೆಗೆ ಬಳಸುವವರು, ಒಮ್ಮೆಗೇ ಮೇಲೇರಿದ ಈ ಬೆಲೆಯಿಂದಾಗಿ, ತಮ್ಮ ಅಡುಗೆಯ ಪದ್ಧತಿಯನ್ನು ತಾತ್ಕಾಲಿಕವಾಗಿ ಬದಲಿಸುವ ಅನಿವಾರ್ಯತೆಗೆ ಸಿಲುಕಿದ್ದಾರೆ.

ಮಾರುಕಟ್ಟೆಯಲ್ಲಿ ವಿಚಾರಿಸಿದಾಗ, ತೆಂಗಿನ ಕಾಯಿಯ ಬೆಲೆ ಏರಿಕೆಗೆ ನಿರ್ದಿಷ್ಟ ಕಾರಣ ದೊರಕುತ್ತಿಲ್ಲ. ಬದಲಿಗೆ, ಹಲವು ಸಂಯುಕ್ತ ಕಾರಣಗಳು ಮುನ್ನೆಲೆಗೆ ಬರುತ್ತವೆ. ಕಳೆದ ಒಂದು ದಶಕದಿಂದ ನಮ್ಮ ರಾಜ್ಯದಾದ್ಯಂತ ತೆಂಗಿನ ಮರಗಳನ್ನು ಕಾಡಿದ ನುಸಿ ರೋಗವು ಒಂದು ಪ್ರಮುಖ ಕಾರಣವಾಗಿ ಬಿಂಬಿತವಾಗಿದೆ. ನಿರಂತರವಾದ ನುಸಿ ರೋಗ ಮತ್ತು ನೀರಿನ ಅಲಭ್ಯತೆಯಿಂದಾಗಿ, ಹಲವು ಪ್ರದೇಶಗಳಲ್ಲಿ ತೆಂಗಿನ ಮರಗಳು ದುರ್ಬಲವಾದವು. ಜತೆಗೆ, ನುಸಿ ರೋಗದಿಂದಾಗಿ ಇಳುವರಿ ಕಡಿಮೆಯಾದ ಸಾವಿರಾರು ತೆಂಗಿನ ಮರಗಳನ್ನು ಕೃಷಿಕರು ಕಡಿದುಹಾಕಬೇಕಾಯಿತು. ಎಳನೀರಿಗೆ ಅಧಿಕ ಬೇಡಿಕೆ ಇರುವುದರಿಂದಾಗಿ, ಅಷ್ಟರ ಮಟ್ಟಿಗೆ ತೆಂಗಿನಕಾ ಯಿಗಳ ಆವಕ ಕಡಿಮೆಯಾಗುತ್ತಿದೆ. ಮಹಾರಾಷ್ಟ್ರ ಮತ್ತು ಉತ್ತರ ಭಾರತದ ಹಲವು ಪ್ರದೇಶಗಳಿಗೆ ಮತ್ತು ಬೇರೆ ದೇಶಗಳಿಗೆ ನಮ್ಮ ರಾಜ್ಯದ ಮತ್ತು ಕೇರಳದ ತೆಂಗಿನ ಕಾಯಿಗಳು ರವಾನೆಯಾಗುತ್ತಿರುವದರಿಂದಾಗಿ, ಸ್ಥಳೀಯವಾಗಿ ತೆಂಗಿನ ಕಾಯಿಯ ಲಭ್ಯತೆ ಕಡಿಮೆಯಾಗಿದೆ. ಇನ್ನು ಕೆಲವು ತಿಂಗಳುಗಳ ಕಾಲ ತೆಂಗಿನ ಕಾಯಿಯ ಬೆಲೆಯು ದುಬಾರಿಯಾಗಿಯೇ ಮುಂದುವರಿಯಬಹುದು ಎಂದು ಮಾರುಕಟ್ಟೆ ತಜ್ಞರು ಹೇಳುತ್ತಿದ್ದಾರೆ.ಆದ್ದರಿಂದ, ಅಷ್ಟರ ತನಕ ನಮ್ಮ ರಾಜ್ಯದ ಗೃಹಿಣಿಯರು ತೆಂಗಿನ ಬಳಕೆಗೆ ಮಿತಿ ಹೇರಬೇಕಾದೀತು!

ಪುಸ್ತಕ ಲೋಕ



ಬಾಡದ ಕಡಲು
ಲೇ: ಟಿ.ಜಿ.ಭಟ್ಟ ಹಾಸಣಗಿ
ಪ್ರ: ಆದಿತ್ಯ ಪ್ರಕಾಶನ, ಹೆಗಡೆ
ಬೆಲೆ ರು.190/-

ಹಲವು ವರ್ಷಗಳಿಂದ ಅರ್ಥಪೂರ್ಣ ಕವನಗಳನ್ನು ಬರೆಯುತ್ತಾ ಬಂದಿರುವ ಕವಿ ಟಿ.ಜಿ.ಭಟ್ಟ ಹಾಸಣಗಿ ಅವರ ಹೊಸಕವನ ಸಂಕಲನ 'ಬಾಡದ ಕಡಲು', ಕಾವ್ಯಪ್ರೇಮಿಗಳ ಗಮನ ಸೆಳೆಯುವಂತಿದೆ. ವೈವಿಧ್ಯಮಯ ವಿಚಾರಗಳನ್ನು ಆರಿಸಿಕೊಂಡು ಮುಕ್ತ ಛಂದಸ್ಸಿನಲ್ಲಿ ಬರೆದ ಇಲ್ಲಿನ ಕವನಗಳು ಗಮನ ಸೆಳೆಯುತ್ತವೆ. 'ಕಳೆದೆರಡು ದಶಕದಿಂದ ಅಲೆಮಾರಿ / ಸದ್ಯ ಕೆನಡಾವಾಸಿ / ಕನ್ನಡದ ಓ ಕಂದ / ನಮ್ಮ ಮುಕುಂದ / ಗುಂಡಿ ತೋಟದ ಮಾಂ ಭಟ್ಟರ ಮೊಮ್ಮಗ / ಶಂ ಮಾಸ್ಟರ್ ಮಗ / ಕಥೆಗೆಂದು ತನ್ನ ಮನೆಯೊಳಹೋಗುವಾಗ / ನಗು ಬಂತು ನುಡಿ ಕೇಳಿ / 'ಅಥ ಪತ್ರ ಪೂಜಾಂ ಕರಿಷ್ಯೇ/ ಈ ಮೊಬೈಲ್ ಯುಗದಲ್ಲೂ ಪತ್ರ ಪತ್ರ ಪೂಜೆ? . . ' (ಪುಟ 41) ಇಂದಿನ ಹಲವು ಕುಟುಂಬಗಳ ಸ್ಥಿತಿಯನ್ನು ಬಿಂಬಿಸುವ ಈ ಕವನಕ್ಕೆ ಪ್ರಾಸದ ಹಂಗಿಲ್ಲ. ಇನ್ನೊಂದು ಕವನದಲ್ಲಿ ಅಂತರ್‌ಪ್ರಾಸದ ಬಳಕೆಯು ಆ ಸಾಲುಗಳ ಪರಣಾಮವನ್ನು ಹೆಚ್ಚಿಸಿ, ಓದುಗನ ಹೃದಯ ತಟ್ಟುತ್ತದೆ. 'ಇಳಿಯೋ ಸೂರ್ಯ ಕೆಂಪಗಾಗುತ / ಇಳಿಸುತ ಕಡಲಲ್ಲಿ ಕೆಂಪನ್ನ / ತಂಪುಗಾಳಿ ಬೀಸುತಾ ಹೇಳಿತು / ನೋಡ್ಲೋ ದಿಟ್ಟಿಸಿ ಕಡಲನ್ನು/ ಅಲೆ ಅಲೆ ಏರಿ ಮಡಚಿ ಬಿಳುಚಿ/ ದಂಡೆಗೆ ಬಂದು ಅಪ್ಪಳಿಸಿ / ಮೂಡಿದ ಹೆಜ್ಜೆ ಬರೆದ ಹೆಸರು / ಅಳಿಸಿದ ಅರೆ! ಅರೆಕ್ಷಣದಲ್ಲಿ' (ಪುಟ 66). ಈ ಸಂಕಲನದ ಎಲ್ಲಾ ಕವನಗಳೂ ಓದುಗನ ಮನ ತಟ್ಟುವುದು ವಿಶೇಷ.

ಗರಿಯ ಗರಿಮೆ

• ಹೊಸ್ಮನೆ ಮುತ್ತು

ತಾಳೆ ಮರ ಲಕ್ಷಾಂತರ ಜನರಿಗೆ ಆಹಾರ, ವಸತಿ ಮತ್ತು ಆದಾಯವನ್ನು ಒದಗಿಸುವುದರೊಂದಿಗೆ ಅದು ತನ್ನ ಸಾಂಪ್ರದಾಯಿಕ ಬಳಕೆಗಳನ್ನು ಮೀರಿ ವಿಸ್ತರಿಸುತ್ತಿದೆ. ಜಗತ್ತು ಸುಸ್ಥಿರ ಮತ್ತು ಪರಿಸರ ಸ್ನೇಹಿ ಉತ್ಪನ್ನಗಳತ್ತ ಸಾಗುತ್ತಿರುವಾಗ, ತಾಳೆ ಮರವು ಜಾಗತಿಕ ಮಾರುಕಟ್ಟೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಲು ಸಿದ್ಧವಾಗಿದ್ದು, ಮೌಲ್ಯವರ್ಧಿತ ಉತ್ಪನ್ನಗಳ ಶ್ರೇಣಿಯನ್ನು ನೀಡುತ್ತಿದೆ. ತಾಳೆ ಮರದ ಉತ್ಪನ್ನಗಳು ನೈಸರ್ಗಿಕ ಮತ್ತು ಆರೋಗ್ಯಕರವಾಗಿವೆ. ಇವು ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತವೆ. ತಾಳೆ ಮರದ ಇತರ ಉತ್ಪನ್ನಗಳ ಜೊತೆಗೆ ಅದರ ಎಲೆಗಳನ್ನು ಪ್ಯಾಕೇಜಿಂಗ್ ವಸ್ತುಗಳು, ಬುಟ್ಟಿ ಮತ್ತು ಕಾಗದದ ಉತ್ಪಾದನೆಗೆ ನಾರಿನ ಮೂಲವಾಗಿ ಬಳಸಲಾಗುತ್ತಿದೆ. ಇದರಿಂದ ಪ್ಲಾಸ್ಟಿಕ್ ಬಳಕೆಯನ್ನು ಗಣನೀಯವಾಗಿ ಕಡಿಮೆ ಮಾಡಬಹುದಾಗಿದೆ. ಚಿತ್ರದಲ್ಲಿ ತಾಳೆ ಗರಿಗಳಿಂದ ಮಾಡಿದ ವಿವಿಧ ರೀತಿಯ ಕರಕುಶಲ ವಸ್ತುಗಳನ್ನು ಕಾಣಬಹುದು. ಬುಟ್ಟಿಗಳು, ಆಟಿಕೆಗಳು, ಅಲಂಕಾರಿಕ ವಸ್ತುಗಳು, ಪರ್ಸ್ ಇತ್ಯಾದಿ ವಸ್ತುಗಳು ತಾಳೆ ಗರಿಗಳಿಂದ ಮಾಡಲ್ಪಟ್ಟಿದ್ದು, ಪರಿಸರ ಸ್ನೇಹಿಯಾಗಿವೆ.

ಇವುಗಳನ್ನು ಕೈಯಿಂದ ಮಾಡಲಾಗಿದ್ದು, ಇವುಗಳ ತಯಾರಿಕೆಯಲ್ಲಿ ಸ್ಥಳೀಯ ಕುಶಲಕರ್ಮಿಗಳ ಪರಿಶ್ರಮ ಅಡಗಿದೆ. ತಾಳೆ ಮರದ ಉತ್ಪನ್ನಗಳಿಗೆ ದೇಶೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಬೇಡಿಕೆ ಹೆಚ್ಚುತ್ತಿದೆ. ತಾಳೆ ಮರದ ಉತ್ಪನ್ನಗಳ ಮೌಲ್ಯವರ್ಧನೆಯು ರೈತರಿಗೆ ಹೆಚ್ಚುವರಿ ಆದಾಯವನ್ನು ಒದಗಿಸುತ್ತದೆ. ಇತ್ತೀಚೆಗೆ ಹೆಸರಘಟ್ಟದ ತೋಟಗಾರಿಕಾ ಸಂಶೋಧನಾ ಸಂಸ್ಥೆಯಲ್ಲಿ ನಡೆದ ರಾಷ್ಟ್ರೀಯ ತೋಟಗಾರಿಕಾ ಮೇಳದಲ್ಲಿ ತಾಳೆ ಎಲೆಗಳಿಂದ ತಯಾರಾದ ಅನೇಕ ಉತ್ಪನ್ನಗಳನ್ನು ಪ್ರದರ್ಶಿಸಲಾಗಿತ್ತು.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

5. ಮತ್ತೊಂದು ದೇಶಕ್ಕೆ ಕಳುಹಿಸಲ್ಪಡುವ ರಾಜಪ್ರತಿನಿಧಿ (4)
6. ಯುದ್ಧಭೂಮಿಗೆ ಮತ್ತೊಂದು ಹೆಸರು (4)
7. ದಿಕ್ಕುತಪ್ಪಿಸಿ ಬಂದಿರುವ ಮಳೆದೇವರು (3)
9. ಬರೆಯುವ ಹಾಳೆ (3)
10. ಗುಂಪಿನ ಮುಖಂಡ (3)
12. ಧ್ವನಿ ಅಥವಾ ಶಬ್ದ (3)
13. ನೀರು ತೊಟ್ಟಿಕ್ಕು (3)
15. ಕೈಚಾಚಿ ಬೇಡುವ ಭಿಕ್ಷೆ (3)
17. ಮರ ಹತ್ತಿರುವ ಮೊಸಳೆ (3)
19. ದೇಶವೊಂದರ ಪ್ರಜೆ (4)
20. ನಮ್ಮ ಸುತ್ತಲಿನ ಜನ (4)

ಮೇಲಿನಿಂದ ಕೆಳಕ್ಕೆ

1. ಹಲವು ಕಡೆ ಸುತ್ತುವ ಪ್ರಯಾಣಿಕ (4)
2. ಹಣದ ನಡುವೆ ಕಾಣುವ ಜಿಂಕೆ (3)
3. ಸದ್ದೇ ಇಲ್ಲ, ಬರಿ ಮೌನ (3)
4. ಅದೃಶ್ಯವಾಗುವುದು ಎನ್ನುವುದು ಮತ್ತೊಂದು ಕಪಿಯಿಂದ ತೊಡಗಿದೆ (4)
8. ದುಃಖಾಂತವಾದ ನಾಟಕಕ್ಕೆ ಹೆಸರು (5)
9. ಅನ್ಯರೆಡೆಗಿನ ಗೊಡವೆ (3)
11. ಇದು ಕೆಳದರ್ಜೆಯದು (3)
14. ವಿಶೇಷ ಅರ್ಥವಿರುವ ಪದಪುಂಜ (4)
16. ದೃಢಪಡಿಸುವ ಸಾಧನವಿದು (4)
17. ಬಾಡು ಎನ್ನುವುದು ಇಲ್ಲಿ ಅಸ್ತವ್ಯಸ್ತವಾಗಿದೆ (3)
18. ಮೂರಕ್ಷರದ ಮತ್ತೊಂದು ಐಶ್ವರ್ಯ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 5. ರಾಯಭಾರಿ 6. ರಣಾಂಗಣ 7. ವರುಣ 9. ಕಾಗದ 10. ನಾಯಕ 12. ನಿನಾದ 13. ಜಿನುಗು 15. ತಿರುಪೆ 17. ಮಕರ 19. ನಾಗರಿಕ 20. ಪರಿವಾರ

ಮೇಲಿನಿಂದ ಕೆಳಕ್ಕೆ: 1. ಪಯಣಿಗ 2. ಹರಿಣ 3. ನೀರವ 4. ಮಂಗಮಾಯ 8. ರುದ್ರನಾಟಕ 9. ಕಾಳಜಿ 11. ಕನಿಷ್ಠ 14. ನುಡಿಗಟ್ಟು 16. ರುಜುವಾತು 17. [illegible] 18. [illegible]

ಪ್ರಶ್ನೆ ಕೇಳುವ ಮಕ್ಕಳನ್ನು ಸುಮ್ಮನಾಗಿಸಬೇಡಿ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಮಗನ ಶಾಲೆಗೆ ಬಂದ ತಾಯಿಗೆ, ಮಗ ತರಗತಿಯ ಕೊನೆಯ ಮೂಲೆಯೊಂದರಲ್ಲಿ ಬಾಯಿಯ ಮೇಲೆ ಬೆರಳನ್ನು ಇಟ್ಟುಕೊಂಡು ಕುಳಿತಿರುವುದು ಕಾಣುತ್ತದೆ. ಅವನಿಗೆ ಮಾತನಾಡದಿರುವಂತೆ ಆತನ ಅಧ್ಯಾಪಕಿ ಶಿಕ್ಷೆವಿಧಿಸಿದ್ದರು. ತಾಯಿ ಮಗನನ್ನು ಎಂದೂ ಕೂಡ ಈ ರೀತಿಯಲ್ಲಿ ನೋಡಿರಲಿಲ್ಲ. ಅವಳಿಗೆ ಬಹಳ ಸಂಕಟವಾಯಿತು. ತನ್ನ ಮಗ ಅಂತಹ ತಪ್ಪನ್ನು ಏನು ಮಾಡಿರಬಹುದು? ಎಂದು ಅಧ್ಯಾಪಕಿಯನ್ನು ವಿಚಾರಿಸಿದಳು.

ಆಗ ಆ ಮಹಿಳಾ ಅಧ್ಯಾಪಕಿ, 'ನಿಮ್ಮ ಮಗನನ್ನು ನೀವು ಯಾವ ರೀತಿಯಲ್ಲಿ ಬೆಳೆಸಿದ್ದೀರಿ? ಅವನಿಗೆ ನಾವು ಹೇಳಿಕೊಡುವುದನ್ನು ಕಲಿಯಬೇಕೆಂಬುದೇ ಇಲ್ಲ, ಇಲ್ಲಸಲ್ಲದ ಬೇಡದ ಪ್ರಶ್ನೆಗಳನ್ನು ಕೇಳಿ, ನಮಗೆ ಮುಜುಗರವನ್ನುಂಟು ಮಾಡುತ್ತಾನೆ. ಮೊಟ್ಟೆಗೆ ನಾವೇ ಕಾವು ಕೊಟ್ಟರೆ, ಯಾಕೆ ಮರಿಯಾಗುವುದಿಲ್ಲ, ಅದೇಕೆ ಒಡೆದು ಹಾಳಾಗುತ್ತದೆ, ಈ ರೀತಿಯ ಅಸಂಬದ್ಧ ಪ್ರಶ್ನೆಗಳನ್ನು ಕೇಳುತ್ತಾನೆ, ಇವನಿಂದಾಗಿ ಎಲ್ಲಾ ಮಕ್ಕಳೂ ಹಾಳಾಗುತ್ತಿದ್ದಾರೆ. ಎಲ್ಲರಿಗೂ ಇವನು ತಮಾಷೆಯ ವಸ್ತುವಾಗಿದ್ದಾನೆ' ಎಂದು ಹೇಳಿದರು.

ಹುಡುಗನ ತಾಯಿಗೆ ಕೋಪ ಬಂತು, 'ನಿಮಗೆ ಅವನ ಪ್ರಶ್ನೆಗೆ ಉತ್ತರ ಕೊಡಲಾಗಲಿಲ್ಲ ಎಂದರೆ, ಗೊತ್ತಿಲ್ಲ ಎಂದು ಒಪ್ಪಿಕೊಳ್ಳಿ, ಅದು ಬಿಟ್ಟು ನನ್ನ ಮಗನದೇ ತಪ್ಪು ಎಂದು ಹೇಳಿ ಸುಮ್ಮನೆ ಶಿಕ್ಷೆ ವಿಧಿಸಬೇಡಿ' ಎನ್ನುತ್ತಾಳೆ.

ಅಧ್ಯಾಪಕಿಗೂ ಕೋಪ ಬರುತ್ತದೆ. 'ಬಾಯಿಗೆ ಬಂದಂತೆ ಪ್ರಶ್ನೆ ಕೇಳುವ ನಿಮ್ಮ ಮಗನಿಗೆ ಬುದ್ಧಿ ಹೇಳುವುದನ್ನು ಬಿಟ್ಟು, ಅವನನ್ನೇ ವಹಿಸಿಕೊಂಡು ಬರುತ್ತೀರಲ್ಲಾ, ಅವನಿಗೆ ನೀವೇ ಪಾಠ ಹೇಳಿಕೊಡಿ, ನಿಮ್ಮ ಪ್ರಕಾರ ಅವನು ಮಹಾ ಬುದ್ಧಿವಂತ, ಅವನಿಗೆ ನಮ್ಮ ಶಾಲೆಯ ಅಗತ್ಯವಿಲ್ಲ' ಎನ್ನುತ್ತಾರೆ.

ಇದರಿಂದ ಹುಡುಗನ ತಾಯಿಗೆ ಬಹಳವಾಗಿ ನೋವು ಹಾಗೂ ಅವಮಾನವಾಗುತ್ತದೆ. ಆಕೆಗೆ ಗೊತ್ತು, ಅವಳ ಮಗನ ಪ್ರಶ್ನೆಗಳಾವುದೂ ಉದ್ದಟತನದಿಂದ ಬಂದಿದ್ದಲ್ಲ ಎಂದು. ಒಂದು ನಿರ್ಧಾರಕ್ಕೆ ಬಂದ ತಾಯಿ, 'ಗಾಳಿ ಹೊತ್ತು ತರುವ ಪುಟ್ಟ ಬೀಜದಲ್ಲಿ ವೃಕ್ಷವಾಗುವ ಶಕ್ತಿ ಇದೆ ಎಂಬುದನ್ನು ನೀವು ನಂಬುವುದಿಲ್ಲ. ಈ ಸಣ್ಣ ಹುಡುಗನ ಪ್ರಶ್ನೆಗೆ ದೊಡ್ಡದನ್ನು ಹುಡುಕುವ ಶಕ್ತಿ ಇದೆ ಎಂದು ನೀವು ಅಂದುಕೊಳ್ಳುವುದಿಲ್ಲ. ನನಗೆ ನನ್ನ ಮಗನ ಮೇಲೆ ನಂಬಿಕೆ ಇದೆ, ಅಸಾಧಾರಣವಾದದ್ದನ್ನು ಸಾಧಿಸುವ ಚೈತನ್ಯ ಅವನಲ್ಲಿದೆ, ನಿಮ್ಮ ಶಿಕ್ಷಣ ಅವನಿಗೆ ಬೇಡ, ನಾನೇ ಅವನಿಗೆ ನನ್ನ ಕೈಲಾದಷ್ಟನ್ನು ಹೇಳಿಕೊಡುತ್ತೇನೆ. ನೀವು ಅವನಿಗೆ ಗಿಳಿಯ ಪಾಠ ಒಪ್ಪಿಸುವ ಅವಶ್ಯಕತೆ ಇಲ್ಲ' ಎಂದು ಮಗನನ್ನು ಮನೆಗೆ ಕರೆತಂದಳು.

ಮನೆಗೆ ಬಂದು ಅವನ ಪ್ರಶ್ನೆಗಳನ್ನು ಸಮಾಧಾನದಿಂದ ಕೇಳಿಸಿಕೊಳ್ಳುತ್ತಾ ಉತ್ತರ ಹೇಳುತ್ತಾಳೆ. ಗೊತ್ತಿಲ್ಲದಿದ್ದರೆ ಹುಡುಕುತ್ತಾಳೆ. ಹೀಗೆ ಅವನ ಶಕ್ತಿಗೆ ಅವಳೇ ಬಲವಾಗುತ್ತಾಳೆ. ಜಗತ್ತನ್ನೇ ಬದಲಿಸಿದ ಅವನ ಲೆಕ್ಕವಿರದಷ್ಟು ಸಂಶೋಧನೆಗೆ ದಾರಿ ಮಾಡಿಕೊಡುತ್ತಾಳೆ.

ಆ ಹುಡುಗ ಬೇರೆ ಯಾರೂ ಅಲ್ಲ, ಪ್ರಸಿದ್ಧ ವಿಜ್ಞಾನಿ ಥಾಮಸ್ ಅಲ್ವಾ ಎಡಿಸನ್, ವಿದ್ಯುತ್ ಬಲ್ಬ್ ಕಂಡುಹಿಡಿದವನು. ಮಗನ ಬಗ್ಗೆ ತಾಯಿಗಿರುವ ನಂಬಿಕೆ, ಕೊನೆಗೂ ನಿಜವಾಗುತ್ತದೆ. ಅವನನ್ನು ರೂಪಿಸಿದ ಅವನ ತಾಯಿಯ ಹೆಸರು, ನ್ಯಾನ್ಸಿ ಸ್ಕಾಟಿಸ್ ಅವಳು ಕೂಡ ಅವನಂತೆಯೇ ಅಜರಾಮರಳಾಗಿದ್ದಾಳೆ.

ನಮ್ಮ ಮಕ್ಕಳ ಬಗ್ಗೆ ಮೊದಲು ನಮಗೆ ನಂಬಿಕೆ ಇರಬೇಕು. ಚಿಕ್ಕಂದಿನಲ್ಲಿ ಮಕ್ಕಳು ಅದೇಕೆ, ಇದೇಕೆ ಎಂದು ಪ್ರಶ್ನೆ ಕೇಳುವುದು ಸಹಜ. ಉತ್ತರ ಗೊತ್ತಿದ್ದರೆ ಸಮಾಧಾನವಾಗಿ ಅವರ ಪ್ರಶ್ನೆಗೆ ಉತ್ತರಿಸಬೇಕು, ಗೊತ್ತಿಲ್ಲದಿದ್ದರೆ, ಬಲ್ಲವರಿಂದ ಕೇಳಿ ತಿಳಿದಾದರೂ ಉತ್ತರಿಸುವುದು ಉತ್ತಮ. ಪ್ರಶ್ನೆ ಕೇಳುವ ಮಕ್ಕಳನ್ನು ಬಾಯಿ ಮುಚ್ಚಿಸುವುದರಿಂದ ಅವರ ಮನಸ್ಸಿನಲ್ಲಿರುವ ಕ್ರಿಯಾತ್ಮಕತೆಯನ್ನು ಹಾಳು ಮಾಡಿ ಬಿಡುತ್ತೇವೆ. ಪ್ರಶ್ನೆಗಳಿಗೆ ಉತ್ತರಿಸುತ್ತಾ ದೊಡ್ಡವರು ಕಲಿಯುವ ಪಾಠವೂ ಬಹಳಷ್ಟಿರುತ್ತದೆ. ಬಹಳ ಪ್ರಶ್ನೆ ಕೇಳುವ ಮಕ್ಕಳನ್ನು ಗದರಿಸಿ ಸುಮ್ಮನಾಗಿಸಬೇಡಿ. ಆ ಪ್ರಶ್ನೆ ಕೇಳುವ ಮನಸ್ಸೇ ನಾಳೆ ಹೊಸ ಹೊಸ ವಿಚಾರವನ್ನು ತಿಳಿದುಕೊಳ್ಳುವ ಕುತೂಹಲದಿಂದ ಹೆಚ್ಚು ಅರಿಯುವತ್ತ, ಜ್ಞಾನ ಪಡೆಯುವತ್ತ ತೊಡಗಿ ಕೊಳ್ಳುತ್ತದೆ.

ಉಸಿರಿನ ಮೂಲಕ ಆನಂದ

ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ಮಾನವನ ದೇಹದಲ್ಲಿ ಹೃದಯ ಬಡಿತದಂತಹ ಕೆಲವು ಕಾರ್ಯಗಳು ಲಯಬದ್ಧವಾಗಿದ್ದರೂ ಸ್ವಯಂ ಚಾಲಿತವಾಗಿರುತ್ತವೆ. ಮತ್ತೆ ಇನ್ನೂ ಕೆಲವು ಅವಯವಗಳ ವ್ಯವಸ್ಥೆಗಳನ್ನು ನಿಯಂತ್ರಿಸಬಹುದು. ಆದರೆ ಉಸಿರಾಟ ಅಪೂರ್ವವಾದದ್ದು. ಯಾಕೆಂದರೆ ಇದು ಸ್ವಯಂಚಾಲಿತವು ಹೌದು, ನಿಯಂತ್ರಣಕ್ಕೆ ಒಳಪಡುವಂತಹದು ಹೌದು. ಯಜ್ಞ ಮತ್ತು ಉಸಿರಾಟದ ಬಗ್ಗೆ ಕೃಷ್ಣ ಹೇಳುತ್ತಾನೆ–ಕೆಲವರು ಪ್ರಾಣ (ಉಚ್ವಾಸ)ವನ್ನು ಅಪಾನದಲ್ಲಿ (ನಿಶ್ವಾಸದಲ್ಲಿ) ಹಾಗೂ ಅಪಾನವನ್ನು (ವಿಶ್ವಾಸ) ಪ್ರಾಣದಲ್ಲಿ ಅರ್ಪಿಸುತ್ತಾರೆ. ಇನ್ನು ಕೆಲವರು ಪ್ರಾಣ ಮತ್ತು ಅಪಾನಗಳನ್ನು ನಿಯಂತ್ರಿಸಿ ಪ್ರಾಣಾಯಾಮದಲ್ಲಿ ಮಗ್ನರಾಗಿರುತ್ತಾರೆ. (4.29)

ಉಸಿರಿನ ಅವಧಿ ಮತ್ತು ಆಳ ಮನಸ್ಥಿತಿಯನ್ನು ಸೂಚಿಸುತ್ತದೆ. ಉದಾಹರಣೆಗಾಗಿ ನಮ್ಮಗೆ ಸಿಟ್ಟು ಬಂದಾಗ ನಮ್ಮ ಉಸಿರು ಸ್ವಯಂ ತೀವ್ರವಾಗಿರುತ್ತದೆ ಮತ್ತು ಮೇಲುಮೇಲಿಮದಾಗಿರುತ್ತದೆ. ಮತ್ತೊಮ್ಮೆ ಉಸಿರನ್ನು ನಾವು ನಿಧಾನವಾಗಿರಿಸಿ ಆಳಕ್ಕೊಯ್ದರೆ ನಮ್ಮ ಸಿಟ್ಟನ್ನು ನಿಯಂತ್ರಿಸಬಹುದು. ಇದರ ಅರ್ಥವೆಂದರೆ ನಮ್ಮ ಧ್ಯಾನದ ಅನೇಕ ತಂತ್ರಗಳಿಗೆ ಹಾಗೂ ಪ್ರಾಣಾಯಾಮಕ್ಕೆ ಕಾರಣವಾದ ನಮ್ಮ ಮನಸ್ಸನ್ನು ನಮ್ಮ ಉಸಿರಾಟದ ಮೂಲಕ ನಿಯಂತ್ರಿಸಬಹುದು.

ಶಿವನ 112 ಧ್ಯಾನ ತಂತ್ರಗಳನ್ನು ಪಾರ್ವತಿಗೆ ವಿವರಿಸುವಾಗ ಕೇವಲ ಉಸಿರಾಟದ ಮೇಲೆ ಆಧಾರಿತವಾದ 16 ತಂತ್ರಗಳನ್ನುತಿಳಿಸುತ್ತಾನೆ. ಈ ಸಮಕಾಲೀನ ಜಗತ್ತಿನಲ್ಲಿ ಕೇವಲ ಉಸಿರಾಟವನ್ನು ಗಮನಿಸಿ ನಿಯಂತ್ರಿಸುವ ಅನೇಕ ಧ್ಯಾನ ತಂತ್ರಗಳಿವೆ. ಮೂಲತಃ ಇದು ಅವಲೋಕನ ಕಲೆ. ಇದರಲ್ಲಿ ಪರಿಣಿತಿ ಪಡೆಯುವುದು ಸುಲಭ. ಇದಕ್ಕೆ ನಮ್ಮ ಉಚ್ವಾಸದಲ್ಲಿ ಹಾಗೂ ನಿಶ್ವಾಸದಲ್ಲಿ ನಮ್ಮ ಚಂಚಲ ಮನಸ್ಸನ್ನು ತೊಡಗಿಸಿಕೊಳ್ಳಬೇಕು. ಆಗ ನಮ್ಮಲ್ಲಿ ಸ್ಥಿರತೆ ಉಂಟಾಗುತ್ತದೆ. ಮುಂದೆ ಈ ಕಲೆಯನ್ನು ನಾವು ನಮ್ಮ ವಿಚಾರ ಹಾಗೂ ಅನಿಸಿಕೆಗಳನ್ನು ಅವಲೋಕಿಸಿಕೊಳ್ಳಲು ಉಪಯೋಗಿಸಬಹುದು. ಯಾಕೆಂದರೆ ಅವ ಲೋಕನ ಹಾಗೂ ಅನಿಸಿಕೆ/ ವಿಚಾರ/ ಕಾಮನೆಗಳು ಒಟ್ಟಾಗಿ ಹೋಗುವುದಿಲ್ಲ. ಅಂತಿಮವಾಗಿ ಇದು 'ವೀಕ್ಷಕ' 'ವೀಕ್ಷಿತ' ನಾಗುವತ್ತ ಒಯ್ಯುತ್ತದೆ. ಇದು ತ್ಯಾಗವನ್ನೇ ತ್ಯಾಗ ಮಾಡಿದಂತಿರುತ್ತದೆ.

ಪ್ರಾಣಾಯಾಮದ ಶಬ್ದಶಹ ಅರ್ಥವೆಂದರೆ ಉಸಿರಾಟದ ನಿಯಂತ್ರಣ. ಇದನ್ನು ಕಪಾಲ್ಭತಿಯಂತಹ ವಿವಿಧ ತಂತ್ರಗಳಿಂದ ಅನುಷ್ಠಾನ ಮಾಡಲಾಗುತ್ತದೆ. ಪ್ರಾಣವೆಂದರೆ ಹೂವು ಅರಳುವ, ಮೊಳಕೆಯೊಡೆಯುವ ರೀತಿ ಜೀವಶಕ್ತಿಯಾಗಿದೆ. ಅದು ನಮ್ಮಿಂದ ಸದಾ ಹರಿಯುತ್ತಿರುತ್ತದೆ. ಆ ಶಕ್ತಿಯನ್ನು ನಮ್ಮ ಆನಂದದ ಜೀವನಕ್ಕಾಗಿ ಸಾಮರಸ್ಯ ಹಾಗೂ ಪ್ರತಿಧ್ವನಿಯಾಗಿ ಬಳಸಬಹುದು. ಈ ಸಾಮರಸ್ಯ ಇಲ್ಲದಿದ್ದರೆ ಉದ್ವೇಗ, ಭಯ ಹಾಗೂ ಪ್ರಕ್ಷುಬ್ಧತೆಗಳು ಉಂಟಾಗುತ್ತವೆ.

ಜಿಲ್ಲಾ ನೋಟ

▸▸ ರಾಜ್ಯದಲ್ಲೇ ಹೆಚ್ಚು ಪವನಯಂತ್ರದ 2ನೇ ಜಿಲ್ಲೆ

▸▸ ಕಪ್ಪತ್ತಗುಡ್ಡದಲ್ಲಿ ಬೀಡು ಬಿಟ್ಟಿವೆ ಗಾಳಿಯಂತ್ರ

ಮಾಳಿಂಗರಾಯ ಪೂಜಾರ, ಗದಗ

ಪವನ ಯಂತ್ರ ಹಾವಳಿ ಬೀಸುತ್ತಿದೆ ಬಿಸಿ ಗಾಳಿ

ಏಷ್ಯಾ ಖಂಡದಲ್ಲಿಯೇ ಶುದ್ಧ ಗಾಳಿ ಹಾಗೂ ಅತಿ ಹೆಚ್ಚು ಗಾಳಿ ಬೀಸುವ ಹೆಗ್ಗಳಿಕೆಗೆ ಪಾತ್ರವಾಗಿದೆ ಗದಗ ಜಿಲ್ಲೆ. ಹಾಗಾಗಿ ಬಹುತೇಕ ಬೆಟ್ಟ ಗುಡ್ಡಗಳಲ್ಲಿ ಪವನ ಯಂತ್ರಗಳನ್ನು ಜಿಲ್ಲೆಯಲ್ಲಿ ಅಳವಡಿಸಲಾಗಿದೆ. ಆದರೆ ಅದೇ ಪವನ ಯಂತ್ರದಿಂದ ಜಿಲ್ಲೆಯ ಪರಿಸರಕ್ಕೆ ಹಾನಿ ಆಗುವ, ಕಂಟಕವಾಗುವ ಭೀತಿ ಎದುರಾಗಿದೆ.

ಶುದ್ಧ ನೀರು, ಶುದ್ಧ ಗಾಳಿ, ಜನತೆಯ ಹಕ್ಕಾಗಿದೆ. ವಾಯು ಮಾಲಿನ್ಯಗಳಿಂದಾಗಿ ಜನತೆ ಶುದ್ಧ ಗಾಳಿಯಿಂದ ವಂಚಿತರಾಗುತ್ತಿದ್ದಾರೆ. ಆದರೆ ಜಿಲ್ಲೆಯ ಜನರಿಗೆ ಗಾಳಿ ಯಂತ್ರದಿಂದ ಶುದ್ಧ ಗಾಳಿ ಕೊರತೆ ಹೆಚ್ಚಾಗಿದ್ದು, ಬಿಸಿ ಗಾಳಿಯ ಪ್ರಮಾಣ ಹೆಚ್ಚಾಗುತ್ತಿದೆ. ಏಕೆಂದರೆ ಗಾಳಿ ಯಂತ್ರಗಳು ಭೂಮಿಯಲ್ಲಿನ ತೇವಾಂಶ ಹೀರಿಕೊಳ್ಳುತ್ತಿವೆ.

ಗದಗ ಜಿಲ್ಲೆಯಲ್ಲಿ ಅಳವಡಿಸಿರುವ ಪವನಯಂತ್ರಗಳು

ಎರಡನೇ ಸ್ಥಾನ

ಕರ್ನಾಟಕ ರಾಜ್ಯದಲ್ಲಿ ಅತಿ ಹೆಚ್ಚು ಪವನಯಂತ್ರ ಹೊಂದಿರುವ 2ನೇ ಜಿಲ್ಲೆ ಗದಗ. ಕರ್ನಾಟಕ ಪವರ್ ಕಾರ್ಪೋರೇಶನ್ ಲಿಮಿಟೆಡ್ (ಕೆಪಿಸಿಎಲ್) ಪಿಪಿಪಿ ಮಾದರಿ ಅನುಷ್ಠಾನದಲ್ಲಿ ಗಾಳಿ ವಿದ್ಯುತ್ ಯೋಜನೆ ಹೊಂದಿದೆ. ಇದು ಒಂದು ಕಡೆ ಹೆಮ್ಮೆಯ ವಿಷಯವಾದರೆ ಇನ್ನೊಂದೆಡೆ ಇದು ಮಾರಕ.

ಬಿಸಿ ಗಾಳಿ ಹಾವಳಿ

ಈ ಬೃಹತ್ ಗಾಳಿಯಂತ್ರಗಳಿಂದಾಗಿ ಭೂಮಿಯಲ್ಲಿನ ತೇವಾಂಶ ಕೊರತೆಯಾಗುತ್ತದೆ. ಶುದ್ಧ ಗಾಳಿಯ ಬದಲಿಗೆ ಬಿಸಿ ಗಾಳಿ ಬೀಸುವುದು ಹೆಚ್ಚಾಗುತ್ತಿದೆ. ಅಲ್ಲದೆ ಮಳೆ ಕೊರತೆ ಹೆಚ್ಚಾಗಿದೆ ಎಂದು ಪರಿಸರ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಕಪ್ಪತ್ತಗುಡ್ಡದ ಕತೆ

ಉತ್ತರ ಕರ್ನಾಟಕದ ಸಹ್ಯಾದ್ರಿ, ಔಷಧ ಸಸ್ಯಗಳ ಕಾಶಿ, ಶುದ್ಧ ಗಾಳಿಯ ಕೇಂದ್ರವಾದ ಕಪ್ಪತ್ತಗುಡ್ಡದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಪವನ ಯಂತ್ರಗಳನ್ನು ಅಳವಡಿಸಲಾಗಿದೆ. ಇದರಿಂದ ತೇವಾಂಶ ಕೊರತೆ ಹೆಚ್ಚಾಗಿ ಬೇಸಿಗೆ ಮುನ್ನವೇ ಗಿಡ ಮರಗಳು ಒಣಗಿ ಕಾಡ್ಗಿಚ್ಚಿಗೆ ಕಪ್ಪತ್ತಗುಡ್ಡ ಅರಣ್ಯ ಬಲಿಯಾಗುತ್ತಿವೆ. ಸಮೃದ್ಧ ಫಸಲು ಬೆಳೆಯುವ ಫಲವತ್ತಾದ ಭೂಮಿಯಲ್ಲಿನ ತೇವಾಂಶ ಕೊರತೆ ಹೆಚ್ಚಾಗಿ ಇಳುವರಿ ಕೊರತೆ ರೈತರು ಅನುಭವಿಸುತ್ತಿದ್ದಾರೆ. ಅಲ್ಲದೆ ಗಾಳಿ ಯಂತ್ರಗಳಿಂದ ಪರಿಸರಕ್ಕೆ ಭಾರೀ ಹೊಡೆತ ಬಿದ್ದಿರುವುದು ಪರಿಸರವಾದಿಗಳ ಕೆಂಗಣ್ಣಿಗೆ ಗುರಿಯಾಗಿದೆ.

ಗೃಹಜ್ಯೋತಿಗೆ ಕೊಡುಗೆ

ಸರಕಾರದ ಪಂಚಗ್ಯಾರಂಟಿ ಯೋಜನೆಯಲ್ಲಿ ಒಂದಾದ ಗೃಹಜ್ಯೋತಿಗೆ ಜಿಲ್ಲೆಯ ಕೊಡುಗೆ ಅಪಾರ. ಏಕೆಂದರೆ ಜಿಲ್ಲೆಯಲ್ಲಿರುವ ಗಾಳಿಯಂತ್ರದ ಮೂಲಕ ಸಾಕಷ್ಟು ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಆಗುತ್ತಿದೆ. ಎನ್‌ಟಿಪಿಸಿ, ಕೆಪಿಟಿಸಿಎಲ್, ಇತ್ಯಾದಿ ಸಂಸ್ಥೆಗಳಿಂದ ವಿದ್ಯುತ್ ಉತ್ಪಾದನೆ ನಿರ್ವಹಿಸಲ್ಪಡುತ್ತದೆ. ಜಿಲ್ಲೆಯ ಪ್ರಸರಣ ಮತ್ತು ವಿತರಣೆಯನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಲಿಮಿಟೆಡ್ (ಹೆಸ್ಕಾಂ) ನಿರ್ವಹಿಸುತ್ತದೆ.

ವಿದ್ಯುತ್ ಉತ್ಪಾದನೆ

ಈ ಕಂಪನಿಯ ಮಾಹಿತಿ ಪ್ರಕಾರ ಜಿಲ್ಲೆಯಲ್ಲಿ ಈಗಾಗಲೇ ಒಟ್ಟು 808 ಗಾಳಿ ಯಂತ್ರಗಳನ್ನು ಅಳವಡಿಸಲಾಗಿದೆ. ಇವುಗಳಿಂದ 1296 ಮೆಗಾವ್ಯಾಟ್ ಹಾಗೂ ಸೋಲಾರ್ ಮೂಲಕ 229 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಆಗುತ್ತದೆ. ಗೃಹಜ್ಯೋತಿ ಯೋಜನೆಗೆ ವಿದ್ಯುತ್ ಸರಬರಾಜು ಮಾಡಲು ಜಿಲ್ಲೆಯ ಪವನಯಂತ್ರ ಹಾಗೂ ಸೋಲಾರ್ ಉತ್ಪಾದನೆಯಿಂದ ಅನುಕೂಲವಾಗಿದೆ.

ಜಿಲ್ಲೆಯ ಕೊಡುಗೆ

ಇದಕ್ಕೆ ಜಿಲ್ಲೆಯ ಕೊಡುಗೆ ಅಪಾರ. ರಾಜ್ಯ ಸರಕಾರದ ಸಂದಿಗ್ಧ ಸ್ಥಿತಿಯಲ್ಲಿ ಪವನ ಹಾಗೂ ಸೋಲಾರ್ ವಿದ್ಯುತ್ ಉತ್ಪಾದನೆ ಕೈ ಹಿಡಿದಿದೆ. ಸರಕಾರ ಗಾಳಿಯಂತ್ರದಿಂದ ಉತ್ಪಾದನೆಯಾಗಿರುವ ವಿದ್ಯುತ್‌ಗೆ ಪ್ರತಿ ಕಿಲೋವ್ಯಾಟ್ 9 ರು. ಹಾಗೂ ಸೋಲಾರ್ ವಿದ್ಯುತ್ ಪ್ರತಿ ಕಿಲೋ ವ್ಯಾಟ್ 3.5 ರು. ನೀಡಿ ವಿದ್ಯುತ್ ಉತ್ಪಾದನಾ ಕಂಪನಿಗಳಿಂದ ವಿದ್ಯುತ್ ಖರೀದಿಸಿ ಸರಬರಾಜು ಮಾಡಲಾಗುತ್ತದೆ.

ಜಿಲ್ಲೆಯಲ್ಲಿ ಪವನ ಯಂತ್ರ ಸ್ಥಾಪನೆಗೆ ದೊಡ್ಡ ಕಂಪನಿಗಳು ಲಗ್ಗೆ ಇಟ್ಟಿವೆ. ಫಲವತ್ತಾದ ಭೂಮಿಯಲ್ಲಿ ಸಹ ಯಂತ್ರ ಅಳವಡಿಸಲಾಗಿದ್ದು, ರೈತರಿಗೆ ಹಣದಾಸೆ ತೋರಿಸಿ ಜಮೀನು ಬಳಕೆ ಮಾಡಲಾ ಗುತ್ತದೆ. ಇದರಿಂದ ಜಿಲ್ಲೆಯಲ್ಲಿ ಸಮೃದ್ಧ ಫಸಲಿನ ಭೂಮಿಯ ಕೊರತೆ ಹೆಚ್ಚಾಗಿದೆ. ಇದು ಕೃಷಿ ಇಲಾಖೆ ಅಧಿಕಾರಿಗಳಿಗೆ ಕಂಡರೂ ಕಾಣದಂತೆ ಇದ್ದಾರೆ.

ರಸ್ತೆಗಳು ಅಧ್ವಾನ

ಬೃಹತ್‌ಯಂತ್ರಗಳನ್ನು ಸಾಗಿಸಲು ಬಳಸುವ ವಾಹನದಿಂದ ಗ್ರಾಮೀಣ ರಸ್ತೆಗಳು ಸಹ ಕಿತ್ತು ಕಿನ್ನಾಲೆ ಹಿಡಿದಿವೆ. ಈ ಯಂತ್ರಗಳನ್ನು ಸಾಗಿಸಲು ರಸ್ತೆ ಇಲ್ಲದೆ ಇರುವ ಕಡೆ ತಾತ್ಕಾಲಿಕ ರಸ್ತೆ ನಿರ್ಮಾಣ ಮಾಡಲಾಗುತ್ತದೆ. ಇವುಗಳಿಗೆ ಗಿಡಮರ ಮಾರಣಹೋಮ ಆಗುತ್ತಿದೆ. ಈ ಬಗ್ಗೆ ಯಾವ ಅಧಿಕಾರಿಗಳೂ ವಿಚಾರಿಸದೇ ಇರುವುದಕ್ಕೆ ಪರಿಸರವಾದಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈಗ ಹೊಸದಾಗಿ ಜಿಲ್ಲೆಯಲ್ಲಿ 160 ಮೀಟರ್ ಎತ್ತರದ ಯಂತ್ರಗಳನ್ನು ಅಳವಡಿಕೆ ಮಾಡಲಾಗಿದ್ದು, ರಿನ್ಯೂ ಎನ್ನುವ ಕಂಪನಿ ಗದಗ ಜಿಲ್ಲೆಯಲ್ಲಿ 230ಕ್ಕೂ ಹೆಚ್ಚು ಪವನ ವಿದ್ಯುತ್ ಯಂತ್ರ ಅಳವಡಿಸಲು ಯೋಜನೆ ರೂಪಿಸಿ ಈಗಾಗಲೇ ಅರ್ಧಕ್ಕಿಂತ ಹೆಚ್ಚು ಪವನ ಯಂತ್ರಗಳನ್ನು ಅಳವಡಿಸಿದೆ.



ಪರಮೇಶ್ವರ ಉವಾಚ

ಅಂದು 2018ರ ಜುಲೈ 10. ವಿಧಾನ ಮಂಡಲದ ಅಧಿವೇಶನದ ವೇಳೆ ಶಾಸಕ ಪ್ರತಾಪ್‌ಚಂದ್ರ ಶೆಟ್ಟಿ ಅವರ ಪ್ರಶ್ನೆಯೊಂದಕ್ಕೆ ಅಂದಿನ ಗೃಹಸಚಿವ ಡಾ.ಜಿ. ಪರಮೇಶ್ವರ್ ಅವರು ಉತ್ತರಿಸುತ್ತಾ, ''ಮಾದಕ ವಸ್ತುಗಳ ಪಿಡುಗು ಒಂದು ವಿಶ್ವವ್ಯಾಪಿ ಸಮಸ್ಯೆಯಾಗಿದ್ದು, ಯುವಜನರು ಇದಕ್ಕೆ ದೊಡ್ಡ ಮಟ್ಟದಲ್ಲಿ ಬಲಿಯಾಗುತ್ತಿದ್ದಾರೆ. ಆದರೆ ಯಾವುದೇ ಕಾರಣಕ್ಕೂ ಕರ್ನಾಟಕವನ್ನು 'ಉಡ್ತಾ ಪಂಜಾಬ್' ಆಗಲು ಬಿಡುವುದಿಲ್ಲ, ರಾಜ್ಯವನ್ನು ಮಾದಕ ವಸ್ತುಗಳ ಜಾಲದಿಂದ ಸಂಪೂರ್ಣ ಮುಕ್ತಗೊಳಿಸಲಾಗುವುದು'' ಎಂದಿದ್ದರು. ಸಚಿವ ಪರಮೇಶ್ವರ್ ಅವರು ಈ ಭರವಸೆ ನೀಡುವುದಕ್ಕೂ ಕೆಲ ದಿನ ಮುಂಚೆ, ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಾದಕ ದ್ರವ್ಯಗಳ ಅಂಶವಿರುವ ಸುಮಾರು 5 ಕೋಟಿ ರುಪಾಯಿ ಬೆಲೆಬಾಳುವ ಮಾತ್ರೆಗಳನ್ನು ಅಬಕಾರಿ ಇಲಾಖೆ ವಶಪಡಿಸಿಕೊಂಡಿತ್ತು. ದೇವನಹಳ್ಳಿ ಸುತ್ತಮುತ್ತ ನೆಲೆಯೂರಿರುವ ಒಂದಿಷ್ಟು ಔಷಧಿ ತಯಾರಿಕಾ ಕಂಪನಿಗಳು ಇಂಥ ಮಾತ್ರೆಗಳನ್ನು ತಯಾರಿಸಿ ವಿದೇಶಗಳಿಗೆ ಮಾರುತ್ತಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿತ್ತು.

ಇದು ಕಹಿ ವಾಸ್ತವ

ಸಚಿವ ಪರಮೇಶ್ವರ್ ಅವರು ಡ್ರಗ್ಸ್ ಪಿಡುಗಿನ ವ್ಯಾಪಕತೆಯ ಬಗ್ಗೆ ಹೇಳುತ್ತಲೇ ಅಂದು ಹಂಚಿಕೊಂಡ ಕಹಿವಾಸ್ತವಗಳು ಹೀಗಿದ್ದವು:

- ಪುಟ್ಟ ಮಕ್ಕಳಿಗೆ ಶುರುವಿನಲ್ಲಿ ಮಾಮೂಲಿ ಚಾಕೊಲೇಟ್ ನೀಡಿ, ಕ್ರಮೇಣ ಅಮಲೇರುವಂಥ ಚಾಕೊಲೇಟ್‌ನ ರುಚಿ ತೋರಿಸಿ ಅವರನ್ನು ಮಾದಕ ವಸ್ತುಗಳ ವ್ಯಸನಿಗಳನ್ನಾಗಿ ಮಾಡಲಾಗುತ್ತಿದೆ.
- ಚಿಕ್ಕಬಳ್ಳಾಪುರ, ಬೆಳಗಾವಿ, ಹಾಸನ ಮುಂತಾದ ಕೆಲವು ಜಿಲ್ಲೆಗಳ ತೋಟಗಳಲ್ಲಿ ಬೆಳೆಗಳ ನಡುವೆ ಗಾಂಜಾವನ್ನು ಬೆಳೆಯಲಾಗುತ್ತಿರುವ ಮಾಹಿತಿಯಿದ್ದು, ಪೊಲೀಸರು ಕಾಲಾನುಕಾಲಕ್ಕೆ ದಾಳಿ ನಡೆಸಿ ಕ್ರಮ ಕೈಗೊಳ್ಳುತ್ತಿದ್ದಾರೆ...
- ಸಮ್ಮಿಶ್ರ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಕರಾವಳಿ ಜಿಲ್ಲೆಗಳಲ್ಲಿ Narcotic Drugs and Psychotropic Substances Act, 1985 ಅಡಿಯಲ್ಲಿ 20ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ.

ಡ್ರಗ್ಸ್ ಜಾಲ ಅಬಾಧಿತ

ಸಚಿವ ಪರಮೇಶ್ವರ್ ಅಂದು ಈ ಮಾತು ಹೇಳುವಾಗ ರಾಜ್ಯದಲ್ಲಿ ಇದ್ದುದು ಸಮ್ಮಿಶ್ರ ಸರಕಾರ. ಅವರ ಈ ಮಾತಿನ ನಂತರ, ಕಾವೇರಿ ನದಿಯಲ್ಲಿ ಸಾಕಷ್ಟು ನೀರು ಹರಿದಿದೆ. 'ಸಮ್ಮಿಶ್ರ'ದ ಹಂಗಿಲ್ಲದ ಕಾಂಗ್ರೆಸ್ ಪಕ್ಷದ್ದೇ ಸರಕಾರ ಈಗ ಅಧಿಕಾರಕ್ಕೆ ಬಂದಿದ್ದು, ಪರಮೇಶ್ವರ್ ಅವರೇ ಮತ್ತೊಮ್ಮೆ ಗೃಹ ಸಚಿವರಾಗಿದ್ದಾರೆ. ಆದರೆ 'ಡ್ರಗ್ಸ್ ಮಾರಾಟ ಜಾಲ' ಮಾತ್ರ ಗುಪ್ತಗಾಮಿನಿಯಾಗಿ, ಅಬಾಧಿತವಾಗಿ ಮುಂದುವರಿದಿತ್ತು ಎಂಬುದಕ್ಕೆ ಮೊನ್ನೆ ಮಂಗಳೂರಿನಲ್ಲಿ ನಡೆದ ಪೊಲೀಸ್ ಕಾರ್ಯಾಚರಣೆಯ ವೇಳೆ ಭಾರಿ ಪ್ರಮಾಣದಲ್ಲಿ ವಶಕ್ಕೆ ತೆಗೆದುಕೊಳ್ಳಲಾದ ಮಾದಕ ದ್ರವ್ಯಗಳೇ ಸಾಕ್ಷಿ.

ಹಂಚಿಕೆ ಹೀಗೆ..

- ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ಯುವ ಸಮುದಾಯವೇ ಈ 'ಡ್ರಗ್ಸ್ ಜಾಲ'ದ ಟಾರ್ಗೆಟ್. ಸಚಿವ ಪರಮೇಶ್ವರ್ ಅವರ ಮಾತಿಗೆ ಪುಷ್ಟಿನೀಡುವಂತೆ, ಸಿದ್ಧ ಆಹಾರಗಳಲ್ಲಿ, ಕುರುಕಲು ತಿಂಡಿಗಳಲ್ಲಿ ಮಾದಕ ದ್ರವ್ಯಗಳನ್ನು ಬೆರೆಸಿ ಮಾರಾಟ ಮಾಡುವ ಪರಿಪಾಠ ಅವ್ಯಾಹತವಾಗಿದೆ. ಕೇರಳದ 'ಬೆರಕೆ' ಕಂಪನಿಯೊಂದು ಚಾಕೊಲೇಟ್ ಮತ್ತಿತರ ಉತ್ಪನ್ನಗಳಲ್ಲಿ ಇಂಥ 'ಮಿಲಾವಟ್' ಮಾಡುವ ನಿಟ್ಟಿನಲ್ಲಿ ಕುಖ್ಯಾತನಾಗಿದೆ ಎನ್ನಲಾಗಿದೆ.

- ವಿವಿಧ ಕ್ಷೇತ್ರಗಳ ಸೆಲೆಬ್ರಿಟಿಗಳು, ಗಣ್ಯರು, ವಿವಿಐಪಿಗಳು, ಸಿನಿಮಾ ತಾರೆಯರು ಪಾಲ್ಗೊಳ್ಳುವ, 'ಸಂತೋಷ ಕೂಟ'ದ ಹಣೆಪಟ್ಟಿಯ ರೇವ್ ಪಾರ್ಟಿಗಳಲ್ಲಿ 'ಮದ್ಯ'ದ ಜತೆಜತೆಗೆ 'ಮಾದಕ ದ್ರವ್ಯ'ದ ಹಂಚಿಕೆ ಆಗುವುದೂ ಇದೆ.
- ಡ್ರಗ್ಸ್ ಮಾರಾಟಕ್ಕೆಂದು ನಿಯೋಜಿಸಲಾಗುವ 'ಮಿಕ'ಗಳ ಪೈಕಿ ನೈಜೀರಿಯಾದವರ ಸಂಖ್ಯೆಯೇ ಹೆಚ್ಚು. ಏಕೆಂದರೆ, ಶತಾಯಗತಾಯ ಬದುಕು ಸಾಗಿಸಲು ಭಾರತದೊಳಗೆ ತೂರಿಕೊಂಡಿರುವ ಇಂಥ ಮಿಕಗಳು ಧಾಡಸೀ ಪ್ರವೃತ್ತಿಯವರಾಗಿದ್ದು, ಪೊಲೀಸರ ಕಾರ್ಯಾಚರಣೆ-ವಿಚಾರಣೆಗಳಿಗೆ ಬಗ್ಗದಂಥ ದಪ್ಪಚರ್ಮದವರಾಗಿರುತ್ತಾರೆ. ಈ ಕೆಲಸಕ್ಕೆ ಮಹಿಳೆಯರನ್ನೂ ನಿಯೋಜಿಸುವುದಿದೆ; ಒಂದೊಮ್ಮೆ ಸಿಕ್ಕಿಬಿದ್ದರೂ ಬಾಯಿ ಬಿಡಿಸಲು ಅಧಿಕಾರಿಗಳು ಅವರೊಂದಿಗೆ ಒರಟಾಗಿ ನಡೆದುಕೊಳ್ಳಲು ಆಗದಿರಬಹುದು ಎಂಬುದು ಇದಕ್ಕೆ ಕಾರಣ.

ಆತಂಕಕ್ಕೆ ಅಫಿಡವಿಟ್ಟು...

ಬೆಡಗಿಯರ ಬಿನ್ನಾಣಕ್ಕೂ, ಪ್ರಕೃತಿ ಸೌಂದರ್ಯಕ್ಕೂ ಹೆಸರಾದ ಕಾಶ್ಮೀರ ಕಣಿವೆಯನ್ನು ಕುರೂಪವು ಒಳಗೊಳಗೇ ವ್ಯಾಪಿಸುತ್ತಿದೆ ಎಂಬುದಕ್ಕೆ ಕಳೆದ ವರ್ಷದಲ್ಲೇ ಒಂದಷ್ಟು ಪುರಾವೆ ಸಿಕ್ಕಿತ್ತು. ಅಲ್ಲಿನ ಯಾವುದೇ ಆಸ್ಪತ್ರೆಯ ಹೊರರೋಗಿ ವಿಭಾಗಕ್ಕೆ (ಒಪಿಡಿ) ಪ್ರತಿ 12 ನಿಮಿಷಕ್ಕೊಬ್ಬರಂತೆ ಡ್ರಗ್ಸ್ ವ್ಯಸನಿಗಳು ದಾಂಗುಡಿಯಿಡುತ್ತಿದ್ದುದು ಮುಖಕ್ಕೆ ರಾಚುವಂತಿದ್ದ ಇಂಥದೊಂದು ಪುರಾವೆ. ಈ ಪಟ್ಟಿಗೆ ಸೇರಿದ ಮತ್ತಷ್ಟು ತಲ್ಲಣಗಳು ಹೀಗಿವೆ ನೋಡಿ:

- ಕಣಿವೆರಾಜ್ಯದ ಉದ್ದಗಲಕ್ಕೂ ವ್ಯಾಪಿಸಿರುವ ಆಸ್ಪತ್ರೆ, ಚಿಕಿತ್ಸಾ ಕೇಂದ್ರ, ವ್ಯಸನ ತಡೆ ಕೇಂದ್ರಗಳಲ್ಲಿ ಡ್ರಗ್ಸ್ ಪೀಡಿತ ಯುವಜನರ ಕಿಕ್ಕಿರಿತದ ದೃಶ್ಯ ಸಾಮಾನ್ಯ.
- ಕಳೆದ ಎರಡೂವರೆ ವರ್ಷದಲ್ಲಿ, ಕಾಶ್ಮೀರ ವಲಯದ 10 ಜಿಲ್ಲೆಗಳ ಪೈಕಿ 8ರಲ್ಲಿ ಡ್ರಗ್ಸ್ ವ್ಯಸನಿಗಳಿಗೆ ಚಿಕಿತ್ಸಾ ಸೌಲಭ್ಯಗಳನ್ನು ಕಲ್ಪಿಸಬೇಕಾದ ಅನಿವಾರ್ಯತೆ ಎದುರಾಗಿದೆ. ಕಾಶ್ಮೀರದಲ್ಲಿ ಪ್ರತಿ ನಾಲ್ವರು ಡ್ರಗ್ಸ್ ಬಳಕೆದಾರರ ಪೈಕಿ ಮೂವರು 'ಹೆರಾಯಿನ್' ದ್ರವ್ಯದ ದಾಸರು.

- 2019ರಲ್ಲಿ ಇಲ್ಲಿ ಪೊಲೀಸರು ವಶಪಡಿಸಿಕೊಂಡ ಹೆರಾಯಿನ್ ಪ್ರಮಾಣ 103 ಕೆ.ಜಿ.ಯಷ್ಟಿದ್ದುದು 2022ರ ವೇಳೆಗೆ 240 ಕೆ.ಜಿ.ಯನ್ನು ಮುಟ್ಟಿತೆಂದರೆ, ಸಮಸ್ಯೆಯ ತೀವ್ರತೆ ನಿಮಗೆ ಅರಿವಾದೀತು!
- ಡ್ರಗ್ಸ್ ಬಳಕೆ/ಸಾಗಣೆ ಸಂಬಂಧಿತ ಪ್ರಕರಣಗಳಲ್ಲಿ ಪೊಲೀಸರು ಸಲ್ಲಿಸುವ ಎಫ್‌ಐಆರ್‌ಗಳ ಸಂಖ್ಯೆ ದಿನಗಳೆದಂತೆ ಹೆಚ್ಚುತ್ತಲೇ ಇದೆ. ಇದಕ್ಕೊಂದು ಉದಾಹರಣೆ: 2022ರಲ್ಲಿ ಪೊಲೀಸರು ಸಲ್ಲಿಸಿದ ಎಫ್‌ಐಆರ್ ಮತ್ತು ಆದ ಬಂಧನಗಳ ಸಂಖ್ಯೆ ಕ್ರಮವಾಗಿ 1,850 ಮತ್ತು 2,756 ರಷ್ಟಿತ್ತು. 2019ರ ವರ್ಷಕ್ಕೆ ಹೋಲಿಸಿದಾಗ, ಈ ಎರಡೂ ಬಾಬತ್ತುಗಳಲ್ಲಿ ಶೇ.60ರಷ್ಟು ಹೆಚ್ಚಳವಾಗಿತ್ತು!
- 2022-23ರ ಒಂದು ಸಮೀಕ್ಷೆಯಂತೆ, ಕಾಶ್ಮೀರದಲ್ಲಿ 15-30ರ ಹರೆಯದವರಲ್ಲಿ ಡ್ರಗ್ಸ್ ಬಳಕೆ ವ್ಯಾಪಕವಾಗಿದೆ. ಈ ಪೈಕಿ ಶೇ.25ರಷ್ಟು ಮಂದಿ ನಿರುದ್ಯೋಗಿಗಳಾಗಿದ್ದರೆ, ಶೇ.15ರಷ್ಟು ಪದವೀಧರರು, ಶೇ.14ರಷ್ಟು ಇಂಟರ್‌ಮೀಡಿಯೆಟ್ ಶಿಕ್ಷಿತರು, ಶೇ.33ರಷ್ಟು ಮೆಟ್ರಿಕ್ ಶಿಕ್ಷಿತರು. ಆದರೆ ಅನಕ್ಷರಸ್ಥ ವ್ಯಸನಿಗಳ ಪ್ರಮಾಣ ಶೇ.8ರಷ್ಟು ಮಾತ್ರ! ಹಾಗಿದ್ದರೆ ಓದಿದವರೇ ಹೆಚ್ಚು ಅವಿವೇಕಿಗಳು, ವ್ಯಸನಿಗಳು ಎಂಬ ತೀರ್ಮಾನ ಅನಿವಾರ್ಯವೇ?!

ಸಾಕಷ್ಟು ಬೇಟೆ ನಡೆದಿದೆ

'ಡ್ರಗ್ಸ್ ಜಾಲ' ಭೇದಿಸುವಲ್ಲಿ ನಮ್ಮ ವ್ಯವಸ್ಥೆ ಅನಾಸಕ್ತನಾಗಿದೆ ಎಂದೇನಿಲ್ಲ. ದೇಶದ ವಿವಿಧೆಡೆ ನಡೆಯುತ್ತಲೇ ಇರುವ ಕಾರ್ಯಾಚರಣೆಗಳನ್ನು ಗಮನಿಸಿದರೆ, ಪೊಲೀಸರು ಇಟ್ಟಿರುವ 'ಹದ್ದಿನಕಣ್ಣು' ಎಂಥದ್ದು ಎಂಬುದರ ಅರಿವಾಗುತ್ತದೆ. ಡ್ರಗ್ಸ್ ಮಾರಾಟದ ಸಂಬಂಧ ಎರಡು ದಿನಗಳ ಹಿಂದಷ್ಟೇ ಪಂಜಾಬ್‌ನಲ್ಲಿ ಸುಮಾರು 500 ಮಂದಿಯನ್ನು ಬಂಧಿಸಲಾಗಿದೆ. ಕಳೆದ 6 ತಿಂಗಳ ಅವಧಿಯಲ್ಲಿ, ಅಂಡಮಾನ್‌ನಲ್ಲಿ ಸುಮಾರು 8,000 ಕೋಟಿ ರು., ಗುಜರಾತ್‌ನಲ್ಲಿ ಸುಮಾರು 6,000 ಕೋಟಿ ರು., ದೆಹಲಿಯಲ್ಲಿ 5,000 ಕೋಟಿ ರು. ಹಾಗೂ ಬೆಂಗಳೂರಿನಲ್ಲಿ ಸುಮಾರು 20 ಕೋಟಿ ರು. ಮೌಲ್ಯದ ಮಾದಕ ವಸ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ ಎಂಬುದಿಲ್ಲಿ ಉಲ್ಲೇಖನೀಯ.

ಬಹುರೂಪಿ ಮಾದಕದ್ರವ್ಯ

ಕೊಕೇನ್, ಗಾಂಜಾ, ಚರಸ್, ಹಶೀಷ್, ಬ್ರೌನ್ ಶುಗರ್ ಹೀಗೆ ಮಾದಕ ವಸ್ತುಗಳು ಅಕ್ಷರಶಃ ಬಹುರೂಪಿಗಳು. ಇವು ಸಾಕಷ್ಟು ವರ್ಷಗಳಿಂದ ಜನರ ದೇಹ-ಮನಸ್ಸುಗಳಿಗಷ್ಟೇ ಅಲ್ಲದೆ ಸಾಮಾಜಿಕ ಸ್ಥಿತಿಗತಿ, ಶಾಂತಿ-ನೆಮ್ಮದಿ, ಕಾನೂನು-ಸುವ್ಯವಸ್ಥೆಗೂ ಧಕ್ಕೆಯುಂಟುಮಾಡುತ್ತಲೇ ಬಂದಿವೆ. ಇವುಗಳಲ್ಲಿ ಕೆಲವು ಪುಡಿಯ ರೂಪದಲ್ಲಿದ್ದರೆ, ಮತ್ತೆ ಕೆಲವು ಹರಳುಗಳಂತೆ ಗೋಚರಿಸುತ್ತವೆ. ಇವು ಸಾಲದೆಂಬಂತೆ, ಇತ್ತೀಚಿನ ವರ್ಷಗಳಲ್ಲಿ ಭಾರಿ ಪ್ರಮಾಣದಲ್ಲಿ 'ಎಂಡಿಎಂಎ', ಸಿಂಥೆಟಿಕ್ ಡ್ರಗ್‌ಗಳ ಕಳ್ಳಸಾಗಣೆ ಮತ್ತು ಮಾರಾಟ ವ್ಯಾಪಕವಾಗಿ ನಡೆಯುತ್ತಿದೆ. ಕಾರ್ಯಾಚರಣೆಯ ವೇಳೆ ತಮಗೆ ಸಿಕ್ಕಿರುವುದು ಬ್ರೌನ್ ಶುಗರಾ, ಅಥವಾ ಯಾವುದಾದರೂ ಪುಡಿರೂಪದ ವಸ್ತುವಾ? ಎಂಬುದರ ಭೇದಕಲ್ಪನೆಯು ಕೆಲವೊಮ್ಮೆ ಪೊಲೀಸರಿಗೆ ಕಷ್ಟವಾಗುವುದಿದೆ; ತಜ್ಞರು ಮಾತ್ರವೇ ಇವುಗಳ 'ಹಕೀಕತ್' ಅನ್ನು ಒರೆಗೆ ಹಚ್ಚಬಲ್ಲರು.

ಬೇರನ್ನೇ ಕತ್ತರಿಸಬೇಕು

ಡ್ರಗ್ಸ್ ಮಾರಾಟಗಾರರು ಸಿಕ್ಕಿಬಿದ್ದಿದ್ದು ಸುದ್ದಿಯಾದಾಗಲೆಲ್ಲಾ, ''ರೆಂಬೆ-ಕೊಂಬೆಯನ್ನು ಕತ್ತರಿಸಿದರಷ್ಟೇ ಸಾಲದು; ಈ ಜಾಲವನ್ನು ಜಾಲಾಡಿ ಬೇರುಸಮೇತ ಕಿತ್ತೊಗೆಯಬೇಕಿದೆ'' ಎಂಬ ಆಶಯ ಜನರಿಂದ ಹೊಮ್ಮುವುದಿದೆ. ಪೊಲೀಸರ ಕಾಲಾನುಕಾಲದ ಕಾರ್ಯಾಚರಣೆ ವೇಳೆ ಸಿಕ್ಕಿಬೀಳುವ ಡ್ರಗ್ಸ್ ಮಾರಾಟಗಾರರಿಂದ ವಶಪಡಿಸಿಕೊಳ್ಳಲಾಗುವ ಮಾದಕ ದ್ರವ್ಯಗಳ ಪ್ರಮಾಣ ಮತ್ತು ಬೆಲೆಯನ್ನು ಅವಲೋಕಿಸಿದಾಗ, ಕರ್ನಾಟಕ ಮಾತ್ರವಲ್ಲದೆ ದೇಶದ ಉದ್ದಗಲಕ್ಕೂ ಈ ಜಾಲ ವ್ಯಾಪಕವಾಗಿರುವುದರ ಅರಿವಾಗುತ್ತದೆ.

ಬಹುತೇಕ ಮಾದಕ ವಸ್ತುಗಳು ಕಳ್ಳಸಾಗಣೆಯಾಗುವುದು ವಿದೇಶಗಳಿಂದಲೇ. ಡ್ರಗ್ಸ್ ದಂಧೆಯ ಬಾಲ ಕತ್ತರಿಸಲೆಂದು ದೇಶದ ಗಡಿಭಾಗದಲ್ಲಿ ಕಟ್ಟೆಚ್ಚರಕ್ಕೆ ಮುಂದಾದ ಬಳಿಕ ಈ ದಂಧೆಕೋರರ 'ಕಾರಾಸ್ತಾನ' ದಕ್ಷಿಣ ಭಾರತಕ್ಕೆ ಬದಲಾಗಿದ್ದು, ಮುಖ್ಯವಾಗಿ ಕೇರಳ ರಾಜ್ಯ 'ಕೇಂದ್ರಸ್ಥಾನ'ವಾಗಿ ಮಾರ್ಪಟ್ಟಿದೆ ಮತ್ತು ದಂಧೆಯ ಕಬಂಧಬಾಹುಗಳೀಗ ಕರ್ನಾಟಕದತ್ತ ಚಾಚಿವೆ. ಇದಕ್ಕಿರುವ ಕಾರಣ ಸ್ಪಷ್ಟ: ಇಡೀ ದೇಶದಲ್ಲಿಯೇ ಕರ್ನಾಟಕವು 'ಮಹತ್ತರ ಶೈಕ್ಷಣಿಕ ನೆಲೆ'ಯಾಗಿ ಗುರುತಿಸಿಕೊಂಡಿರುವುದರಿಂದ, ರಾಜ್ಯದ ಪ್ರಮುಖ ನಗರಗಳು/ಪಟ್ಟಣಗಳಲ್ಲಿ ವಿದ್ಯಾರ್ಥಿ ಸಮುದಾಯದ ಜಮಾವಣೆಯಾಗುತ್ತಿದೆ. ಡ್ರಗ್ಸ್ ದಂಧೆಕೋರರಿಗೆ ಇವರೇ 'ಮಿಕ'ಗಳು!

ಕದಡಿದ ಕಾಶ್ಮೀರ

ಕಣಿವೆರಾಜ್ಯವು ಡ್ರಗ್ಸ್‌ನ ಆಡುಂಬೊಲವಾಗಿರುವುದಕ್ಕೆ ಅದರ ಭೌಗೋಳಿಕ ನೆಲೆಯೂ ಒಂದು ಕಾರಣ. ಡ್ರಗ್ಸ್‌ನ ಅಕ್ರಮ ತಯಾರಿಕೆಗೆ ಕುಖ್ಯಾತವಾಗಿರುವ ಪಾಕಿಸ್ತಾನ-ಇರಾನ್-ಅಫ್ಘಾನಿಸ್ತಾನದ ಜಂಟಿ ಸಹಯೋಗದ 'ಗೋಲ್ಡನ್ ಕ್ರೆಸೆಂಟ್' ಎಂಬ ಪ್ರದೇಶವು ಕಾಶ್ಮೀರಕ್ಕೆ ಕೂಗಳತೆಯ ದೂರದಲ್ಲಿರುವುದರಿಂದ ಡ್ರಗ್ಸ್ ಲಭ್ಯತೆ ಸಲೀಸು. ವಾಸ್ತವಿಕ ಗಡಿನಿಯಂತ್ರಣ ರೇಖೆಯಿಂದ ನುಸುಳಿಬರುವ ಡ್ರಗ್ಸ್, ದೇಶದ ಜನರ ಸ್ವಾಸ್ಥ್ಯಕ್ಕೆ ಧಕ್ಕೆ ತಂದಿರುವುದರ ಜತೆಗೆ, 'ನಾರ್ಕೋ-ಟೆರರಿಸಂ' (ಮಾದಕವಸ್ತುಗಳ ಉಗ್ರವಾದ) ಜನನಕ್ಕೂ ಕಾರಣವಾಗಿದೆ.

ಜಮ್ಮು-ಕಾಶ್ಮೀರದ ಕಾಳಸಂತೆಯಲ್ಲಿ ದಕ್ಕುವ ಡ್ರಗ್ಸ್ ಪೈಕಿ ಹೆರಾಯಿನ್, ಮರಿಜುವಾನಾ, ಚರಸ್/ಅಫೀಮು ಮುಖ್ಯವಾದಂಥವು. 2019ರಲ್ಲಿ 329 ಕೆ.ಜಿ. ಚರಸ್ ವಶಪಡಿಸಿಕೊಂಡಿದ್ದ ಪೊಲೀಸರು, 2022ರಲ್ಲಿ ಈ ಪ್ರಮಾಣ 497 ಕೆ.ಜಿ.ಗೆ ಹೆಚ್ಚಿದ್ದಕ್ಕೆ ನಿಬ್ಬೆರಗಾಗಿದ್ದರು. ಇದೇ ರೀತಿ, 2019ರಲ್ಲಿ ಸಿಕ್ಕ 103 ಕೆ.ಜಿ. ಗಾಂಜಾ 2022ರಲ್ಲಿ ದುಪ್ಪಟ್ಟಾಗಿ 239 ಕೆ.ಜಿ.ಗೆ ಮುಟ್ಟಿದರೆ, ಕೇವಲ 51 ಕೆ.ಜಿ.ಯಷ್ಟಿದ್ದ ಗಾಂಜಾ, 248 ಕೆ.ಜಿ.ಗೆ ತಲುಪಿತ್ತು ಮತ್ತು 1,025 ಕೆ.ಜಿ. ಭಾಂಗ್ ಕೂಡ ವಶವಾಗಿತ್ತು. ಕಣಿವೆರಾಜ್ಯ ಕದಡಿದೆ ಎನ್ನಲಿಕ್ಕೆ ಇಷ್ಟು ಪುರಾವೆ ಸಾಕಲ್ಲವೇ? ಈ ಬೆಳವಣಿಗೆಯನ್ನು ಮನಗಂಡೇ ಜಮ್ಮು-ಕಾಶ್ಮೀರದ ಈಗಿನ ಡಿಸಿಎಂ ಸುರಿಂದರ್ ಚೌಧರಿ ಅವರು ಕಳೆದ ಫೆಬ್ರವರಿಯಲ್ಲಿ, ''ಡ್ರಗ್ಸ್ ಮಾಫಿಯಾ ಮತ್ತು ಇನ್ನಿತರ ಸಂಘಟಿತ ಅಪರಾಧದ ಜಾಲಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು'' ಎಂದು ಪುನರುಚ್ಚರಿಸಿದ್ದು ಇಲ್ಲಿ ಉಲ್ಲೇಖನೀಯ.

ಮೈಮರೆತರೆ ಫಿನಿಷ್!

ಅಫೀಮು, ಹೆರಾಯಿನ್‌ನಂಥ ಮಾದಕವಸ್ತುಗಳಿಗೆ ಬಲಿಯಾಗಿರುವ ಜನಸಂಖ್ಯೆಯ ಶೇಕಡಾವಾರು ಪ್ರಮಾಣ ಕಂಗೆಡಿಸುವಂಥದ್ದು. ಇದಕ್ಕೆ ಸಂಬಂಧಿಸಿ 'ಅನ್ನದ ಪಾತ್ರೆಯಿಂದ ಕೆಲವೇ ಅಗುಳನ್ನು' ಹೆಕ್ಕಿ ತೆಗೆದಾಗಿನ ಅಂಕಿ-ಅಂಶವಿದು:

ಜಮ್ಮು-ಕಾಶ್ಮೀರ	2.87%
ಪಂಜಾಬ್	2.8%
ಹರಿಯಾಣ	2.5%
ದೆಹಲಿ	2.3%
ಹಿಮಾಚಲ	1.7%

ಪುತ್ರಶೋಕ ಇಲ್ಲದಾಯಿತು

ಜಮ್ಮು-ಕಾಶ್ಮೀರವನ್ನು ಒಂದು ಕಾಲಕ್ಕೆ ಆವರಿಕೊಂಡಿದ್ದು ಉಗ್ರವಾದಿಗಳ ಕಾಟ; ಆದರೆ ಈಗ ಡ್ರಗ್ಸ್ ವ್ಯಸನವು ಅದನ್ನು ಪಲ್ಲಟ ಗೊಳಿಸಿದೆ. ಲಭ್ಯ ಮಾಹಿತಿ ಪ್ರಕಾರ, ಕಣಿವೆ ರಾಜ್ಯದಲ್ಲಿ ಡ್ರಗ್ಸ್ ವ್ಯಸನಿಗಳ ಸಂಖ್ಯೆ ಆತಂಕಕಾರಿ ಮಟ್ಟವನ್ನು ಮುಟ್ಟಿದೆ. 'ಪುತ್ರ ಶೋಕಂ ನಿರಂತರಂ' ಎಂಬುದೊಂದು ಮಾತಿದೆ; ಆದರೆ ಕಳೆದ ವರ್ಷ 63ರ ವಯೋ ವೃದ್ಧರೊಬ್ಬರು, ''ನನ್ನ ಮಗ ಸತ್ತಿದ್ದರಿಂದ ನಾನೀಗ ನಿರಾಳ; ಮತ್ತಷ್ಟು ಕಾಲ ಈ ವೇದನೆ ಸಹಿಸುವುದು ನನ್ನಿಂದಾಗುತ್ತಿರಲಿಲ್ಲ'' ಎಂದು ಬಿಟ್ಟರು! ಇದನ್ನು ಕೇಳಿ, ''ಇವರೆಂಥ ನಿರ್ದಯಿ'' ಎಂದು ಉದ್ಗರಿಸುತ್ತೀರೇನೋ! ಆದರೆ ಆ ಹಿರಿ ಜೀವ ಹಾಗೆಂದಿದ್ದು ಕಾಶ್ಮೀರದ ಮಾದಕ ದ್ರವ್ಯ ವ್ಯಸನಮುಕ್ತಿ ಕೇಂದ್ರವೊಂದರ ಮಬ್ಬುಕೋಣೆಯಲ್ಲಿ ಎಂದರಿವಾದರೆ ಪ್ರಾಯಶಃ ನಿಮಗೆ ಕಟುವಾಸ್ತವದ ಅರಿವೂ ಆದೀತು!

ಹೆಡೆಮುರಿ ಕಟ್ಟಲೇಬೇಕು

ಡ್ರಗ್ಸ್ ಮಾರಾಟ ಜಾಲವು ಕರ್ನಾಟಕ ಸೇರಿದಂತೆ ದೇಶದೆಲ್ಲೆಡೆ ಬೇರುಬಿಟ್ಟಿರುವುದಂತೂ ಖರೆ. ಇದರ ಮೂಲೋತ್ಪಾಟನೆ ಆಗಲೇಬೇಕು. ಈ ನಿಟ್ಟಿನಲ್ಲಿ ಪೊಲೀಸ್ ಇಲಾಖೆಯು ತನ್ನ ಶೋಧ, ಕಾರ್ಯಾಚರಣೆಗಳನ್ನು ಮತ್ತಷ್ಟು ತೀವ್ರಗೊಳಿಸಿ, ತಪ್ಪಿತಸ್ಥರ ಮೇಲೆ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಬೇಕು. ಡ್ರಗ್ ದಂಧೆಕೋರರು ಸಿಕ್ಕಿಬೀಳುತ್ತಿದ್ದಂತೆ ಪ್ರಕರಣ ದಾಖಲಿಸಿ ಕೊಂಡು, ಆರೋಪಿಯ ಬಂಧನಕ್ಕೆ ಮಾತ್ರವೇ ತಮ್ಮ ಕೆಲಸವನ್ನು ಸೀಮಿತ ಗೊಳಿಸದೆ, ಆಳಕ್ಕಿಳಿದು ಕೂಲಂಕಷ ತನಿಖೆ ನಡೆಸಿ, ಒಂದಿಡೀ ಜಾಲದ ಹೆಡೆಮುರಿ ಕಟ್ಟಬೇಕಿದೆ. ದೇಶದ ಗಡಿಭಾಗಗಳು ಮಾತ್ರವಲ್ಲದೆ, ಬಸ್-ರೈಲು-ವಿಮಾನ ನಿಲ್ದಾಣಗಳಲ್ಲಿ ಹದ್ದಿನಕಣ್ಣು ಇರಿಸಿ, ಡ್ರಗ್ಸ್ ಕಳ್ಳಸಾಗಣೆ ಮತ್ತು ಮಾರಾಟಕ್ಕೆ ಬೇಲಿ ಹಾಕಬೇಕಿದೆ. ಡ್ರಗ್ಸ್ ಜಾಲದಲ್ಲಿ 'ಪ್ರಭಾವಿ'ಗಳೂ ಇರುವುದು ಕಂಡು ಬಂದಲ್ಲಿ, ನಿರ್ದಾಕ್ಷಿಣ್ಯವಾಗಿ ತಕ್ಕ ಶಾಸ್ತಿ ಮಾಡಬೇಕಿದೆ. ನಮ್ಮ ಜನರ ದೈಹಿಕ- ಮಾನಸಿಕ ಆರೋಗ್ಯ, ಸಾಮಾಜಿಕ ಸ್ವಾಸ್ಥ್ಯಕ್ಕೆ ಸಂಚಕಾರ ಒದಗಬಾರದೆಂದರೆ ಇಂಥ ನಿಷ್ಠುರ ಕ್ರಮ ಅನಿವಾರ್ಯ.

'ಡ್ರಗ್ಸ್' ಎಂಬ ಹುಚ್ಚುಕುದುರೆಗೆ ಲಗಾಮು ಹಾಕದಿದ್ದರೆ ಒಂದಿಡೀ ಸಾಮಾಜಿಕ ವ್ಯವಸ್ಥೆಗೇ ಧಕ್ಕೆ ಬರಬಹುದು. ಇದಕ್ಕೆ 'ಮದ್ದು' ಅರೆಯುವುದೆಂತು? ಎಂಬ ಪ್ರಶ್ನೆಗೆ ಉತ್ತರವಾಗಿ ಹೊಮ್ಮಿದ ತಜ್ಞಾಭಿಪ್ರಾಯ ಹೀಗಿದೆ:

- ಪುಸ್ತಕವನ್ನೋ ಉದ್ಯೋಗವನ್ನೋ ಹಿಡಿಯಬೇಕಿದ್ದ ಯುವಪೀಳಿಗೆಯ ಕೈಗೆ ಸಲೀಸಾಗಿ ಡ್ರಗ್ಸ್ ಕೊಟ್ಟು ಹಾಳು ಮಾಡುತ್ತಿರುವ 'ಪೂರೈಕೆ ಸರಪಳಿ'ಯನ್ನು ತುಂಡರಿಸಬೇಕಿದೆ.
- ಡ್ರಗ್ಸ್‌ನಿಂದಾಗಿ ಆರೋಗ್ಯದ ಮೇಲಷ್ಟೇ ಅಲ್ಲದೆ, ವ್ಯಕ್ತಿಗತವಾಗಿ, ಕೌಟುಂಬಿಕವಾಗಿ ಆಗುವ ಆರ್ಥಿಕಹಾನಿ, ಯುವಶಕ್ತಿಯ ಹರಣ, ಅದರಿಂದ ಸಮಾಜದ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕಿದೆ.

ಆತಂಕಕ್ಕೆ ಕಾರಣಗಳು

- ಡ್ರಗ್ಸ್ ವ್ಯಸನಿಗಳ ಪೈಕಿ ಅರ್ಧಕ್ಕಿಂತ ಹೆಚ್ಚು ಜನರು 'ಹೆರಾಯಿನ್' ಅನ್ನು ಸಿರಿಂಜಿನ ಮೂಲಕ ಮೈ-ಕೈಗೆ ಚುಚ್ಚಿಕೊಳ್ಳುತ್ತಾರೆ; ಇವರಲ್ಲಿ ಅನೇಕರಿಗೆ ಹೆಪಟೈಟಿಸ್ 'ಬಿ' ಮತ್ತು 'ಸಿ' ಹೆಗಲೇರಿದ್ದರೆ, ಮತ್ತೆ ಕೆಲವರಿಗೆ ಎಚ್‌ಐವಿ ಸೋಂಕು ಅಮರಿಕೊಂಡಿದೆ.
- ಹೆರಾಯಿನ್ ವ್ಯಸನಿಯೊಬ್ಬ ಅದಕ್ಕಾಗಿ ಪ್ರತಿ ತಿಂಗಳು ಮಾಡುವ ಸರಾಸರಿ ವೆಚ್ಚವು, ಅವನ ಗಳಿಕೆಗಿಂತಲೂ ಹಲವು ಪಟ್ಟು ಹೆಚ್ಚು. ಹೀಗಾಗಿ ಕಳ್ಳತನ/ ಲೂಟಿ/ದರೋಡೆ/ಹಿಂಸಾಕೃತ್ಯಗಳಿಗೆ ಇಳಿಯಬೇಕಾದ ಅನಿವಾರ್ಯತೆ ಅವನದಾಗುತ್ತದೆ.
- ಡ್ರಗ್ಸ್ ವ್ಯಸನಕ್ಕೆ ಸಿಲುಕಿದವರ ಪೈಕಿ ಗಣನೀಯ ಸಂಖ್ಯೆಯ ಜನರು 28ರ ಹರೆಯದ ಆಸುಪಾಸಿನವರು; ಇವರಲ್ಲಿ 'ಓವರ್‌ಡೋಸ್'ನಿಂದಾಗಿ ಸಾಯುತ್ತಿರುವವರ (ಅದು ಹೊರಪ್ರಪಂಚದ ಗಮನಕ್ಕೆ ಬಾರದಿರುವವರ) ಸಂಖ್ಯೆಯೂ ಸಾಕಷ್ಟಿದೆ. ಇದು ದೇಶದ ಯುವಶಕ್ತಿಯ ಹರಣವಾಗುತ್ತಿರುವುದರ ದಾರುಣಸಾಕ್ಷ್ಯ.
- ಡ್ರಗ್ಸ್ ವ್ಯಸನಿಗಳನ್ನು ತವರೂರಿನ ವ್ಯಸನಮುಕ್ತಿ ಕೇಂದ್ರಗಳಿಗೆ ಒಯ್ದರೆ ಪರಿಚಿತರ ಹದ್ದಿನಕಣ್ಣಿಗೆ ಸಿಲುಕಬಹುದು ಎಂಬ ಕಾರಣಕ್ಕೆ ಕುಟುಂಬಸ್ಥರು ಮರ್ಯಾದೆಗೆ ಅಂಜಿ ಅವರನ್ನು ದೂರದ ಇಂಥ ಕೇಂದ್ರಗಳಿಗೆ ಸಮಾಲೋಚನೆ/ಚಿಕಿತ್ಸೆಗೆ ಒಯ್ಯುವುದೂ ಇದೆ.

ಸಮಾಚಾರ ಸಣ್ಣದಲ್ಲ

ಕಾರ್ಬಿನ್ ಬೋಷ್‌ಗೆ ಪಿಸಿಬಿ ನೋಟಿಸ್

ಲಾಹೋರ್: ಪಾಕ್ ಕ್ರಿಕೆಟ್ ಮಂಡಳಿಯ ಒಪ್ಪಂದ ಉಲ್ಲಂಘಿಸಿದ್ದಕ್ಕಾಗಿ ದಕ್ಷಿಣ ಆಫ್ರಿಕಾ ಕ್ರಿಕೆಟಿಗ ಕಾರ್ಬಿನ್ ಬೋಷ್ ಅವರಿಗೆ ಪಾಕಿಸ್ತಾನ ಕ್ರಿಕೆಟ್ ಮಂಡಳಿ ನೋಟಿಸ್ ನೀಡಿದೆ. ಪಾಕಿಸ್ತಾನ ಸೂಪರ್ ಲೀಗ್ 10ನೇ ಆವೃತ್ತಿಯು ಏಪ್ರಿಲ್ 11ರಂದು ಲಾಹೋರ್‌ನಲ್ಲಿ ಆರಂಭವಾಗಲಿದೆ. ಟೂರ್ನಿಯಲ್ಲಿ ಆಡುವ ಪೇಶಾವರ ಝಲ್ಮಿ ತಂಡವು ಬೋಷ್ ಅವರೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. ಆದರೆ ಇದೀಗ ಅವರನ್ನು ತಂಡಕ್ಕೆ ಸೇರಿಸಿಕೊಂಡಿರುವುದಾಗಿ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ (ಐಪಿಎಲ್) ಆಡುವ ಮುಂಬೈ ಇಂಡಿಯನ್ಸ್ ಘೋಷಿಸಿದೆ. ದಕ್ಷಿಣ ಆಫ್ರಿಕಾದವರೇ ಆದ ವೇಗಿ ಲಿಜಾಡ್ ವಿಲಿಯಮ್ಸ್ ಗಾಯಗೊಂಡಿರುವ ಕಾರಣ, ಬೋಷ್ ಅವರು ಬದಲಿ ಆಟಗಾರನಾಗಿ ತಂಡಕ್ಕೆ ಬರಲಿದ್ದಾರೆ. ಈ ಕಾರಣಕ್ಕಾಗಿ ಪಿಸಿಬಿಯು ಬೋಷ್ ಅವರಿಗೆ ಒಪ್ಪಂದ ಉಲ್ಲಂಘಿಸಿದ ಆರೋಪದಲ್ಲಿ ನೋಟಿಸ್ ನೀಡಿದ್ದು, ಪಿಸಿಎಲ್‌ನಿಂದ ಹಿಂದೆ ಸರಿಯುತ್ತಿರುವುದಕ್ಕೆ ಸಮರ್ಥನೆ ಕೇಳಿದೆ. ಟೂರ್ನಿಯಿಂದ ಹೊರ ನಡೆಯುತ್ತಿರುವುದರಿಂದ ಆಗುವ ಪರಿಣಾಮದ ಬಗ್ಗೆಯೂ ವಿವರಿಸಿದ್ದು, ನಿಗದಿತ ಸಮಯದೊಳಗೆ ಪ್ರತಿಕ್ರಿಯೆ ನಿರೀಕ್ಷಿಸುತ್ತಿರುವುದಾಗಿ ತಿಳಿಸಿದೆ. ಅಲ್ ರೌಂಡರ್ ಬೋಷ್ ಅವರು, 2024ರ ಅಂತ್ಯದಲ್ಲಿ ಪಾಕಿಸ್ತಾನ ವಿರುದ್ಧ ನಡೆದ ಟೆಸ್ಟ್ ಹಾಗೂ ಏಕದಿನ ಕ್ರಿಕೆಟ್ ಸರಣಿ ಮೂಲಕ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು.

ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಡು ಪ್ಲೆಸಿಸ್ ಉಪ ನಾಯಕ

ದೆಹಲಿ: ಐಪಿಎಲ್ ಟೂರ್ನಿಯ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ದಕ್ಷಿಣ ಆಫ್ರಿಕಾ ಮಾಜಿ ನಾಯಕ ಫಾಫ್ ಡು ಪ್ಲೆಸಿಸ್ ಉಪ ನಾಯಕನಾಗಿ ನೇಮಕಗೊಂಡಿದ್ದಾರೆ. ಆ ಮೂಲಕ ಡೆಲ್ಲಿ ಕ್ಯಾಪಿಟಲ್ಸ್ ನಾಯಕ ಅಕ್ಷರ್ ಪಟೇಲ್‌ಗೆ ಡು ಪ್ಲೆಸಿಸ್ ಬೆಂಬಲ ನೀಡಲಿದ್ದಾರೆ. ಮಾರ್ಚ್ 14 ರಂದು ಶುಕ್ರವಾರ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಅಕ್ಷರ್ ಪಟೇಲ್ ನಾಯಕನಾಗಿ ನೇಮಕಗೊಂಡಿದ್ದರು. ಮಾರ್ಚ್ 24ರಂದು ಡೆಲ್ಲಿ ತಂಡವು ಲಕ್ನೋ ಸೂಪರ್ ಜೈಂಟ್ಸ್ ತಂಡವನ್ನು ಎದುರಿಸಲಿದೆ. ಕಳೆದ ಮೂರು ಆವೃತ್ತಿಗಳಲ್ಲಿ ಫಾಫ್ ಡು ಪ್ಲೆಸಿಸ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಮುನ್ನಡೆಸಿದ್ದರು. ಆದರೂ ಬೆಂಗಳೂರು ಫ್ರಾಂಚೈಸಿ ಡು ಪ್ಲೆಸಿಸ್ ಅವರನ್ನು ಮೆಗಾ ಹರಾಜಿಗೆ ಉಳಿಸಿಕೊಂಡಿರಲಿಲ್ಲ. ಕಳೆದ ವರ್ಷ ಯುಇಎಯಲ್ಲಿ ನಡೆದಿದ್ದ ಮೆಗಾ ಹರಾಜಿನ ಮೊದಲನೇ ದಿನ ಡು ಪ್ಲೆಸಿಸ್ ಅವರನ್ನು ಯಾವುದೇ ಫ್ರಾಂಚೈಸಿ ಖರೀದಿಸಿರಲಿಲ್ಲ. ಆದರೆ ಹರಾಜಿನ ಎರಡನೇ ದಿನ ಡೆಲ್ಲಿ ಕ್ಯಾಪಿಟಲ್ಸ್ ತಂಡ 2 ಕೋಟಿ ರು. ಗಳಿಗೆ ಡು ಪ್ಲೆಸಿಸ್ ಅವರನ್ನು ಖರೀದಿಸಿತ್ತು.

ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಸೋಮವಾರ ನಡೆದ ಐಪಿಎಲ್-2025 ಅಂಗವಾಗಿ ನಡೆದ 'ಆರ್‌ಸಿಬಿ ಅನ್‌ಬಾಕ್ಸ್' ಕಾರ್ಯ ಕ್ರಮದ ಅತ್ಯಾಕರ್ಷಕ ದೃಶ್ಯ. ಆರ್‌ಸಿಬಿ ತಂಡದ ಎಲ್ಲಾ ಆಟಗಾರರೂ ಟೂರ್ನಿಗೆ ಪೂರ್ವಭಾವಿಯಾಗಿ ನಡೆದ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಚಿತ್ರ : ಸುಧಾಕರ್ ದೇವರಾಜ್

ಐಪಿಎಲ್ ಉತ್ತಮ ಪ್ರದರ್ಶನ ಮೂಲಕ ಟೀಮ್ ಇಂಡಿಯಾಕ್ಕೆ ಮರಳುವ ಅವಕಾಶ

ಐವರಿಗೆ ಕಮ್‌ಬ್ಯಾಕ್ ಸಾಧ್ಯತೆ

ದೆಹಲಿ: ಐಪಿಎಲ್-2025 ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ತೋರುವ ಮೂಲಕ ಕೆಲ ಯುವ ಆಟಗಾರರು ಭಾರತ ತಂಡಕ್ಕೆ ಪ್ರವೇಶ ಮಾಡಿದ್ದಾರೆ. ಕೆಲವು ಅನುಭವಿ ಆಟಗಾರರು ಕೂಡ ಟೂರ್ನಿಯಲ್ಲಿ ಉತ್ತಮ ಪ್ರದರ್ಶ ನವನ್ನು ತೋರುವ ಮೂಲಕ ಟೀಮ್ ಇಂಡಿಯಾಗೆ ಕಮ್‌ಬ್ಯಾಕ್ ಮಾಡಿದ ಹಲವು ಉದಾಹರಣೆಗಳು ಕೂಡ ನಮ್ಮ ಕಣ್ಣಿನಲ್ಲಿವೆ. 2025ರ ಐಪಿಎಲ್ ಟೂರ್ನಿಯು ಮಾರ್ಚ್ 22ರಂದು ಆರಂಭವಾಗಲಿದೆ.

ಈ ಮಹತ್ವದ ಟೂರ್ನಿ ಯಲ್ಲಿ ಮಿಂಚಲು ಎಲ್ಲಾ 10 ತಂಡಗಳ ಆಟಗಾರರು ಎದುರು ನೋಡುತ್ತಿದ್ದಾರೆ. ಇದರ ನಡುವೆ ಭಾರತ ತಂಡದಲ್ಲಿ ಸ್ಥಾನ ಕಳೆದುಕೊಂಡಿರುವ ಕೆಲವು ಆಟಗಾರರು ಕೂಡ ಹದಿನೆಂಟನೇ ಆವೃತ್ತಿಯಲ್ಲಿ ಉತ್ತಮ ಪ್ರದರ್ಶನ ತೋರಿ ರಾಷ್ಟ್ರೀಯ ತಂಡಕ್ಕೆ ಮರಳಲು ಕಾಯುತ್ತಿದ್ದಾರೆ. ಯುವ ಆಟಗಾರರಿಗೆ ಮಾತ್ರವಲ್ಲ, ಭಾರತ ತಂಡಕ್ಕೆ ಕಮ್‌ಬ್ಯಾಕ್ ಮಾಡಲು ಕೆಲ ಹಿರಿಯ ಆಟಗಾರರು ಕೂಡ ಕಣ್ಣಿಟ್ಟಿದ್ದಾರೆ. ಐಪಿಎಲ್ ಟೂರ್ನಿ ಮುಗಿದ ಬಳಿಕ ಭಾರತ ತಂಡ ಇಂಗ್ಲೆಂಡ್ ಪ್ರವಾಸವನ್ನು ಹಮ್ಮಿಕೊಳ್ಳಲಿದೆ. ಟೆಸ್ಟ್ ಸರಣಿಯ ಜೊತೆಗೆ ಸೀಮಿತ ಓವರ್‌ಗಳ ಸರಣಿಗಳನ್ನು ಆಡಲಿದೆ, ಅಲ್ಲದೆ ಈ ವರ್ಷದ ಕೊನೆಯಲ್ಲಿ ಏಷ್ಯಾ ಕಪ್ ಟಿ20 ಸ್ವರೂಪದಲ್ಲಿ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಭಾರತ ತಂಡದಲ್ಲಿ ಸ್ಥಾನವನ್ನು ಪಡೆಯಲು ಹಲವು ಆಟಗಾರರು ಎದುರು ನೋಡುತ್ತಿದ್ದಾರೆ. ಐಪಿಎಲ್ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ತೋರಿ ಭಾರತ ತಂಡಕ್ಕೆ ಕಮ್‌ಬ್ಯಾಕ್ ಮಾಡಲು ಎದುರು ನೋಡುತ್ತಿರುವ ಟಾಪ್ ಐವರು ಆಟಗಾರರು ಮಾಹಿತಿ ಇಲ್ಲಿದೆ.

ಅಜಿಂಕ್ಯ ರಹಾನೆ

ಅಜಿಂಕ್ಯ ರಹಾನೆ 2025ರ ಐಪಿಎಲ್ ಟೂರ್ನಿಯಲ್ಲಿ ಕೋಲ್ಕತಾ ನೈಟ್ ರೈಡರ್ಸ್ ತಂಡದ ನಾಯಕರಾಗಿದ್ದಾರೆ. ಈ ಆವೃತ್ತಿಯ ಅವರಿಗೆ ಬಹಳ ಮುಖ್ಯವಾಗಿದೆ. ರಹಾನೆ ಉತ್ತಮ ಬ್ಯಾಟಿಂಗ್ ಪ್ರದರ್ಶನವನ್ನು ತೋರಿದರೆ, ಅವರಿಗೆ ಮತ್ತೆ ಟೀಮ್ ಇಂಡಿಯಾದಲ್ಲಿ ಅವಕಾಶ ಸಾಧ್ಯತೆ ಇದೆ. 2023ರ ಐಪಿಎಲ್ ಋತುವಿನಲ್ಲೂ ಉತ್ತಮ ಆಟವನ್ನು ಆಡಿ, ನಂತರ ರಹಾನೆ ಭಾರತದ ಟೆಸ್ಟ್ ತಂಡಕ್ಕೆ ಕಮ್‌ಬ್ಯಾಕ್ ಮಾಡಿದ್ದರು.

ಇಶಾನ್ ಕಿಶನ್

ಭಾರತದ ಯುವ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಇಶಾನ್ ಕಿಶನ್ ಅವರಿಗೂ 2025ರ ಐಪಿಎಲ್ ಟೂರ್ನಿಯು ಅತ್ಯಂತ ಮುಖ್ಯ ವಾಗಿದೆ. ಅವರು ಒಂದು ವರ್ಷಕ್ಕೂ ಹೆಚ್ಚು ಕಾಲ ಟೀಮ್ ಇಂಡಿಯಾದಿಂದ ಹೊರಗುಳಿದಿ ದ್ದಾರೆ. ಇಶಾನ್ ಕಿಶನ್ ಈ ಬಾರಿ ಸನ್‌ರೈಸರ್ಸ್ ಹೈದರಾಬಾದ್ ಪರ ಕಣಕ್ಕೆ ಇಳಿಯಲು ಎದುರು ನೋಡುತ್ತಿದ್ದಾರೆ.

ದೀಪಕ್ ಚಹರ್



ಮಧ್ಯಮ ವೇಗಿ ದೀಪಕ್ ಚಹರ್ ಕೂಡ ದೀರ್ಘಾವಧಿಯಿಂದ ಭಾರತ ತಂಡದಿಂದ ದೂರ ಉಳಿದಿದ್ದಾರೆ. ಚಹರ್‌ಗೆ 2025ರ ಐಪಿಎಲ್ ಟೂರ್ನಿಯಲ್ಲಿ ತನ್ನನ್ನು ತಾನು ಸಾಬೀತು ಪಡಿಸಲು ಉತ್ತಮ ಅವಕಾಶವಿದೆ. ದೀಪಕ್ ಚಹರ್ 2025ರ ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ಪರ ಆಡಲಿದ್ದಾರೆ.

ಟಿ. ನಟರಾಜನ್

ಭಾರತದ ವೇಗಿ ಟಿ. ನಟರಾಜನ್ ಈ ಬಾರಿ ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿ ದ್ದಾರೆ. ನಟರಾಜನ್ ಅದ್ಭುತವಾಗಿ ಬೌಲಿಂಗ್ ಪ್ರದರ್ಶನ ತೋರಿದರೆ ಟೀಮ್ ಇಂಡಿಯಾಗೆ ಮರಳ ಬಹುದು. ಅವರನ್ನು 2021ರಲ್ಲಿ ತಂಡದಿಂದ ಕೈ ಬಿಡಲಾಗಿತ್ತು.

ಚಹಲ್

ಅನುಭವಿ ಲೆಗ್ ಸ್ಪಿನ್ನರ್ ಯುಜ್ವೇಂದ್ರ ಚಹಲ್ 2023ರಿಂದ ಭಾರತದ ಪರ ಒಂದೇ ಒಂದು ಪಂದ್ಯವನ್ನೂ ಆಡಿಲ್ಲ. ಅವರನ್ನು 2025ರ ಐಪಿಎಲ್ ಮೆಗಾ ಹರಾಜಿನಲ್ಲಿ ಪಂಜಾಬ್ ಕಿಂಗ್ಸ್ ಖರೀದಿಸಿತು.

ಚಾಂಪಿಯನ್ಸ್ ಟ್ರೋಫಿ ಆಯೋಜನೆ

ಪಿಸಿಬಿಗೆ 740 ಕೋಟಿ ನಷ್ಟ

ಇಸ್ಲಾಮಾಬಾದ್: 2025ರ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಹಿನ್ನಡೆ ಅನುಭವಿಸುವುದರ ಜೊತೆಗೆ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಆರ್ಥಿಕವಾಗಿಯೂ ತೀವ್ರ ಸಂಕಷ್ಟ ಎದುರಿಸುವಂತಾಗಿದೆ. ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಜೊತೆಗಿನ ಹಲವು ಮನಸ್ತಾಪದ ಬಳಿಕ ಚಾಂಪಿಯನ್ಸ್ ಟ್ರೋಫಿಯನ್ನು ತನ್ನ ನೆಲದಲ್ಲಿ ನಡೆಸಿಕೊಡುವಲ್ಲಿ ಯಶಸ್ಸು ಕಂಡಿದ್ದ ಪಿಸಿಬಿ, ಟೂರ್ನಿಯಲ್ಲಿ ತನ್ನ ತಂಡ ಹಿನ್ನಡೆ ಅನುಭವಿಸುವುದರ ಜೊತೆಗೆ ಆರ್ಥಿಕವಾಗಿಯೂ ತೀವ್ರ ಸಂಕಷ್ಟ ಎದುರಿಸುವಂತಾಗಿದೆ.

ಆಟಗಾರರ ವೇತನಕ್ಕೂ ಕತ್ತರಿ

ನಷ್ಟದ ಪರಿಹಾರಕ್ಕೆ ಮುಂದಾಗಿರುವ ಪಿಸಿಬಿ ದೇಶದ ಆಟಗಾರರ ವೇತನಕ್ಕೂ ಕತ್ತರಿ ಹಾಕಿದೆ ಎಂಬ ವರದಿ ಇದೆ. ರಾಷ್ಟ್ರೀಯ ಟಿ20 ಚಾಂಪಿಯನ್‌ಶಿಪ್ -ದೇಶೀಯ ಟಿ20 ಟೂರ್ನಮೆಂಟ್‌ನಲ್ಲಿ ಪಂದ್ಯದ ಶುಲ್ಕವನ್ನು ಶೇ.90ರಷ್ಟು ಕಡಿಮೆ ಮಾಡಿರುವುದರಿಂದ ಆಟಗಾರರು ಆರ್ಥಿಕ ಪರಿಣಾಮಗಳನ್ನು ಎದುರಿಸಬೇಕಾಯಿತು ಎಂದು ವರದಿಯಾಗಿದೆ. ಪಂಚತಾರಾ ಹೋಟೆಲ್‌ಗಳಲ್ಲಿ ತಂಗಿದ್ದ ಅಲ್ಲಿನ ಕ್ರಿಕೆಟಿಗರು, ಈಗ ಸಾಧಾರಣ ವಸತಿಗಳಲ್ಲಿ ಉಳಿದುಕೊಳ್ಳುತ್ತಿದ್ದಾರೆ.

ಚಾಂಪಿಯನ್ಸ್ ಟ್ರೋಫಿ ಪಂದ್ಯಾವಳಿಯ ಅರ್ಧಕ್ಕಿಂತ ಹೆಚ್ಚಿನ ಪಂದ್ಯಗಳು ನಡೆದರೂ ದುಬೈನಲ್ಲಾದರೂ, ಆತಿಥ್ಯ ಮಾತ್ರ ಪಾಕಿಸ್ತಾನ ವಹಿಸಿತ್ತು. ಭಾರತೀಯ ತಂಡ ಪಾಕಿಸ್ತಾನಕ್ಕೆ ತೆರಳಲು ನಿರಾಕರಿಸಿದ್ದರ ಪರಿಣಾಮವಾಗಿ ಪಾಕಿಸ್ತಾನ ಕ್ರಿಕೆಟ್ ಮಂಡಳಿಯು ಐಸಿಸಿ ಪಂದ್ಯಾವಳಿಯನ್ನು ಆಯೋಜಿಸಿದರೂ, ಎಲ್ಲ ಪಂದ್ಯಗಳನ್ನು ಸೋತಿದ್ದಲ್ಲದೇ ನಷ್ಟದ ಮೇಲೆ ನಷ್ಟ ಅನುಭವಿಸುತ್ತಿರುವುದಾಗಿ ವರದಿಯಾಗುತ್ತಿದೆ. ಚಾಂಪಿಯನ್ಸ್ ಟ್ರೋಫಿಯ ಸಂಪೂರ್ಣ ಪಂದ್ಯಾವಳಿಯ ಸಮಯದಲ್ಲಿ ಪಾಕಿಸ್ತಾನ ತಂಡ ತನ್ನ ತವರಿನಲ್ಲಿ ಆಡಿದ್ದು ಕೇವಲ ಒಂದು ಪೂರ್ಣ ಪಂದ್ಯ ಮಾತ್ರ. ಇಷ್ಟಕ್ಕೆ ಬರೋಬ್ಬರಿ 740 ಕೋಟಿ ರೂ.ಗಳನ್ನು ಖರ್ಚು ಮಾಡಿದ ಪಿಸಿಬಿ, ಶೇ.85ರಷ್ಟು ನಷ್ಟವನ್ನು ಅನುಭವಿಸಿದೆ ಎಂದು ವರದಿಯಾಗಿದೆ. ಚಾಂಪಿಯನ್ಸ್ ಟ್ರೋಫಿಗಾಗಿ ಪಿಸಿಬಿಯು ರಾವಲ್ಪಿಂಡಿ, ಲಾಹೋರ್ ಮತ್ತು ಕರಾಚಿ ಸ್ಟೇಡಿಯಂಗಳನ್ನು ನವೀಕರಿಸಿತು. ಅದಕ್ಕಾಗಿ ಸುಮಾರು 58 ಮಿಲಿಯನ್ ಡಾಲರ್ (ಸುಮಾರು 500 ಕೋಟಿ ರು.) ಖರ್ಚು ಮಾಡಿದೆ. ಇದು ಅವರ ಬಜೆಟ್‌ಗಿಂತ ಶೇ. 50ರಷ್ಟು ಹೆಚ್ಚು ಅಂತ ತಿಳಿದು ಬಂದಿದೆ. ಇದಲ್ಲದೆ, ಟೂರ್ನಿಯ ಈವೆಂಟ್ ಸಿದ್ಧತೆಗಳಿಗಾಗಿ ಹೆಚ್ಚುವರಿ 40 ಮಿಲಿಯನ್ ಡಾಲರ್ (ಸುಮಾರು 347 ಕೋಟಿ ರು.) ಖರ್ಚು ಮಾಡಿದೆ. ಆದರೆ ಹೋಸ್ಟಿಂಗ್ ಶುಲ್ಕ ಮತ್ತು ಟಿಕೆಟ್ ಮಾರಾಟ ಮತ್ತು ಪ್ರಾಯೋಜಕತ್ವದಿಂದ ಪಿಸಿಬಿಇಗೆ ಬಂದಿದ್ದು ಕೇವಲ 6 ಮಿಲಿಯನ್ ಡಾಲರ್ (ಸುಮಾರು 52 ಕೋಟಿ ರು.) ಮಾತ್ರ. ಇದರ ಪರಿಣಾಮವಾಗಿ ಪಿಸಿಬಿ ಹೆಚ್ಚು ಕಡಿಮೆ ಶೇ.85ರಷ್ಟು (ಸುಮಾರು ರು. 740 ಕೋಟಿ) ನಷ್ಟವನ್ನು ಅನುಭವಿಸಿದೆ ಎಂದು ವರದಿಯಾಗಿದೆ.

ಟೈಟನ್ಸ್‌ಗೆ ಹೊಸ ಮಾಲಿಕರು

ಗಾಂಧಿನಗರ: ಐಪಿಎಲ್ ಆರಂಭಕ್ಕೂ ಮುನ್ನ ಚೊಚ್ಚಲ ಆವೃತ್ತಿಯಲ್ಲೇ ಚಾಂಪಿಯನ್ ಪಟ್ಟಕ್ಕೇರಿದ್ದ ಗುಜರಾತ್ ಟೈಟನ್ಸ್ ತಂಡದ ಮಾಲಿಕರು ಬದಲಾಗಿದ್ದಾರೆ. ಇದೀಗ ಗುಜರಾತ್ ಟೈಟನ್ಸ್ ತಂಡ ಟೊರೆಂಟ್ ಗ್ರೂಪ್ ತೆಕ್ಕೆಗೆ ಸೇರಿದೆ. ಇದುವರೆಗೆ ಸಿವಿಸಿ ಕ್ಯಾಪಿಟಲ್ಸ್ ಒಡೆತನದಲ್ಲಿದ್ದ ಗುಜರಾತ್ ಟೈಟನ್ಸ್ ಫ್ರಾಂಚೈಸಿಯನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿರುವುದಾಗಿ ಟೊರೆಂಟ್ ಗ್ರೂಪ್ ತಿಳಿಸಿದೆ. ಅಹಮದಾಬಾದ್ ಮೂಲದ ಟೊರೆಂಟ್ ಗ್ರೂಪ್ ಭಾರತದ ವಿದ್ಯುತ್ ಮತ್ತು ಔಷಧ ವಲಯಗಳಲ್ಲಿ ಪ್ರಮುಖ ಕಂಪನಿಗಳಲ್ಲಿ ಒಂದಾಗಿದೆ. ಆದಾಗ್ಯೂ, ಈ ಕಂಪನಿಯು ಗುಜರಾತ್ ಫ್ರಾಂಚೈಸಿಯ 100 ಪ್ರತಿಶತ ಪಾಲನ್ನು ಖರೀದಿಸಿಲ್ಲ. ವರದಿಯ ಪ್ರಕಾರ, ಸಿವಿಸಿ ಕ್ಯಾಪಿಟಲ್ಸ್‌ನ ಅಂಗಸಂಸ್ಥೆ ಇರೇಲಿಯಾ ಸ್ಪೋರ್ಟ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಈ ಫ್ರಾಂಚೈಸಿಯನ್ನು ನಡೆಸುತ್ತಿತ್ತು. ಈಗ ಟೊರೆಂಟ್ ಗ್ರೂಪ್ ಶೇ. 67ರಷ್ಟು ಪಾಲನ್ನು ಖರೀದಿಸುವ ಮೂಲಕ ಫ್ರಾಂಚೈಸಿಯ ಮೇಲೆ ಹಿಡಿತ ಸಾಧಿಸಿದೆ. ಆದಾಗ್ಯೂ ಎಷ್ಟು ಮೊತ್ತಕ್ಕೆ ಈ ಒಪ್ಪಂದ ನಡೆದಿದೆ ಎಂಬುದನ್ನು ಇದುವರೆಗೆ ಬಹಿರಂಗವಾಗಿಲ್ಲ.

ಕೊರಗಜ್ಜನ ಮಧುರ ಗಾನ

ಕೊರಗಜ್ಜ ಸಿನಿಮಾ ಬಿಡುಗಡೆಗೂ ಮೊದಲೇ ಕುತೂಹಲ ಮೂಡಿಸಿದೆ. ದಕ್ಷಿಣ ಕನ್ನಡದ ಆರಾಧ್ಯ ದೈವ, ಕೊರಗಜ್ಜನ ಮಹಿಮೆಯನ್ನು ಸಾರುವ ಸ್ಟೋರಿ ಸಿನಿಮಾದಲ್ಲಿದೆ. ವಿಶೇಷ ಎಂದರೆ ಈ ಚಿತ್ರಕ್ಕೆ ದಕ್ಷಿಣ ಭಾರತದ ಖ್ಯಾತ ಸಂಗೀತ ನಿರ್ದೇಶಕ ಗೋಪಿ ಸುಂದರ್ ಸಂಗೀತ ಸಂಯೋಜಿಸಿದ್ದಾರೆ. ಹಾಗಾಗಿ ಹಾಡುಗಳ ಬಗ್ಗೆಯೂ ನಿರೀಕ್ಷೆ ಹೆಚ್ಚಿಸಿದೆ. ಸಿನಿಮಾದ ಸಂಗೀತ ಕೇವಲ ರಾಗ ಸಂಯೋಜನೆ ಮಾತ್ರವಲ್ಲ, ಇದು ಮತ್ತೊಂದು ರೀತಿಯ ಸಂಸ್ಕೃತಿಯ ಅನಾವರಣಗೊಳಿಸುವಂತೆ ಮಾಡಿದೆ ಎಂದು ಗೋಪಿ ಸುಂದರ್ ಹೇಳಿದ್ದಾರೆ. ಅದ್ದೂರಿಯಾಗಿ ಮೂಡಿಬಂದಿರುವ ಈ ಚಿತ್ರವನ್ನು ಸುಧೀರ್ ಅತ್ತಾವರ್ ನಿರ್ದೇಶನ ಮಾಡಿದ್ದಾರೆ.

ನಿರ್ದೇಶಕರು ಸಂಶೋಧನೆ ನಡೆಸಿ ಹಲವು ವಿಚಾರಗಳನ್ನು ಕಲೆ ಹಾಕಿ, ಚಿತ್ರದ ಕಥೆ ಹೆಣೆದು ನಿರ್ದೇಶನ ಮಾಡಿದ್ದಾರೆ. ಹೊಸ ಸಂಪ್ರದಾಯ ಮತ್ತು ವಿಶೇಷ ನಂಬಿಕೆಗಳ ಆಧಾರದ ಮೇಲೆ ನಿಂತಿರುವ ಚಿತ್ರವಾಗಿದ್ದುದರಿಂದ ಇದರ ಬಗ್ಗೆ ಅಭ್ಯಾಸ ಮಾಡಿ ಸಂಗೀತ ಸಂಯೋಜಿಸಲು ಹೆಚ್ಚು ಸಮಯ ಬೇಕಾಗಿತ್ತು. ನಾನು ಹೊಸ ಸಂಪ್ರದಾಯವನ್ನು ಅಭ್ಯಾಸ ಮಾಡಿ ರಚಿಸಿದ ಟ್ಯೂನ್‌ಗಳು ಚಿತ್ರದ ನಿರ್ದೇಶಕರಿಗೆ ಮೆಚ್ಚುಗೆ ಆಗಿದೆ ಎಂದು ಗೋಪಿ ಸುಂದರ್ ಹೇಳಿದರು. ಸಕ್ಸಸ್ ಫಿಲಂಸ್ ಮತ್ತು ತ್ರಿವಿಕ್ರಮ ಸಿನಿಮಾಸ್ ಬ್ಯಾನರ್‌ನಲ್ಲಿ ತ್ರಿವಿಕ್ರಮ ಸಾಪಲ್ಯ ಚಿತ್ರ ನಿರ್ಮಾಣ ಮಾಡಿದ್ದಾರೆ. ಕೊರಗಜ್ಜ ಚಿತ್ರದಲ್ಲಿ ಆರು ಹಾಡುಗಳಿದ್ದು ಒಂದಕ್ಕಿಂತ ಒಂದು ಸುಮಧುರವಾಗಿ ಮೂಡಿಬಂದಿವೆ. ಶ್ರೇಯಾ ಘೋಶಾಲ್, ಶಂಕರ್ ಮಹದೇವನ್, ಸುನಿಧಿ ಚೌಹಾನ್, ಜಾವೇದ್ ಆಲಿ, ಶರೋನ್ ಪ್ರಭಾಕರ್ ಅರ್ಮನ್ ಮಲಿಕ್, ಸ್ವರೂಪ್ ಖಾನ್ ಹಾಡುಗಳಿಗೆ ದನಿಯಾಗಿದ್ದಾರೆ.

> **ಕೊರಗಜ್ಜ ಸಿನಿಮಾದ ಕಥೆ ನನಗೆ ಹೊಸ ರೀತಿಯ ಜಾನರ್ ಅನ್ನು ಆವಿಷ್ಕಾರ ಮಾಡಲು ಸಹಾಯ ಮಾಡಿದೆ. ಸಂಗೀತ ಕ್ಷೇತ್ರದಲ್ಲಿ ಹೊಸ ಬಗೆಯ ಅನ್ವೇಷಣೆಯೊದಿಗೆ ಹಾಡುಗಳ ಕಂಪೋಸಿಂಗ್ ನಡೆಸಲು ಇದು ಹೆಚ್ಚು ಸಹಕಾರಿಯಾಗಿದೆ. ಇದು ರೆಗ್ಯುಲರ್ ಸಿನಿಮಾದ ಮಾದರಿಯನ್ನು ಮೀರಿ ಯಾರೂ ಊಹಿಸದ ರೀತಿಯ ಬಗೆ ಬಗೆಯ ಸೂಕ್ಷ್ಮ ಪದರಗಳನ್ನು ಹೊಂದಿರುವ ಚಿತ್ರವಾಗಿದೆ.**
> **-ಸುಧೀರ್ ಅತ್ತಾವರ** ನಿರ್ದೇಶಕ

ವಿಟಾಕೀಸ್



ಅಪ್ಪು ಆದರ್ಶದ ಕುರಿತ ಚಿತ್ರ

ಪುನೀತ್ ರಾಜಕುಮಾರ್ ಅವರ ಆದರ್ಶ ಜೀವನ ಮೌಲ್ಯದ ಸಾಂಕೇತಿಕವಾಗಿ ಒಬ್ಬ ಟ್ಯಾಕ್ಸಿ ಡ್ರೈವರ್ ಅಪ್ಪುರವರು ಮಾಡಿದ ಸಹಾಯದಿಂದ ತನ್ನ ಜೀವನ ರೂಪಿಸಿಕೊಂಡ ಸತ್ಯ ಘಟನೆಯನ್ನು ಆಧರಿಸಿದ ಸಿನಿಮಾ ಸಿದ್ಧವಾಗುತ್ತಿದೆ. ಟ್ಯಾಕ್ಸಿ ಶಿರ್ಷಿಕೆಯಲ್ಲಿ ಸಿನಿಮಾ ಮೂಡಿ ಬರುತ್ತಿದೆ. ಜೀವನ ಸಂಚಾರ ಎನ್ನುವ ಕಥಾ ತಿರುಳನ್ನು ಇಟ್ಟುಕೊಂಡು ಈ ಚಿತ್ರಕಥೆ ಸಾಗುತ್ತದೆ. ಸಮಾಜದ ಎಷ್ಟೋ ಜನಗಳ ಜೀವನದ ಭಾಗವಾಗಿ ಅಪ್ಪು ಅವರು ಪರೋಕ್ಷವಾಗಿ ಹೇಗೆ ಪ್ರಭಾವಿತರಾಗಿದ್ದಾರೆ ಎನ್ನುವ ವಿಷಯ ಜನಗಳಿಗೆ ತಿಳಿಯದ ಹಲವು ವಿಚಾರಗಳು ಚಿತ್ರದಲ್ಲಿರಲಿವೆ. ಇದು ಪ್ಯಾನ್ ವರ್ಲ್ಡ್ ಸಿನಿಮಾವಾಗಿದ್ದು, ಕನ್ನಡ, ತಮಿಳು, ತೆಲುಗು, ಮಲೆಯಾಳಂ, ಹಿಂದಿ, ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ನಿರ್ಮಾಣ ಆಗಲಿದೆ, ಎಚ್.ಆರ್ .ದಿಲೀಪ್ ಕುಮಾರ್ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದು, ಜಗ್ಗು ಸಿರ್ಸಿ ನಿರ್ದೇಶನ ಮಾಡುತ್ತಿದ್ದಾರೆ. ಮುಂದಿನ ವರ್ಷದ ಅಪ್ಪು ಜನ್ಮದಿನದಂದು ಟ್ಯಾಕ್ಸಿ ಸಿನಿಮಾ ಬಿಡುಗಡೆಯಾಗಲಿದೆ.

ಅಪ್ಪು ಹುಟ್ಟುಹಬ್ಬದ ಸಂಭ್ರಮ

ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಇಂದು ನಮ್ಮೊಂದಿಗಿದ್ದಿದ್ದರೆ ಐವತ್ತನೇ ವರ್ಷದ ಹುಟ್ಟಹಬ್ಬವನ್ನು ಎಲ್ಲರೊಂದಿಗೆ ಸಂಭ್ರಮದಿಂದ ಆಚರಿಸಿಕೊಳ್ಳುತ್ತಿದ್ದರು. ಆದರೆ ಅಪ್ಪು ನಮ್ಮನ್ನೆಲ್ಲಾ ಬಿಟ್ಟು ಇಹಲೋಕ ತ್ಯಜಿಸಿದರು. ಪ್ರೀತಿಯ ಅಪ್ಪುವನ್ನು ಕಳೆದುಕೊಂಡ ಅಭಿಮಾನಿಗಳು ನೋವಿನಲ್ಲಿಯೇ ದಿನದೂಡುತ್ತಿದ್ದಾರೆ.

ಪುನೀತ್ ರಾಜ್‌ಕುಮಾರ್ ಅವರ ಐವತ್ತನೇ ಹುಟ್ಟುಹಬ್ಬದ ಪ್ರಯುಕ್ತ, ದೊಡ್ಮನೆ ಕುಟುಂಬಸ್ಥರು ಪುನೀತ್ ಸಮಾಧಿ ಸ್ಥಳಕ್ಕೆ ಆಗಮಿಸಿ ಅಪ್ಪುಗೆ ಪ್ರಿಯವಾದ ತಿನಿಸುಗಳನ್ನು ಸಮಾಧಿಯ ಬಳಿ ಇಟ್ಟು ಪೂಜೆ ಸಲ್ಲಿಸಿದರು. ಅಶ್ವಿನಿ ಪುನೀತ್ ರಾಜ್‌ಕುಮಾರ್, ಪುತ್ರಿಯರಾದ ಧೃತಿ ಪುನೀತ್ ರಾಜ್‌ಕುಮಾರ್, ವಂದಿತಾ ಪುನೀತ್ ರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಮಂಗಳಾ ರಾಘವೇಂದ್ರ ರಾಜ್‌ಕುಮಾರ್, ಶಿವರಾಜ್ ಕುಮಾರ್, ಗೀತಾ ಶಿವರಾಜ್‌ಕುಮಾರ್, ಯುವರಾಜ್, ವಿನಯ್ ರಾಜ್‌ಕುಮಾರ್ ಹೀಗೆ ದೊಡ್ಮನೆ ಕುಟುಂಬದ ಹಲವರು ಪೂಜೆ ನೆರವೇರಿಸಿದರು. ಅಪ್ಪು ಬರ್ತ್‌ಡೇ ಪ್ರಯುಕ್ತ ಅಭಿಮಾನಿಗಳು ಅನ್ನದಾನ, ರಕ್ತದಾನ, ನೇತ್ರದಾನ ನೊಂದಣಿಯಂತಹ ಸಾಮಾಜಿಕ ಕಾರ್ಯಗಳನ್ನು ಹಮ್ಮಿಕೊಂಡಿದ್ದರು. ಕೆಲವು ಅಭಿಮಾನಿಗಳು ಮಾಲಾಧಾರಿಯಾಗಿ ಅಪ್ಪು ಫೋಟೋ ಹಿಡಿದು, ದೂರ ದೂರಿನಿಂದ ಪಾದಯಾತ್ರೆಯ ಮೂಲಕ ಪುನೀತ್ ರಾಜ್‌ಕುಮಾರ್ ಪುಣ್ಯ ಸ್ಥಳಕ್ಕೆ ಕಾಲ್ನಡಿಗೆಯಲ್ಲಿಯೇ ಧಾವಿಸಿ ಪೂಜೆ ಸಲ್ಲಿಸಿದರು.

ಟೀಸರ್‌ನಲ್ಲಿ ಮನಗೆದ್ದ ಧ್ರುವ 369

ಪುನೀತ್ ರಾಜ್‌ಕುಮಾರ್ ಅವರನ್ನು ಮತ್ತೆ ತೆರೆಯಲ್ಲಿ ನೋಡಬೇಕು ಎಂಬುದು ಅಭಿಮಾನಿಗಳ ಆಸೆಯಾಗಿದೆ. ಹಾಗಾಗಿ ಆಧುನಿಕಕ ತಂತ್ರಜ್ಞಾನಗಳನ್ನು ಬಳಸಿಕೊಂಡು ಅವರನ್ನು ತೆರೆಯಲ್ಲಿ ತರುವ ಪ್ರಯತ್ನಗಳು ನಡೆಯುತ್ತಿವೆ. ಅಪ್ಪು ಬಯೋಪಿಕ್ ನಿರ್ಮಾಣಕ್ಕೂ ಸಿದ್ಧತೆಗಳು ನಡೆದಿವೆ. ಅದೇ ನಿಟ್ಟಿನಲ್ಲಿ ಈಗ ಧ್ರುವ 369 ಕೂಡ ಸೆಟ್ಟೇರಿದೆ. ಸದ್ಯ ಈ ಸಿನಿಮಾದ ಟೀಸರ್ ಬಿಡುಗಡೆಯಾಗಿದ್ದು ಸಿನಿಪ್ರಿಯರ ಗಮನಸೆಳೆಯುತ್ತಿದೆ. ವಿಭಿನ್ನ ಕಾನ್ಸೆಪ್ಟ್‌ನಲ್ಲಿ ಮೂಡಿಬಂದ ಈ ಟೀಸರ್‌ನಲ್ಲಿ ಪುನೀತ್ ರಾಜ್‌ಕುಮಾರ್ ಮಾತ್ರವಲ್ಲದೇ ಡಾ.ರಾಜ್‌ಕುಮಾರ್ ಕೂಡ ಕಾಣಿಸಿಕೊಂಡಿದ್ದಾರೆ. ಎಐ ತಂತ್ರಜ್ಞಾನ ಬಳಸಿಕೊಂಡು ಸಿದ್ಧವಾಗುತ್ತಿರುವ ಧ್ರುವ 369 ಚಿತ್ರವನ್ನು ಅಚಿಂತ್ಯ ಸ್ಟುಡಿಯೊಸ್ ಬ್ಯಾನರ್‌ನಲ್ಲಿ ಶ್ರೀಕೃಷ್ಣ ಕಾಂತಿಲ ನಿರ್ಮಿಸುತ್ತಿದ್ದಾರೆ.

ಸಖತ್ತಾಗಿದೆ ಎಕ್ಕನ ಹಾಡು

ಯುವ ಚಿತ್ರದ ಬಳಿಕ ಯುವರಾಜ್ ಕುಮಾರ್, ಎಕ್ಕ ಸಿನಿಮಾದಲ್ಲಿ ನಟಿಸುತ್ತಿದ್ದಾರೆ, ಪೋಸ್ಟರ್‌ನಲ್ಲಿಯೇ ಕುತೂಹಲ ಮೂಡಿಸಿದ್ದ ಎಕ್ಕ ಚಿತ್ರದ ಮೊದಲ ಹಾಡು ಬಿಡುಗಡೆಯಾಗಿದೆ. ಶೂಟಿಂಗ್ ಹಂತದಲ್ಲಿಯೇ ಭಾರೀ ಹೈಪ್ ಕ್ರಿಯೇಟ್ ಮಾಡಿರುವ ಎಕ್ಕ ಸಿನಿಮಾದ ಮೊದಲ ಹಾಡನ್ನು ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬದಂದು ಬಿಡುಗಡೆ ಮಾಡಲಾಗಿದೆ.

ಎಕ್ಕಾ ಮಾರ್ ಮಾರ್.. ಅಂತ ಯುವರಾಜ್ ಕುಮಾರ್ ಭರ್ಜರಿಯಾಗಿ ಕುಣಿದು ಕುಪ್ಪಳಿಸಿದ್ದಾರೆ. ನಾಗಾರ್ಜುನ್ ಶರ್ಮಾ ಸಾಹಿತ್ಯ ಬರೆದಿದ್ದು, ಚರಣ್ ರಾಜ್ ಸಂಗೀತ ಸಂಯೋಜಿಸಿದ್ದಾರೆ. ರೋಹಿತ್ ಪದಕಿ, ಚರಣ್ ರಾಜ್ ಹಾಗೂ ಮಹಾಲಿಂಗ್ ಈ ಹಾಡಿಗೆ ದನಿಯಾಗಿದ್ದಾರೆ. ಸಂಜನಾ ಆನಂದ್, ಸಂಪದಾ ಸಿನಿಮಾದ ನಾಯಕಿಯರಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಆ್ಯಕ್ಷನ್ ಥ್ರಿಲ್ಲರ್ ಜಾನರ್‌ನಲ್ಲಿ ಚಿತ್ರ ಮೂಡಿಬರುತ್ತಿದ್ದು, ಒಬ್ಬ ಮನುಷ್ಯ ಭೂಗತ ಜಗತ್ತಿಗೆ ತುತ್ತಾದಾಗ ಆತನಿಗೆ ಆಗುವ ಅನುಭವವನ್ನು ಈ ಚಿತ್ರದ ಮೂಲಕ ಹೇಳಲಾಗುತ್ತಿದೆ. ರೋಹಿತ್ ಪದಕಿ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಎಕ್ಕ ಚಿತ್ರವನ್ನು ಪಿಆರ್‌ಕೆ ಪ್ರೊಡಕ್ಷನ್ಸ್, ಕೆಆರ್‌ಜಿ ಸ್ಟುಡಿಯೊಸ್ ಹಾಗೂ ಜಯಣ್ಣ ಫಿಲಂಸ್ ಒಟ್ಟಾಗಿ ಚಿತ್ರ ನಿರ್ಮಾಣ ಮಾಡುತ್ತಿವೆ. ರೋಹಿತ್ ಪದಕಿ, ವಿಕ್ರಂ ಹತ್ವಾರ್ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದಿದ್ದಾರೆ. ಸತ್ಯ ಹೆಗಡೆ ಛಾಯಾಗ್ರಹಣ ಮತ್ತು ದೀಪು ಎಸ್. ಕುಮಾರ್ ಸಂಕಲನ ಎಕ್ಕ ಸಿನಿಮಾಗಿದೆ. ಎಕ್ಕ ಜೂನ್ 6ರಂದು ಅದ್ದೂರಿಯಾಗಿ ತೆರೆಗೆ ಬರಲಿದೆ.